" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

10ನೇ ಜುಲೈ 2018
ಮಂಗಳವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ**

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಬಿ.ಎ.ಮೊಹಿದ್ದೀನ್‌ರವರ ನಿಧನದ ಬಗ್ಗೆ

– ಡಾ:ಜಿ.ಪರಮೇಶ್ವರ್ (ಉಪಮುಖ್ಯಮಂತ್ರಿ)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

**2. ನೂತನ ಸಚಿವರುಗಳ ಪರಿಚಯ**

**3. ಪ್ರಶ್ನೋತ್ತರ ವೇಳೆ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು**

**38 + 139 – ರಾಜ್ಯದಲ್ಲಿ ವಿದ್ಯಾರ್ಥಿಗಳು ಮಾದಕ ದ್ರವ್ಯ ವ್ಯಸನಿಗಳಾಗುತ್ತಿರುವ ಬಗ್ಗೆ**

**– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**

**– ಶ್ರೀ ಲಹರ್ ಸಿಂಗ್ ಸಿರೋಯಾ**

**– ಕೆ.ಬಿ.ಶಾಣಪ್ಪ**

**– ಡಾ:ತೇಜಸ್ವಿನಿ ಗೌಡ**

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**

**– ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ**

**– ಶ್ರೀ ಐವನ್ ಡಿ.ಸೋಜಾ**

**155** – ಕೊಡಗು ಜಿಲ್ಲೆಯಲ್ಲಿ ನಗರಸಭೆ ಹಾಗೂ ಪಟ್ಟಣಗಳಲ್ಲಿ ಹಳೆಯ ಮನೆ ಕೆಡವಿ ಹೊಸಮನೆ ನಿರ್ಮಾಣದ ಬಗ್ಗೆ

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

169 – ಬಿಡಿಎ ಯಿಂದ ರೆವಿನ್ಯೂ ನಿವೇಶನಕ್ಕೆ ಬದಲಿ ನಿವೇಶನ ನೀಡುವ ಬಗ್ಗೆ

– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

174 – ಸರ್ಕಾರದ ಆದೇಶದ ಹೊರತಾಗಿಯೂ ಗೃಹ ಇಲಾಖೆಯಲ್ಲಿ ಆರ್ಡರ್ಲಿ ಪದ್ಧತಿ ಮುಂದುವರೆದಿರುವ ಬಗ್ಗೆ.
– ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ

**122–** ಮಂಡ್ಯ ನಗರದಲ್ಲಿನ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ.
– **ಶ್ರೀ ಕೆ.ಟಿ.ಶ್ರೀಕಂಠೇಗೌಡ**

**146** – ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (RGHCL) ಅಡಿಯಲ್ಲಿ ಮುಂಡರಗಿ ಪಟ್ಟಣದಲ್ಲಿ ನಿವೇಶನ ಹಂಚಿಕೆ ಬಗ್ಗೆ.
– ಶ್ರೀ ಎಸ್.ವ್ಹಿ. ಸಂಕನೂರ

**111** – ಮೈಸೂರು–ಬೆಂಗಳೂರು ಹೆದ್ದಾರಿಯ ಅಗಲೀಕರಣ ಮತ್ತು ಆಧುನೀಕರಣದ ಬಗ್ಗೆ
– ಶ್ರೀ ಸಂದೇಶ್ ನಾಗರಾಜ್
– ಶ್ರೀ ವಿ.ಎಸ್.ಉಗ್ರಪ್ಪ

**119** – ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 2ನೇ ಹಂತದ ನಿವೇಶನ ಹಂಚಿಕೆ ಬಗ್ಗೆ.
– ಶ್ರೀ ರಿಜ್ವಾನ್ ಅರ್ಷದ್

**173** – ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಕೇಬಲ್‌ಗಳ ಬಗ್ಗೆ.
– ಶ್ರೀ ಪಿ.ಆರ್.ರಮೇಶ್
– ಶ್ರೀ ಪುಟ್ಟಣ್ಣ
– ಶ್ರೀ ಟಿ.ಎ.ಶರವಣ

**03** – ರಾಜ್ಯ ಹೆದ್ದಾರಿಗಳ ದುಸ್ಥಿತಿ ಬಗ್ಗೆ.
– ಶ್ರೀಮತಿ ತಾರಾಅನೂರಾಧ

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಹಾಸನ ಜಿಲ್ಲೆಯ ಸರ್ಕಾರಿ/ಅನುದಾನಿತ ಶಾಲೆಗಳ ಶಿಕ್ಷಕರಿಗೆ ಜಿಲ್ಲಾಧಿಕಾರಿಗಳು ಪರೀಕ್ಷೆ ನಡೆಸಲು ಉದ್ದೇಶಿಸಿರುವ ಬಗ್ಗೆ
– ಶ್ರೀ ಮರಿತಿಬ್ಬೇಗೌಡ
– ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

ಆ) ಕರ್ನಾಟಕ ಒನ್ ಕಾರ್ಯಕ್ರಮದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡದೇ ಇರುವ ಬಗ್ಗೆ.
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇ) ಮೈಸೂರು ನಗರದ ನಜರಬಾದ್ ಮೊಹಲ್ಲದ ವಾಣಿ ವಿಲಾಸ ಮೈಸೂರು ಮಾಲ್ ಎಂಬ ವಾಣಿಜ್ಯ ಸಂಕೀರ್ಣಕ್ಕೆ ಬರುವ ಜನರು ಸಾರ್ವಜನಿಕ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.

- ಶ್ರೀ ಸಂದೇಶ್ ನಾಗರಾಜ್
- ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ)

**ಈ)** ಗ್ರಾಮಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಇದ್ದರೂ ಅನ್ಯ ಇಲಾಖೆಗಳು ಆದೇಶ ಹೊರಡಿಸುತ್ತಿರುವ ಬಗ್ಗೆ.

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

ಉ) ಗದಗಿನ ತೋಂಟದಾರ್ಯ ಮಠದ ಅವರಣಕ್ಕೆ ಹೊಂದಿಕೊಂಡ ಮದ್ಯದ ಅಂಗಡಿಗಳ ನವೀಕರಣಕ್ಕೆ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.

- ಶ್ರೀ ಎಸ್.ವ್ಹಿ.ಸಂಕನೂರ
- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

**5. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರ ಹೇಳಿಕೆ**

ವಿಷಯ:– ಮೈಸೂರು–ತಲಚೇರಿ ರೈಲು ಮಾರ್ಗಕ್ಕೆ ಸರ್ವೇ ಮಾಡುತ್ತಿರುವ ಬಗ್ಗೆ.

- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**6. ಸಭಾಪತಿಯವರ ಮತ್ತು ಉಪಸಭಾಪತಿಯವರ ಚುನಾವಣೆ ಬಗ್ಗೆ.**

- ಶ್ರೀ ಆಯನೂರು ಮಂಜುನಾಥ್
- ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು)
- ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಬಿ.ಶಾಣಪ್ಪ
- ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ

7. **ಗಮನ ಸೆಳೆಯುವ ಸೂಚನೆ**

ಮಂಡ್ಯ ಜಿಲ್ಲೆಯ ಹಾಲು ಒಕ್ಕೂಟದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದಿಂದಾಗಿ ಭಾರಿ ನಷ್ಟ ಅನುಭವಿಸುತ್ತಿರುವ ಬಗ್ಗೆ.

- ಶ್ರೀ ಅಪ್ಪಾಜಿಗೌಡ
- ಶ್ರೀ ವೆಂಕಟರಾವ್ ನಾಡಗೌಡ (ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು) (ಸಹಕಾರ ಸಚಿವರ ಪರವಾಗಿ)
- ಶ್ರೀ ಬಂಡೆಪ್ಪ ಖಾಶೆಂಪೂರ (ಸಹಕಾರ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಎಸ್.ಎಲ್.ಧರ್ಮೇಗೌಡ
– ಶ್ರೀ ವಿ.ಎಸ್.ಉಗ್ರಪ್ಪ

**8. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

ಅ) ವಿಷಯ:– ಮೈಸೂರು ವಿಶ್ವವಿದ್ಯಾಲಯದಲ್ಲಿನ ಅರ್ಹ ಅಧ್ಯಾಪಕರಿಗೆ 2011ನೇ ಸಾಲಿನಿಂದ ಪ್ಲೇಸ್‌ಮೆಂಟ್ ಮತ್ತು ಸಿಎಎಸ್ ಯೋಜನೆಯಡಿ ಬಡ್ತಿ ನೀಡದಿರುವುದರಿಂದ ಅಧ್ಯಾಪಕರಿಗೆ ಹಾಗೂ ಶೈಕ್ಷಣಿಕ ಪ್ರಗತಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ.
– ಶ್ರೀ ಮರಿತಿಬ್ಬೇಗೌಡ
– ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು)
– ಶ್ರೀ ವಿ.ಎಸ್.ಉಗ್ರಪ್ಪ

ಆ) ಬೆಂಗಳೂರು ನಗರ ಚಿಕ್ಕಪೇಟೆ ಮುಖ್ಯ ರಸ್ತೆಯಲ್ಲಿರುವ ಸೈಟ್ ನಂಬರ್ 202, 203 ಮತ್ತು 203/1 ರ ಓಟಿಸಿ ರೋಡ್, ವಾರ್ಡ್ ಸಂಖ್ಯೆ 109ರಲ್ಲಿ ನಿಯಮಬಾಹಿರವಾಗಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು ಸದರಿ ಕಟ್ಟಡಗಳಿಗೆ ಬೆಸ್ಕಾಂ ಮತ್ತು ಬಿಬಿಎಂಪಿ ಯವರು ಕಾನೂನುಬಾಹಿರವಾಗಿ ಸವಲತ್ತುಗಳನ್ನು ಒದಗಿಸಿರುವುದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ತೆರಿಗೆ ವಂಚನೆಯಾಗಿರುವ ಬಗ್ಗೆ.
– ಶ್ರೀ ಅ. ದೇವೇಗೌಡ
– ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ)
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಪಿ.ಆರ್.ರಮೇಶ್

**9. ಗಮನ ಸೆಳೆಯುವ ಸೂಚನೆ**

ವಿಷಯ: ಕರ್ನಾಟಕ ರಾಜ್ಯದಲ್ಲಿ ಅಸಂಖ್ಯಾತ ಪ್ರಾಚೀನ–ಪುರಾತತ್ವ–ಪಾರಂಪರಿಕ ತಾಣ/ಸ್ಮಾರಕಗಳಿದ್ದು ಇವುಗಳು ಸೂಕ್ತ ನಿರ್ವಹಣೆ ಇಲ್ಲದೇ ಶಿಥಿಲಾವಸ್ಥೆಯಲ್ಲಿರುವುದರಿಂದ ಅವುಗಳ ಸಂರಕ್ಷಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಬಗ್ಗೆ.
– ಡಾ: ತೇಜಸ್ವಿನಿ ಗೌಡ
– ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು)
– ಶ್ರೀ ವಿ.ಎಸ್.ಉಗ್ರಪ್ಪ

**10. ನೂತನ ಸಚಿವರ ಪರಿಚಯ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**11. ವಿತ್ತೀಯ ಕಾರ್ಯಕಲಾಪ**

2018–19ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ

– ಶ್ರೀ ಎಸ್.ಎಲ್.ಧರ್ಮೇಗೌಡ
– ಶ್ರೀ ವೆಂಕಟರಾವ್ ನಾಡಗೌಡ (ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು)
– ಶ್ರೀ ಎನ್.ಎಸ್.ಬೋಸ್‌ರಾಜು
– ಡಾ: ತೇಜಸ್ವಿನಿ ಗೌಡ
– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
– ಎಸ್.ಎ.ಭೋಜೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
– ಶ್ರೀಮತಿ ತಾರಾಅನೂರಾಧ
– ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು)
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಪಿ.ಆರ್.ರಮೇಶ್
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಟಿ.ಎ.ಶರವಣ

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(155)10.7.2018/10.10/ಎಂ.ಎಂ–ಎ.ಕೆ

**ಕರ್ನಾಟಕ ವಿಧಾನ ಪರಿಷತ್ತು**

***ಮಂಗಳವಾರ, 10ನೇ ಜುಲೈ 2018***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~ ~ ~ ~ ~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಸಂತಾಪ ಸೂಚನೆ

**ವಿಷಯ:–** ವಿಧಾನಸಭೆಯ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಸಚಿವರಾಗಿದ್ದ ಶ್ರೀ ಬಿ.ಎ. ಮೊಹಿದ್ದೀನ್ ರವರು ನಿಧನ ಹೊಂದಿರುವ ಬಗ್ಗೆ

– – – –

**ಸಭಾಪತಿಯವರು:–** ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಸಚಿವರಾಗಿದ್ದ ಶ್ರೀ ಬಿ.ಎ. ಮೊಹಿದ್ದೀನ್ ರವರು ಇಂದು ಮುಂಜಾನೆ (10.07.2018) ನಿಧನ ಹೊಂದಿದರೆಂದು ಸದನಕ್ಕೆ ತಿಳಿಸಲು ವಿಷಾದವೆನಿಸುತ್ತದೆ. 1938ರ ಮೇ, 05ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೈಗಾರಿಕೋದ್ಯಮಿಯಾಗಿದ್ದರು. 1978–83ರ ಅವಧಿಯಲ್ಲಿ ಬಂಟ್ವಾಳ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಶ್ರೀಯುತರು 1990–1996 ಹಾಗೂ 1996–2002ರವರೆಗೆ ಎರಡು ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ದಿನಾಂಕ 20.03.1995 ರಿಂದ 05.06.1996ರವರೆಗೆ ವಿಧಾನ ಪರಿಷತ್ತಿನ ಮುಖ್ಯಸಚೇತಕರಾಗಿ ಹಾಗೂ ದಿ: ಜೆ.ಹೆಚ್.ಪಟೇಲ್ ಅವರ ಸಚಿವ ಸಂಪುಟದಲ್ಲಿ ಸಣ್ಣ ಕೈಗಾರಿಕೆ, ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಉನ್ನತ ಶಿಕ್ಷಣ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಕೈಗಾರಿಕೆ ಹಾಗೂ ಕೃಷಿ ಅಭಿವೃದ್ಧಿಗಾಗಿ ಶ್ರಮಿಸಿದ್ದರಲ್ಲದೇ ಯುವ ಜನತೆಯ ಬಗ್ಗೆ ಅತ್ಯಂತ ಕಾಳಜಿಯುಳ್ಳವರಾಗಿದ್ದರು. ಶ್ರೀಯುತರ ನಿಧನದಿಂದಾಗಿ ಹಿರಿಯ ರಾಜಕೀಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಡಾ॥ ಜಿ. ಪರಮೇಶ್ವರ್ (ಉಪಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಯಾವತ್ತು ಕೂಡ ನಮಗೆ ಸದನದಲ್ಲಿ ಸಂತಾಪ ಸೂಚನೆ ಬಂದಂತಹ ಸಂದರ್ಭದಲ್ಲಿ ಬಹಳ ದುಃಖವಾಗುತ್ತದೆ, ನೋವಾಗುತ್ತದೆ. ನಮ್ಮ ಜೊತೆಯಲ್ಲಿದ್ದವರನ್ನು ಶಾಶ್ವತವಾಗಿ ಅಗಲಿದ್ದೇವೆ ಎನ್ನುವಂತಹ ಭಾವನೆ ಬರುತ್ತದೆ. ಸನ್ಮಾನ್ಯ ಮೊಹಿದ್ದೀನ್ ಅವರು ನನಗೆ ನಾನು ರಾಜಕೀಯಕ್ಕೆ ಪ್ರವೇಶ ಮಾಡುವುದಕ್ಕೆ ಮುಂಚೆ ಮೊದಲಿನಿಂದಲೂ ಪರಿಚಯಸ್ಥರು. ನಾನು ಆಸ್ಟ್ರೇಲಿಯಾದಿಂದ ವ್ಯಾಸಂಗ ಮುಗಿಸಿ ಬಂದ ಮೇಲೆ ನನ್ನನ್ನು ನನ್ನ ತಂದೆಯವರು ನಮ್ಮ 'ಸಿದ್ಧಾರ್ಥ' ಸಂಸ್ಥೆಯಲ್ಲಿ Administrative Officer ಆಗಿ ನೇಮಕ ಮಾಡಿದರು. ಆಗ ಪ್ರಪ್ರಥಮ ಬಾರಿಗೆ ಮೊಹಿದ್ದೀನ್ ಸಾಹೇಬರು ಯಾರೋ ಒಬ್ಬರನ್ನು ಇಂಜಿನಿಯರಿಂಗ್ ಕಾಲೇಜಿನಲ್ಲಿ ದಾಖಲಿಸಲು ಬಂದರು. ಅವತ್ತು ನನಗೆ ಮೊದಲ ಬಾರಿಗೆ ಅವರ ಪರಿಚಯವಾಯಿತು. ಅವತ್ತಿನಿಂದ ಮೊನ್ನೆ ಅವರು ಆಸ್ಪತ್ರೆಗೆ ಹೋಗುವವರೆಗೂ ಕೂಡ ನನಗೆ ಸಂಪರ್ಕದಲ್ಲಿದ್ದರು. ಅವರು ರಾಜಕೀಯ ಕ್ಷೇತ್ರದಲ್ಲಿ ನಾನು ಕಂಡ ಹಾಗೆ ಅತ್ಯಂತ ಪ್ರಾಮಾಣಿಕ ಮತ್ತು ಬಹಳ ಸರಳಜೀವಿಗಳಾಗಿದ್ದರು. ಏನನ್ನೂ ಬಯಸದೇ ಅದು ಬೇಕು, ಇದು ಬೇಕು, ಆಸ್ತಿ ಮಾಡಬೇಕು ಅಥವಾ ಐಶ್ವರ್ಯ ಬೇಕು ಎನ್ನುವ ಮನಸ್ಥಿತಿಯೇ ಅವರಿಗೆ ಇದ್ದ ಹಾಗೆ ಕಾಣಲಿಲ್ಲ. ಯಾವ ಊರಿನವರಾಗಲೀ, ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಧರ್ಮದವರಾಗಲೀ ಅಥವಾ ಯಾರೇ ಆದರೂ ಕೂಡ ಅವರ ಬಳಿ ಹೋಗಿ ಸಹಾಯ ಕೇಳಿದರೆ ತಕ್ಷಣವೇ ಅವರಿಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟನ್ನು ಮಾಡುವಂತಹ ಮನಸ್ಥಿತಿ ಇದ್ದಂತಹವರು ಮೊಹಿದ್ದೀನ್ ಸಾಹೇಬರು. ಅವರು ಸರ್ಕಾರದಲ್ಲಿ ಮುಖ್ಯಸಚೇತಕರಾಗಿ, ಸಚಿವರಾಗಿ ಕೆಲಸ ಮಾಡಿದ್ದಾರೆ. ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡುವಾಗ ನಾನು ಅವರ ಜೊತೆ ಬಹಳಷ್ಟು ಚರ್ಚೆಗಳನ್ನು ಮಾಡಿದ್ದೆ. ವಿಶ್ವವಿದ್ಯಾನಿಲಯಗಳನ್ನು ಇನ್ನಷ್ಟು ಕ್ರಿಯಾಶೀಲವಾಗಿ ಮಾಡಬೇಕು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ನಮ್ಮಲ್ಲಿ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಪದವೀಧರನಾದರೆ, Master Degree ಮಾಡಿಕೊಂಡರೆ ಅಥವಾ ಪಿ.ಹೆಚ್.ಡಿ ಮಾಡಿಕೊಂಡು ಬಂದರು ಕೂಡ ಅವನಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ competitiveness ಬರುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಇವತ್ತಿಗೂ ಉಳಿದಿದೆ. ತಾವು ಕೂಡ ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದು, ತಮಗೂ ಕೂಡ ಅದರ ಅರಿವು ಇದೆ. ಅವರು ಅದನ್ನು ಬದಲಾಯಿಸಬೇಕು ಎಂದು ಅನೇಕ ಬಾರಿ ನನ್ನ ಜೊತೆ ಚರ್ಚೆ ಮಾಡಿದ್ದರು. ಅದು ಅವರಿಗೆ ಇದ್ದ ಸಮಾಜದ ಕಳಕಳಿ. He was a Nationalist. ಯಾವುದೇ ರೀತಿಯಲ್ಲಿ ಅವರಿಗೆ ಬೇರೆ ಬೇರೆ ಭಾವನೆಗಳೇ ಇರಲಿಲ್ಲ. ಅವರಿಗೆ ಜಾತಿ, ಧರ್ಮ, ಇವೆಲ್ಲವನ್ನೂ ಮೀರಿ, ಅವರ ಜೀವನದಲ್ಲಿ ಅವರು ನಡೆದುಕೊಂಡು ಬಂದ ದಾರಿ ಎನ್ನುವುದನ್ನು ನಾನು ಕಂಡಿದ್ದೇನೆ. ಇಂದು ಬೆಳಿಗ್ಗೆ ನನಗೆ ಮೊಹಿದ್ದೀನ್ ಅವರು ನಿಧನರಾಗಿರುವ ಸುದ್ದಿ ಬಂದಿತು. ಅದರಿಂದ ನನಗೆ ಬಹಳ ನೋವಾಯಿತು. ಎಂತಹ ಒಳ್ಳೆಯ ಜನರೆಲ್ಲಾ ಸಮಾಜದಲ್ಲಿ ಅಗಲುತ್ತಾರೆ. ಇದು ಪ್ರಕೃತಿ ನಿಯಮ ಇರಬಹುದು. ಆದರೂ ಕೂಡ ನಮ್ಮನ್ನು ಬಿಟ್ಟು ಹೋಗಿದ್ದಾರೆ ಎಂದು ಹೇಳುವಾಗ ಮನಸ್ಸಿಗೆ ಬಹಳ ನೋವಾಗುತ್ತದೆ. ನಾನು ಬೆಳಿಗ್ಗೆ ಅವರ ಮನೆಗೆ ಹೋಗಿ ಅವರ ಪಾರ್ಥಿವ ಶರೀರಕ್ಕೆ ಗೌರವವನ್ನು ಸಲ್ಲಿಸಿ ಬಂದೆನು. ಇದು ನಿಜಕ್ಕೂ ಬಹಳ ನೋವಿನ ಸಂಗತಿಯಾಗಿದೆ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ವರ್ಗದದವರು ಅವರ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ನಾನು ಪ್ರಾರ್ಥನೆಯನ್ನು ಸಲ್ಲಿಸಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮುಂವ)

(156) 10-07-2018/10-20/ಕೆಹೆಚ್/ಆರ್ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಬ್ಬ ಶೇಷ್ಠ ರಾಜಕಾರಣಿ, ಶಿಕ್ಷಣ ತಜ್ಞ, ಉತ್ತಮ ಸಂಸದೀಯ ಪಟು, ಸಾರ್ವಜನಿಕ ಜೀವನದಲ್ಲಿ ಅಪರೂಪದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವರು ಶ್ರೀ ಬಿ.ಎ. ಮೊಹಿದ್ದೀನ್‌ರವರು ಎಂದು ಹೇಳಬಹುದು. ಅವರು ನಮ್ಮ ಕರಾವಳಿ ಜಿಲ್ಲೆಯವರು ಎಂದು ಹೇಳುವುದಕ್ಕೆ ನಮಗೆ ಹೆಮ್ಮೆಯಾಗುತ್ತದೆ. ಅವರು ಎರಡು ಬಾರಿ ವಿಧಾನಸಭಾ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರಾಗಿ, ಮೇಲ್ಮನೆಯ ಶಾಸಕರಾಗಿ, ಮಾನ್ಯ ಸಚಿವರಾಗಿ ಮತ್ತು ಮುಖ್ಯ ಸಚೇತಕರಾಗಿ ಬಹು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿದಂತಹ ಹಿರಿತನಕ್ಕೆ ಶ್ರೀ ಬಿ.ಎ. ಮೊಹಿದ್ದೀನ್‌ರವರು ಪಾತ್ರರಾಗಿರುತ್ತಾರೆ. ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳು ಕುಸಿಯುತ್ತಿವೆ ಎನ್ನುವಂತಹ ಇವತ್ತಿನ ದಿನಗಳಲ್ಲಿ ಒಬ್ಬ ಮೌಲ್ಯಧಾರಿತ ರಾಜಕಾರಣಿಯನ್ನು ಕಳೆದುಕೊಂಡಂತಹ ನೋವು ನಮ್ಮೆಲ್ಲರನ್ನು ಕಾಡುತ್ತದೆ. ಹಾಗಾಗಿ ಅಂತಹ ಹಿರಿಯ ಚೇತನಕ್ಕೆ ಗೌರವವನ್ನು ಸಲ್ಲಿಸುವುದಕ್ಕೆ ಮತ್ತು ತಾವು ಕೊಟ್ಟಿರುವಂತಹ ಈ ಪ್ರಸ್ತಾವನೆಗೆ ಅನುಮೋದನೆಯನ್ನು ಕೊಟ್ಟು ಮೃತರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ಕರುಣಿಸಲಿ ಮತ್ತು ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಆ ದೇವರು ನೀಡಲಿ ಎಂದು ಹೇಳಿ ಈ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದ ಎಲ್ಲಾ ಸದಸ್ಯರುಗಳು ಒಂದು ನಿಮಿಷದ ಕಾಲ ಮೌನವನ್ನು ಆಚರಿದರು)**

**ಸಭಾಪತಿಯವರು:–** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

ಇವತ್ತಿನ ದಿವಸ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು ಶ್ರೀ ಆರ್.ವಿ.ದೇಶಪಾಂಡೆ, ಮಾನ್ಯ ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ಶ್ರೀ ಕೆ.ಜೆ.ಜಾರ್ಜ್, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ ಮತ್ತು ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಶ್ರೀ ಮನಗೂಳಿ ಮಲ್ಲಪ್ಪ ಚನ್ನವೀರಪ್ಪ, ಮಾನ್ಯ ತೋಟಗಾರಿಕೆ ಸಚಿವರು, ಶ್ರೀ ವೆಂಕಟರಾವ್ ನಾಡಗೌಡ, ಮಾನ್ಯ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು, ಮತ್ತು ಅಧಿಕಾರಿಗಳು ಶ್ರೀ ಸಿದ್ದಗಂಗಪ್ಪ, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಶ್ರೀ ರಾಕೇಶ್ ಸಿಂಗ್, ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮಧ್ಯಾಹ್ನದ ನಂತರ ಶ್ರೀ ಹೇಮಾಜಿ ನಾಯಕ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಶ್ರೀ ಮೋಹನ್ ರಾಜು ಕೆ.ಪಿ., ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರುಗಳು ಸದನದಲ್ಲಿ ಕಡ್ಡಾಯವಾಗಿ ಹಾಜರಿರಲೇಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಭಾಪತಿಯವರ ಪೀಠದಿಂದ ಇಂತಹ ಉಲ್ಲೇಖವನ್ನು ಏಕೆ ಮಾಡುತ್ತಾರೆಂದು ಹೇಳಿದರೆ ಸರ್ಕಾರವು ಜಾಗೃತವಾಗಿರಲಿ ಮತ್ತು ಸದನದಲ್ಲಿ ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವರುಗಳು ಸಕಾಲದಲ್ಲಿ ಹಾಜರಿರಬೇಕೆಂದು ಮಾಡುತ್ತಾರೆ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಸದನದಲ್ಲಿ ಮಾನ್ಯ ಸಚಿವರೆಲ್ಲಾ ಹಾಜರಿದ್ದಾರೆಯೇ ಎಂಬ ಬಗ್ಗೆ ಒಂದು ಬಾರಿ ದೃಢಪಡಿಸಿಕೊಳ್ಳಬೇಕು.

## 2. ನೂತನ ಸಚಿವರುಗಳ ಪರಿಚಯ

**ಡಾ॥ ಜಯಮಾಲ ರಾಮಚಂದ್ರ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಸದನಕ್ಕೆ ಮೊದಲ ಬಾರಿಗೆ ಹೊಸದಾಗಿ ಶ್ರೀ ವೆಂಕಟರಾವ್ ನಾಡಗೌಡ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು ಮತ್ತು ಶ್ರೀ ಮನಗೂಳಿ ಮಲ್ಲಪ್ಪ ಚನ್ನವೀರಪ್ಪ, ತೋಟಗಾರಿಕೆ ಸಚಿವರು ಹಾಜರಾಗಿದ್ದಾರೆ.

**ಸಭಾಪತಿಯವರು:–** ನಾನು ಅತ್ಯಂತ ಅಭಿಮಾನದಿಂದ ಎಲ್ಲ ಸದಸ್ಯರಿಗೂ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಎಲ್ಲ ಸದಸ್ಯರುಗಳು ಸರಿಯಾದ ಸಮಯಕ್ಕೆ ಬಂದು ಸದನವನ್ನು ಪ್ರಾರಂಭ ಮಾಡಿದ್ದೀರಿ. ಅದಕ್ಕೆ ತಮ್ಮಗೆಲ್ಲರಿಗೂ ಧನ್ಯವಾದಗಳು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ಮೊದಲು ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಲಿ. ನಂತರ ಮಾತನಾಡಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ಒಂದು ನಿಮಿಷ. ಮೊದಲು ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಲಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಾವು ನಮ್ಮ ಮಾತನ್ನು ಕೇಳಬೇಕು. ಮೊದಲು ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಲಿ. ತಾವು ಏನು ಹೇಳುತ್ತೀರೋ, ಅದನ್ನು ನಾನು ಕೇಳುತ್ತೇನೆ. ಪ್ರಶ್ನೋತ್ತರ ಅವಧಿಯು ಮುಗಿಯುವವರೆಗೆ . . .

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸಂವಿಧಾನಾತ್ಮಕವಾದಂತಹ ಒಂದು ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತೇನೆ. ಅದಕ್ಕೆ ತಾವು ತೀರ್ಮಾನವನ್ನು ಕೊಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಪ್ರಶ್ನೋತ್ತರ ಅವಧಿಯನ್ನು ಮುಂದೆ ಹಾಕುವಂತಹ ಪದ್ಧತಿ ನಮ್ಮಲ್ಲಿಲ್ಲ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ, ನಂತರ ತಾವು ಏನು ಹೇಳಬೇಕೋ ಅದನ್ನು ಹೇಳಿ. ತಾವು ಎಷ್ಟು ಹೊತ್ತಿನ ತನಕ ಹೇಳುತ್ತೀರೋ, ಅಲ್ಲಿಯವರೆಗೂ ನಾನು ಕೇಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಪ್ರಶ್ನೋತ್ತರ ಅವಧಿಯನ್ನು ಮುಂದಕ್ಕೆ ಹಾಕಬೇಕೆಂಬುದು ನನ್ನ ಪ್ರಶ್ನೆ ಅಲ್ಲ.

**ಸಭಾಪತಿಯವರು:–** ಶ್ರೀ ಆಯನೂರು ಮಂಜುನಾಥ್‌ರವರೇ, . . .

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಡಾ॥ ಜಿ. ಪರಮೇಶ್ವರ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ಪ್ರಶ್ನೋತ್ತರ ಅವಧಿಯನ್ನು ಕರೆದಿರುವುದಕ್ಕೆ ನಾವು ಅವರಿಗೆ ಗೌರವವನ್ನು ಕೊಡಬೇಕಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಅತ್ಯಂತ ಗೌರವದಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನನ್ನ ಮಾತನ್ನು ನೀವು ಒಂದು ನಿಮಿಷ ಕೇಳಬೇಕು. ವಿಷಯವೇನೆಂಬುದನ್ನು ನನಗೆ ಬರೆದು ಕಳುಹಿಸಿದರೆ ನಾನು ಅದರ ಬಗ್ಗೆ ಹೇಳುತ್ತಿದ್ದೆ. ತಾವು ಏನೂ ಬರೆದು ಕಳುಹಿಸಿಲ್ಲ. ತಾವು ಯಾವುದರ ಬಗ್ಗೆ ಮಾತನಾಡುತ್ತೀರೆಂಬುದು ಗೊತ್ತಿಲ್ಲ. ಪ್ರಶ್ನೋತ್ತರಗಳ ಬಗ್ಗೆ ಕೇಳುತ್ತಿದ್ದೇನೆ. ತಾವು ಎದ್ದು ನಿಂತು ಏನಾದರೂ ಹೇಳುವುದಕ್ಕೆ ಹೋದರೆ ಅದನ್ನು ನಾನು ಹೇಗೆ allow ಮಾಡಬೇಕು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಇದರ ಬಗ್ಗೆ allow ಮಾಡುವುದಿಲ್ಲ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ. ನಂತರ ತಾವು ಎಷ್ಟು ಸಮಯವನ್ನು ಕೇಳುತ್ತೀರೋ, ಅಷ್ಟು ಸಮಯವನ್ನು ಕೊಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡುವುದು ಬೇಡವೆಂದು ತಾವು ಹೇಳುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ದಯವಿಟ್ಟು ನಾವು ಹೇಳುವುದನ್ನು ಕೇಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ನನಗೆ ಯಾವ ವಿಷಯವೆಂಬುದು ಬೇಕಾಗಿದೆ. ತಾವು ಇದರ ಬಗ್ಗೆ ಏನಾದರೂ ಬರೆದು ಕೊಟ್ಟಿದ್ದೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಏನೂ ಬರೆದು ಕೊಟ್ಟಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಬರೆದು ಕೊಡಿ. ಇದಕ್ಕೆ ಒಂದು ಪದ್ಧತಿ ಇರುತ್ತದೆಯಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅನಿವಾರ್ಯ ಕಾರಣಗಳಿಂದ . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ ಇದಕ್ಕೆ ಒಂದು ಪದ್ಧತಿ ಇರುತ್ತದೆಯಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ನಮ್ಮ ರಕ್ಷಣೆಗೆ ಬರಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಯಾವುದೋ ಒಂದು ಸಂದರ್ಭದಲ್ಲಿ ತುರ್ತಾದಂತಹ ವಿಚಾರಗಳು ಇರುತ್ತದೆ. ಅಂತಹ ಸಂದರ್ಭದಲ್ಲಿ . . .

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಇರುವಂತಹ ಪದ್ಧತಿಯನ್ನು ನಾವೇ ಉಲ್ಲಂಘನೆ ಮಾಡಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅನೇಕ ಸಂದರ್ಭದಲ್ಲಿ ತುರ್ತು ವಿಚಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲು ಪೀಠವು ಅನುಮತಿಯನ್ನು ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ವಿರೋಧ ಪಕ್ಷದ ನಾಯಕರೇ ನಾನು ನಿಮಗೆ ಮಾತನಾಡುವುದಕ್ಕೆ ಸಮಯವನ್ನು ಕೊಡುತ್ತೇನೆ ಎಂದರೂ ಕೂಡ ಈಗಲೇ ಸಮಯವನ್ನು ಕೊಡಬೇಕೆಂಬ ಹಠ ತಮಗೇಕೆ ಇದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಹಠ ಅಲ್ಲ. ನಾನು ತಮ್ಮ ಹತ್ತಿರ ವಿನಂತಿಯನ್ನು ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮೊದಲು ಪ್ರಶ್ನೋತರ ಅವಧಿ ಮುಗಿಯಲಿ. ನಾವು ಪದ್ಧತಿಯನ್ನು ಕೆಡಿಸುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಕೊಟ್ಟಿರುವಂತಹ ಗೌರವದಿಂದ ನಾವು ವಿನಂತಿಯನ್ನು ಮಾಡುತ್ತಿದ್ದೇವೆ. ಅದು ನಮ್ಮ ತಪ್ಪಲ್ಲ. ವಿರೋಧ ಪಕ್ಷದ ಸದಸ್ಯರೆಲ್ಲಾ ಈ ಪೂರ್ವಭಾವಿ ಸಭೆಯಲ್ಲಿ ಕುಳಿತುಕೊಂಡಾಗ ಅನಿವಾರ್ಯವಾಗಿ ತುರ್ತಾದ ವಿಚಾರವನ್ನು ಪೀಠದ ಗಮನಕ್ಕೆ ತರಬೇಕೆಂದು ನಿಶ್ಚಯ ಮಾಡಿದ್ದೇವೆ. ಹಿರಿಯ ಸದಸ್ಯರು ಎನ್ನುವ ಕಾರಣಕ್ಕೋಸ್ಕರ ಈ ಜವಾಬ್ದಾರಿಯನ್ನು ಶ್ರೀ ಆಯನೂರು ಮಂಜುನಾಥ್‌ರವರಿಗೆ ನೀಡಿದ್ದೇವೆ. ಪೀಠದ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಒಂದು ನಿಮಿಷ ಮಾತ್ರ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ನಾವು ವಿನಂತಿಯನ್ನು ಮಾಡಿದ್ದೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ನಾನು ತಮಗೆ ಮಾತನಾಡುವುದಕ್ಕೆ ಸಮಯವನ್ನು ಕೊಡುವುದಿಲ್ಲವೆಂದು ಹೇಳಿದಾಗ ತಾವು ವಾದ ಮಾಡಬೇಕು. ಎಷ್ಟು ಹೊತ್ತಿನವರೆಗೆ ಬೇಕಾದರೂ ಮಾತನಾಡುವುದಕ್ಕೆ ಸಮಯವನ್ನು ಕೊಡುತ್ತೇನೆ ಎಂದು ಹೇಳಿದ್ದೇನೆ. ಮೊದಲು ಪ್ರಶ್ನೋತ್ತರ ಅವಧಿಯು ಮುಗಿಯಲಿ. ಬಹಳಷ್ಟು ಪ್ರಶ್ನೆಗಳು ಇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ನಿಮಿಷ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಸಮಯವನ್ನು ಕೊಡುವುದಿಲ್ಲವೆಂದು ಹೇಳಿದಾಗ ನನ್ನ ವಿರುದ್ಧ ತಾವು ಮಾತನಾಡಬಹುದು. ಪ್ರಶ್ನೋತ್ತರ ಅವಧಿಯು ಮುಗಿದ ಮೇಲೆ ತಾವು ತಕ್ಷಣದಲ್ಲಿಯೇ ಮಾತನಾಡಬಹುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, . . .

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮೊನ್ನೆಯ ದಿವಸ ತಮಗೆ ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಮತ್ತೊಮ್ಮೆ ಪೀಠದ ಬಗ್ಗೆ ಪ್ರಶ್ನೆ ಬಂದಿದೆ. ಹಕ್ಕುಚ್ಯುತಿಯಾದಾಗ ಅದು ತುರ್ತು ವಿಷಯವಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಲೋಕಸಭೆಯಲ್ಲಿ ಸದಸ್ಯರಾಗಿದ್ದವರು ಮತ್ತು ಹಿರಿಯರಾಗಿದ್ದೀರಿ. ಪ್ರಶ್ನೋತ್ತರ ಅವಧಿಯನ್ನು ಕರೆಯುವುದಕ್ಕೆ ಮುಂಚೆ ಹೇಳಿದ್ದರೆ ಇದರ ಬಗ್ಗೆ ನಾನು ಹೇಳುತ್ತಿದೆ. ಮಾನ್ಯ ಸಚಿವರುಗಳನ್ನು ಸದನಕ್ಕೆ ಕರೆದಿದ್ದೇವೆ. ಪ್ರಶ್ನೋತ್ತರ ಅವಧಿ ಮುಗಿಯಲಿ, ಒಂದು ತಾಸು ಮುಗಿದ ಮೇಲೆ ನೀವು ನಮ್ಮನ್ನು ಏನು ಕೇಳಬೇಡಿ. ತಾವು ಎದ್ದು ಮಾತನಾಡಿ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಈ ರೀತಿಯಲ್ಲಿ ಹಠ ಮಾಡಿದರೆ ಸಭಾಪತಿಯವರ ಸ್ಥಾನಕ್ಕೆ ಗೌರವ ಕೊಡುವುದಿಲ್ಲವೆಂದರೆ ಹೇಗಾಗುತ್ತದೆ. ಅವರು ಮಾತನಾಡುವುದಕ್ಕೆ ಸಮಯವನ್ನು ಕೊಡುತ್ತೇನೆಂದು ಹೇಳಿದ್ದಾರೆ. ತಮಗೆ ಸಮಯವನ್ನು ಕೊಡುವುದಿಲ್ಲವೆಂದು ಏನು ಹೇಳಲಿಲ್ಲ. ದಯಮಾಡಿ ಕುಳಿತುಕೊಳ್ಳಿ.

**3. ಪ್ರಶ್ನೋತ್ತರ ವೇಳೆ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು**

**ಪ್ರಶ್ನೆ ಸಂಖ್ಯೆ: 38 ಮತ್ತು 139**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾದಕ ದ್ರವ್ಯ ಸಾಗಾಣಿಕೆಯ ವಿರುದ್ಧ ಪತ್ತೆ ಹಚ್ಚಲಾಗಿರುವಂತಹ ಪ್ರಕರಣಗಳ ಬಗ್ಗೆ ಮತ್ತು ಅವುಗಳ ನಿಯಂತ್ರಣದ ಬಗ್ಗೆ ಪ್ರಶ್ನೆಯನ್ನು ಕೇಳಿರುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಕೊಲೆಗಳಿಗಿಂತ ಭೀಕರವಾಗಿರುವಂತಹದ್ದು, ನಿರಂತರವಾಗಿ ಯುವಕರನ್ನು ತಪ್ಪುದಾರಿಗೆ ಎಳೆಯುವಂತಹ ಮತ್ತು ಯುವಕರ ಮುಖಾಂತರ ಈ ಮಾದಕ ದ್ರವ್ಯವನ್ನು ಮಾರಾಟ ಮಾಡುವಂತಹ ಒಂದು ಜಾಲವು ಈ ರಾಜ್ಯದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದೆ. ಬಹುಶಃ ಇದು ಎಲ್ಲಾ ಜಿಲ್ಲೆಗಳಲ್ಲೂ ಸಹ ಇದೆ. ಈ ವಿಚಾರವು ಪೊಲೀಸರ ಗಮನಕ್ಕೆ ಬಂದಿಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಆಗುವುದಿಲ್ಲ.

(ಮುಂದೆ)

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(157)10/07/2018/ಎಸ್‌ಪಿಆರ್/ಆರ್.ಎನ್./10:30**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಮುಂದು):–**

ಗೌರಿ ಹತ್ಯೆಯಂತಹ ಪ್ರಕರಣವನ್ನು ಭೇದಿಸಿದ ನಮ್ಮ ಪೊಲೀಸರಿಗೆ ಇದು ದೊಡ್ಡ ವಿಚಾರವಲ್ಲ. ಇದು ನಮ್ಮ ಮನೆಯ ಬಾಗಿಲಿನಲ್ಲಿ ನಡೆಯುವಂತಹದ್ದಾಗಿದೆ. ನಮ್ಮ ಕಾಲೇಜುಗಳ ಪರಿಸರದಲ್ಲಿ ನಡೆಯುವಂತದ್ದಾಗಿದೆ. ಇದರ ನಿಯಂತ್ರಣದ ಬಗ್ಗೆ ಈ ಹಿಂದಿನ ಹಲವಾರು ಅಧಿವೇಶನಗಳಲ್ಲಿ ಪ್ರತಿ ಬಾರಿ ಪ್ರಶ್ನೆಯನ್ನು ಕೇಳಲಾಗಿದೆ. ಸಂಬಂಧಪಟ್ಟ ಸಚಿವರು ಇದನ್ನು ನಿಯಂತ್ರಿಸುತ್ತೇವೆ ಎನ್ನುವಂತಹ ಉತ್ತರವನ್ನು ಕೊಡುತ್ತಾರೆಯೇ ಹೊರತು, ಈ ವಿಚಾರದಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಯಾರನ್ನೋ ಹೊಣೆಗಾರರನ್ನಾಗಿ ಮಾಡುವಂತಹ ಒಂದೇ ಒಂದು ಪ್ರಕರಣವನ್ನೂ ಸಹ ನಾವು ಕಾಣಲಿಲ್ಲ. ಬಹುಶಃ ಇದು ಯಾವ ಭಾಗದಲ್ಲಿ ಆಗುತ್ತದೆ, ಅಂತಹ ಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿಯನ್ನೇ ಹೊಣೆಗಾರರನ್ನಾಗಿ ಮಾಡಿದರೆ, ಪ್ರಾಯಶಃ ಇದನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಮ್ಮ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯವರು ಒಳ್ಳೆಯವರು ಇದ್ದಾರೆ. ಅವರು ಒಳ್ಳೆಯವರಿದ್ದಾರೆ ಎಂದ ಮಾತ್ರಕ್ಕೆ ಇಡೀ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿರುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೆಯೇ ಇದ್ದಾರೆ ಎನ್ನುವ ಭಾವನೆಗೆ ಬರುವುದಕ್ಕಾಗುವುದಿಲ್ಲ. ಇದನ್ನು ಯಾವುದೇ ರೀತಿಯಲ್ಲಿ ಕಟ್ಟುನಿಟ್ಟಿನಿಂದ ನಿಯಂತ್ರಣ ಮಾಡದೇ ಇದ್ದರೆ, ಮುಂದಾಗುವ ಅನಾಹುತಗಳಿಗೆ ನಾವುಗಳೆಲ್ಲಾ ಜವಾಬ್ದಾರರಾಗುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ಬಹುಶಃ ಅದನ್ನು ನಿಯಂತ್ರಣ ಮಾಡುವ ದಿಸೆಯಲ್ಲಿ ಅಗತ್ಯವಿರುವ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ ಸ್ಪಷ್ಟವಾಗಿ ಹೇಳಿದರೆ, ಅದರ ಪರಿಣಾಮವನ್ನು ನಾವು ನಿರೀಕ್ಷಿಸಬಹುದು.

**ಶ್ರೀ ಲಹರ್‌ಸಿಂಗ್ ಸಿರೋಯಾ(ವಿಧಾನ ಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಹೀಗಾಗಿ ನಾನು ಈ ವಿಚಾರದಲ್ಲಿ ಚರ್ಚೆಯನ್ನು ಮಾಡಲು ನಿಯಮ 330 ರಡಿ ಮನವಿಯನ್ನು ನೀಡಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪಂಜಾಬ್ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದಲ್ಲಿ, ಇಂತಹ ಪ್ರಕರಣಗಳ ತಪ್ಪಿತಸ್ಥರಿಗೆ ಮರಣ ದಂಡನೆಯನ್ನು ವಿಧಿಸಬೇಕು ಎಂಬಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇಂತಹ ಮಟ್ಟದಲ್ಲಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇಳುವ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರ ಗೊತ್ತಾಗಿದೆಯೇ? ನಮ್ಮಲ್ಲಿನ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಮಾದಕ ದ್ರವ್ಯಗಳಿಗೆ ಬಳಸಿಕೊಳ್ಳುತ್ತಾರೆ ಎಂಬ ವರದಿಗಳು ಪದೇ ಪದೇ ಅಲ್ಲಿನ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ಹೀಗಾಗಿ ಸರ್ಕಾರವು ಈ ವಿಚಾರದಲ್ಲಿ ಯಾವುದೇ ರೀತಿಯಾದ ವಿಶೇಷ ಕ್ರಮಗಳನ್ನು ತೆಗೆದುಕೊಂಡಿದೆಯೇ? ನಮ್ಮಲ್ಲಿನ ಶಾಲೆಗಳು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿ ಗುಪ್ತಚರ ಇಲಾಖೆಯವರನ್ನು ನಿಯೋಜಿಸಿ, ಏನಾದರೂ ಪತ್ತೆ ಹಿಡಿಯುವ ಪ್ರಯತ್ನಗಳನ್ನು ಮಾಡಿದ್ದಾರೆಯೇ?

ಮತ್ತೊಂದು ವಿಚಾರವೇನೆಂದರೆ, ಫೈವ್ ಸ್ಟಾರ್ ಹೋಟೆಲ್ ಹಾಗೂ ಇನ್ನಿತರೆ ಹೈ–ಪ್ರೊಫೈಲ್ ಪಬ್‌ಗಳಲ್ಲಿ ಶೇಕಡಾ 100 ರಷ್ಟು ಮಾದಕ ದ್ರವ್ಯಗಳ ಸೇವನೆಯಾಗುತ್ತದೆ. ಇದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಗುಪ್ತಚರ ಇಲಾಖೆಯವರು ನನ್ನ ಬಳಿ ಬಂದರೆ ಇಂತಹ ನೂರು ಮಾಹಿತಿಗಳನ್ನು ನಾನು ನೀಡುತ್ತೇನೆ. ನಮಗೆ ಗೊತ್ತಿರುವ ಹಲವಾರು ಜನರು ಈ ಮಾದಕ ದ್ರವ್ಯಗಳ ದಂಧೆಯಲ್ಲಿ ಶಾಮೀಲಾಗಿದ್ದಾರೆ. ನಾವು ಅವುಗಳನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಹಾಳಾಗಿ ಹೋಗುತ್ತಿದ್ದಾರೆ. ಈ ವಿಚಾರವು ಎಲ್ಲರಿಗೂ ತಿಳಿದಿದೆ, ಆದರೆ ಸರ್ಕಾರಕ್ಕೆ ಏಕೆ ತಿಳಿದಿಲ್ಲ?

ಉದಾಹರಣೆಗೆ, ಮತ್ತೊಂದು ವಿಚಾರವನ್ನು ಹೇಳಬಯಸುತ್ತೇನೆ. ಈಗ್ಗೆ ಮೂರ್‍ನಾಲ್ಕು ತಿಂಗಳುಗಳ ಹಿಂದೆ, ಪಬ್‌ವೊಂದರಲ್ಲಿ ಗಲಾಟೆಯಾಗಿತ್ತು. ಈ ಪ್ರಕರಣದ ನ್ಯಾಯಾಲಯದ ವಿಚಾರಣೆಯಲ್ಲಿ ಇದು ಮಾದಕ ದ್ರವ್ಯಗಳ ಮಾರಾಟದ ಪರಿಣಾಮ ಎಂಬುದಾಗಿ ಅಭಿಯೋಜಕರು ವಾದವನ್ನು ಮಂಡಿಸಿದ್ದಾರೆ. ಈ ಪ್ರಕರಣದ ಹಿನ್ನೆಲೆಯ ಬಗ್ಗೆ ಸರ್ಕಾರ ಸದರಿ ಪಬ್‌ನಲ್ಲಿ ಮಾದಕ ದ್ರವ್ಯಗಳ ಮಾರಾಟವಾಗುತ್ತಿರುವ ಬಗ್ಗೆ ಅಥವಾ ಇನ್ನಾವುದೇ ಅಂಶಗಳ ಕುರಿತಾಗಿ ಯಾವುದೇ ರೀತಿಯಾದ ತನಿಖೆಯನ್ನು ಮಾಡಿದೆಯೇ ಎಂಬ ಬಗ್ಗೆ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶವನ್ನು ನೀಡಿದರೆ, ಎಲ್ಲಾ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸುತ್ತಾರೆ ಎಂಬ ವಿನಂತಿಯನ್ನು ಮಾಡುತ್ತೇನೆ. ಇದು ಬಹಳ ಮಹತ್ವದ ವಿಚಾರವಾಗಿದೆ. ಈ ವಿಚಾರದಲ್ಲಿ ಪ್ರಶ್ನೆಯನ್ನು ಕೇಳಿದ ಮಾನ್ಯ ಸದಸ್ಯರಾದ ಶ್ರೀ ಪ್ರತಾಪಚಂದ್ರ ಶೆಟ್ಟಿ ರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದು ನಮ್ಮ ಮುಂದಿನ ಪೀಳಿಗೆಗೆ ಸಂಬಂಧಪಟ್ಟಿದ್ದಾಗಿದೆ. ಮಾದಕ ದ್ರವ್ಯ ವ್ಯಸನವು ಸಮಾಜದ ಪ್ರತಿ ಮೂರ್‍ನಾಲ್ಕು ಮನೆಗಳ ಮೇಲೆ ಪರಿಣಾಮವನ್ನು ಬೀರುತ್ತದೆ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾದಕ ದ್ರವ್ಯವನ್ನು ಸೇವನೆ ಮಾಡುವಂತಹ ವಿಚಾರ ಹೊಸದೇನೂ ಅಲ್ಲ. ಇಡೀ ಪ್ರಪಂಚದಲ್ಲಿ ಒಂದು ರೀತಿಯ ಪಿಡುಗು ಆಗಿದ್ದು, ಬಹಳ ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಅದರಲ್ಲೂ ವಿಶೇಷವಾಗಿ ಯುವಕರ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಇಡೀ ಪ್ರಪಂಚದ ಪ್ರತಿಯೊಂದು ರಾಷ್ಟ್ರದಲ್ಲಿಯೂ ಸಹ ಮಾದಕ ದ್ರವ್ಯ ಸೇವನೆಯು ಒಂದು ಪಿಡುಗು ಆಗಿ ಪರಿಣಮಿಸಿದೆ. ನಾನು ಈ ಹಿಂದೆ ಗೃಹ ಸಚಿವನಾಗಿದ್ದಾಗ ಈ ಸದನದಲ್ಲಿ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ, ಶ್ರೀ ಲಹರ್‌ಸಿಂಗ್ ಸಿರೋಯಾ, ಶ್ರೀಮತಿ ತಾರಾ ಅನೂರಾಧ ರವರುಗಳಂತಹ ಹಲವಾರು ಸದಸ್ಯರುಗಳು ಈ ವಿಚಾರದಲ್ಲಿ ಪ್ರಶ್ನೆಯನ್ನು ಕೇಳಿದ್ದರು.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾನೂ ಸಹ ಈ ವಿಚಾರವಾಗಿ ಪ್ರಸ್ತಾಪಿಸಿದ್ದೆನು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ್ದರು.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಈ ವಿಚಾರವಾಗಿ ನಾನು ಉತ್ತರಗಳನ್ನು ನೀಡಿದ್ದೇನೆ. ಇದು ಈ ಸದನದ ಅನೇಕ ಮಾನ್ಯ ಸದಸ್ಯರುಗಳಿಗೆ ಈ ವಿಚಾರದಲ್ಲಿರುವ ವಿಶೇಷ ಕಾಳಜಿಯನ್ನು ತೋರಿಸುತ್ತದೆ. ನಮ್ಮ ಸಮಾಜದ ಯುವಕರುಗಳು ಯಾವ ರೀತಿಯಾಗಿ ಮಾರ್ಪಾಡಾಗುತ್ತಿದ್ದಾರೆ ಎಂದರೆ, ಪ್ರತಿಯೊಂದು ಶಾಲೆ, ಕಾಲೇಜು, ಪಾರ್ಕುಗಳಲ್ಲಿ ಅಲ್ಲಿನ ಮಕ್ಕಳಿಗೆ ಮಾದಕ ದ್ರವ್ಯಗಳನ್ನು ಸರಬರಾಜು ಮಾಡುವವರ ದೊಡ್ಡ ವರ್ಗವೇ ಇದೆ. ಅದೇ ರೀತಿಯಾಗಿ ಬೇರೆ ಬೇರೆ ದೇಶಗಳಿಂದ ಮಾದಕ ದ್ರವ್ಯಗಳನ್ನು ಇಲ್ಲಿಗೆ ತೆಗೆದುಕೊಂಡು ಬಂದು ಇಲ್ಲಿ ಅವುಗಳನ್ನು ಸರಬರಾಜು ಮಾಡುತ್ತಿರುವವರನ್ನು ನಾವು ಗಮನಿಸಿದ್ದೇವೆ. ಇವತ್ತಿನ ದಿವಸ ಮಾನ್ಯ ಸದಸ್ಯರು ಬಹಳ ಗಂಭೀರವಾದ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲೂ ವಿಶೇಷವಾಗಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂಬುದಾಗಿ ಪ್ರಶ್ನೆಯನ್ನು ಮಿತಿಗೊಳಿಸಿದ್ದಾರೆ. ಕೇವಲ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂತಲ್ಲ, ಬಹಳ ಮೊದಲಿನಿಂದಲೂ ಸಹ ವಿಶೇಷವಾಗಿ. . .

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿದ ಉತ್ತರದನ್ವಯ ಕರಾವಳಿ ಪ್ರದೇಶದಲ್ಲಿ ಜಾಸ್ತಿಯಾಗಿದೆ . . .

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರಾವಳಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರವೇ ಪ್ರಶ್ನೆಯನ್ನು ಕೇಳಿದ್ದಾರೆ. ಹೀಗಾಗಿ ಸರ್ಕಾರ ಆ ಭಾಗಕ್ಕೆ ಸೀಮಿತವಾಗಿ ಮಾತ್ರವೇ ಉತ್ತರವನ್ನು ನೀಡಿದೆ. ಆದರೆ, ಕೇವಲ ರಾಜ್ಯದಲ್ಲಿಯೇ ಮಾತ್ರವಲ್ಲದೇ ಇಡೀ ದೇಶದಲ್ಲಿಯೇ ಈ ಸಮಸ್ಯೆ ಇದೆ. ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾ ರವರು "ಉಡ್ತಾ ಪಂಜಾಬ್" ಎಂಬುದಾಗಿ ಪಂಜಾಬ್ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾದಕ ದ್ರವ್ಯದ ಸೇವನೆಯಾಗುತ್ತಿತ್ತು, ಇದಕ್ಕೆ ಕಡಿವಾಣವನ್ನು ಹಾಕಲು ಇವತ್ತಿನ ದಿವಸ ಅಲ್ಲಿನ ಸರ್ಕಾರ ಬಹಳ ಕಠಿಣವಾದ ಕ್ರಮಗಳನ್ನು ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಈ ಸದನಕ್ಕೆ ಹಾಗೂ ಸದಸ್ಯರಿಗೆ ಒಂದು ಭರವಸೆಯನ್ನು ಕೊಡಲಿಚ್ಛಿಸುತ್ತೇನೆ. ಅದೇನೆಂದರೆ, ಬೆಂಗಳೂರು ನಗರವನ್ನು ಹಾಗೂ ಕರ್ನಾಟಕ ರಾಜ್ಯವನ್ನು "ಉಡ್ತಾ ಬೆಂಗಳೂರು, ಉಡ್ತಾ ಕರ್ನಾಟಕ" ಆಗುವುದಕ್ಕೆ ನಾನು ಬಿಡುವುದಿಲ್ಲ. ಯಾವುದೇ ಕಾರಣಕ್ಕಾಗಿಯಾದರೂ ಸರಿ ಮಾದಕ ದ್ರವ್ಯ ಸೇವನೆಯನ್ನು ಮಟ್ಟ ಹಾಕುತ್ತೇವೆ; ಸುಮ್ಮನೆ ಬಿಡುವುದಿಲ್ಲ. ಏಕೆಂದರೆ, ಇದು ಎಲ್ಲರಿಗೂ ಸಂಬಂಧಪಟ್ಟ ವಿಚಾರವಾಗಿದೆ. ಈ ಹಿಂದೆ ನಾನು ಒಂದು ಉದಾಹರಣೆಯನ್ನು ನೀಡಿದ್ದೆನು. ತಮಗೆ ಇದು ಜ್ಞಾಪಕವಿರಬಹುದು. ಬೆಂಗಳೂರು ನಗರದ ಜಯನಗರ ಪ್ರದೇಶದ

ಶಾಲೆಯೊಂದರಲ್ಲಿ ಮಕ್ಕಳು ಶಾಲೆಗೆ ಹೋಗುವ ಸಮಯದಲ್ಲಿ ಶಾಲೆಯ ಹೊರಭಾಗದಲ್ಲಿ ನಿಂತುಕೊಂಡು ವಿದ್ಯಾರ್ಥಿಗಳಿಗೆ ಚಾಕೋಲೇಟ್‌ನ್ನು ನೀಡುತ್ತಾರೆ. ಮೊದಲ ಒಂದೆರೆಡು ದಿನಗಳಂದು ಕೇವಲ ಚಾಕೋಲೇಟ್‌ನ್ನು ನೀಡುತ್ತಾರೆ. ಮೂರನೇಯ ದಿನದಿಂದ ಸದರಿ ಚಾಕೋಲೇಟ್‌ಗೆ ಮಾದಕ ದ್ರವ್ಯದ ವಸ್ತುವನ್ನು ಮಿಶ್ರಣ ಮಾಡಿ ಅದನ್ನು ವಿದ್ಯಾರ್ಥಿಗಳಿಗೆ ನೀಡುತ್ತಾರೆ. ನಾಲ್ಕನೇ ದಿನದಂದು, 8–10–12 ವರ್ಷದ ವಿದ್ಯಾರ್ಥಿಗಳಿಗೆ ಸದರಿ ಚಾಕೋಲೇಟ್ ರುಚಿಸಲು ಪ್ರಾರಂಭವಾಗುತ್ತದೆ. ಬೇರೆ ಬೇರೆ ರೀತಿಯಲ್ಲಿ ಸದರಿ ಚಾಕೋಲೇಟ್‌ಗಳಿಂದ ವಿದ್ಯಾರ್ಥಿಗಳಿಗೆ ಯಾವುದೋ ಒಂದು ರೀತಿಯಾದ ಶಕ್ತಿ ಬಂದ ಹಾಗೆ ಆಗುತ್ತದೆ. ಮಕ್ಕಳೇ ಅದೇ ಚಾಕೋಲೇಟ್‌ನ್ನು ಕೇಳುತ್ತಾರೆ. ಅಲ್ಲಿಂದ ನಂತರ ಮಾದಕ ದ್ರವ್ಯಗಳನ್ನು ಅವರುಗಳು ಮಾರಾಟ ಮಾಡಲು ಪ್ರಾರಂಭಿಸುತ್ತಾರೆ. ಇಷ್ಟರ ಮಟ್ಟಿಗೆ ಬೆಂಗಳೂರು ಹಾಗೂ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಮಾದಕ ದ್ರವ್ಯಗಳ ವಹಿವಾಟುಗಳು ನಡೆಯುತ್ತವೆ. ಇದನ್ನು ಯಾವುದೇ ಕಾರಣಕ್ಕೂ ನಾವು ಬಿಡುವುದಿಲ್ಲ; ಇದನ್ನು ಮಟ್ಟ ಹಾಕೇ ಹಾಕುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ನಮ್ಮ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಟ್ಟು 56 ಪ್ರಕರಣಗಳನ್ನು ದಾಖಲು ಮಾಡಿ, ಅಪರಾಧಿಗಳನ್ನು ಬಂಧಿಸಲಾಗಿದೆ. ಮಾನ್ಯ ಸದಸ್ಯರು ಇಂತಹ ಪ್ರಕರಣಗಳಲ್ಲಿ ಶಾಮೀಲಾದವರು ಯಾರು ಹಾಗೂ ಅದರ ವಿವರಗಳನ್ನು ಪ್ರಶ್ನೆಯಲ್ಲಿ ಕೇಳಿದ್ದಾರೆ. ಸರ್ಕಾರವು ವಿವರವಾದ ಮಾಹಿತಿಯನ್ನು ಪಟ್ಟಿಯ ರೂಪದಲ್ಲಿ ನೀಡಿದೆ. ಪ್ರಕರಣಗಳಲ್ಲಿ ಯಾರು ಶಾಮೀಲಾಗಿದ್ದಾರೆ, ಅವರ ಬಳಿ ಎಷ್ಟು ಪ್ರಮಾಣದಲ್ಲಿ ಮಾದಕ ದ್ರವ್ಯಗಳು ಲಭ್ಯವಿದ್ದವು, ಅವುಗಳು ಯಾವುವು ಎಂಬ ಬಗ್ಗೆ ಉತ್ತರವನ್ನು ನೀಡಲಾಗಿದೆ. ಅದು ಗಾಂಜಾ, ಕೋಕೇನ್ ಇತ್ಯಾದಿ ಇರಬಹುದು, ಇದರ ಪಟ್ಟಿಯನ್ನು ನೀಡಲಾಗಿದೆ. ಗಾಂಜಾ, ಗಾಂಜಾ ಗಿಡಗಳು, ಬ್ರೌನ್ ಷುಗರ್, ಹೆರಾಯಿನ್, ಚರಸ್ ಅಥವಾ ಹಶಿಶ್, ಅಫೀಮು ಹಾಗೂ ಇನ್ನೂ ಬೇರೆ ಬೇರೆ ರೀತಿಯಾದ ಮಾದಕ ದ್ರವ್ಯಗಳಿವೆ. ಇತ್ತೀಚಿನ ದಿಗಳಲ್ಲಿ ಇವುಗಳು ಟ್ಯಾಬ್ಲೆಟ್ ರೂಪದಲ್ಲಿಯೂ ಸಹ ದೊರೆಯುತ್ತವೆ. ಇತ್ತೀಚಿನ ದಿನಗಳಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಮ್ಮ ಬೆಂಗಳೂರಿನಿಂದ ಹೊರ ಹೊರಟಿದ್ದ ಐದು ಕೋಟಿ ರೂಪಾಯಿ ಮೌಲ್ಯದ ಮಾದಕ ಟ್ಯಾಬ್ಲೆಟ್‌ಗಳನ್ನು ಕಸ್ಟಮ್ ಅಧಿಕಾರಿಗಳು ಹಿಡಿದಿದ್ದಾರೆ. ಸದರಿ ಮಾದಕ ಟ್ಯಾಬ್ಲೆಟ್‌ಗಳನ್ನು ದೇವನಹಳ್ಳಿಯ ಸುತ್ತುಮುತ್ತಲಿನ ಖಾಸಗಿ ಮನೆಗಳಲ್ಲಿ ಫಾರ್ಮಸಿಟಿಕಲ್ ಕಂಪೆನಿಯ ಹೆಸರಿನಡಿ ತಯಾರು ಮಾಡುತ್ತಾರೆ. ಟ್ಯಾಬ್ಲೆಟ್ ಹೆಸರು ನೋಡಿದರೆ ಅದು ಫಾರ್ಮಸಿಟಿಕಲ್ ಕಂಪೆನಿಯದ್ದಾಗಿರುತ್ತದೆ. ಅಲ್ಲಿ ತಯಾರು ಮಾಡುವ ಮಾದಕ ದ್ರವ್ಯಗಳು ಸಣ್ಣ ಸಣ್ಣ ಟ್ಯಾಬ್ಲೆಟ್ ರೂಪದಲ್ಲಿರುತ್ತವೆ. ಅವುಗಳನ್ನು ಹೊರ ದೇಶಕ್ಕೆ ರವಾನೆ ಮಾಡುತ್ತಾರೆ. ಕಸ್ಟಮ್ ಅಧಿಕಾರಿಗಳು ಐದು ಕೋಟಿ ಮೌಲ್ಯದ ಟ್ಯಾಬ್ಲೆಟ್ ರೂಪದಲ್ಲಿದ್ದ ಮಾದಕ ವಸ್ತುಗಳನ್ನು ಇತ್ತೀಚಿನ ದಿನಗಳಲ್ಲಿ ವಶಪಡಿಸಿಕೊಂಡಿದ್ದಾರೆ. ಇಂತಹ ಎಲ್ಲಾ ಸಂಗತಿಗಳನ್ನು ಸರ್ಕಾರವು ಗಮನಿಸುತ್ತಿದೆ. ಸಾವಿರಾರು ಜನರು ಈ ದಂಧೆಯಲ್ಲಿ ಪಾಲ್ಗೊಂಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟಾರೆಯಾಗಿ 2,484 ಪ್ರಕರಣಗಳನ್ನು ದಾಖಲಿಸಲಾಗಿದೆ. ಸದರಿ ಪ್ರಕರಣದಲ್ಲಿನ ಅಪರಾಧಿಗಳನ್ನು ಬಂಧಿಸಿದ್ದಾರೆ 142 ಪ್ರಕರಣಗಳಲ್ಲಿ ಆರೋಪಿತರುಗಳಿಗೆ ಶಿಕ್ಷೆಯಾಗಿದೆ. ಈ ವಿಚಾರದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರವು ಎರಡು–

ಮೂರು ಕ್ರಮಗಳನ್ನು ತೆಗೆದುಕೊಂಡಿದೆ. ಶಾಲಾ–ಕಾಲೇಜುಗಳಿಗೆ ಶಾಲಾ ವೇಳೆಯಲ್ಲಿ ಪೋಲಿಸರು ಮಫ್ತಿಯಲ್ಲಿ ಹೋಗಿ ಅಲ್ಲಿನ ಸಂಗತಿಗಳನ್ನು ಗಮನಿಸುತ್ತಾರೆ. ಗುಪ್ತಚರ ಇಲಾಖೆಯು ಈ ವಿಚಾರದಲ್ಲಿ ಮಾಹಿತಿಯನ್ನು ಕಲೆಹಾಕುತ್ತಾರೆ.

(ಮುಂದು)

**(158) 10–07–2018 ಬಿಎಸ್‌ಡಿ:ವಿಕೆ 10–40**

ಡಾ॥ ಜಿ. ಪರಮೇಶ್ವರ್ (ಮುಂದು)

ಯಾರು ಪೂರೈಕೆ ಮಾಡುತ್ತಿದ್ದಾರೆ ಮತ್ತು ಯಾರು ಉಪಯೋಗ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಶಾಲೆಗಳಲ್ಲಿ ಮಕ್ಕಳಿಗೆ ಆಗ್ಗಾಗ್ಗೆ ಮಕ್ಕಳಿಗೆ ಮಾಹಿತಿಗಳನ್ನು ಪೊಲೀಸರು ತಿಳಿಸುತ್ತಿದ್ದಾರೆ. ವರ್ಷಕ್ಕೊಂದು ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಎಂದು ಒಂದು ಕಾರ್ಯಕ್ರಮ ಮಾಡಿ ಜಾಗೃತಿ ಮೂಡಿಸಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬೆಂಗಳೂರಿನಲ್ಲಿ ಇದೇ ವಿಷಯವಾಗಿ ಒಂದು ವಿಶೇಷ ನ್ಯಾಯಾಲಯ ಇದೆ. ಆದರೆ ಪ್ರತಿ ಜಿಲ್ಲೆಗಳಲ್ಲಿ ಇರುವ Principal Sessions Court ಗಳನ್ನು attach ಮಾಡಿದ್ದಾರೆ. ಹಾಗಾಗಿ ಸರ್ಕಾರವು ಎಲ್ಲಾ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ ಹಾಗೂ ಯಾವುದೇ ಕಾರಣಕ್ಕೂ ಇದನ್ನು ಬೆಳೆಯುವುದಕ್ಕೆ ಬಿಡದೇ ಮಟ್ಟ ಹಾಕುತ್ತೇವೆ ಎಂದು ಭರವಸೆ ಕೊಡಲು ಇಷ್ಟಪಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಗಾಂಜಾವನ್ನು ಕಾಡಿನಲ್ಲಿ ಬೆಳೆಯುವುದರಿಂದ ಪೋಲೀಸ್ ಇಲಾಖೆ ಮಾತ್ರವಲ್ಲದೇ ಅರಣ್ಯ ಇಲಾಖೆಯು ಒಳಗೊಂಡಿರುವುದನ್ನು ಕಾಣುತ್ತಿದ್ದೇವೆ. ಪಶ್ಚಿಮ ಘಟ್ಟ ಪ್ರದೇಶಗಳ ಕಾಡಿನಲ್ಲಿ ಮತ್ತು ಎಸ್ಟೇಟ್‌ಗಳಲ್ಲಿ ಗಾಂಜಾವನ್ನು ಬೆಳೆಯುವ ಪರಿಸ್ಥಿತಿ ಇದ್ದು, ಅದನ್ನೂ ನಿಯಂತ್ರಣ ಮಾಡಬೇಕು. ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಬಹುಶ: ಅವರು ಇಲ್ಲಿ ಹೇಳಿರುವುದು ಕಾರ್ಯಗತವಾಗುವುದಕ್ಕಿಂತ ಮುಖ್ಯವಾಗಿ ಸಂಬಂಧಪಟ್ಟ ಪೊಲೀಸ್ ಠಾಣಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿದರೆ ಮಾತ್ರ ನಿಯಂತ್ರಣ ಮಾಡಬಹುದಾಗಿದೆ. ಇಲ್ಲದಿದ್ದರೆ ಮುಖ್ಯವಾಗಿ ಯಾರು ಬೆಳೆದಿದ್ದಾರೆ, ಎಲ್ಲಿಂದ ಪೂರೈಕೆಯಾಗುತ್ತಿದೆ ಎಂದು ತಿಳಿಯುವುದಿಲ್ಲ. ನಾನು ಗೌರಿ ಹತ್ಯೆ ಪ್ರಕರಣದಲ್ಲಿ ಯಾವರೀತಿ ಗುರುತು ಹಿಡಿಯುತ್ತಾರೆ ಮತ್ತು ಯಾವ ರೀತಿ ನಿಯಂತ್ರಣ ಮಾಡುತ್ತಾರೆ ಎಂಬ ಬಗ್ಗೆ quote ಮಾಡಿ ಹೇಳಿದೆ. ಅದೇರೀತಿ ಮಾಡಲು ಪೊಲೀಸರಿಗೆ ಶಕ್ತಿ ಇದೆ ಎಂದು ರಾಜ್ಯದ ಜನರಿಗೆ ನಂಬಿಕೆ ಬಂದಿದೆ. ಆ ರೀತಿ ಕೆಲಸ ಮಾಡುತ್ತಿರುವಾಗ ಪುಟ್ಟಗೋಸಿ ಕಾಲೇಜುಗಳ ಹತ್ತಿರ ಮಾದಕ ದ್ರವ್ಯವನ್ನು ಮಾರಾಟ ಮಾಡುವವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ ಎಂದರೆ ಹಾಗೂ ಇಲಾಖೆಯು ಒಳಗೊಂಡಿಲ್ಲ ಎಂದು ಹೇಳುವುದಾದರೆ ಜನರು ಅದನ್ನು ನಂಬುವುದಿಲ್ಲ. ತಂದೆ–ತಾಯಿಗಳು ಅವರ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಅವರ ಮಕ್ಕಳ ಭವಿಷ್ಯ ಕಾಲೇಜಿನಲ್ಲಿ ಏನಾಗುತ್ತದೋ ಎನ್ನುವ ಭೀತಿ ಇರುವ ಹಿನ್ನೆಲೆಯನ್ನು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದೇನೆ. ಬಹುಶ: ಇದನ್ನು ನಿಯಂತ್ರಣ ಮಾಡುವುದರಿಂದ ಮಾನ್ಯ ಸಚಿವರಿಗೆ ಹೆಚ್ಚಿನ ಗೌರವ ಬರುತ್ತದೆ. ಈ ರಾಜ್ಯದಲ್ಲಿ ಮಾದಕ ದಂಧೆ ಅಲ್ಲಿದೆ ಇಲ್ಲಿದೆ ಎಂದು ಹೇಳಬಾರದು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಮಸ್ಯೆಗಳಿಗೆ ಕಾರಣಗಳು ಯಾವಾಗಲೂ ಪರಿಹಾರವಲ್ಲ. ಆ ರೀತಿ ವಾದವನ್ನು ಮಾಡಬಾರದು. ಅದನ್ನು ನಿಯಂತ್ರಿಸುವ ಕೆಲಸ ಆಗಬೇಕು. ಇಲ್ಲಿ ನಾವು ಮಾನ್ಯ ಸಚಿವರನ್ನು ಕೇಳಿದಂತೆ ಮಾನ್ಯ ಸಚಿವರು ಹೊರಗೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಕೆಲಸ ಮಾಡಿದಾಗ ಮಾತ್ರ ನಿಯಂತ್ರಣವಾಗುತ್ತದೆ ಎಂದು ನನ್ನ ಅನಿಸಿಕೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಗಸಗಸೆ (poppy opium) ಎನ್ನುವುದನ್ನು ಸರ್ವೆಸಾಧಾರಣವಾಗಿ ದೇಶದಲ್ಲಿ ಎಲ್ಲರೂ ಅದರ ಬೀಜಗಳನ್ನು ಉಪಯೋಗ ಮಾಡುತ್ತಾರೆ. ನಾವು ಅದಕ್ಕೆ ಕಸ್‌ಕಸ್ ಎನ್ನುತ್ತೇವೆ. ಅದನ್ನು ಬೆಳೆಯಲು the permission was to be granted by the Excise Department. ಆದರೆ ಈಗ ಅದನ್ನು ಬೆಳೆಯಬಾರದೆಂದು ರೈತರ ಮೇಲೆ ನಿರ್ಬಂಧ ಇದೆ. ಅದನ್ನು ಬೆಳೆಯಲು ಅನುಮತಿ ತೆಗೆದುಕೊಳ್ಳಬೇಕು. ನಮ್ಮ ಗುಲ್ಬರ್ಗ ಮತ್ತು ಬೀದರ್‌ಗಳಲ್ಲಿ ಒಂದು ಕಾಲದಲ್ಲಿ ಈ ಬೆಳೆಯನ್ನು ಬೆಳೆಯುತ್ತಿದ್ದರು. ನಂತರ ಸರ್ಕಾರದ ಗಮನಕ್ಕೆ ಬಂದ ಮೇಲೆ ನಿಲ್ಲಿಸಿದ್ದಾರೆ. I just wanted to know that, is there any proposal before the Government regarding this. ಅದನ್ನು ನಶ ವಸ್ತು ಎಂದು ತಿಳಿದುಕೊಂಡು ಹೂಗಳನ್ನು ಕಟ್ ಮಾಡಿ ಅಫೀಮನ್ನು ಮಾಡುತ್ತಾರೆ. ಆ ಬೆಳೆ ಬೆಳೆಯಲು ರೈತರಿಗೆ ಪರವಾನಗಿ ಕೊಡುತ್ತಾರೆಯೋ ಅಥವಾ ಇಲ್ಲವೋ ಎಂದು ಕೇಳಬಯಸುತ್ತೇನೆ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಸಮಾಜಕ್ಕೆ ಮಾರಕವಾದ ಇಂತಹ ವಿಷಯದ ಬಗ್ಗೆ ಸದನದ ಗಮನ ಸೆಳೆದಿರುವ ಎಲ್ಲಾ ಸದಸ್ಯರು ಅಭಿನಂದನಾರ್ಹರು. ಈ ಮಾದಕ ದ್ರವ್ಯ ವಿಚಾರದಲ್ಲಿ ಹಣ ಮಾಡುವ ಉದ್ದೇಶದಿಂದ ದಂಧೆಯಲ್ಲಿ ತೊಡಗಿದ್ದಾರೋ ಅಥವಾ ಒಂದು ದೇಶವನ್ನು ಕೊಲ್ಲಬೇಕು ಹಾಗೂ ನವೀನ ಯುಗದಲ್ಲಿ ದೇಶದ ಮೇಲೆ ಯುದ್ಧ ಸಾರಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದಾರೋ? ಆರೋಗ್ಯವಂತ ಯುವ ಜನತೆಯನ್ನು ಕೊಲ್ಲುವ ಕೆಲಸವೂ ಒಂದು ದೇಶದ ವಿರುದ್ಧ ಸಾರುವ ಅಘೋಷಿತ ಯುದ್ಧವಾಗಿದೆ. ವಿಶೇಷವಾಗಿ ISIS (Islamic State of Iraq and al-Sham)ನಂತರ ಭಯೋತ್ಪಾದಕ ಅಂತರರಾಷ್ಟ್ರೀಯ ಜಾಲಗಳು ಯುವ ಜನತೆಯನ್ನು ತಪ್ಪು ದಾರಿಗೆ ಎಳೆಯಲು ಮತ್ತು ನಿಶಕ್ತರನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ. ಇದೇ ರೀತಿ Love Jihad ನಂತಹವುಗಳು ಮಾದಕ ದ್ರವ್ಯಗಳ ವಿಚಾರವನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿವೆ. ಆ ನಿಟ್ಟಿನಲ್ಲಿ ಗೃಹ ಇಲಾಖೆಯನ್ನು ಮಾನ್ಯ ಜಾರ್ಜ್‌ರವರು ನಿಭಾಯಿಸಿದ್ದಾರೆ ಹಾಗೂ ಮಾನ್ಯ ಪರಮೇಶ್ವರ್ ರವರು ನಿಭಾಯಿಸುತ್ತಿದ್ದಾರೆ. ಈ ರೀತಿ ತನಿಖೆಯಲ್ಲಿ ಕಂಡು ಬಂದಿದೆಯೇ?

ಇನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮನೆಗಳಲ್ಲಿ ಟ್ಯಾಬ್ಲೆಟ್ ರೂಪದಲ್ಲಿ ಮಾದಕ ದ್ರವ್ಯಗಳು ತಯಾರಾಗುತ್ತಿದೆ ಎಂದು ಮಾನ್ಯ ಸಚಿವರು ತಿಳಿಸಿದ್ದು, ಇಂತಹ ಪ್ರಕರಣಗಳಲ್ಲಿ ಮುಗ್ಧ ಜನರ ಅರಿವಿಗೆ ಬಾರದೇ ತಯಾರಾಗುತ್ತಿದೆಯೇ? ಮೆಡಿಸಿನ್‌ಗಳಲ್ಲಿ ತಯಾರಾಗುವುದು ಇನ್ನೂ ಅತ್ಯಂತ ಹೆಚ್ಚಿನ ಅಪಾಯಕಾರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಗತಿಯಾಗಿದೆ. ಮಕ್ಕಳು ಸೇವನೆ ಮಾಡುವ ಚಾಕ್‌ಲೇಟ್‌ಗಳಲ್ಲಿ ಮಾದಕ ವಸ್ತುಗಳನ್ನು ಸೇರಿಸಿ ಕೊಡುವುದು ಗಲ್ಲು ಶಿಕ್ಷೆಗೆ ಗುರಿಪಡಿಸಬಹುದಾದ ಅಪರಾಧವಾಗಿದ್ದು, ಈ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ತನಿಖೆಯಾದರೆ ಮಾತ್ರ ಪರಿಹಾರವನ್ನು ಹುಡುಕುವುದು ಸುಲಭವಾಗುತ್ತದೆ. ಸರ್ಕಾರವು ಯಾವುದೇ ಇದ್ದರೂ ಈ ಕೆಲಸವನ್ನು ನಿರಂತರವಾಗಿ ಮಾಡಬೇಕು ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಮಾಡಿದರೆ ಮಾತ್ರ ಹೆಚ್ಚು ಪರಿಣಾಮಕಾರಿಯಾಗಿ ನಿಯಂತ್ರಣ ಮಾಡಬಹುದು ಎಂದು ನನ್ನ ಅಭಿಪ್ರಾಯ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು) :–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯಲ್ಲಿ ಮೂಲವಾಗಿ ಮಾದಕ ವಸ್ತುಗಳು ಕಾಲೇಜುಗಳಲ್ಲಿ ಮಾರಾಟವಾಗುತ್ತಿದೆ ಮತ್ತು ಗಾಂಜಾ ವಸ್ತುಗಳು ಸಾರ್ವಜನಿಕವಾಗಿ ಹಾಗೂ ವ್ಯಾವಹಾರಿಕವಾಗಿ ಮಾರಾಟವಾಗುವ ಸ್ಥಿತಿ ಇದೆ. ಕೆಳಹಂತದ ಪೊಲೀಸ್ ಅಧಿಕಾರಿಗಳು ಶಾಮೀಲಾಗಿರುವ ಸೂಚನೆಗಳು ಇದೆ. ಆದ್ದರಿಂದ ಒಂದು ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ನಡೆದಾಗ ಇಂತಹ ಘಟನೆಗಳಿಗೆ ನೇರವಾಗಿ ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆಯನ್ನು ಕೊಡುತ್ತೀರಾ ಎನ್ನುವ ಪ್ರಶ್ನೆ ಇದೆ. ಇದಕ್ಕೆ ಸರ್ಕಾರ ಯಾವ ಉತ್ತರ ಕೊಡುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾಃ–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಹಾಗೂ ವಿಶ್ವದ ಕೆಲವು ದೇಶಗಳಲ್ಲಿ ಈ ಸಮಸ್ಯೆ ಇದೆ. 30–40 ವರ್ಷಗಳ ಹಿಂದಿನಿಂದಲೇ ಆ ದೇಶಗಳಲ್ಲಿ ಮಾದಕ ದ್ರವ್ಯ ಸಿಕ್ಕದಾಗ ಮರಣ ದಂಡನೆ ವಿಧಿಸುವ ಬಗ್ಗೆ ಇದ್ದು, ಇದರ ಬಗ್ಗೆ ಯೋಚನೆ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಃ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಾದ ನನ್ನದಲ್ಲ. ಆದರೆ ಸಂಬಂಧಪಟ್ಟ ಪೊಲೀಸ್ ಏರಿಯಾ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ಎಲ್ಲಿಯೋ ಕುಳಿತಿರುವವರನ್ನು ಟಾರ್ಗೆಟ್ ಮಾಡುವ ವಿಚಾರ ನನ್ನದಲ್ಲ. ಸಂಬಂಧಪಟ್ಟ ಕೆಳಹಂತದ ಅಧಿಕಾರಿಗಳಿಗೆ ಜವಾಬ್ದಾರಿ fix ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ನಾನು ಎಸ್.ಪಿ ರವರಿಗೆ ಜವಾಬ್ದಾರಿ ಕೊಡುತ್ತಾರೆಯೇ ಎಂದು ಕೇಳಿದೆ.

**ಸಭಾಪತಿಯವರು :–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಏಕೆ ವಿವರಣೆ ಕೊಡುತ್ತೀರಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ–** ಮಾನ್ಯ ಸಭಾಪತಿಯವರೇ, ಮಾದಕ ವಸ್ತುಗಳನ್ನು ಪೂರೈಸುವ ಏಜೆಂಟರು ಕೆಲವೊಮ್ಮೆ ರೈತರೊಡನೆ ಶಾಮೀಲಾಗಿರುತ್ತಾರೆ. ಹತ್ತಿ ಗಿಡಗಳ ಜೊತೆ ಗಾಂಜಾ ಗಿಡ ಹಾಕುವುದು ನಡೆದಿದ್ದು, ಇವೆರಡಕ್ಕೂ ವ್ಯತ್ಯಾಸ ತಿಳಿಯದೇ ಒಂದೇ ರೀತಿ ಇರುತ್ತವೆ. ಕೆಲವೊಮ್ಮೆ ರೈತರಿಗೆ ಮೋಸ ಮಾಡಿ ಅಥವಾ ಬಹಳಷ್ಟು ಹಣದ ಆಸೆ ತೋರಿಸಿ ಇಂತಹ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಕ್ರಮ ವಹಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಕೆಲವೊಂದು ಗಂಭೀರವಾದ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಂತರರಾಷ್ಟ್ರೀಯ ಜಾಲ ಅಂದರೆ ISIS ನಂತರ ಬೇರೆ ಬೇರೆ ಸಂಸ್ಥೆಗಳು ಇದರಲ್ಲಿ ಭಾಗಿಯಾಗಿ, ದೇಶದಲ್ಲಿ ಕಾನೂನಿನ ಅಭದ್ರತೆಯನ್ನು ಸೃಷ್ಟಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆಯೇ ಎಂದು ಮಾನ್ಯ ಸದಸ್ಯರು ಪ್ರಸ್ತಾಪಿಸಿದರು. ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಇಲ್ಲಿಯವರೆಗೂ ನಮ್ಮಗೆ ಇರುವ ಮಾಹಿತಿಯಂತೆ ಆ ರೀತಿ ಆಗಿಲ್ಲ. ಕೇವಲ ಹಣ ಮಾಡುವ ಉದ್ಧೇಶಕ್ಕೆ ಮಾಡುತ್ತಿದ್ದಾರೆ. ಒಂದು ಕೆ.ಜಿ ಗಾಂಜಾ ಮಾರಿದರೆ ಇಷ್ಟು ಹಣ ಸಿಗುತ್ತದೆ ಎನ್ನುವ ಆಸೆಯಿಂದ ಮಾಡುತ್ತಿದ್ದಾರೆ. ಅದರ ಬೀಜಗಳನ್ನು ರೈತರಿಗೆ ತರಿದುಕೊಟ್ಟು, ರೈತರಿಗೆ ಅದರ ಬಗ್ಗೆ ಅರಿವು ಇರುವುದಿಲ್ಲ. ಹಾಸನ, ಚಿಕ್ಕಬಳ್ಳಾಪುರ, ಬೆಳಗಾಂ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಗಾಂಜಾವನ್ನು ತೋಟಗಳಲ್ಲಿ ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ intercropping ನಲ್ಲಿ ಬೆಳೆಯುತ್ತಾರೆ. ನಮ್ಮ ಪೊಲೀಸರು ಹಿಡಿದು ಕಾನೂನಿನ ರೀತ್ಯಾ ಕ್ರಮ ತೆಗೆದುಕೊಂಡಿದ್ದಾರೆ.

(ಮುಂದು)

159/10.07.2018/10.50/ಹೆಚ್‌ವಿಃವಿಕೆ

**ಡಾಃಜಿ.ಪರಮೇಶ್ವರ್(ಮುಂದು...)ಃ–**

ಸನ್ಮಾನ್ಯ ಸಭಾಪತಿಯವರೇ, ಆದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭದ್ರತೆಯನ್ನು ಸೃಷ್ಟಿ ಮಾಡುವ ಮಟ್ಟದಲ್ಲಿ ಆ ರೀತಿಯ ವಸ್ತುಗಳ ಸರಬರಾಜು ಅಥವಾ supply chain ಇಲ್ಲ. ಎರಡನೆಯದಾಗಿ, ರೈತರು ತಮ್ಮ ಜಮೀನಿನಲ್ಲಿ ಬೆಳೆಗಳ ಜೊತೆಗೆ ಗಾಂಜಾವನ್ನು ಬೆಳೆಯುತ್ತಿದ್ದಾರೆ ಎನ್ನುವ ಅಂಶವನ್ನು ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಅದನ್ನು ನಾವು ಗಮನಿಸಿದ್ದೇವೆ, ಇಂತಹ ಪ್ರಕರಣಗಳು ಕಂಡುಬಂದಾಗ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಮುಂದೆಯೂ ಇಂತಹ ಪ್ರಕರಣಗಳು ಕಂಡುಬಂದರೆ, ಕಾನೂನಿನ ಪ್ರಕಾರ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಂತಹ ಪ್ರಕರಣಗಳು ನಡೆದಾಗ, ಆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಪೊಲೀಸರನ್ನೇ ಹೊಣೆಗಾರರನ್ನಾಗಿ ಮಾಡಬೇಕೆನ್ನುವ ಸಲಹೆಯನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಪ್ರತಿ ಪೊಲೀಸ್ ಠಾಣೆಯಲ್ಲಿ CEN (CYBER, ECONOMIC AND NARCOTICS) ಎನ್ನುವ ಒಂದು ವಿಭಾಗವಿದೆ. ಪ್ರತಿ ಪೊಲೀಸ್ ಠಾಣೆಯಲ್ಲಿ ಈ ವಿಭಾಗವನ್ನು ನಿರ್ವಹಣೆ ಮಾಡುವ ಪೊಲೀಸಿನವರಿಗೆ ತರಬೇತಿಯನ್ನು ನೀಡಿ, ಇಂತಹ ಪ್ರಕರಣಗಳು ನಡೆದಾಗ, ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ಒಂದು manual ಮಾಡಿ ಕೊಡಲಾಗಿದೆ. ಆದ್ದರಿಂದ ಪ್ರತಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಈ ವಿಭಾಗವನ್ನು ನಾವು ಈಗಾಗಲೇ sensitise ಮಾಡಿದ್ದೇವೆ. In each and every police station the SP's are held responsible for that. ಎಸ್.ಪಿ.ಗಳಿಗೆ ಈ ಬಗ್ಗೆ ಹೊಸದಾಗಿ responsibility fix ಮಾಡುವ ಅಗತ್ಯವಿಲ್ಲ. ಈ manual

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನ್ನು ಪ್ರತಿ ಪೊಲೀಸ್ ಠಾಣೆಗೂ ಕೊಟ್ಟಿರುತ್ತೇವೆ. ಅದರ ಪ್ರಕಾರವೇ ಅವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ, they are accountable. ಪ್ರತ್ಯೇಕವಾಗಿ ಮತ್ತು ಹೊಸದಾಗಿ ಅವರಿಗೆ ಜವಾಬ್ದಾರಿಯನ್ನು ಕೊಡುವ ಅಗತ್ಯವಿಲ್ಲ. ಇದನ್ನು ನಿಯಂತ್ರಣ ಮಾಡುವುದಕ್ಕೆ ಮತ್ತು ನಿಲ್ಲಿಸುವುದಕ್ಕೆ ಸರ್ಕಾರ ಎಲ್ಲ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವ ಭರವಸೆಯ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಕೂಡಿ ಈ ಪ್ರಶ್ನೆಯನ್ನು ಕೇಳಿದ್ದೇವೆ. ಆದ್ದರಿಂದ ಒಂದೇ ಒಂದು ಪೂರಕ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರುಃ–** ಈ ಪ್ರಶ್ನೆಯ ಮೇಲೆ ಈಗಾಗಲೇ ಸುಮಾರು ಅರ್ಧ ಗಂಟೆಗಳ ಕಾಲ ಚರ್ಚೆಯಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಸಹ ಹೇಳಿ ಆಗಿದೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, ಒಂದೇ ಒಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ಎಷ್ಟೇ ಕ್ರಮ ತೆಗೆದುಕೊಂಡರೂ ಸಹ there is a massive increase in the number of cases registered in the various police stations. ಉದಾಹರಣೆಗೆ ಹೇಳಬೇಕಾದರೆ, ಹಿಂದಿನ ವರ್ಷದಲ್ಲಿ 100 ಪ್ರಕರಣಗಳು ದಾಖಲಾಗಿದ್ದರೆ, ಮುಂದಿನ ವರ್ಷದಲ್ಲಿ ಅದರ ಸಂಖ್ಯೆ 200 ಅಥವಾ 400 ಆಗುತ್ತಿದೆ. But, the number of persons involved is more of students only. 18 ರಿಂದ 20 ವರ್ಷದ ಪ್ರಾಯದೊಳಗಿನ ವಿದ್ಯಾರ್ಥಿಗಳು ಇದರಲ್ಲಿ ಭಾಗಿಗಳಾಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ರವಿಕುಮಾರ್ಃ–** ಸನ್ಮಾನ್ಯ ಸಭಾಪತಿಯವರೇ, ಕೆಲವು ಅಂಕಿಅಂಶಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಸಭಾಪತಿಯವರುಃ–** ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ನೀಡಿರುವುದರಿಂದ ಪುನಃ ಪ್ರಶ್ನೆ ಕೇಳುವುದು ಬೇಡ.

ಮಾನ್ಯ ರಘುನಾಥ್‌ರಾವ್ ಮಲ್ಕಾಪೂರೆಯವರು ಕೇಳಿರುವ ಪ್ರಶ್ನೆ ಸಂಖ್ಯೆ:17(141)ಕ್ಕೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಸನ್ಮಾನ್ಯ ಸಭಾಪತಿಯವರೇ, ಅಧಿವೇಶನ ಕೇವಲ ಎರಡು ದಿನಗಳಲ್ಲಿ ಮುಕ್ತಾಯಗೊಳ್ಳುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಬಹಳ ದೊಡ್ಡ ಪ್ರಶ್ನೆಯನ್ನು ಕೇಳಿಲ್ಲ. ಒಂದು ಬಡಾವಣೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಕೇಳಿದ್ದಾರೆ. ತಮ್ಮ ಅಧಿಕಾರಿಗಳಿಗೆ ಹೇಳಿ ಈ ಬಗ್ಗೆ ಮಾನ್ಯ ಸದಸ್ಯರೊಂದಿಗೆ ಚರ್ಚೆ ಮಾಡಿ.

**ಶ್ರೀ ರಮೇಶ್ ಎಲ್.ಜಾರಕಿಹೊಳಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಒಂದು ದಿನ ಮೀಟಿಂಗ್ ಮಾಡುತ್ತೇನೆ.

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:155</u>**
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಇದೇ ಪ್ರಶ್ನೆಯನ್ನು ಕಳೆದ 7 ತಿಂಗಳ ಹಿಂದೆ ಅಂದರೆ, ದಿನಾಂಕ:08.02.2018ರಂದು ಕೇಳಿದ್ದೆ. ಈಗ ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದ ಕೊನೆಯಲ್ಲಿ, 'ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯ ಪಡೆದ ನಂತರ ನಿಯಮಾನುಸಾರ ಕ್ರಮ ವಹಿಸಲಾಗುವುದು' ಎಂದು ಹೇಳಿದ್ದಾರೆ. ಕಳೆದ 7 ತಿಂಗಳ ಹಿಂದೆ ನಾನು ಕೇಳಿದ್ದ ಪ್ರಶ್ನೆಗೂ ಸರ್ಕಾರದವರು ಇದೇ ಉತ್ತರವನ್ನು ನೀಡಿದ್ದರು.

ಸನ್ಮಾನ್ಯ ಸಭಾಪತಿಯವರೇ, 'ಕೊಡಗು ಜಿಲ್ಲೆಯಲ್ಲಿನ ಮಡಿಕೇರಿ ನಗರಸಭೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಈಗಾಗಲೇ ತೆರಿಗೆ ಪಾವತಿಸಿ ಖಾತೆ ಹೊಂದಿರುವವರು ತಮ್ಮ ಜಾಗದಲ್ಲಿರುವ ಹಳೆ ಮನೆಯನ್ನು ಕೆಡವಿ ಹೊಸದಾಗಿ ನಿರ್ಮಿಸಲು ಅಥವಾ ದುರಸ್ತಿಗೊಳಿಸಲು ಸದರಿ ನಿವೇಶನವನ್ನು ಭೂ ಪರಿವರ್ತನೆ ಮಾಡಬೇಕೆಂದು ಆದೇಶ ಹೊರಡಿಸಿರುವುದರಿಂದ ಖಾತೆದಾರರಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ಏತಕ್ಕೋಸ್ಕರ ಈ ಪ್ರಶ್ನೆಯನ್ನು ಕೇಳಿದ್ದೇನೆಂದರೆ, ಮಡಿಕೇರಿ ನಗರವು ಭೌಗೋಳಿಕವಾಗಿ ಬೆಟ್ಟ-ಗುಡ್ಡ, ಗಿರಿ-ಕಂದರ ಮತ್ತು ಇಳಿಜಾರು ಪ್ರದೇಶಗಳಿಂದ ಕೂಡಿದ್ದು, ಬಡಾವಣೆಗಳನ್ನು ರಚಿಸಿ ಅಭಿವೃದ್ಧಿಪಡಿಸುವುದು ಕಷ್ಟಸಾಧ್ಯವಾಗಿದೆ. ವಸತಿ ಕಟ್ಟಡಗಳನ್ನು ನಿರ್ಮಿಸಲು ಯೋಗ್ಯವಾಗಿರುವ ಪ್ರದೇಶಗಳಿಗೆ ಪುರಸಭೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮತ್ತು ನಗರಸಭೆಗಳಿಂದ ನೇರವಾಗಿ ಖಾತೆಯಾಗಿರುತ್ತದೆ. ಆದರೆ, 'ಒಮ್ಮೆ ಪುರಸಭೆಯಿಂದ ಖಾತೆಯಾಗಿ ಮನೆದಳ, ಮನೆ ಬಂದ ನಂತರ ಆ ಜಾಗವನ್ನು ವಾಪಸ್ಸು ಕೃಷಿ ಜಮೀನು ಎಂದು ಪರಿಗಣಿಸಲ್ಪಡುವುದಿಲ್ಲ. ಅಂತಹ ನಿವೇಶನಗಳಿಗೆ ಮತ್ತೊಮ್ಮೆ ಕಂದಾಯ ಇಲಾಖೆಯಿಂದ ಭೂಪರಿವರ್ತನೆ ಮಾಡಲು ಅವಕಾಶ ಇರುವುದಿಲ್ಲ' ಎನ್ನುವ ಸುತ್ತೋಲೆಯನ್ನು ಸರ್ಕಾರದಿಂದ ಹೊರಡಿಸಲಾಗಿದೆ. ಈ ಸುತ್ತೋಲೆಯಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದ್ದು, ಹಾಲಿ ಇರುವ ನಿವೇಶನದಲ್ಲಿ ಮನೆ ನಿರ್ಮಿಸಲು ಅಸಾಧ್ಯವಾಗಿದೆ. ಒಂದು ವಿಚಾರವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈ ಸುತ್ತೋಲೆಯನ್ನು ಹೊರಡಿಸಿ ಒಂದು ವರ್ಷ ಎರಡು ತಿಂಗಳುಗಳಾಗಿವೆ. ಆ ಸಂದರ್ಭದಲ್ಲಿ ಮಡಿಕೇರಿಯಲ್ಲಿ ಮನೆ ಹೊಂದಿರುವವರು ತಮ್ಮ ಮನೆಯನ್ನು ಮಾರ್ಪಾಡು ಮಾಡುವುದಕ್ಕೆ ಅಥವಾ ರಿಪೇರಿ ಮಾಡುವುದಕ್ಕೆ ಅನುಮೋದನೆ ಇದೆ ಎಂದು ಭಾವಿಸಿ, ಮನೆಗಳನ್ನು ಕೆಡವಿದ್ದಾರೆ. ತಮ್ಮೆಲ್ಲರಿಗೂ ತಿಳಿದಿರುವಂತೆ ಕೊಡಗು ಜಿಲ್ಲೆಯಲ್ಲಿ ಬೀಳುವ ವಿಪರೀತ ಮಳೆಯಿಂದಾಗಿ ರಿಪೇರಿಯಾಗದೇ ಇರುವಂತಹ ಮನೆಗಳು ಈಗಾಗಲೇ ನೆಲಸಮವಾಗಿವೆ. ಇದು ತುಂಬಾ ದುಃಖಕರವಾದ ವಿಚಾರವಾಗಿದೆ. ನಾನು ಈಗಾಗಲೇ ತಿಳಿಸಿರುವಂತೆ ಮಡಿಕೇರಿ ನಗರ ಪ್ರದೇಶವಾದರೂ ಸಹ ಅದು ಬೆಟ್ಟ–ಗುಡ್ಡಗಳಿಂದ ಕೂಡಿದೆ. ಕೊಡಗಿನ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಮನೆಗಳು ಬಿದ್ದು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಆದ್ದರಿಂದ ಸರ್ಕಾರ ದಿನಾಂಕಃ14.05.2017ರಂದು ನಿರ್ದೇಶಕರು, ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರು ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ರಮೇಶ್ ಎಲ್.ಜಾರಕಿಹೊಳಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರ ನನ್ನ ಗಮನಕ್ಕೆ ಬಂದಿದೆ. ಇದು ಅಕ್ರಮ–ಸಕ್ರಮ ವ್ಯಾಪ್ತಿಗೆ ಬರುತ್ತದೆ. ಇದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆಯನ್ನು ನೀಡಿರುವುದರಿಂದ ಕಳೆದ ಬಾರಿ ಈ ವಿಚಾರವಾಗಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೇಳಿದ್ದೆವು.

**ಸಭಾಪತಿಯವರು:–** ಮಾನ್ಯ ಸಚಿವರೇ, ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಒತ್ತಾಯಿಸುತ್ತಿದ್ದಾರೆ.

**ಶ್ರೀ ರಮೇಶ್ ಎಲ್.ಜಾರಕಿಹೊಳಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಮಾನ್ಯ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಸನ್ಮಾನ್ಯ ಸಭಾಪತಿಯವರೇ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ರಮೇಶ್ ಎಲ್.ಜಾರಕಿಹೊಳಿ:–** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:169**
(ಉತ್ತರವನ್ನು ಲಗತ್ತಿಸಲಾಗಿದೆ)

***ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–*** *ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಆದರೆ, ಈ ಉತ್ತರದಿಂದ ಬಡವರಿಗೆ ನ್ಯಾಯ ಸಿಗುತ್ತಿಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ. ಸರ್.ಎಂ.ವಿಶ್ವೇಶ್ವರಯ್ಯ ನಗರ ಬಡಾವಣೆಯಲ್ಲಿ ರೆವಿನ್ಯೂ ನಿವೇಶನದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬದಲಿ ನಿವೇಶನ ಹಂಚಿಕೆ ಮಾಡಲು ನೋಂದಣಿ ಕಾರ್ಯ ನೀಡಬೇಕಾಗಿರುವ ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು ಎನ್ನುವ ನನ್ನ ಪ್ರಶ್ನೆಗೆ, 'ಅರ್ಹ ಫಲಾನುಭವಿಗಳ ಸಂಖ್ಯೆ 344' ಎನ್ನುವ ಉತ್ತರವನ್ನು ನೀಡಿದ್ದಾರೆ.*

*ಸನ್ಮಾನ್ಯ ಸಭಾಪತಿಯವರೇ, ನಿವೇಶನದಾರರು ಅರ್ಜಿಗಳನ್ನು ಕೊಟ್ಟಂಥ ಸಂದರ್ಭದಲ್ಲಿ ಸರ್ಕಾರವೇ ಅವರುಗಳನ್ನು 'ಅರ್ಹ ಫಲಾನುಭವಿಗಳು' ಎಂದು ಒಂದು ಗೆಜೆಟ್ ನೋಟಿಫಿಕೇಶನ್ ಹೊರಡಿಸಿದೆ. ಆದರೆ, ಮತ್ತೊಂದು ಪೇಪರ್ ನೋಟಿಫಿಕೇಶನ್ ಅನ್ನು ನೀಡಿ, '90 ದಿನಗಳೊಳಗಾಗಿ ನೀವು ಕಾರ್ಡುಗಳನ್ನು ಪಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ. ನಿವೇಶನಗಳನ್ನು ಕಳೆದುಕೊಂಡಿರುವ ಅನೇಕ ಬಡಜನರು ಅನಕ್ಷರಸ್ಥರಾಗಿದ್ದು, ಅವರಿಗೆ ಪೇಪರ್ ಓದುವುದಕ್ಕೆ ಬರುವುದಿಲ್ಲ. ಆದ್ದರಿಂದ ಸಕಾಲದಲ್ಲಿ ಅವರುಗಳು ಕಾರ್ಡುಗಳನ್ನು ಪಡೆದುಕೊಂಡಿರುವುದಿಲ್ಲ. ಇದೇ ನೆಪವನ್ನೊಡ್ಡಿ, ಈಗ ಅವರಿಗೆ ನಿವೇಶನವನ್ನು ಹಂಚಿಕೆ ಮಾಡಿಲ್ಲ, ದುಡ್ಡನ್ನು ಸಹ ಕೊಟ್ಟಿಲ್ಲ. ಅದಕ್ಕಾಗಿಯೇ ನಾನು 'ಹಾಗಿದ್ದಲ್ಲಿ ಇವರಿಗೆ ಬದಲಿ ನಿವೇಶನ ಅಥವಾ ಮಾರುಕಟ್ಟೆ ಬೆಲೆಯ ಹಣವು ದೊರೆಯದಿರುವುದರಿಂದ ಸರ್ಕಾರ ಯಾವ ರೀತಿ ನ್ಯಾಯ ಒದಗಿಸುವುದು' ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಸರ್ಕಾರ ದುಡ್ಡನ್ನು ಕೊಡುತ್ತಿಲ್ಲ, ನಿವೇಶನವನ್ನು ಸಹ ಹಂಚಿಕೆ ಮಾಡುತ್ತಿಲ್ಲ. ಇದರಿಂದ ಬಡವರಿಗೆ ಅನ್ಯಾಯವಾಗಿದೆ. ಉದಾಹರಣೆಗೆ ಹೇಳಬೇಕಾದರೆ, . . . . .*

***ಸಭಾಪತಿಯವರು:–*** *ಮಾನ್ಯ ಚೌಡರೆಡ್ಡಿಯವರೇ, ಮಾನ್ಯ ಸಚಿವರಿಗೆ ತಮ್ಮ ಪ್ರಶ್ನೆ ಅರ್ಥವಾಗಿದೆ. ಅವರು ಉತ್ತರವನ್ನು ಹೇಳುತ್ತಾರೆ.*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

***ಡಾ:ಜಿ.ಪರಮೇಶ್ವರ್:–*** *ಸನ್ಮಾನ್ಯ ಸಭಾಪತಿಯವರೇ, ಸರ್. ಎಂ.ವಿಶ್ವೇಶ್ವರಯ್ಯ ಲೇಔಟ್‌ಗೆ 2001ರಲ್ಲಿ 1847.22 ಎಕರೆಯಷ್ಟು ಭೂಮಿಗೆ ಸರ್ಕಾರ ನೋಟಿಫಿಕೇಶನ್ ಮಾಡಿತ್ತು.*

*(ಮುಂದು)*

(160) 10.7.2018 11.00 ಪಿಕೆ:ಬಿಎನ್ಎಸ್

ಶ್ರೀ ಜಿ.ಪರಮೇಶ್ವರ್ (ಮುಂದುವರೆದಿದೆ)

ದಿನಾಂಕ :31.9.2002 ಮತ್ತು ದಿನಾಂಕ 9.9.2003ರಲ್ಲಿ ಫೈನಲ್ ನೋಟಿಫಿಕೇಷನ್ ಆಗಿದೆ. 1847 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಮಧ್ಯದಲ್ಲಿದ್ದ ರೆವಿನ್ಯೂ ಜಾಗದಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ಯಾವುದೇ ರೀತಿಯ authorisation ಇಲ್ಲ, certification ಇಲ್ಲ, ಪರ್ಮಿಷನ್ ಇಲ್ಲ. ಅವರು ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಇವರೆಲ್ಲರೂ ಕೋರ್ಟ್‌ಗೆ ಹೋದರು. ಕೋರ್ಟ್, ಇವರಿಗೆ ಒಂದು ಅವಕಾಶ ಕೊಡಿ ಎಂದು ಹೇಳಿ, 2 ತಿಂಗಳ ಒಳಗೆ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕು, ಫೀ ಕಟ್ಟಬೇಕು; ಅರ್ಜಿಯನ್ನು 3 ತಿಂಗಳ ಒಳಗಾಗಿ ಸಲ್ಲಿಸಬೇಕೆಂದು ಆದೇಶದಲ್ಲಿ ತಿಳಿಸಿತು. ಹೈಕೋರ್ಟ್ ಆದೇಶದ ಮೇಲೆ ಅವರಿಗೆ 3 ತಿಂಗಳು ಸಮಯವನ್ನು ಕೊಡುತ್ತಾರೆ. ಯಾರ್‍ಯಾರು ಆ ಮೂರು ತಿಂಗಳಲ್ಲಿ ಅರ್ಜಿಗಳನ್ನು ಹಾಕಿದ್ದರೋ ಅವರಿಗೆ alternative site ಕೊಡುವಂಥದ್ದು ಮಾಡಿದರು. ಒಟ್ಟು 4100 ಅರ್ಜಿಗಳ ಪೈಕಿ 2000 ಅರ್ಜಿದಾರರು alternative sites ಕೇಳುತ್ತಾರೆ. ಇದಾದ ಮೇಲೆ ಮತ್ತೆ 1.11.2014ರಲ್ಲಿ ಮತ್ತೊಂದು ಅವಕಾಶ ಕೊಟ್ಟು, 31.12.2014ರ ಒಳಗೆ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಆಗ 800 ಅರ್ಜಿದಾರರು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಇವರಲ್ಲಿ 20 ಅರ್ಜಿದಾರರು alternative sites ಕೊಡಿ ಎಂದು ಕೇಳುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು B.D.A. (Bengaluru Development Authority) ನವರು ಮಾಡಿದ್ದಾರೆ. ಅರ್ಜಿ ಹಾಕದೇ, ರಿಜಿಸ್ಟರ್ ಮಾಡಿಕೊಳ್ಳದೇ ಹೊರಗೆ ಉಳಿದಕೊಂಡಂಥ 344 ಜನ ಯಾರಿದ್ದಾರೆ ಅವರು alternative sites ಕೇಳಿಲ್ಲ. ಹಾಗಾಗಿ, ಅವರಿಗೆ ಕಾರ್ಡ್ ಕೊಡುವುದಕ್ಕೋ ಅಥವಾ ಅನುಮತಿ ಕೊಡುವುದಕ್ಕೋ ಆಗುವುದಿಲ್ಲ ಎಂದು ನಾನು ಹೇಳಿದ್ದೇನೆ. ಏಕೆಂದರೆ, ಕೋರ್ಟ್‌ನ ಆದೇಶದ ಪ್ರಕಾರ ರಿಜಿಸ್ಟರ್ ಮಾಡಿಕೊಳ್ಳಲಿಲ್ಲ; ಎರಡನೆಯ ಸಲ B.D.A. ತಾನೇ ಅವಕಾಶ ಕೊಟ್ಟಾಗಲೂ ರಿಜಿಸ್ಟರ್ ಮಾಡಿಸಿಕೊಳ್ಳಲಿಲ್ಲ. ಈ ಸಿಸ್ಟಮ್‌ನಿಂದಲೇ ಹೊರಗೆ ಉಳಿದ ಮೇಲೆ ಅವರಿಗೆ ಹೇಗೆ ನಿವೇಶನ ಕೊಡುವುದಕ್ಕೆ ಬರುತ್ತದೆ ಎನ್ನುವ ಹಿನ್ನೆಲೆಯಲ್ಲಿ B.D.A. ಸೂಕ್ತ ನಿರ್ಧಾರ ತೆಗೆದುಕೊಂಡಿದೆ. ಹಾಗಾಗಿ ನಿವೇಶನಗಳನ್ನು ಸದರಿಯವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಓದುವುದಕ್ಕೆ ಬರದೇ ಇರುವವರು ಯಾರಿದ್ದರೋ . . .

**ಸಭಾಪತಿಯವರು:–** ಮಾನ್ಯ ಸಚಿವರು ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಕೋರ್ಟ್‌ಗೆ ಹೋಗಿರುವವರಿಗೆ 90 ದಿವಸ ಅವಕಾಶ ಕೊಟ್ಟಿದ್ದರು ಎಂಬ ಮಾತನ್ನು ಹೇಳಿದರು; ಅದು ಸತ್ಯ. ಆದರೆ ಈ ಜನ, ನಾವು ಕೋರ್ಟ್‌ಗೆ ಹೋಗಲಿಲ್ಲ, 2007 ಕೊಟ್ಟ ಅರ್ಜಿ ಸರಿಯಾಗಿದೆ ಎಂದು ಗೆಜೆಟ್ ನೋಟಿಫಿಕೇಷನ್‌ನಲ್ಲಿ ಹಾಕಿದ್ದಾರೆ, 2015ರಲ್ಲೂ ಅರ್ಜಿ ಕೊಟ್ಟಾಗ ಇದು ಸರಿಯಾಗಿದೆ ಎಂದು ಹೇಳಿದ್ದಾರೆ, ಹಾಗಾಗಿ ನಾವು ಯಾವ ಕೋರ್ಟ್‌ಗೂ ಹೋಗಿಲ್ಲ; ಕೋರ್ಟ್‌ಗೆ ಹೋಗುವ ಶಕ್ತಿಯೂ ಇಲ್ಲ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಒಂದು ವಿಷಯ ಹೇಳುವುದಾದರೆ, ಇವರಲ್ಲಿ ಒಬ್ಬರಿಗೆ 74 ವರ್ಷ ವಯಸ್ಸಾಗಿದೆ, ಕೋರ್ಟ್‌ಗೆ ಹೋಗುವ ಶಕ್ತಿ ಇಲ್ಲ.

**ಶ್ರೀ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಅವರು ಕೋರ್ಟ್‌ಗೆ ಹೋಗುವುದು ಬೇಕಾಗಿಲ್ಲ. ಆದರೆ ಅವರು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾಗಿತ್ತು. 2 ಸಲ ಅವಕಾಶ ಕೊಟ್ಟಾಗಲೂ ರಿಜಿಸ್ಟರ್ ಮಾಡಿಕೊಳ್ಳದೇ ಇದ್ದರೆ ಏನು ಮಾಡುವುದಕ್ಕಾಗುತ್ತದೆ? They are all revenue sites.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ನಿವೇಶನವೂ ಇಲ್ಲ, ದುಡ್ಡು ಕೊಡುತ್ತಿಲ್ಲ ಎನ್ನುವುದಾದರೆ ಇಂಥವರ ಗತಿ ಏನು?

**ಡಾ: ಜಿ.ಪರಮೇಶ್ವರ್:–** ಸಂಬಂಧಪಟ್ಟ ಅಧಿಕಾರಿಗಳ ಜೊತೆ ಈ ಕುರಿತು ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭಾಪತಿಯವರು:– ಮಾನ್ಯ ಸದಸ್ಯರೇ, ಅರ್ಜಿದಾರರು, ನಮಗೆ ಓದುವುದಕ್ಕೆ ಬರುವುದಿಲ್ಲ, ಅದಕ್ಕಾಗಿ ಗೊತ್ತಾಗಲಿಲ್ಲ ಎಂದು ಹೇಳವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

**ಪ್ರಶ್ನೆ ಸಂಖ್ಯೆ : 174**

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:**–ಮಾನ್ಯ ಸಭಾಪತಿಯವರೇ, ಮಾನ್ಯ ಗೃಹಮಂತ್ರಿಗಳು ಉತ್ತರದಲ್ಲಿ, ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇದ್ದರೂ ಇರುವಂತಹ ಸಿಬ್ಬಂದಿಗಳನ್ನಿಟ್ಟುಕೊಂಡೇ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ನಿಭಾಯಿಸುತ್ತಿದ್ದೇವೆ; ಅದರಲ್ಲೂ, ವಿಭಿನ್ನವಾದ ಪ್ರಕರಣಗಳು ಬರುತ್ತಿದ್ದು ಇವುಗಳನ್ನೂ ಕೂಡ ಇರುವಂತಹ ಈ ಸಿಬ್ಬಂದಿಗಳಿಂದಲೇ ಮಾಡಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಆ ಸಿಬ್ಬಂದಿಗಳ ಮೇಲೆ ಕೆಲಸದ ಒತ್ತಡ ಜಾಸ್ತಿಯಾಗುತ್ತಿದೆ. ಕೆಲವು ವರ್ಷಗಳ ಹಿಂದೆ ಶ್ರೀ ಶಶಿಧರ್ ಎನ್ನುವ ನೌಕರರ ಸಂಘದ ಅಧ್ಯಕ್ಷರು, ಸಿಬ್ಬಂದಿ ಕೊರತೆಯನ್ನು ತುಂಬಬೇಕು ಎಂದು ಹೋರಾಟ ಮಾಡಿದಾಗ, ಏನೇನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಲ್ಲಿಂದ ಇಲ್ಲಿಯತನಕ ಸಿಬ್ಬಂದಿಯನ್ನು ತುಂಬಿಸಿಕೊಳ್ಳುವಂತಹ ಕೆಲಸ ಮಾಡಲಿಲ್ಲ? ನಿಮಗೆ ಇಚ್ಛಾಶಕ್ತಿ ಇಲ್ಲವೇ?

**ಶ್ರೀ ಜಿ.ಪರಮೇಶ್ವರ್:**– ಮಾನ್ಯ ಸಭಾಪತಿಯವರೇ, ಈ ಮನೆಗೆ ಮಾನ್ಯ ಸದಸ್ಯರು ಹೊಸಬರು. ನನಗೆ ಹಳಬರು; ಆದರೆ ಸದನಕ್ಕೆ ಹೊಸಬರು ಅಷ್ಟೆ.

ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೆಬಲ್‌ನಿಂದ ಹಿಡಿದು ಸಬ್–ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್‌ವರೆಗೆ ಒಟ್ಟು ಸುಮಾರು 1,12,975 ಹುದ್ದೆಗಳಿವೆ. ಕಾರಾಗೃಹ ಇಲಾಖೆಯ ಹುದ್ದೆಗಳನ್ನು ಸೇರಿಸಿದರೆ ಒಟ್ಟು 1,26,282 ಆಗುತ್ತದೆ. ಇವುಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳು 31,694. ಪ್ರತಿ ವರ್ಷ 4 ರಿಂದ 5 ಸಾವಿರ ಜನ ಸಿಬ್ಬಂದಿಗಳು ನಿವೃತ್ತರಾಗುತ್ತಾರೆ. ನಿವೃತ್ತರಾದ ತಕ್ಷಣ ಆ ಹುದ್ದೆಗಳನ್ನು ತುಂಬಬೇಕು. ಆ ಕೆಲಸ 2008 ರಿಂದ 2013ರವರೆಗೆ ಆಗಿರಲಿಲ್ಲ. ಆಗ ಅವರ ಸರ್ಕಾರ ಇತ್ತು, ಇವರ ಸರ್ಕಾರ ಇತ್ತು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆ ಅವಧಿಯಲ್ಲಿ ಏನು ಬ್ಯಾಕ್‌ಲಾಗ್ ಉಳಿಯಿತೋ ಅದು accumulate ಆಯಿತು. ಅದನ್ನು ಸರಿಪಡಿಸಲು ನೇಮಕಾತಿ ಮಾಡುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಪ್ರಕ್ರಿಯಗಳನ್ನು ಮಾಡುತ್ತಿದ್ದೇವೆ. ಕಳೆದ 5 ವರ್ಷದಲ್ಲಿ ನಾವು ಸುಮಾರು 26,188 ಜನರನ್ನು ಭರ್ತಿ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾಡಿದ್ದೇವೆ. 18 ತಿಂಗಳ ಕಾಲ ನಾನು ಗೃಹ ಸಚಿವನಾಗಿದ್ದಾಗ ಸುಮಾರು 23,000 ಜನರನ್ನು ನೇಮಕ ಮಾಡಿದ್ದೆ. ಇದರಲ್ಲಿ 1389 ಜನ ಪುರುಷರು ಮತ್ತು 193 ಜನ ಮಹಿಳೆಯರು ಸೇರಿ, 1582 ಸಬ್–ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡಲಾಗಿದೆ. ಇದರ ಜೊತೆಗೆ, 23,109 ಜನ ಕಾನ್ಸ್‌ಟೇಬಲ್ಸ್ ಸೇರಿ ಒಟ್ಟು 26188 ಜನರನ್ನು ಕಳೆದ 5 ವರ್ಷಗಳಲ್ಲಿ ನೇಮಕ ಮಾಡಲಾಗಿದೆ. ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. 2016–17 ರಿಂದ 2018–2019ರವರೆಗೆ 12139 ಜನರನ್ನು ನೇಮಕ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ. ನೇಮಕಾತಿಯ ಪ್ರಕ್ರಿಯೆ ನಡೆಯುತ್ತಿದೆ. ಈ 12139 ಜನರನ್ನು ಒಂದೇ ಸಲ recruit ಮಾಡಬಹುದಲ್ಲವೇ ಎಂದು ನೀವು ನಮ್ಮನ್ನು ಕೇಳಬಹುದು. ಆದರೆ ನೇಮಕಗೊಂಡವರಿಗೆ ನಾವು ಒಂದು ವರ್ಷಗಳ ಕಾಲ ತರಬೇತಿ ಕೊಡಬೇಕಾಗುತ್ತದೆ. ನಮಗೆ ಒಂದೇ ಸಲ ಇಷ್ಟೂ ಜನರಿಗೆ training ಕೊಡುವ capacity ಇಲ್ಲ. ನಮ್ಮಲ್ಲಿ 10 permanent training schools and 22 temporary training schools ಇವೆ. ಈ ಒಂದೊಂದು ಶಾಲೆಗಳಲ್ಲಿ ಒಂದು ಸಲಕ್ಕೆ 300–350 ಜನರಿಗೆ ಮಾತ್ರ ತರಬೇತಿ ಕೊಡಬಹುದಾಗಿದೆ. ನಮ್ಮ ಸಾಮರ್ಥ್ಯ ಎಷ್ಟು 3000–4000 ಜನರಿಗೆ ತರಬೇತಿ ಕೊಡಬಹುದೋ ಅಷ್ಟನ್ನು ಗಮನದಲ್ಲಿಟ್ಟುಕೊಂಡು training ಕೊಟ್ಟು ನಂತರ absorb ಮಾಡಿಕೊಳ್ಳಬಹುದು.

(ಮುಂದು . . .)

(161)10–7–2018 11.10 ಡಿಎಸ್–ಬಿಎನ್‌ಎಸ್

**ಡಾ:ಜಿ.ಪರಮೇಶ್ವರ್(ಮುಂದು):–**

ಆದ್ದರಿಂದ ನಿರಂತರವಾಗಿ ಈ ಪ್ರಕ್ರಿಯೆ ನಡೆಯುತ್ತಿದೆ. ಯಾವುದೇ ಕಾರಣಕ್ಕೂ ಕೂಡ ನಾವು ಇದನ್ನು ನಿಲ್ಲಿಸುವುದಿಲ್ಲ. ನೇಮಕಾತಿ ಮಾಡಿ 31,694 ಏನಿದೆ ಅದನ್ನು make good ಮಾಡುವುದಕ್ಕೆ ನಾವು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ನನ್ನ ಮೂರು ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದ್ದಾರೆ. ಆದ್ದರಿಂದ ನಾನು ನಾಲ್ಕನೇ ಪ್ರಶ್ನೆಯನ್ನು ಕೇಳುತ್ತೇನೆ. ಈಗ ನಾನು ಏನೇ ಹೇಳಿದರೂ ಕೂಡ ಅವರು ಚೆನ್ನಾಗಿ ಉತ್ತರ ಹೇಳುತ್ತಾರೆ ಎಂಬುದು ನನಗೆ ಗೊತ್ತಿದೆ. ನನ್ನ ನಾಲ್ಕನೇ ಪ್ರಶ್ನೆ ಏನೆಂದರೆ ಗೃಹ ಇಲಾಖೆಯಲ್ಲಿ ಆರ್ಡರ್ಲಿ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೇ ಎಂದು ಕೇಳಿದ್ದೆ. ಶ್ರೀಮತಿ ತಾರಾ ಅನುರಾಧರವರು ಕಳೆದ ಸಲ ಇದರ ಬಗ್ಗೆ ಎಲ್ಲಾ ವಿಚಾರಗಳನ್ನು ಮಂಡನೆ ಮಾಡಿದಾಗ ಮಾನ್ಯ ರಾಮಲಿಂಗಾರೆಡ್ಡಿಯವರು "ನಾನು ಗೃಹ ಸಚಿವನಾಗಿ ಗನ್‌ಮ್ಯಾನ್ ಅನ್ನು ಇಟ್ಟುಕೊಂಡಿಲ್ಲ," ಈ ವ್ಯವಸ್ಥೆ ಸರಿಯಲ್ಲ, ಹಾಗಾಗಿ ಇದಕ್ಕೆ ಬದಲಿ ವ್ಯವಸ್ಥೆ ತರುತ್ತೇನೆಂದು ಹೇಳಿದ್ದರು. ಮಾನ್ಯ ಗೃಹ ಸಚಿವರು ಇಡೀ ಸರ್ಕಾರಕ್ಕೆ ಪರಮೇಶ್ವರರಾಗಿದ್ದಾರೆ. ನನ್ನ ಮನವಿ ಏನೆಂದರೆ, ಮಾನ್ಯ ಗೃಹ ಸಚಿವರು ಕಾಲಮಿತಿಯನ್ನು ನಿಗದಿ ಮಾಡಿಬಿಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಲ್ಲಾ ಪ್ರಶ್ನೆಗಳಿಗೂ ಅವರಿಂದ ಒಂದೇ ಉತ್ತರವನ್ನು ಬಯಸುತ್ತೇನೆ. ಇಷ್ಟು ಕಾಲಮಿತಿಯೊಳಗೆ ನಾನು ಎಲ್ಲಾ ಮಾಡಿಬಿಡುತ್ತೇನೆ ಎಂದು ಹೇಳಿದರೆ ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುತ್ತದೆ. ಮಾನ್ಯ ಸಚಿವರಿಂದ ಅದೊಂದು ಬಯಸುತ್ತೇನೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ ಮತ್ತು ಸ್ವಾರಸ್ಯವಾಗಿದೆ. ಏಕೆಂದರೆ, ನಾನು ಪ್ರಥಮವಾಗಿ ಗೃಹ ಸಚಿವನಾಗಿ ನೇಮಕವಾದ ಮೇಲೆ ನನ್ನ ಮೊದಲ ಪತ್ರಿಕಾಗೋಷ್ಠಿಯಲ್ಲಿ ಆರ್ಡರ್ಲಿ ಪದ್ಧತಿಯನ್ನು ನಿಲ್ಲಿಸುತ್ತೇನೆ ಎಂದು ಹೇಳಿದ್ದೆನು. ಇದು ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಏಕೆ ನಿಲ್ಲಿಸಬೇಕೆಂದು ಯೋಚನೆ ಮಾಡಿದೆ ಎಂದರೆ, ಈ ಆರ್ಡರ್ಲಿ ಪದ್ಧತಿಯ ಬಗ್ಗೆ ಬಹಳ ಸಲ ದೂರುಗಳು ಯಾವ ರೀತಿ ಬರುತ್ತಿತ್ತು ಎಂದರೆ ನಾವು ಹಿರಿಯ ಅಧಿಕಾರಿಗಳ ಮನೆಯಲ್ಲಿ ಬಟ್ಟೆ ಒಗೆಯಬೇಕು, ತರಕಾರಿ ತರಬೇಕು ಮತ್ತು ಇನ್ನಿತರೆ ಈ ರೀತಿಯ ಕೆಲಸಗಳನ್ನು ನಮ್ಮ ಕೈಯಲ್ಲಿ ಮಾಡಿಸುತ್ತಾರೆ. ನಾವು ತಲೆತಗ್ಗಿಸುವಂತಹ ಎರಡು-ಮೂರು ಪ್ರಕರಣಗಳು ನಡೆದಿವೆ. ಹಾಗಾಗಿ ಈ ಆರ್ಡರ್ಲಿ ಪದ್ಧತಿಯನ್ನು ನಿಲ್ಲಿಸಲೇಬೇಕು ಎಂದು ನಾನು ಯೋಚನೆ ಮಾಡಿದೆ. ಅವರೆಲ್ಲಾ ತರಬೇತಿ ಹೊಂದಿರುವ ಪೊಲೀಸರು. ಸುಮಾರು 3,000 ಕ್ಕೂ ಹೆಚ್ಚು ಜನ ತರಬೇತಿ ಹೊಂದಿರುವ ಪೊಲೀಸರು ಈ ರೀತಿ ಕೆಲಸ ಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಿ ಅದಕ್ಕೊಂದು alternative arrangement ಮಾಡಬೇಕು. ನಾನು ದಿನಾಂಕ: 08-03-2017 ರಂದು ಆದೇಶ ಮಾಡಿ alternative arrangement ಮಾಡಿ ಈ ಆರ್ಡರ್ಲಿಯನ್ನು ನಿಲ್ಲಿಸಬೇಕು ಎಂದು ಈಗ ಅದನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಅವರಿಗೆ 'followers' ಎಂದು substitute ಮಾಡಿ, ಏಕೆಂದರೆ ಅಧಿಕಾರಿಗಳ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ಅವರ ಮನೆಯಲ್ಲಿ ಕೆಲಸ ಮಾಡುವುದಕ್ಕೆ ಬೇಕು ಎಂದು ಹೇಳಿದಾಗ 'followers' ಎಂದು ನೇಮಕ ಮಾಡಿ ಈ ಆರ್ಡರ್ಲಿಗಳು, ಅಂದರೆ ತರಬೇತಿ ಹೊಂದಿರುವ ಪೊಲೀಸರುಗಳನ್ನು ತೆಗೆಯಬೇಕು, ಇದನ್ನು ಒಂದೇ ಸಲ ಮಾಡುವುದಕ್ಕಾಗುವುದಿಲ್ಲ. ಹಂತ ಹಂತವಾಗಿ ಮಾಡುತ್ತೇವೆ. ಈಗಾಗಲೇ ಸರ್ಕಾರ ಅದಕ್ಕೆ ಅನುಮತಿಯನ್ನು ಕೊಟ್ಟಿದೆ. ಕಾಲಮಿತಿಯಲ್ಲಿ ಎಂದರೆ ಅದನ್ನು ಹಂತ ಹಂತವಾಗಿ ಮಾಡಬೇಕು. ಅದನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಚುಕ್ಕೆ** ಪ್ರಶ್ನೆ ಸಂಖ್ಯೆ:122

ಉತ್ತರ ಲಗತ್ತಿಸಲಾಗಿದೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕಳೆದ ವರ್ಷ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಅದು ಚುಕ್ಕೆ ರಹಿತ ಪ್ರಶ್ನೆಯಾಯಿತು. ಕಳೆದ ವರ್ಷದ ಉತ್ತರಕ್ಕೂ ಈ ವರ್ಷದ ಉತ್ತರಕ್ಕೂ ಏನೇನು ವ್ಯತ್ಯಾಸವಿಲ್ಲ ಎನ್ನುವುದು ನನ್ನ ನೋವು. ಕಳೆದ ವರ್ಷ ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ 43 ಉದ್ಯಾನವನಗಳಿವೆ ಎಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದ್ದಾರೆ. ನನಗಿರುವ ಮಾಹಿತಿ ಪ್ರಕಾರ 52 ಉದ್ಯಾನವನಗಳಿವೆ. ಇನ್ನು 9 ಉದ್ಯಾನವನಗಳು ಎಲ್ಲಿ ಹೋಗಿವೆ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಸಚಿವರು ಅದನ್ನು ತಿಳಿಸಬೇಕು. ಕಳೆದ ವರ್ಷ ನಾನು ಕೇಳಿದಾಗ, ಉದ್ಯಾನವನಗಳ ನಿರ್ವಹಣೆಗೆ 8 ಗಾರ್ಡನರ್‌ಗಳು ಸಿಬ್ಬಂದಿಗಳಿದ್ದಾರೆ ಎಂದು ಹೇಳಿದರು. ಅದು ಈಗ 5ಕ್ಕೆ ಬಂದಿದೆ. 52 ಉದ್ಯಾನವನಗಳನ್ನು 5 ಜನ ತಿಂಗಳಿಗೆ ಎಷ್ಟು ಸಲ ಹೋಗಿ ಸ್ವಚ್ಛ ಮಾಡಿ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಾರೆ? ಕಳೆದ ಸಲ ಕನಿಷ್ಠ 10–15 ಜನರನ್ನು ಹೊರಗುತ್ತಿಗೆಯಿಂದ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು, ಇನ್ನೂ ತೆಗೆದುಕೊಂಡಿಲ್ಲ. ಈಗ ಎಷ್ಟೋ ಪಾರ್ಕ್‌ಗಳಿಗೆ fencing ಇಲ್ಲ. ಒತ್ತುವರಿ ಕೆಲಸ ನಡೆಯುತ್ತಿದೆ. ಮೊದಲು ಎಲ್ಲಾ ಪಾರ್ಕ್‌ಗಳಿಗೆ fencing ಹಾಕಿ ಭದ್ರ ಮಾಡಿ ಹದ್ದಬಸ್ತು ಮಾಡಬೇಕು. ಆ ಎಲ್ಲಾ ಪಾರ್ಕ್‌ಗಳು ಅಭಿವೃದ್ಧಿಯಾಗಬೇಕು. 8 ಉದ್ಯಾನವನಗಳನ್ನು ಮಾತ್ರ ಯೋಜನೆಯಡಿ ತೆಗೆದುಕೊಂಡಿದ್ದಾರೆ. ಉಳಿದ ಉದ್ಯಾನವನಗಳ ಕಥೆ ಏನು? ಯಾವಾಗ ಆ ಉದ್ಯಾನವನಗಳನ್ನು ಸರಿಪಡಿಸುವುದು? 5 ಜನರಿಂದ 52 ಉದ್ಯಾನವನಗಳನ್ನು ಹೇಗೆ ನಿರ್ವಹಣೆ ಮಾಡಿಸುತ್ತಾರೆಂಬುದನ್ನು ಸಚಿವರು ಹೇಳಬೇಕು. ಏನಾದರೂ ಪವಾಡ ಮಾಡುವುದಕ್ಕಾಗುತ್ತದೆಯೇ? ಪ್ರತಿ ನಿತ್ಯ ಮೂರು ಜನರಾದರೂ ಹೋಗಿ ಆ ಉದ್ಯಾನವನವನ್ನು ಸ್ವಚ್ಛಗೊಳಿಸಬೇಕು. ಎಷ್ಟು ದಿವಸಗಳಲ್ಲಿ ಅವರು ಹೇಳಿರುವ ಹೊರ ಗುತ್ತಿಗೆ ನೌಕರರನ್ನು ನೇಮಕ ಮಾಡುತ್ತಾರೆ? ಇಲ್ಲಿ ಕೆಲಸ ಮಾಡುವವರನ್ನು ಬೇರೆ ಬೇರೆ ತಾಲ್ಲೂಕು ಕೇಂದ್ರಗಳಿಗೆ ಡೆಪ್ಯುಟೇಶನ್ ಕಳುಹಿಸುತ್ತಾರೆ. ಇಲ್ಲೇ ಜನ ಇಲ್ಲ. ಅವರು ಡೆಪ್ಯುಟೇಶನ್ ಮೇಲೆ ಹೋಗಿದ್ದಾರೆ. ಈ ಸಿಬ್ಬಂದಿ ಕೊರತೆಯನ್ನು ನೀಗಿಸುವುದರ ಮೂಲಕ ಉದ್ಯಾನವನಗಳ ಅಭಿವೃದ್ಧಿಯನ್ನು ಎಷ್ಟು ದಿನಗಳಲ್ಲಿ ಮಾಡುತ್ತಾರೆ? ಆ ಸಿಬ್ಬಂದಿಗಳನ್ನು ಎಷ್ಟು ದಿನಗಳಲ್ಲಿ ನೇಮಕಾತಿ ಮಾಡುತ್ತಾರೆ, 52 ಇರುವುದು 43 ಏಕೆ ಆಯಿತು ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟ ಮಾಡಬೇಕು.

**ಶ್ರೀ ರಮೇಶ್ ಲ.ಜಾರಕೀಹೊಳಿ:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಶ್ರೀಕಂಠೇಗೌಡರು ಹೇಳಿದ ಪ್ರಕಾರ ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ 43 ಉದ್ಯಾನವನಗಳಿವೆ ಎಂಬ ಮಾಹಿತಿ ಇದೆ. ಆ ಪೈಕಿ 8 ಉದ್ಯಾನವನಗಳನ್ನು ಅಮೃತ್ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಆ ಅಭಿವೃದ್ಧಿಗೆ 2 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. 3 ಉದ್ಯಾನವನಗಳ ನಿರ್ವಹಣೆಯನ್ನು ಖಾಸಗಿ/ಎನ್.ಜಿ.ಓ. ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ನಿರ್ವಹಿಸುತ್ತಿದ್ದಾರೆ. ಉಳಿದ 37 ಉದ್ಯಾನವನಗಳ ಅಭಿವೃದ್ಧಿಯನ್ನು ಸರ್ಕಾರದಿಂದ ನೀಡಲಾಗುವ ಅನುದಾನ ಹಾಗೂ ನಗರಸಭೆ ನಿಧಿಯಲ್ಲಿ ಹಂತ ಹಂತವಾಗಿ ಮಾಡಲಾಗುತ್ತಿದೆ. ನಾನು ನಿನ್ನೆ ಕಡತವನ್ನು ನೋಡುವಾಗ ಮಾನ್ಯ ಸದಸ್ಯರ ಮನಸ್ಸಿನಲ್ಲಿರುವುದು ಅರ್ಥವಾಗಿದೆ. ಅತೀ ಶೀಘ್ರದಲ್ಲಿಯೇ D.M.A. (Directorate of Municipal Administration) ಅಧಿಕಾರಿಗಳೊಂದಿಗೆ ಚರ್ಚಿಸಿ ಅಲ್ಲಿ ಸ್ಥಳ ಪರಿಶೀಲನೆಗೆ ಕಳುಹಿಸುತ್ತೇನೆ. D.M.A. ಮುಖಾಂತರ ನಾನು ತಕ್ಷಣ ಒಂದು ವಾರದಲ್ಲಿ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸುತ್ತೇನೆ. ಅದರ ಬಗ್ಗೆ ಪರಿಶೀಲಿಸಿ ಮಾನ್ಯ ಸದಸ್ಯರ ಜೊತೆಯಲ್ಲಿ ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಅಪ್ಪಾಜಿಗೌಡರು, ಮಾನ್ಯ ಅರುಣಶಹಾಪುರ, ಮಾನ್ಯ ಪ್ರಸನ್ನಕುಮಾರರವರ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇವೆ.

ಚುಕ್ಕೆ ಪ್ರಶ್ನೆ ಸಂಖ್ಯೆ:140

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಚುಕ್ಕೆ ಪ್ರಶ್ನೆ ಸಂಖ್ಯೆ:146

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮುಂಡರಗಿ ಪಟ್ಟಣದಲ್ಲಿ R.G.R.H.C.L. (Rajiv Gandhi Rural Housing Corporation Ltd.) ಯೋಜನೆಯಡಿ ಬಡವರಿಗೆ ನಿವೇಶನ ಹಂಚುವುದಕ್ಕೆ

ಎಷ್ಟು ಜಾಗ ಖರೀದಿ ಮಾಡಿದ್ದೀರಿ, ಯಾವಾಗ ಖರೀದಿ ಮಾಡಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸುಮಾರು 2 ಕೋಟಿ 75 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ದಿನಾಂಕ:23.09.2017 ರಂದು ಜಾಗ ಖರೀದಿ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆ, ಮುಂಡರಗಿ ಪಟ್ಟಣದಲ್ಲಿ ನಿವೇಶನ ಹಂಚಿಕೆ ಮಾಡಲು ಬಡ ಸಾರ್ವಜನಿಕರು ಪದೇ ಪದೇ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಹಲವಾರು ಬಾರಿ ಹೋರಾಟ ಮಾಡಿದ್ದಾರೆ, ಪತ್ರಿಕೆಯಲ್ಲಿ ಬಂದಿದೆ, ಅದರ ಬಗ್ಗೆ ಏನು ಉತ್ತರ ಕೊಟ್ಟಿಲ್ಲ. ಉತ್ತರದಲ್ಲಿ ಏಕೆ ಬರೆಯಲಿಲ್ಲವೋ ಗೊತ್ತಿಲ್ಲ. ಪ್ರಮುಖವಾಗಿ ನನ್ನ ಮೂರನೇ ಪ್ರಶ್ನೆ, ನಿವೇಶನ ಹಂಚಿಕೆ ಪ್ರಕ್ರಿಯೆ ಪ್ರಾರಂಭ ಮಾಡುವಲ್ಲಿ ಇರುವ ತೊಂದರೆಗಳೇನು ಎಂದು ಕೇಳಿದ್ದೆ. ನಿವೇಶನ ಹಂಚಿಕೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಶ್ರೀ ಕೆ.ಬಿ.ಶಾಣಪ್ಪನವರು ಸಭಾಪತಿ ಪೀಠವನ್ನಲಂಕರಿಸಿದರು)**

ನನ್ನ ಮೂಲ ಪ್ರಶ್ನೆ ಏನೆಂದರೆ, ಯಾವುದು ತೊಂದರೆ ಇಲ್ಲ ಎಂದ ಮೇಲೆ ಏಕೆ ವಿಳಂಬ ಮಾಡಿದ್ದಾರೆ? ಸಾಮಾನ್ಯವಾಗಿ ವಿಳಂಬ ಯಾವಾಗ ಆಗುತ್ತದೆ, ಸರ್ಕಾರದಿಂದ ಹಣ ಬಿಡುಗಡೆ ಮಾಡಲಿಲ್ಲವೆಂದರೆ ವಿಳಂಬವಾಗುತ್ತದೆ. ಅಲ್ಲಿ ಜಾಗ ಸಿಗಲಿಲ್ಲವೆಂದರೆ ಜಾಗ ಖರೀದಿ ಮಾಡುವುದಕ್ಕೆ ವಿಳಂಬವಾಗುತ್ತದೆ. ಇಲ್ಲಿ ಹಣವೂ ಬಿಡುಗಡೆಯಾಗಿದೆ, ಜಾಗ ಖರೀದಿಯಾಗಿದೆ, ಹತ್ತು ತಿಂಗಳು ಏಕೆ ವಿಳಂಬವಾಯಿತು ಎನ್ನುವುದು ನನ್ನ ಮೂಲ ಪ್ರಶ್ನೆ. ಇನ್ನು ಎರಡು ಕೆಲಸ ಉಳಿದಿವೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಜಾಗ ಖರೀದಿಯಾಗಿದೆ, ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀಲಿ ನಕ್ಷೆ approval ಆಗಬೇಕು.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

162/10-07-2018/ಬಿಕೆಪಿ-ಕೆಎಸ್/11-20

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು. . )**

ನಾನು ಕೇಳುವುದೇನೆಂದರೆ ಇದಕ್ಕೆ ಜಾಗವನ್ನು ಖರೀದಿ ಮಾಡಿ 10 ತಿಂಗಳುಗಳು ಕಳೆದಿವೆ. ನಗರಾಭಿವೃದ್ಧಿ ಪ್ರಾಧಿಕಾರವೂ ಸಹ ಅವರದ್ದೇ ಆಗಿದ್ದು, ಇದಕ್ಕೆ ಅಪ್ರೂವಲ್ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸಗಳು ಬೇಕು? ಮನಸ್ಸು ಮಾಡಿದರೆ ಒಂದು ದಿವಸ ಸಾಕಾಗುತ್ತದೆ. ಬಹಳ ಎಂದರೆ ನೋಟೀಸ್ ಕಳುಹಿಸಲಿಕ್ಕೆ ಒಂದು ವಾರ ಬೇಕಾಗುತ್ತದೆ. ಒಂದು ವಾರದಲ್ಲಿ ನೋಟೀಸ್ ಕಳುಹಿಸಿ, ಸಭೆ ಕರೆದು ಅಪ್ರೂವಲ್ ಮಾಡಬೇಕು. ಏತಕ್ಕೆ ಅಪ್ರೂವಲ್ ಆಗಿಲ್ಲ, ಏತಕ್ಕೆ ವಿಳಂಬವಾಗಿದೆ? ಆಯಿತು, ವಿಳಂಬವಾಗಿದೆ. ಈ ಸಂಬಂಧ ನನ್ನ ಕೊನೆಯ ಪ್ರಶ್ನೆ ಏನೆಂದರೆ ನೀವು ಅಪ್ರೂವಲ್ ಮಾಡಿಸಿ, ಅಲ್ಲಿ ಶಾಸಕರುಗಳ ಸಭೆಯನ್ನು ಕರೆದು ನಿವೇಶನಗಳನ್ನು ಹಂಚುವಂತಹ ಕೆಲಸವನ್ನು ನೀವು ಯಾವಾಗ ಮಾಡುತ್ತೀರಿ ಎನ್ನುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಈ ದಿಸೆಯಲ್ಲಿ 25.21 ಎಕರೆ ಭೂಮಿಯನ್ನು ಸುಮಾರು 2,75,67,000 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದೆ. ಉದ್ದೇಶ ಏನೆಂದರೆ, ಸೈಟ್‌ಗಳನ್ನು ಮಾಡಿಕೊಡುವುದಷ್ಟೇ. ಬೇರೇನೂ ಇಲ್ಲ. ಆದರೆ, ಇಲ್ಲಿ ಬಂದಿರುವ ವಿಚಾರ ಏನೆಂದರೆ, ಮೊದಲು site formation ಆಗಬೇಕು, ನಂತರ ಅದನ್ನು level ಮಾಡಬೇಕು, ಆನಂತರ ಅದಕ್ಕೆ ನಕ್ಷೆ (blue print) ಮಾಡಿ, ಸೈಟ್‌ಗಳನ್ನು ವಿಂಗಡನೆ ಮಾಡಿ ಎಲ್ಲವನ್ನೂ ಮಾಡಬೇಕು. ಈಗ ಇದೆಲ್ಲವನ್ನೂ ಮಾಡಿದ್ದಾರೆ. ಎಲ್ಲವನ್ನೂ ಮಾಡಿ ಈಗ ಅಂತಿಮ ಘಟ್ಟಕ್ಕೆ ಬಂದಿದೆ. ಆದಷ್ಟು ಶೀಘ್ರವಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಆ ಸೈಟ್‌ಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಎಲ್ಲಾ ಕೆಲಸ ಮುಗಿದಿದೆ. ಅಪ್ರೂವಲ್ ಮಾಡುವುದಷ್ಟೇ ಬಾಕಿ ಉಳಿದಿದೆ. ಹೀಗಾಗಿ, ಈ ಕೆಲಸವನ್ನು ಒಂದು ತಿಂಗಳ ಒಳಗಾಗಿ ಮಾಡುತ್ತೀರೋ ಅಥವಾ ಯಾವಾಗ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಬೇಕು.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಅಲ್ಲಿ ಏನಾಗಿದೆ ಎಂದರೆ, ಈ ವಿಚಾರದಲ್ಲಿ ಪದೇ ಪದೇ ತಹಶೀಲ್ದಾರ್ ಕಚೇರಿ ಮುಂದೆ ಹೋಗಿ ಧರಣಿ ಮಾಡುವುದಾಗಿದೆ. ಧರಣಿ ಮಾಡುವುದು ನಿಲ್ಲಬೇಕಷ್ಟೆ.

**ಡಾ|| ಜಿ.ಪರಮೇಶ್ವರ್:-** ಆಯಿತು. ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಪಟ್ಟ ಹಾಗೆ ಶ್ರೀ ಪ್ರಸನ್ನ ಕುಮಾರ್, ಶ್ರೀ ಐವನ್ ಡಿ/ಸೋಜಾ ಹಾಗೂ ಶ್ರೀ ಪಿ.ಆರ್. ರಮೇಶ್ ರವರು ಸದನದಲ್ಲಿ ಹಾಜರಿರಲಿಲ್ಲ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 119**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುವಾಗ ಈ ಪಟ್ಟಿ ಇನ್ನೂ ಪ್ರಕಟವಾಗಿರಲಿಲ್ಲ. ಪ್ರಶ್ನೆ ಕೇಳಿದ ನಂತರ BDA (Bangalore Development Authority) ವತಿಯಿಂದ ಕೆಂಪೇಗೌಡ ಬಡಾವಣೆಯ 2ನೇ ಹಂತದ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಸಿದ್ದೀರಿ ಎಂದು ನಾನು ಉಪ ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಿದ್ದೆ, ಮತ್ತು ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಕೇಳಿದ್ದೆ. ಉಳಿದುದನ್ನು ಹಂಚಿಕೆ ಮಾಡಲು ಏತಕ್ಕೆ ಸಾಧ್ಯವಾಗಿಲ್ಲ, ಅದರ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ. ಅದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಬೇಕು.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸಮಗ್ರವಾದ ಉತ್ತರ ಸಿಕ್ಕಿದೆ ಎಂದು ನನಗೆ ಅನಿಸುತ್ತದೆ. ಕೆಂಪೇಗೌಡ ಬಡಾವಣೆಗೆ ಸಂಬಂಧಪಟ್ಟಂತೆ ಮೊದಲ ಹಂತದಲ್ಲಿ ನಾವು 5 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಿದ್ದೇವೆ. 2ನೇ ಹಂತದಲ್ಲಿ ಮತ್ತೆ 5 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಬೇಕಾಗಿರುತ್ತದೆ. ಈಗಾಗಲೇ ಇದರ ಬಗ್ಗೆ ದಿನಾಂಕ: 10-7-2018 ರೊಳಗಾಗಿ ಆಕ್ಷೇಪಣೆ ಕೇಳಿದ್ದು, ಇವತ್ತು ಕೊನೆಯ ದಿನಾಂಕವಾಗಿರುತ್ತದೆ. ಇದಾದನಂತರ ನಾವು ಇನ್ನು ಒಂದು ವಾರದಲ್ಲಿ ಉಳಿದಂತಹ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಉತ್ತರವನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕೆಂಪೇಗೌಡ ಬಡಾವಣೆಗೆ ಪೂರಕವಾಗಿ ಸುಮಾರು 10 ಸಾವಿರ ನಿವೇಶನಗಳನ್ನು ಕೊಡಬೇಕೆಂದು ಹೇಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತೀರ್ಮಾನ ಮಾಡಿದೆ. ಆದರೆ, ಅಲ್ಲಿ ಕೆಲವು ರೈತರು ಸರ್ಕಾರದಿಂದ, BDA ಯಿಂದ ಹಣವನ್ನು ತೆಗೆದುಕೊಂಡು ಮತ್ತೆ ಕೋರ್ಟ್‌ಗೆ ಹೋಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನು ವಿಭಾಗದ ಜೊತೆ ಶಾಮೀಲಾಗಿ ಸುಮಾರು 10-12 ವರ್ಷಗಳಾದರೂ ಸಹ ಕೆಲವು ರೈತರ ಹೆಸರಿನಲ್ಲಿ ಬೇರೆ ಜನ ದುಡ್ಡನ್ನು ತೆಗೆದುಕೊಂಡಿದ್ದು, ಆ ಸಂಬಂಧ ಭೂಮಿಯನ್ನು ಬಿಟ್ಟು ಕೊಡುತ್ತಿಲ್ಲ. ಇದರ ಬಗ್ಗೆ BDA ಯ ಕಾನೂನು ವಿಭಾಗ ಏನಿದೆ, ಅದು ಹೈಕೋರ್ಟ್‌ನಲ್ಲಿ ಯಾವುದೇ ಕೇಸ್ ಅನ್ನು ಗೆದ್ದಿರುವುದಿಲ್ಲ. ಹೀಗಿರುವಾಗ ಇಷ್ಟೊಂದು ವಿಳಂಬ ಏತಕ್ಕೆ? ರೈತರು ಬಿಡಿಎ ನಿಂದ ಹಣವನ್ನು ಪಡೆದಿದ್ದಾರೆ. ಆದರೆ, ಇವರು ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟ ಹಾಗೆ ಯಾವ ಒಂದು ಕೇಸ್ ಕೂಡ ಕೋರ್ಟ್‌ನಲ್ಲಿರುವುದಿಲ್ಲ. 5000 ನಿವೇಶನಗಳನ್ನು ನಾವು ಏನು ವಿಂಗಡಣೆ ಮಾಡಿದ್ದೇವೆ, ಅದಕ್ಕೆ ನಾವು ಆಕ್ಷೇಪಣೆಗಳನ್ನು ಕರೆದಿದ್ದೇವೆ. ಇದರಲ್ಲಿ ಯಾವುದೂ ಇಲ್ಲ. ಬೇರೆ ಯಾವುದಾದರೂ ಕೇಸ್‌ಗಳು ತಮ್ಮ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನದಲ್ಲಿದ್ದರೆ, ಅದನ್ನು ನಮ್ಮ ಗಮನಕ್ಕೆ ತಂದಲ್ಲಿ, ಆ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ, ಕಾನೂನು ಇಲಾಖೆಯ ಅಧಿಕಾರಿಗಳೊಂದಿಗೆ ನಾನು ಪರಿಶೀಲನೆ ಮಾಡಿಸುತ್ತೇನೆ. ಈ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಹೊಸ ಬಡಾವಣೆಗಳಲ್ಲಿ quality infrastructure ಅನ್ನು ನೋಡಿಕೊಳ್ಳುವಂತೆ ಮಾನ್ಯ ಉಪ ಮುಖ್ಯಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕು.

**ಶ್ರೀ ಕೆ.ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):–** ಮಾನ್ಯಸಭಾಪತಿಯವರೇ, ಮಾನ್ಯ ಸದಸ್ಯರು quality infrastructure ಎಂದರೇನು ಎಂಬುದನ್ನು ಸ್ಪಷ್ಟಪಡಿಸಬೇಕು.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯಗಳ ಪೈಕಿ ಪಾರ್ಕ್‌ಗಳು, ರೋಡ್‌ಗಳು, ಡ್ರೈನೇಜ್‌ಗಳು ಇವೆಲ್ಲವುಗಳು ಒಳ್ಳೆಯ quality ಯಿಂದ ಕೂಡಿರಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಗೋವಿಂದರಾಜ್:–** ಅವುಗಳು civic amenities ಅಡಿನಲ್ಲಿ ಬರುತ್ತದೆ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ವೈಯಕ್ತಿಕವಾಗಿ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಆಗಬಹುದು.

**ಪ್ರಶ್ನೆ ಸಂಖ್ಯೆ 111**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ನಾಗರಾಜ್(ಸಂದೇಶ ನಾಗರಾಜ್):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ಉತ್ತರವನ್ನು ಕೊಟ್ಟಿಲ್ಲ. 2018 ರಲ್ಲಿ ಹೆದ್ದಾರಿ ಪ್ರಾಧಿಕಾರದವರು ಏನು ಉತ್ತರವನ್ನು ಕೊಟ್ಟಿದ್ದಾರೆ, ಆ ಒಂದು ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇವತ್ತು ನಾನು ಪ್ರಶ್ನೆ ಕೇಳುವುದಿಷ್ಟೆ. ಮೈಸೂರು–ಬೆಂಗಳೂರು ಹೆದ್ದಾರಿ ರೋಡ್‌ಗೆ ಸಂಬಂಧಪಟ್ಟ ಹಾಗೆ ಹೆದ್ದಾರಿಯವರ ಉತ್ತರ ನಮಗೆ ಬೇಕಾಗಿಲ್ಲ. ಏಕೆಂದರೆ ಕಳೆದ ಚುನಾವಣೆ ಒಂದು ತಿಂಗಳು ಇರುವಾಗ ಕೇಂದ್ರ ಸಚಿವರುಗಳು ಸೇರಿದಂತೆ ಎಲ್ಲರೂ ಸೇರಿಕೊಂಡು ಹೆದ್ದಾರಿಯನ್ನು ಮಾಡುವ ಸಲುವಾಗಿ ಪೂಜೆ ಮಾಡಿದರು. ಮೈಸೂರು–ಬೆಂಗಳೂರು ರೋಡ್‌ನಲ್ಲಿ ನಿರಾಳವಾಗಿ ಓಡಾಡಬಹುದು ಎಂದು ಹೇಳಿ ಆ ಸಮಯದಲ್ಲಿ ನಮಗೆ ತುಂಬಾ ಖುಷಿಯಾಯಿತು. ಹೆದ್ದಾರಿ ಕೆಲಸ ಮುಗಿದೇ ಹೋಯಿತು ಎಂದು ತಿಳಿದುಕೊಂಡಿದ್ದೆವು. ಆದರೆ, ಇತ್ತೀಚೆಗೆ ನಾನು ಈ ವಿಚಾರವಾಗಿ ಇನ್ನೂ ಸಹ ಭೂಸ್ವಾಧೀನವಾಗಿಲ್ಲವೆಂದು ಪತ್ರಿಕೆಗಳಲ್ಲಿ ನೋಡಿದೆ. ಹಾಗೆಯೇ ಇಲ್ಲಿಯೂ ಸಹ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಉತ್ತರದಲ್ಲಿ ಬಂದಿದೆ. ಮತ್ತೆ, ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟಂತೆ 15% ಅನ್ನು ಅವರು ಒಪ್ಪಿಕೊಂಡಿಲ್ಲ. ಭೂಸ್ವಾಧೀನವಾಗಿಲ್ಲ, ಟೆಂಡರ್ ಆಗಿಲ್ಲವೆಂದು ಮೊನ್ನೆಯ ದಿನಪತ್ರಿಕೆಗಳಲ್ಲಿ ಬಂದಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀಯುತ ರೇವಣ್ಣನವರಲ್ಲಿ ನಾನು ಕೇಳಿಕೊಳ್ಳುವುದಿಷ್ಟೆ. ಶನಿವಾರ–ಭಾನುವಾರದ ದಿನಗಳಂದು ಬೆಂಗಳೂರು–ಮೈಸೂರಿನ 140 ಕಿ.ಮೀ. ಓಡಾಡಬೇಕಾದರೆ ಸುಮಾರು 6 ರಿಂದ 7 ಗಂಟೆಗಳಾಗುತ್ತದೆ. ಓಡಾಡುವುದೇ ನರಕವಾಗುತ್ತದೆ. ಆದ್ದರಿಂದ, ಈ ಮಾನ್ಯ ಸಚಿವರು ಗಮನ ಕೊಡಬೇಕು. ಉದಾಹರಣೆಗೆ ಹೇಳಬೇಕೆಂದರೆ, ಬೆಂಗಳೂರಿಗೆ ಹಾಸನ 180 ಕಿ.ಮೀ. ಇದೆ. ನಾವು ಬೆಂಗಳೂರಿನಿಂದ ಹಾಸನಕ್ಕೆ 2 ಗಂಟೆಗಳಲ್ಲಿ ಹೋಗುತ್ತೇವೆ. ಆದರೆ, ಮೈಸೂರು ಬೆಂಗಳೂರಿನಿಂದ 140 ಕಿ.ಮೀ. ಇದ್ದರೂ ಅಲ್ಲಿಗೆ ಹೋಗಲಿಕ್ಕೆ ಸುಮಾರು 6–7 ಗಂಟೆಗಳಾಗುತ್ತವೆ. 20–20 ತಿಂಗಳ ಸರ್ಕಾರ ಇದ್ದಂತಹ ಸಮಯದಲ್ಲಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ 6 ಪಥದ ರಸ್ತೆ ಮಾಡುತ್ತೇವೆಂದು ಹೇಳಿ, ಅಲ್ಲಿ ಪೂಜೆ ಮಾಡಲಿಕ್ಕೆ ಸಿದ್ಧತೆ ಮಾಡಿಕೊಂಡ ಸಮಯಕ್ಕೆ ಸರಿಯಾಗಿ ಮಂತ್ರಿಗಿರಿ ಹೋಯಿತು. ಮಂತ್ರಿಗಳು ಸಹ ಸುಮ್ಮನಾದರು. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಲೋಕೋಪಯೋಗಿ ಮಂತ್ರಿಗಳಾಗಿ ಶ್ರೀಯುತ ರೇವಣ್ಣನವರು ಬಂದಿದ್ದಾರೆ. ಈ ರಾಷ್ಟ್ರೀಯ ಹೆದ್ದಾರಿಯನ್ನು ಯಾವಾಗ ಮಾಡುತ್ತಾರೋ ಗೊತ್ತಿಲ್ಲ. ನಮಗೆ 6 ಪಥದ ರಸ್ತೆಯನ್ನು ಮಾಡಿಕೊಡಬೇಕು. ಈ ಹಿಂದೆ ಶ್ರೀಮಾನ್ ಎಸ್.ಎಂ.ಕೃಷ್ಣ ರವರ ಕಾಲದಲ್ಲಿ ತುರ್ತಾಗಿ ರಸ್ತೆಯನ್ನು ಮಾಡಿಕೊಟ್ಟಿದ್ದರಿಂದಾಗಿ ನಾವೀಗ ನೆಮ್ಮದಿಯಾಗಿ 5–6 ಗಂಟೆಗಳಲ್ಲಿ ಓಡಾಡುತ್ತಿದ್ದೇವೆ. ಶ್ರೀಮಾನ್ ರೇವಣ್ಣನವರು ಈ ಮೈಸೂರು–ಬೆಂಗಳೂರು 6 ಪಥದ ರಸ್ತೆಯನ್ನು ತುರ್ತಾಗಿ ನಿಜವಾಗಿಯೂ ಸಹ ಹಠ ಮಾಡಿ ಮುಗಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಬೆಂಗಳೂರು–ಮೈಸೂರು 10 ಪಥದ ರಾಷ್ಟ್ರೀಯ ಹೆದ್ದಾರಿಯನ್ನು ಮಾಡುವುದಕ್ಕೆ ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. Package- I ನಲ್ಲಿ ರಾಷ್ಟ್ರೀಯ ಹೆದ್ದಾರಿ 275ರ ಕಿ.ಮೀ. 18.00 ರಿಂದ 74.200 ಕಿ.ಮೀ ಮೊದಲನೆಯ ಹಂತದಲ್ಲಿ ಸುಮಾರು 3,501 ಕೋಟಿ ರೂಪಾಯಿಗಳ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಏಜೆನ್ಸಿಯೂ ಸಹ ನಿಗದಿಯಾಗಿದೆ. Package- II ನಲ್ಲಿ 74.200 ಕಿ.ಮೀಟರ್‌ನಿಂದ 135.304 ಕಿ.ಮೀಟರ್‌ರವರೆಗೆ ಷಟ್ಪಥ ಕಾಮಗಾರಿಗೆ 2919.81 ಕೋಟಿ ರೂಪಾಯಿಗಳು ನಿಗದಿಯಾಗಿದ್ದು, ಈಗಾಗಲೇ ಈ ಎರಡು Package ಗಳ ಕೆಲಸವಾಗಿದೆ. ಈ ವಿಚಾರವಾಗಿ ಮೊನ್ನೆತಾನೆ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿದ್ದೇನೆ.

ಮುಂದು. . .

**(163) 10.07.2018 11.30 ಎಸ್‌ವಿ–ಕೆಎಸ್**

**ಶ್ರೀ ಹೆಚ್.ಡಿ.ರೇವಣ್ಣ (ಮುಂದು):–** ನಾನು ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕಂದಾಯ ಇಲಾಖೆ, K.E.B. (Karnataka Electricity Board), UGD (Under

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Ground Drainage) ಲೈನ್ ಇರಬಹುದು ಇದಕ್ಕೆ ಸಂಬಂಧಪಟ್ಟಂಥ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಏನು ಕೆಲಸ ನಡೆಯುತ್ತಿದೆಯೋ, ಆ ಎಲ್ಲಾ ಕಾಮಗಾರಿಗಳ ಕುರಿತು ಚರ್ಚಿಸಿರುತ್ತೇನೆ. ಸಭೆ ನಡೆದ ಒಂದು ವಾರದಲ್ಲಿಯೇ forest clearance ಇರಬಹುದು, K.E.B ಯ ಅಡಿಯಲ್ಲಿ ಬರುವ ಕೆಲಸಗಳು ಇರಬಹುದು, ಪಡೆದುಕೊಳ್ಳುವುದಕ್ಕೆ ಸೂಚನೆ ಕೊಟ್ಟಿರುತ್ತೇನೆ. ಪ್ರತಿ ತಿಂಗಳು ಮುಖ್ಯ ಕಾರ್ಯದರ್ಶಿಯವರು ಕಾಮಗಾರಿಯ review ಮಾಡಬೇಕೆಂದು ಈಗಾಗಲೇ ಸೂಚನೆ ಕೊಟ್ಟಿರುತ್ತೇವೆ. ಮಾನ್ಯ ಸಂದೇಶ್ ನಾಗರಾಜ್ ಅವರು ಸುರಕ್ಷಿತವಾಗಿ ಓಡಾಡಲು ಏನೂ ತೊಂದರೆ ಇಲ್ಲದಂತೆ ಒಂದು-ಒಂದೂವರೆ ವರ್ಷದಲ್ಲಿ ಆ ಕಾಮಗಾರಿಯನ್ನು ಮಾಡಿಸಿಕೊಡುತ್ತೇವೆ."

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ನಾವು ಸುರಕ್ಷಿತವಾಗಿ ಓಡಾಡಬೇಕೆಂದರೆ ಮಾನ್ಯ ಸಚಿವರು ಮನಸ್ಸು ಮಾಡಬೇಕು. ಬೆಂಗಳೂರು – ಮೈಸೂರು ರಸ್ತೆಯನ್ನು ಶೀಘ್ರವಾಗಿ ಅಭಿವೃದ್ಧಿ ಪಡಿಸಬೇಕು.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಹತ್ತು ಪಥದ ರಸ್ತೆಯನ್ನು ಮಾಡುತ್ತಿದ್ದೇವೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಹತ್ತು ಪಥದ ರಸ್ತೆ ಈಗ ಸದ್ಯಕ್ಕೆ ಆಗುವುದಿಲ್ಲ. ಇನ್ನೂ ಭೂಸ್ವಾಧೀನ ಪ್ರಕ್ರಿಯೆ ಆಗಿರುವುದಿಲ್ಲ. ಸದ್ಯಕ್ಕೆ ಆರು ಪಥದ ರಸ್ತೆ ಮಾಡಿಕೊಡಲಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚಿಂತಿಸಬೇಕಾಗಿಲ್ಲ. Land Acquisition ಮಾಡುವುದಕ್ಕೆ ಈಗಾಗಲೇ Special Land Acquisition Officer ಅನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರತಿ ತಿಂಗಳು ಎಲ್ಲಾ National Highway Authority ರಸ್ತೆಗಳನ್ನು ಮುಖ್ಯ ಕಾರ್ಯದರ್ಶಿಗಳು review ಮಾಡಬೇಕೆಂದು ಹೇಳಿದ್ದೇವೆ. ಕೆಲಸ ಮಾಡಿಸುತ್ತೇವೆ. ಯಾವುದೇ ಅನುಮಾನ ಬೇಡ. ಒಂದು ತಿಂಗಳು ಬಿಟ್ಟು ನನಗೆ ಇದರ ಬಗ್ಗೆ ಹೇಳಲಿ. ಈಗಾಗಲೇ 64% Land Acquisition ಆಗಿದೆ. ಉಳಿಕೆ 36% ಅನ್ನು ಮಾಡಲಾಗುವುದು.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಬಳಿ ಈ ವಿಷಯವಿದ್ದು, ಅವರ objection ಅನ್ನು ಕೂಡ ಮಾನ್ಯ ಸಚಿವರು ಪರಿಹರಿಸುತ್ತಾರೆಂಬ ಭರವಸೆ ನನಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಮಾಡುವ ರಸ್ತೆಗೆ acquisition ಗಾಗಿ ಮಾನ್ಯ ರೇವಣ್ಣನವರು ಪ್ರಯತ್ನ ಪಡುತ್ತಿದ್ದಾರೆ. ಅವರಿಗೆ ability ಇದೆ. ಅವರು ಮಾಡುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

ಆದರೆ 1994ರಿಂದ ಅಥವಾ 1997ರಲ್ಲಿ ಆದಂತಹ ಬೆಂಗಳೂರು – ಮೈಸೂರು, Frame Work Agreement (FWA) with NICE, ಅಲ್ಲಿಂದ ಇಲ್ಲಿಯವರೆವಿಗೂ ಬೆಂಗಳೂರು ಸುತ್ತಮುತ್ತಲಿನ ರೈತರ ಜಮೀನನ್ನು ಒಂದು ಕಂಪನಿಯವರು ತೆಗೆದುಕೊಂಡು ಮಜಾ ಮಾಡುತ್ತಿದ್ದಾರೆ. ಲೂಟಿ ಮಾಡುತ್ತಿದ್ದಾರೆ. ಆದರೆ ಬೆಂಗಳೂರಿನಿಂದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರಿನವರೆಗೆ ರಸ್ತೆಯನ್ನು ಮಾಡುವುದಕ್ಕೆ 1997ರಲ್ಲಿ ಸರ್ಕಾರ ಮಾಡಿಕೊಂಡಿರುವ Frame Work Agreement ನ ಪ್ರಕಾರ ಏಕೆ ಕ್ರಮ ಜರುಗಿಸಲಾಗುತ್ತಿಲ್ಲ ಎಂಬುದನ್ನು ಸರ್ಕಾರ ಹೇಳಬೇಕು.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಮೊದಲು ಈ ಬೆಂಗಳೂರು ಮೈಸೂರು ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಮಾಡಲಿ. ನಂತರ ಮಾನ್ಯ ಉಗ್ರಪ್ಪನವರು ಹೇಳುತ್ತಿರುವ NICE (Nandi Infrastructure Corridor Enterprise) ರಸ್ತೆಯ ವಿಚಾರಕ್ಕೆ ಹೋಗೋಣ. ನಾವು ಮೈಸೂರು-ಬೆಂಗಳೂರು ಓಡಾಡುವಾಗ ಬಹಳ ಕಷ್ಟ ಅನುಭವಿಸುತ್ತಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಅದರ ಅವಶ್ಯಕತೆ ಇದೆ ಎಂದು ಸರ್ಕಾರವೇ ತೀರ್ಮಾನ ಮಾಡಿದೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಅದು ಈಗ ಸದ್ಯಕ್ಕೆ ಆಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಆಗುವುದಿಲ್ಲವೆಂದು ಸರ್ಕಾರ ಹೇಳಿ ಬಿಡಲಿ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಇವರು ಹೇಳುವುದಕ್ಕಾಗುವುದಿಲ್ಲ. ಹಿಂದೆಯೇ ಹೇಳಬೇಕಾಗಿತ್ತು. ಮಾನ್ಯ ಸಚಿವರು ಈಗ ಬಂದಿರುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಯಾರಾದರೂ ಹೇಳಲಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಂದೇಶ್ ನಾಗರಾಜ್‌ರವರು ತಮ್ಮ ಪ್ರಶ್ನೆಯಲ್ಲಿ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಪ್ರಶ್ನೆಯನ್ನು ಕೇಳಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ಉತ್ತರವನ್ನು ಕೊಟ್ಟಿರುತ್ತೇನೆ. NICE ರಸ್ತೆಯ ವಿಷಯವನ್ನು ಮಾನ್ಯ ಉಗ್ರಪ್ಪನವರು ಬೇರೆಯ ರೀತಿಯಲ್ಲಿ ತಂದರೆ ಅವರಿಗೂ ಸಹ ಉತ್ತರವನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಬೆಂಗಳೂರು-ಮೈಸೂರು ರಸ್ತೆಯ traffic ದೃಷ್ಟಿಯಿಂದ ಹೇಳುತ್ತಿದ್ದೇನೆ. Even this matter is also related to the question. ಬೆಂಗಳೂರು-ಮೈಸೂರು ರಸ್ತೆಯಲ್ಲಿ ಉಂಟಾಗುವ traffic ease out ಆಗಬೇಕೆನ್ನುವ ದೃಷ್ಟಿಯಿಂದ ಈ ರಸ್ತೆಯನ್ನು ಮಾಡುತ್ತಿರುವುದು. ಆ ಉದ್ದೇಶದಿಂದಲೇ as early as in 1997, NICE ರಸ್ತೆಯನ್ನು ಮಾಡಲು ಸರ್ಕಾರವೇ ತೀರ್ಮಾನ ಮಾಡಿದೆ. ಸಂಬಂಧವಿಲ್ಲದೆ ಹೋಗಿದ್ದರೆ ನಾನು ಕೇಳುತ್ತಲೇ ಇರಲಿಲ್ಲ. ಹಾಗಾದರೆ ನೈಸ್ ರಸ್ತೆ ಮಾಡುವ ಉದ್ದೇಶವೇನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, NICE ರಸ್ತೆಯ ವಿಷಯದಲ್ಲಿ ಏನಾದರೂ ತೀರ್ಮಾನ ಮಾಡುವ ತಾಕತ್ತಿದ್ದರೆ ಅದು ಮಾನ್ಯ ರೇವಣ್ಣನವರಿಗೆ ಮಾತ್ರ ಎಂದು ಮಾನ್ಯ ಉಗ್ರಪ್ಪನವರ ಅನಿಸಿಕೆ. ಆದ್ದರಿಂದ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾವು ಕೂಡ ಆಗ್ರಹಿಸುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇಲ್ಲಿ ಕೇಳಿರುವಂಥ ಪ್ರಶ್ನೆ ರಾಷ್ಟ್ರೀಯ ಹೆದ್ದಾರಿಯದ್ದಾಗಿದೆ. NICE ಕಂಪನಿಯದ್ದಲ್ಲ. ಪ್ರಶ್ನೆಗೆ ಸಂಬಂಧಪಟ್ಟಿಲ್ಲದ ವಿಷಯವನ್ನು ನಾವು ಹಾಗೆ ಹೇಳುವುದಕ್ಕಾಗುವುದಿಲ್ಲ. ತಾವು ದಯಮಾಡಿ ಗಮನಿಸಬೇಕು. ಇದು ರಾಷ್ಟ್ರೀಯ ಹೆದ್ದಾರಿಯ ವಿಷಯ. ಅದಕ್ಕೆ ಸಂಪೂರ್ಣ ಉತ್ತರ ಒದಗಿಸಿರುತ್ತೇನೆ. ಮಾನ್ಯ ಉಗ್ರಪ್ಪನವರು ಅವರ ವಿಷಯವನ್ನು ಬೇರೆಯ ರೂಪದಲ್ಲಿ ತಂದರೆ ಉತ್ತರಿಸುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಉತ್ತರ ಕೊಡಲಾಗುವುದು. ಈಗ ನನ್ನ ಉತ್ತರವನ್ನು ರಾಷ್ಟ್ರೀಯ ಹೆದ್ದಾರಿಯ ವಿಷಯಕ್ಕಷ್ಟೇ ಸೀಮಿತಗೊಳಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ನೈಸ್ ರಸ್ತೆಯ ವಿರುದ್ಧ ಹೋರಾಟ ಮಾಡುತ್ತಿದ್ದವರು. ಆದರೆ ಈಗ ಉತ್ತರಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ನನಗೆ ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ನೀವಿಬ್ಬರು ಕೂಡಿ ಇತ್ಯರ್ಥ ಪಡಿಸಿಕೊಳ್ಳಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ ಮಾನ್ಯ ಉಗ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡೋಣ. ಅವರು ಹೇಳಿದ ಹಾಗೆ ಮಾಡಿದರೂ ನನ್ನದೇನೂ ಅಭ್ಯಂತರವಿಲ್ಲ.

**ಪ್ರಶ್ನೆ ಸಂಖ್ಯೆ 173**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಗಳು ಲಿಖಿತ ಉತ್ತರವನ್ನು ನೀಡಿರುತ್ತಾರೆ. ಆದರೆ ಇಲ್ಲಿ ಕೆಲವು ಮಾಹಿತಿಗಳು ಲಭ್ಯವಿರುವುದಿಲ್ಲ. ಕಾರಣ ಬೆಂಗಳೂರು ನಗರದಲ್ಲಿ ಕಳೆದ ಐದು ವರ್ಷಗಳಲ್ಲಿ OFC (Optical Fibre Cable), Telephone, TV, Internet ಗಳ ಕೇಬಲ್‌ಗಳು ಅಥವಾ ವೈರ್‌ಗಳು footpath ನಲ್ಲಿ ಆಗಲೀ ಅಥವಾ ರಸ್ತೆಯಲ್ಲಾಗಲೀ ಅಪಾಯಕಾರಿ ಸ್ಥಿತಿಯಲ್ಲಿದ್ದಾಗ ಅವುಗಳನ್ನು ತೆಗೆಸುವುದಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎಂದು ನನ್ನ ಪ್ರಶ್ನೆ ಬಹಳ specific ಆಗಿದೆ.. ಶ್ರೀ ಶಾಂತಾರಾಮ್ ಎನ್ನುವವರಿಗೆ ಕೇಬಲ್ ವೈರ್ ಕುತ್ತಿಗೆಗೆ ಸುತ್ತಿಕೊಂಡು ಅವರು ಆಸ್ಪತ್ರೆಗೆ ದಾಖಲಾದ ಪ್ರಕರಣವನ್ನು ಲಿಖಿತ ಉತ್ತರದಲ್ಲಿ ಉಲ್ಲೇಖ ಮಾಡಿರುತ್ತಾರೆ. ಪೊಲೀಸ್ ಕೇಸ್ ಆಗಿದೆ ಎಂದು ಟೆಲಿಫೋನ್ ಸಿಬ್ಬಂದಿ ವಿರುದ್ಧವೂ ಒಂದು ಕೇಸನ್ನು ದಾಖಲಿಸಲಾಗಿದೆ. ಖಾಸಗಿ ಕೇಬಲ್‌ನವರ ವಿರುದ್ಧವೂ ದೂರು ದಾಖಲಾಗಿರುವಂತೆ ಇಲ್ಲಿ ಕಾಣಿಸುತ್ತಿದೆ. FIR (First Investigation Report) copy ಸಹ ನೀಡಿರುತ್ತಾರೆ. ಇದರ ಜೊತೆಗೆ 2018ರಲ್ಲಿ newly occurred ಆಗಿ ಆಗಿರತಕ್ಕಂತಹ ಕೆಲವು incidents ಗಳನ್ನು ಇಲ್ಲಿ ಗಮನಕ್ಕೆ ತಂದಿರುವುದಿಲ್ಲ. ಬಹಳ specific ಆಗಿ ಹೇಳುವುದಾದರೆ ಹೊರಮಾವು ಎಂದು ಬೆಂಗಳೂರು ಪೂರ್ವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಾಲ್ಲೂಕಿನಲ್ಲಿ ಬರುತ್ತದೆ. ಈ ಭಾಗದಲ್ಲಿ 24 ವರ್ಷದ ಒಬ್ಬ ಯುವತಿಗೆ ಕೇಬಲ್ ಸುತ್ತಿಕೊಂಡ ಕಾರಣ ದ್ವಿಚಕ್ರವಾಹನದಿಂದ ಬಿದ್ದು, ಆಕೆಯ ಪರಿಸ್ಥಿತಿ ಶೋಚನೀಯವಾಗಿದೆ.

**(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸದರಿ ಯುವತಿಯ ಅಪಘಾತಕ್ಕೆ ಹಿಂದೆ ಇದ್ದ ಹಾಗೂ ಅಪಘಾತವಾದ ನಂತರದ ಎರಡು ಭಾವಚಿತ್ರಗಳನ್ನು ಸದನದಲ್ಲಿ ಪ್ರದರ್ಶಿಸಿದರು.)**

ಹೀಗೆ ಇದ್ದಂತಹ ಯುವತಿ, ಇಂದು ಈ ರೀತಿ ಇದ್ದಾಳೆ. This incident had occurred only because of those cable wires. ಇವತ್ತು ನಗರದ ಅಭಿವೃದ್ಧಿಗಾಗಿ technology and infrastructure ನ ಅವಶ್ಯಕತೆ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇದರಲ್ಲಿ ಶಿಸ್ತಿನ ಕ್ರಮವನ್ನು ಆ ಕಂಪನಿಯವರು ತೆಗೆದುಕೊಳ್ಳಬೇಕು. ನಗರದಲ್ಲಿ ಸಾರ್ವಜನಿಕರಿಗೆ convenience ಕೊಡಲೇಬೇಕು. ಆದರೆ inconvenience ಮಾಡಬಾರದು. Flyover ಮೇಲೆ pothole ಆಗಿ ಅಪಘಾತವಾಗುತ್ತದೆ. ನಗರದಲ್ಲಿ ಕೃಂಬಿಗಲ್ ರಸ್ತೆ ಎನ್ನುವ ಕಡೆ 2011ನೇ ಇಸವಿಯಲ್ಲಿ ನಾನು ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ನನ್ನ ವಾಹನ ಮುಂದೆ 100 ಅಡಿ ಅಂತರದಲ್ಲಿ ಒಂದು ಬಸ್ ಅಪಘಾತ ಸಂಭವಿಸಿತು. ಅಪಘಾತ ಏಕೆ ಸಂಭವಿಸಿತೆಂದರೆ ಅಂದು ಬೆಳಿಗ್ಗೆ ಬಿದ್ದಂತಹ ಮಳೆಗೆ ಅಲ್ಲಿನ road greasy ಆಗಿದ್ದು, ಒಬ್ಬ ಕಾಲೇಜು ವಿದ್ಯಾರ್ಥಿನಿ ಕಸ ಬಿದ್ದಿರುವುದರ ಮೇಲೆ ವೇಗವಾಗಿ ವಾಹನ ಚಲಾಯಿಸಿ skid ಆಗಿ ಬೀಳುತ್ತಾಳೆ. ಹಿಂದಿನಿಂದ ಬಂದ ಬಸ್ ಆಕೆಯ ಮೇಲೆ ಹರಿದ ಕಾರಣ ಆಕೆ spot-out ಆದಳು. ಇಂತಹ ಘಟನೆಗಳು ಸಾಕಷ್ಟು ಆಗುತ್ತವೆ. Road humps ಗಳಿಂದಲೂ ಸಾಕಷ್ಟು ಅಪಘಾತಗಳಾಗಿವೆ. ಉದಾಹರಣೆಗೆ, road hump ನಿಂದಾಗಿ ಮೃತಗೊಂಡ ವ್ಯಕ್ತಿಯ ಕುಟುಂಬಕ್ಕೆ ಪರಿಹಾರವನ್ನು ಪಡೆಯಲು ಕೋರ್ಟ್‌ಗೆ ಹೋಗಬೇಕು. ಇಂದು ಪರಿಹಾರವನ್ನು ಮಹಾನಗರ ಪಾಲಿಕೆಯವರು ಕೊಟ್ಟರೂ ಪೋಲೀಸರು ಕೊಡಬಾರದು ಎಂದು ಮಾಡಿರುವುದು, ಆಯುಕ್ತರಿಗೆ ತಿಳಿದಿದೆ. ನಿನ್ನೆ ನಾನು ಅರಮನೆ ರಸ್ತೆಯಲ್ಲಿ ಬರುತ್ತಿರಬೇಕಾದರೆ ಗಮನಿಸಿದ್ದು. ಮುಖ್ಯ ನ್ಯಾಯಮೂರ್ತಿಯವರ ಮನೆಯ ಮುಂದಕ್ಕೆ footpath ಮೇಲೆ pole yard ಹಾಕುವುದಕ್ಕಾಗಿ concrete ಹಾಕಿದ್ದಾರೆ. ಪಾದಚಾರಿಗಳ ಅನುಕೂಲಕ್ಕಾಗಿ footpath ಅನ್ನು ನಿರ್ಮಾಣ ಮಾಡಲಾಗಿದ್ದು, ಬದಲಾಗಿ ಅವರಿಗೆ abstract ಮಾಡುವ ರೀತಿಯಲ್ಲಿ ಮಾಡಲಾಗಿದೆ.

**(...ಮುಂದು)**

(164) 10.07.2018 11.40 ಕೆಜಿ.ಜಿಆರ್

**ಶ್ರೀ ಪಿ.ಆರ್.ರಮೇಶ್ (ಮುಂದು.):–** ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ನಾವು ಸಾರ್ವಜನಿಕರಿಗೆ ಮತ್ತು ನಮ್ಮ ಹಿರಿಯರಿಗೆ ಆದಷ್ಟು ಉತ್ತಮವಾದಂತಹ ಒಂದು infrastructure ಅನ್ನು

ಕೊಡಬೇಕು. ಈ ವಿಷಯದಲ್ಲಿ ಈಗಾಗಲೇ ಬಿ.ಬಿ.ಎಂ.ಪಿ.,ಯವರು ಒಟ್ಟು ರೂ.3,59,000/- ಗಳನ್ನು ಕೊಟ್ಟಿರುವುಕ್ಕೆ ನನ್ನ ಬಳಿ ದಾಖಲೆ ಇದೆ. ಆದರೆ, ಈ ಪ್ರಕರಣವು ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಇಲ್ಲದೇ ಇರುವುದು ಆಶ್ಚರ್ಯಕರವಾಗಿದೆ. ನಾನು ನಿಖರವಾಗಿ ಐದು ವರ್ಷದಲ್ಲಿ ಕೊಟ್ಟಿರುವಂತಹದ್ದು ಎಂಬುದಾಗಿಯೇ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಆ ಹುಡುಗಿಯ ಚಿಕಿತ್ಸೆಗಾಗಿ ಸುಮಾರು 30 ಲಕ್ಷ ರೂಪಾಯಿಗಳು ಖರ್ಚಾಗಿರುತ್ತದೆ. ಆಕೆಯ ತಂದೆ ತೀರಿಹೋಗಿದ್ದಾರೆ. ಆಕೆಯ ತಾಯಿ ಮನೆ ಕೆಲಸ ಮಾಡಿ ಜೀವನ ಮಾಡುತ್ತಿದ್ದಾಳೆ. ಆ ಹುಡುಗಿಯ ಜೊತೆಗಿದ್ದ ಗೆಳೆಯರು ಮತ್ತು ಆಕೆಯ ಜೊತೆಗೆ ಕೆಲಸ ಮಾಡುತ್ತಿದ್ದ ಸಿಬ್ಬಂದಿಯವರು ಸೇರಿ ಹಣ ಖರ್ಚು ಮಾಡಿ ಚಿಕಿತ್ಸೆ ಕೊಡಿಸಿ ಆ ಹುಡುಗಿಯನ್ನು ಬದುಕಿಸಿದ್ದಾರೆ. She is in the state of a vegetable. ಈ ದಾಖಲೆಯನ್ನು ತಮಗೆ ಕಳುಹಿಸಿ ಕೊಡುತ್ತೇನೆ. ದಯವಿಟ್ಟು ಪೂರ್ಣ ಪ್ರಮಾಣದ ಪರಿಹಾರದ ಹಣವನ್ನು ಕೊಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಡಾ||ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಆಗಿದ್ದಂತಹವರು. ಬಹುಶಃ ಮಾನ್ಯ ಸದಸ್ಯರಿಗೆ ಬೆಂಗಳೂರು ನಗರದಲ್ಲಿ ಆಗುವಂತಹ ಇಂತಹ ವಿದ್ಯಮಾನಗಳು ಬಹಳ ಚೆನ್ನಾಗಿ ಗೊತ್ತಿದೆ. ಮಾನ್ಯ ಸಭಾಪತಿಗಳಾದ ತಾವು ಸಹ OFC ಕೇಬಲ್‌ಗಳನ್ನು ರಸ್ತೆಗಳಲ್ಲಿ ಅಳವಡಿಸಿರುವುದನ್ನು ಗಮನಿಸಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಯಾವುದೇ ರಸ್ತೆಗೆ ಹೋದರೂ ಸಹ, ಹತ್ತಾರೂ ಕೇಬಲ್‌ಗಳು ಟೆಲಿಫೋನ್ ಲೈನ್ ಮೇಲೆ ಮತ್ತು ವಿದ್ಯುತ್ ಕಂಬಗಳ ಕೆಳಗಡೆ ಹಾಗೆಯೇ ನೇತಾಡಿಕೊಂಡು ಮೈಲಿಗಳಟ್ಟಲೇ ದಾಟಿಕೊಂಡು ಹೋಗುತ್ತಿರುತ್ತವೆ. ಅದರಲ್ಲಿ ಕೆಲವರು authorised permission ತೆಗೆದುಕೊಂಡು ಮಾಡುವವರು ಇದ್ದಾರೆ. ಇನ್ನು ಕೆಲವರು ಹೆಚ್ಚಾಗಿ unauthorised ಆಗಿ ಮಾಡುವವರು ಇದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯವರು ಬೆಂಗಳೂರಿನಲ್ಲಿ ಸುಮಾರು 8,860 ಕಿಲೋಮೀಟರ್‌ಗಳಷ್ಟು ಕೇಬಲ್ ಹಾಕಲು ಅನುಮತಿ ಕೊಟ್ಟಿದ್ದಾರೆ. ಆ ರೀತಿ ಅನುಮತಿ ಕೊಟ್ಟು ಸುಮಾರು 620 ಕೋಟಿ ರೂಪಾಯಿಗಳಷ್ಟು ಶುಲ್ಕವನ್ನು ಸಂಗ್ರಹಣೆ ಮಾಡಿದ್ದಾರೆ. ಇದರಲ್ಲಿ ಮೂರು ವಿಧಗಳು ಇವೆ. ಒಂದು Telecom ಮತ್ತೊಂದು Internet Service Providers ಮತ್ತು ಮೂರನೆಯದು Non-Telecom ನವರು ಎಂದು ಇದೆ. ಅವರು GAIL ಇರಬಹುದು, GAS ಇರಬಹುದು, ಇದು ಬಹಳ nuisance ಅನ್ನು ಉಂಟು ಮಾಡುತ್ತದೆ. ಅಲ್ಲದೇ, ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, ಒಂದರೆಡು ಕೇಸ್‌ಗಳನ್ನು quote ಮಾಡಿದ್ದೇವೆ. ಇನ್ನೂ ಅನೇಕ ಇಂತಹ ಕೇಸ್‌ಗಳು ಬಂದಿವೆ. ಆದರೆ, ಇದರ ಬಗ್ಗೆ BBMP ಯಲ್ಲಿ ಕಠಿಣವಾದಂತಹ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಚಿಂತನೆ ಮಾಡಿದ್ದೇವೆ. ಯಾರು unauthorised ಆಗಿ ಕೇಬಲ್‌ಗಳನ್ನು ಬೀದಿಯಲ್ಲಿ ಇರಬಹುದು, ಮರಗಳ ಮೇಲೆ ಇರಬಹುದು ಅಥವಾ ಬೇರೆ ಬೇರೆ ರೀತಿಯಲ್ಲಿ ಎಳೆದುಕೊಂಡು ಹೋಗಿದ್ದಾರೆ. ನಾವು ಇದನ್ನೆಲ್ಲವನ್ನು ನಿಲ್ಲಿಸುವಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಅದೇರೀತಿ ಯಾರು unauthorised cable ಅನ್ನು ಎಳೆದಿದ್ದಾರೆ, ಅದನ್ನು ತೆರವುಗೊಳಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ *Tender SURE* (Specifications for Urban Roads Execution) ರಸ್ತೆಗಳನ್ನು ಮಾಡುತ್ತಿರುವುದು ತಮಗೂ ಗೊತ್ತಿದೆ. ಈ ರಸ್ತೆಗಳಲ್ಲಿ ಯಾವುದೇ services like electrical cable ಇರಬಹುದು, ಅಥವಾ ಈ ರೀತಿಯ Telecom Cable ಇರಬಹುದು ಅಥವಾ GAIL ನವರು pipe run ಮಾಡುವಂಥದ್ದು ಇರಬಹುದು ಇದೆಲ್ಲವನ್ನು duct ಮಾಡಿ ಭೂಮಿ ಒಳಗಡೆ ಸೇರಿಸಬೇಕೆಂಬ technology ಬಳಸಿ ಆ system ಮಾಡಿ Tender SURE ರಸ್ತೆಗಳಲ್ಲಿ ಇದು ಯಾವುದು ಇರಬಾರದೆಂಬ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಇವತ್ತಿಗೂ ಸಹ Tender SURE ಕೆಲಸ ಮುಗಿದಿರುವಂತಹ ರಸ್ತೆಗಳಲ್ಲಿಯೇ ಇಂತಹ ಕೇಬಲ್‌ಗಳು ಇವೆ. ಅದನ್ನು ತೆರವುಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ನಾವು ಈಗಾಗಲೇ ಇದಕ್ಕೆ ದಂಡ ಹಾಕುವುದನ್ನು ಸಹ ಹೆಚ್ಚು ಮಾಡುತ್ತೇವೆ. ಯಾರು unauthorised ಆಗಿ ಮಾಡುತ್ತಾರೆ ಅಂತಹವರನ್ನು ಕಂಡುಹಿಡಿದು ಅವರಿಗೆ ದಂಡ ಹಾಕುವುದಕ್ಕೆ ಕ್ರಮ ವಹಿಸುತ್ತೇವೆ. ಈಗಾಗಲೇ ಸುಮಾರು 25 ಲಕ್ಷ ರೂಪಾಯಿಗಳಷ್ಟು ದಂಡ ಹಾಕಬೇಕೆಂದು ಚಿಂತನೆ ಮಾಡಿದ್ದೇವೆ. ಅಲ್ಲದೇ ಖಾಸಗಿಯವರು ಚೆನ್ನಾಗಿರುವಂತಹ ರಸ್ತೆಗಳನ್ನು ಅನುಮತಿ ತೆಗೆದುಕೊಳ್ಳದೆ ಅಗೆದುಬಿಡುತ್ತಾರೆ. ಅವರ ಮನೆಗೆ ನೀರಿನ ಸಂಪರ್ಕಕ್ಕೆಂದು ಅಗೆದುಬಿಡುತ್ತಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ಗುತ್ತಿಗೆದಾರರನ್ನು accountability ಗೆ ತರಬೇಕು.

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ರಸ್ತೆಗಳನ್ನು ಚೆನ್ನಾಗಿ ಮಾಡಿ ಈ ಕಡೆಗೆ ಬರುವಷ್ಟರಲ್ಲಿಯೇ ಆ ರಸ್ತೆಗಳನ್ನು ಅಗೆದುಬಿಡುತ್ತಾರೆ. ಈಗಾಗಲೇ ಅವರಿಗೂ ಸಹ 10 ಲಕ್ಷ ರೂಪಾಯಿಗಳಷ್ಟು ದಂಡವನ್ನು ಹಾಕಬೇಕೆಂದು ಯೋಚನೆ ಮಾಡಿದ್ದೇವೆ. ಯಾರು ಕಾನೂನು ಬಾಹಿರವಾಗಿ ರಸ್ತೆಗಳನ್ನು cutting ಮಾಡುತ್ತಾರೆ ಅಥವಾ ಕೇಬಲ್‌ಗಳನ್ನು run ಮಾಡುತ್ತಾರೆ ಅಂತಹವರಿಗೆ ದಂಡ ಹಾಕುವುದರ ಜೊತೆಗೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಸಹ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇಂತಹ ಕೇಸ್‌ಗಳು ಎಷ್ಟು ದಾಖಲು ಆಗಿವೆ ಎನ್ನುವ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇನೆ. 2013–14ನೇ ಸಾಲಿನಿಂದ ಜೂನ್ 2018ರವರೆಗೆ ಒಟ್ಟು 1260 ಕೇಸ್‌ಗಳು ದಾಖಲಾಗಿವೆ. ಆದ್ದರಿಂದ, ಇದಕ್ಕೆ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಯಾರು unauthorised ಆಗಿ ಕೇಬಲ್ ಹಾಕಿದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅಂತಹ ಕೇಬಲ್ ಸಂಪರ್ಕವನ್ನು ತೆರವುಗೊಳಿಸುವಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆ ಹುಡುಗಿಗೆ ಪರಿಹಾರ ಕೊಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೇ, ಆಕೆಗೆ ಚಿಕಿತ್ಸೆ ಕೊಡಿಸುವುದಕ್ಕೆ ಸುಮಾರು 30 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿದೆ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಯಾರಾದರೂ ಒಬ್ಬರು ಮಾತನಾಡಿ. ಈಗ ಮಾನ್ಯ ಸದಸ್ಯರಾದ ಶರವಣರವರು ಮಾತನಾಡುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 1200 ಕೇಸ್‌ಗಳನ್ನು ದಾಖಲು ಮಾಡಿದ್ದೇವೆ ಮತ್ತು ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇಂತಹ ಗುತ್ತಿಗೆದಾರರನ್ನು block list ಗೆ ಸೇರಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೇ ವಿವಿಧ ಇಲಾಖೆಗಳಲ್ಲಿರುವ ಅಧಿಕಾರಿಗಳಿಗೆ ಒಬ್ಬರಿಗೊಬ್ಬರಿಗೆ coordination ಇಲ್ಲ. ಇವರು ಬಂದು ಸರಿ ಮಾಡಿ ಹೋಗುತ್ತಾರೆ. ಅವರು ಮತ್ತೆ ಬಂದು ಅದನ್ನು ಅಗೆಯುತ್ತಾರೆ. ಇದೇ ವ್ಯವಸ್ಥೆ ಮುಂದುವರಿಯುತ್ತಿದೆ. ನಾವು ಹಲವಾರು ಬಾರಿ ಈ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇವೆ. ನಾವು ಪ್ರಶ್ನೆ ಕೇಳಿದಾಗ ಮಾತ್ರ ನೋಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಾರೆ. ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. Knowing is

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

knowing and doing is doing. ಅಂತಹವರ ವಿರುದ್ಧ ಕಠಿಣವಾಗಿ ಕ್ರಮ ತೆಗೆದುಕೊಳ್ಳಬೇಕು. 'Doing' ಆಗಬೇಕು, 'Knowing' ಏನು ಪ್ರಯೋಜನವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಪಾದಚಾರಿಗಳು ನಡೆದಾಡುವುದಕ್ಕೂ ಸಹ footpath ಇಲ್ಲದಂತೆ ಆಗಿದೆ. ಆ ರೀತಿ ರಸ್ತೆಗಳನ್ನು ಮಾಡುತ್ತಿದ್ದಾರೆ. ಸಾರ್ವಜನಿಕರು ನಡೆದುಕೊಂಡು ಬರುತ್ತಿರುತ್ತಾರೆ, ಅವರ ಎದುರುಗಡೆ ವಾಹನಗಳು ಬರುತ್ತಿರುತ್ತವೆ. ಬೆಂಗಳೂರಿನಲ್ಲಿ ರಸ್ತೆಗಳನ್ನು ಮಾಡುವಾಗ ಪಾದಚಾರಿಗಳಿಗೆ ನಡೆದಾಡುವುದಕ್ಕೆ ಜಾಗ ಬಿಡುವಂತಹ ವ್ಯವಸ್ಥೆ ಮಾಡುವ ಬಗ್ಗೆ ಸಹ ದಯವಿಟ್ಟು ಮಾನ್ಯ ಸಚಿವರು ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಡಾ||ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶರವಣರವರು 'Doing, doing' ಎಂದು ಹೇಳಿದರು. ಅದು ನನಗೆ ಅರ್ಥವಾಗಲೇ ಇಲ್ಲ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ, ಅದು ಆಗುತ್ತಿಲ್ಲ. ಆದ್ದರಿಂದ ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ ಅಷ್ಟೇ.

**ಡಾ||ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಅವರು knowing is knowing and doing is doing ಎಂದು ಹೇಳಿದರು. ನನಗೆ ಅದು ಅರ್ಥವಾಗಲಿಲ್ಲ. ಅದಕ್ಕೆ ಕೇಳಿದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏನೆಂದರೆ, Knowing is not doing. Doing is doing ಆಗಬೇಕೆಂದು ಹೇಳಿದೆ ಅಷ್ಟೇ.

**ಡಾ||ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಈಗ ನನಗೆ ಅರ್ಥವಾಯಿತು. ಮಾನ್ಯ ಸದಸ್ಯರು ಹೇಳಿರುವಂತಹ ಮಾತಿನಲ್ಲಿ ಬಹಳ ಸತ್ಯ ಇದೆ. ಅವರು ಗುತ್ತಿಗೆದಾರರಿಗೆ ಹೊಣೆಗಾರಿಕೆ ಮಾಡಬೇಕೆಂದು ಹೇಳಿದ್ದಾರೆ. ನಮ್ಮಲ್ಲಿ ಸುಮಾರು 11 Telecom Companies ಅನುಮತಿ ತೆಗೆದುಕೊಂಡಿದ್ದಾರೆ. Non-Telecom Companies and 7 Internet Service Providers ಇವರು ಅನುಮತಿ ತೆಗೆದುಕೊಂಡಿದ್ದಾರೆ. ಇವರು ಏನಾದರೂ ತಪ್ಪು ಮಾಡಿದರೆ ನಾವು ತಕ್ಷಣವೇ ಅವರ ವಿರುದ್ಧ accountability fix ಮಾಡಬಹುದು. ಇಲ್ಲಿ unauthorised ನವರ ಪ್ರಶ್ನೆ ಬಂದಿದೆ. ಅಂತಹವರು ಯಾರನ್ನು ಕೇಳುವುದಿಲ್ಲ. ಯಾರ ಅನುಮತಿಯನ್ನು ತೆಗೆದುಕೊಂಡಿರುವುದಿಲ್ಲ. ಅವರು ತಮ್ಮಷ್ಟಕ್ಕೆ ತಾವೇ ಕೇಬಲ್ ಎಳೆದುಕೊಂಡು ಹೋಗಿರುತ್ತಾರೆ. ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವಂತೆ Tender SURE ರಸ್ತೆಗಳನ್ನು ಹೊಸದಾಗಿ ಬೆಂಗಳೂರು ನಗರದಲ್ಲಿ ಮಾಡುತ್ತಿದ್ದೇವೆ. ಇಡೀ ಬೆಂಗಳೂರಿನಲ್ಲಿರುವ ಎಲ್ಲಾ ಪ್ರಮುಖವಾದಂತಹ ರಸ್ತೆಗಳನ್ನು Tender SURE ರಸ್ತೆಗಳನ್ನಾಗಿ ಮಾಡಬೇಕೆಂಬ ಉದ್ದೇಶ ಇದೆ. ಆ ರಸ್ತೆ ಮಾಡುವಾಗ footpath ಅನ್ನು ಮತ್ತು ಈ ಕೇಬಲ್‌ಗಳನ್ನು ಭೂಮಿ ಒಳಗೆ ಹಾಕುವುದಕ್ಕೆ ಕ್ರಮವಹಿಸುತ್ತೇವೆ ಮತ್ತು footpath ಗೆ ಹೆಚ್ಚು ಗಮನ ಹರಿಸಿ ಆ ಕೆಲಸವನ್ನು ಮಾಡುತ್ತಿದ್ದೇವೆ. ಈಗಾಗಲೇ  ಕೆಲಸ ಪ್ರಾರಂಭ ಆಗಿದೆ. ಹಾಗಾಗಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಸಹ ಹೇಳಬಯಸುತ್ತೇನೆ.

(165):10.07.2018–11.50–ಎಂವಿ–ಜಿಆರ್

**ಚುಕ್ಕೆ ಪ್ರಶ್ನೆ: 03**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ರಾಜ್ಯ ಹೆದ್ದಾರಿಗಳಲ್ಲಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಮಳೆಯಿಂದ ರಸ್ತೆಗಳಿಗೆ ಉಂಟಾಗಿರುವ ದುಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಪ್ರಶ್ನೆ ಕೇಳಿದ್ದು, ಅದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ನನ್ನ ಮುಂದಿನ ಪ್ರಶ್ನೆ ಏನೆಂದರೆ; ಹಲವಾರು ಕಡೆಗಳಲ್ಲಿ ಗುಂಡಿಗಳು, ಅವೈಜ್ಞಾನಿಕ ರಸ್ತೆ ಹಂಪ್ಸ್‌ಗಳಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಏನು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ; ವಾರ್ಷಿಕ ನಿರ್ವಹಣೆ ಅಡಿಯ ಅನುದಾನದಲ್ಲಿ ಗುಂಡಿಗಳನ್ನು ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ನನಗೆ ಬೇಕಾದಂತಹ ಉತ್ತರ ಸರಿಯಾಗಿ ಬರಲಿಲ್ಲ. ಅಂದರೆ, ಇರುವ ಎಲ್ಲಾ ಗುಂಡಿಗಳನ್ನು ಮುಚ್ಚುತ್ತಾರೋ? ಅಥವಾ ಇರುವ ಅನುದಾನದಲ್ಲಿ ಎಷ್ಟು ಗುಂಡಿಗಳನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತದೊ ಅಷ್ಟನ್ನು ಮುಚ್ಚುತ್ತಾರೋ? ಎಂಬುದು ನನ್ನ ಪ್ರಶ್ನೆ. ಮಾನ್ಯ ಸಚಿವರು ರಸ್ತೆಯ ವಾರ್ಷಿಕ ನಿರ್ವಹಣೆಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ಸೂಚಿಸಿದ್ದು, ದಿನಾಂಕ 13.06.2018ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅಂದರೆ ಇನ್ನು ಮೂರು ದಿವಸ ಕಳೆದರೆ ಒಂದು ತಿಂಗಳು ಆಗುತ್ತದೆ. ಒಂದು ತಿಂಗಳಾದರೂ ಸಹ ಇನ್ನೂ ಕ್ರಿಯಾ ಯೋಜನೆ ಇನ್ನೂ ತಯಾರಾಗಿಲ್ಲ. ಈ ರೀತಿಯಾದರೆ ಸುಗಮ ವಾಹನ ಸಂಚಾರಕ್ಕೆ ಯಾವಾಗ ಅನುವು ಮಾಡಿಕೊಡುತ್ತಾರೆ ಎಂಬುದು ಸ್ವಲ್ಪ ಸಂದೇಹವಾಗಿದೆ. ನಂತರ, ಅವೈಜ್ಞಾನಿಕ ರಸ್ತೆಗಳ ಉಬ್ಬುಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅನಧಿಕೃತ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದ್ದರೂ ಸಹ ಸ್ಥಳೀಯರು ಅಂದರೆ ಸಾರ್ವಜನಿಕರು ಪದೇಪದೇ ಅವೈಜ್ಞಾನಿಕ ರಸ್ತೆಗಳ ಉಬ್ಬುಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನನಗೆ ಇದರ ಬಗ್ಗೆ ಅವರು ಬೆಳಕು ಚೆಲ್ಲಬೇಕು. ನನ್ನ ಮತ್ತೊಂದು ಪ್ರಶ್ನೆಯಲ್ಲಿ. ಎಷ್ಟೋ ಕಡೆ ಸೇತುವೆಗಳು ಕೂಡ ಬಿರುಕು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಿಟ್ಟು ದುಸ್ಥಿತಿಯಿದ್ದು, ಹಾಳಾಗಿರುವ ಸೇತುವೆಗಳ ದುರಸ್ತಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ; ದಕ್ಷಿಣ ವಲಯದಲ್ಲಿ ಮುಖ್ಯವಾಗಿ ಹಾಳಾಗಿರುವ 15 ಸೇತುವೆಗಳಿಗೆ ರೂ.782.64 ಲಕ್ಷಗಳ ಅಂದಾಜು ಎಂದು ಹೇಳಿದ್ದಾರೆ. ಉತ್ತರ ವಲಯಕ್ಕೆ ಸಂಬಂಧಿಸಿದಂತೆ 96 ಸೇತುವೆಗಳು ಹಾನಿಗೊಳಗಾಗಿದ್ದು, ಇವುಗಳಲ್ಲಿ ರೂ.272.73 ಲಕ್ಷಗಳು ಎಂದು ಹೇಳಿದ್ದಾರೆ. ತುರ್ತು ದುರಸ್ಥಿಗೆ ರೂ.1427.30 ಲಕ್ಷಗಳ ಅಂದಾಜು ಹಣ ಬೇಕೆಂದು ಹೇಳುತ್ತಾರೆ. ಒಟ್ಟಾರೆ 2502.62 ಲಕ್ಷಗಳು ಬೇಕಾಗುತ್ತದೆ ಎಂದು ತಮ್ಮ ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ನನಗೆ ಒಂದು ಸಂದೇಹ, ನಾನು ಮಾನ್ಯ ಸಚಿವರನ್ನು ಕೇಳಬೇಕಾಗಿತ್ತು. ಇವುಗಳ ದುರಸ್ಥಿಗೆ ಇಷ್ಟೊಂದು ಹಣ ಬೇಕಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಆದರೆ, ಈ ಬಾರಿಯ ಅನುದಾನದಲ್ಲಿ ಅಗತ್ಯವಾಗಿರುವಂತಹ ಹಣ ಅವರಿಗೆ ದೊರಕಿದೆಯೋ ಅಥವಾ ಇಲ್ಲವೋ? ಎಂಬುದನ್ನು ಉತ್ತರದಲ್ಲಿ ಹೇಳಿಲ್ಲ. ನಾನು ಇನ್ನು ಮುಂದಕ್ಕೆ ಪ್ರಶ್ನೆಗಳನ್ನು ಕೇಳುತ್ತೇನೆ.

**ಸಭಾಪತಿಯವರು:–** ಅದನ್ನು ಮಾನ್ಯ ಸಚಿವರು ಹೇಳುತ್ತಾರೆ. ಮತ್ತೇನು ಕೇಳುವುದು ಬೇಡ, ಸಾಕು.

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಜೂನ್ ತಿಂಗಳಿನಲ್ಲಿ ಅತೀ ಹೆಚ್ಚು ಮಳೆಯಾಗಿರುವುದರಿಂದ, ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದು ನಿಜ. ಈಗಾಗಲೇ, ರಾಜ್ಯದ ಉತ್ತರ ವಲಯದ 404 ಕಡೆ, ದಕ್ಷಿಣ ವಲಯದ 227 ಕಡೆ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯರಸ್ತೆಗಳು, ಕೆಲವು ಭಾಗಗಳಲ್ಲಿ ಮಳೆ ಜಾಸ್ತಿಯಾಗಿರುವುದರಿಂದ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು 13.06.2018 ಎಂದು ಹೇಳಿದರು. ಆದರೆ, ನಾನು 11.06.2018ರಲ್ಲಿ ಅಧಿಕಾರಿಗಳ ಒಂದು ಸಭೆಯನ್ನು ಕರೆದು, ಅಧಿಕಾರಿಗಳು ಹಣಕಾಸಿಗೆ ಕಾಯುವುದು ಬೇಡವೆಂದು, ನಾನು ಅನುಮತಿಯನ್ನು ಕೊಟ್ಟಿದ್ದೇನೆ, ಎಲ್ಲಾ ಕಡೆ ಗುಂಡಿಯನ್ನು ಮುಚ್ಚಬೇಕು ಮತ್ತು ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗಬಾರದು ಎಂಬ ದೃಷ್ಟಿಯಲ್ಲಿ ಈಗಾಗಲೇ ಆದೇಶವನ್ನು ಮಾಡಿದ್ದೇನೆ. ಅದರಂತೆ ನಾನು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ಮಾಡಿ, ಆದೇಶವನ್ನು ಸಹ ಮಾಡಿದ್ದೇನೆ. ಅದರ ಮೇರೆಗೆ ಈಗಾಗಲೇ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಇದಲ್ಲದೆ ನಾನು ಹುಬ್ಬಳ್ಳಿ ವಿಭಾಗದಲ್ಲಿ, ಬೆಳಗಾವಿ ವಿಭಾಗದಲ್ಲಿ, ಉಡುಪಿ ಮತ್ತು ದಕ್ಷಿಣ ಕನ್ನಡ ಎರಡೂ ಸೇರಿ ಸಭೆಯನ್ನು ಮಾಡಿದ್ದೇನೆ. ಹಾಗೂ ಮಡಿಕೇರಿಯ ಭಾಗದಲ್ಲಿ ಏನಾಗಿದೆ ಎಂದರೆ, Inter-State connectivity Road ಕಿತ್ತು ಹೋಗಿತ್ತು, ಅದಕ್ಕೆ ಅನುಮತಿ ಕೊಟ್ಟು, ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಜೊತೆ ಸಭೆ ಮಾಡಿ ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಅನುದಾನಕ್ಕೆ ಕಾಯುವುದು ಬೇಡ, ಕೆಲಸ ಮಾಡಿ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಇನ್ನೊಂದು ಮುಖ್ಯ ಪ್ರಶ್ನೆಯನ್ನು ಕೇಳಿದ್ದಾರೆ. ಎಲ್ಲಿ ಹಂಪ್ಸ್‌ಗಳನ್ನು ಹಾಕುತ್ತಾರೆ, ಅದನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಪಿಡಬ್ಲ್ಯುಡಿ 252 ಸಿಆರ್‌ಎಂ 2010, ದಿನಾಂಕ 24.07.2010ರನ್ವಯ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನಾಗಿ ಪರಿವರ್ತಿಸಲಾಗಿರುತ್ತದೆ. ಆದರೆ, ಕೆಲವು ಕಡೆ ಏನಾಗಿದೆ ಎಂದರೆ, ಕೆಲವುಗಳನ್ನು ತೋರಿಸುವುದರಲ್ಲಿ ವ್ಯತ್ಯಾಸವಾಗಿರುತ್ತದೆ. ಏಕೆಂದರೆ, ಕಾನೂನುರೀತಿ National Highway ನಲ್ಲಿ ಆಗಲಿ ಅಥವಾ State

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Highway ನಲ್ಲಿ ಆಗಲಿ ಹಂಪ್ಸ್‌ಗಳನ್ನು ಹಾಕಬಾರದು ಎಂದು ನ್ಯಾಯಾಲಯದ ಆದೇಶವಿದೆ. ನಾವುಗಳು ಅಥವಾ ನೀವುಗಳು ಅಧಿಕಾರಿಗಳಿಗೆ ಸೂಚನೆ ಕೊಟ್ಟಿರುತ್ತೇವೆ ಅದಕ್ಕೆ ಅವರು ಹಂಪ್ಸ್‌ಗಳನ್ನು ಹಾಕಿರುತ್ತಾರೆ. ಅದನ್ನು ತೆಗೆಯಿಸಬೇಕು. ಇವತ್ತು ನಮ್ಮ ಅಧಿಕಾರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ strict ಆಗಿ ಸೂಚನೆ ಕೊಡುತ್ತೇನೆ. ಆದರೂ, ಕೆಲವು ಕಡೆ ಊರಿನ ಮಧ್ಯದಲ್ಲಿ ಇರುತ್ತದೆ. ಬೆಳಗಾವಿಗೆ ಹೋಗುವ ಕಡೆ ಅದನ್ನು ನೋಡುತ್ತೇವೆ. ಬೆಂಗಳೂರು ಮತ್ತು ಮೈಸೂರು ರಸ್ತೆಗಳಲ್ಲೂ ಕೆಲವು ಅಪಘಾತಗಳು ಆಗುತ್ತವೆ. ಆದುದರಿಂದ ಅದನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ಆ ಹಂಪ್ಸ್‌ಗಳು ಯಾವ್ಯಾವು ಇವೆ, ಅವುಗಳ ಸನ್ನಿವೇಶವನ್ನು ನೋಡಿಕೊಂಡು ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಇನ್ನು ಸೇತುವೆ ಬಿರುಕು ಬಿಟ್ಟು ದುಸ್ಥಿತಿಯ ಬಗ್ಗೆ ತಾವು ಹೇಳಿದ ಹಾಗೆ ದಕ್ಷಿಣ ವಲಯದ ಹಾಸನ ಜಿಲ್ಲೆಯಲ್ಲಿ 1, ಮೈಸೂರು ಜಿಲ್ಲೆಯಲ್ಲಿ 4, ಮಂಗಳೂರು ಜಿಲ್ಲೆಯಲ್ಲಿ 9, ಬೆಂಗಳೂರು ಜಿಲ್ಲೆಯಲ್ಲಿ 1, ಹೀಗೆ ಒಟ್ಟು 15 ಸೇತುವೆಗಳು ಹಾನಿಗೊಳಗಾಗಿವೆ. ಅವುಗಳಿಗೆ 782.64 ಲಕ್ಷಗಳು, ಅಂದರೆ 7.82 ಕೋಟಿ ರೂಪಾಯಿಗಳು ಮತ್ತು ಅದೇ ರೀತಿ ಉತ್ತರ ವಲಯದ ಧಾರವಾಡ ವೃತ್ತದಲ್ಲಿ 78, ಬೆಳಗಾವಿ ವೃತ್ತದಲ್ಲಿ 15, ಶಿವಮೊಗ್ಗ ವೃತ್ತದಲ್ಲಿ 3. ಹೀಗೆ ಒಟ್ಟು 96 ಸೇತುವೆಗಳು ಹಾನಿಗೊಳಗಾಗಿವೆ. ಅವುಗಳಿಗೆ ರೂ.272.73 ಲಕ್ಷ ರೂಪಾಯಿಗಳು. ಅದೇ ರೀತಿ ತುರ್ತು ರಸ್ತೆ ದುರಸ್ಥಿಗಳಿಗೆ ರೂ.1427.30 ಲಕ್ಷಗಳ ಅಂದಾಜು ಮೊತ್ತದಲ್ಲಿ ಪುನರ್ ನಿರ್ಮಾಣ ಮಾಡುವ ಅವಶ್ಯಕತೆ ಇರುತ್ತದೆ. ಈಶಾನ್ಯ ವಲಯದಲ್ಲಿ ಮಳೆಯಿಂದ ಹಾಳಾಗಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲಿನ ಸೇತುವೆಗಳನ್ನು ಸಹ ಗುರುತಿಸಲಾಗುತ್ತಿದೆ. ಈಗ ಅನುದಾನದ ಲಭ್ಯತೆಯನ್ನು ಕಾಯುವುದು ಬೇಡ, pending ratification ಕೆಲಸ ಮಾಡಿ ಎಂದು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಎಲ್ಲೂ ಸಹ ಗುಂಡಿಗಳನ್ನು ಮುಚ್ಚುವಂತಹ ಕೆಲಸ ನಿಲ್ಲಬಾರದು. ಅವರಿಗೆ first priority ಯಾಗಿ ಏನು ಹೇಳಿದ್ದೇನೆಂದರೆ, ಈಗ asphalt ಹಾಕಿ ಗುಂಡಿಗಳನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಏನು gravel ಮತ್ತು ಜಲ್ಲಿಗಳನ್ನು ಹಾಕಿ ಮಾಡಿ, ಅಕ್ಟೋಬರ್ ತಿಂಗಳಿನಲ್ಲಿ ಈ ಗುಂಡಿಗಳನ್ನು ಮುಚ್ಚುವಂತಹ ಕಾರ್ಯವನ್ನು permanent ಆಗಿ ಮಾಡಿ ಎಂದು ಹೇಳಿದ್ದೇನೆ. ಈಗ asphalt ಹಾಕಿದರೂ ಸಹ ಅದು ಮಳೆಯಲ್ಲಿ ನಿಲ್ಲುವುದಿಲ್ಲ. ಆದುದರಿಂದ ಜಲ್ಲಿ ಮತ್ತು gravel ನಲ್ಲಿ ಮುಚ್ಚಿ, ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು. ಇದು ಆದ ಮೇಲೆ permanent ಆಗಿ ಮಾಡೋಣವೆಂದು ಹೇಳಿದ್ದೇನೆ. ಕೆಲವು ಉಳಿಕೆ ಏನಿದೆ, ಅ ಕೆಲಸಗಳನ್ನು ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು, ಅನಧಿಕೃತ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದ್ದರೂ ಸಹ ಸ್ಥಳೀಯರು ಮತ್ತು ಸಾರ್ವಜನಿಕರು ಪದೇಪದೇ ಹಾಕುತ್ತಾರೆಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದಾರೆ. ಅದರ ಬಗ್ಗೆ ಬೆಳಕು ಚೆಲ್ಲಿ ಎಂದು ಕೇಳಿದ್ದೇನೆ. ಅದನ್ನು ಸ್ಥಳೀಯರು ಏಕೆ ಹಾಕುತ್ತಾರೆ, ಅದನ್ನು ಇಲಾಖೆಯವರು ಹಾಕುತ್ತಾರೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅದನ್ನು 'Scientific Humps' ಎಂದು ಹೇಳಬೇಕು.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಆಮೇಲೆ 'Scientific Humps' ಅಂದರೆ ನಾನು ಏನನ್ನು ಹೇಳುತ್ತೇನೆಂದರೆ, ಕೆಲವು ಕಡೆ ಹಂಪ್ಸ್‌ಗಳು ತುಂಬಾ ದೊಡ್ಡದಾಗಿರುತ್ತವೆ, ಅಂದರೆ ನಾಲ್ಕು ಅಡಿ, ಎರಡು ಅಡಿ ಮತ್ತು ಒಂದೂವರೆ ಅಡಿ, ಕೆಲವು ಕಡೆ ಹಂಪ್ಸ್ ಇರುತ್ತದೋ ಇಲ್ಲವೋ ಅದು ಗೊತ್ತಾಗುವುದಿಲ್ಲ. ಅಂದರೆ ರಸ್ತೆ ಯಾವುದು ಮತ್ತು ಹಂಪ್ಸ್‌ಗಳು ಯಾವುದು ಎಂದು ಗೊತ್ತಾಗುವುದೇ ಇಲ್ಲ, ಆ ತರಹ ಇರುತ್ತದೆ. ಆ ತರಹದವುಗಳಿಗೆ ಮಾನ್ಯ ಸಚಿವರು ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಅವುಗಳನ್ನು ಸರಿಪಡಿಸಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತೇವೆ. ಯಾವುದಾದರೂ ಮಾನ್ಯ ಸದಸ್ಯರ ಗಮನಕ್ಕೆ ಬಂದು, ಎಲ್ಲಿಯಾದರೂ ಹಂಪ್ಸ್‌ಗಳನ್ನು ತುಂಬಾ ಎತ್ತರವಾಗಿ ಹಾಕಿದ್ದರೆ ಅದರ ಮಾಹಿತಿಯನ್ನು ನನಗೆ ಕಳುಹಿಸಿಕೊಡಿ, ಅದನ್ನು ತೆಗೆಸುವುದಕ್ಕೆ ಪ್ರಯತ್ನಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅನಧಿಕೃತ ರಸ್ತೆ ಉಬ್ಬುಗಳನ್ನು ತೆರವುಗೊಳಿಸುವುದಕ್ಕೆ ಏನು ಮಾಡುತ್ತೀರಾ ಎಂದು ಹೇಳಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅನಧಿಕೃತ ರಸ್ತೆ ಉಬ್ಬುಗಳನ್ನು ತೆರವುಗೊಳಿಸುವುದಕ್ಕೆ ಅಗತ್ಯ ಸೂಚನೆಗಳನ್ನು ಕೊಟ್ಟಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಮಾನ್ಯ ಸಚಿವರಿಗೆ ಒಂದು ಸಲಹೆ ನೀಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಬಹಳ ಜನ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ, ಸಲಹೆ ಬೇಡ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀಮತಿ ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:10ನೇ ಜುಲೈ 2018, ಸಮೂಹ-IIರ ಲಿಖಿತ ಮೂಲಕ ಉತ್ತರಿಸುವ ಒಟ್ಟು 65 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ ಹಾಗೂ ದಿನಾಂಕ:09ನೇ ಜುಲೈ 2018, ಸಮೂಹ-Iರ ಲಿಖಿತ ಮೂಲಕ ಉತ್ತರಿಸುವ ಒಟ್ಟು 68 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಈಗಾಗಲೇ ಉತ್ತರವನ್ನು ಸದನದಲ್ಲಿ ಮಂಡಿಸಲಾಗಿದ್ದು, ತದನಂತರ

ಸ್ವೀಕೃತವಾಗಿರುವ 18 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಇನ್ನು ಮೂರು ಪ್ರಶ್ನೆಗಳಿಗೆ ಮಾತ್ರ ಉತ್ತರ ಬಾಕಿ ಇದೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಮುಂದು...)**

(166) 10.07.2018 12.00 ವೈಎಲ್–ಎಂಡಿ

**ಸಭಾಪತಿಯವರು (ಮುಂದು):–** ಮಾನ್ಯ ಆಯನೂರು ಮಂಜುನಾಥ್‌ರವರೇ, ಯಾವ ವಿಷಯದ ಬಗ್ಗೆ ಮಾತನಾಡಬೇಕೆಂದು ಇದ್ದೀರಿ. ಅದರ ಬಗ್ಗೆ ಮಾತನಾಡಿ.

**ಶ್ರೀ ಸಂದೇಶ್ ನಾಗರಾಜ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾತಿಯವರೇ, ಶೂನ್ಯ ವೇಳೆಯನ್ನು ಮೊದಲು ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರು ಶೂನ್ಯ ವೇಳೆಯನ್ನು ತೆಗೆದುಕೊಳ್ಳಲು ಒಪ್ಪಿದರೆ ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಪ್ಪುವುದಲ್ಲ. ' ಶೂನ್ಯ ವೇಳೆಯ ಪ್ರಸ್ತಾಪವನ್ನು ಮೊದಲು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರನ್ನು ಒಪ್ಪಿಸುವುದಕ್ಕೆ ನಾನು ಯಾರು?

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):–** ಶೂನ್ಯ ವೇಳೆ ಪ್ರಸ್ತಾವ ಮುಗಿದ ಮೇಲೆ ಮಾನ್ಯ ಸದಸ್ಯರ ವಿಚಾರವನ್ನು ತೆಗೆದುಕೊಳ್ಳಿ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಹೌದು. ಶೂನ್ಯ ವೇಳೆಯ ಪ್ರಸ್ತಾವ ಮುಗಿದ ಮೇಲೆ ತೆಗೆದುಕೊಳ್ಳಿ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಡಾ|| ಜಯಮಾಲ ರಾಮಚಂದ್ರ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆ ಒಂದು ನಿಮಿಷ. ದಿನಾಂಕ: 09.07.2018ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆಯವರು ಸದನದಲ್ಲಿಯೇ ಇರುವುದರಿಂದ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

**ಸಭಾಪತಿಯವರು:–** ಯಾವ ಪ್ರಶ್ನೆ? ಈಗ ಅದೆಲ್ಲಾ ಬೇಡ ಬಿಡಿ. ಪ್ರಶ್ನೋತ್ತರ ಅವಧಿ ಮುಗಿದಿದೆ. ಮಾನ್ಯ ಆಯನೂರು ಮಂಜುನಾಥ್‌ರವರೇ ಎರಡು ನಿಮಿಷ ಶೂನ್ಯ ವೇಳೆಯ ಪ್ರಸ್ತಾವವನ್ನು ಮುಗಿಸಿ ಬಿಡೋಣ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:– ಹಾಸನ ಜಿಲ್ಲೆಯ ಸರ್ಕಾರಿ / ಅನುದಾನಿತ ಶಾಲೆಗಳ ಶಿಕ್ಷಕರಿಗೆ ಜಿಲ್ಲಾಧಿಕಾರಿಗಳು ಪರೀಕ್ಷೆ ನಡೆಸಲು ಉದ್ದೇಶಿಸಿರುವ ಬಗ್ಗೆ.**

****

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಹಾಸನ ಜಿಲ್ಲೆಯ ಸರ್ಕಾರಿ / ಅನುದಾನಿತ ಪ್ರೌಢ ಶಾಲೆಗಳ ಶಿಕ್ಷಕರಿಗೆ ದಿನಾಂಕ: 28.07.2018 ರಂದು ಪರೀಕ್ಷೆ ನಡೆಸಲು ಉದ್ದೇಶಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ಇಲಾಖಾ ನಿದೇಶನದಂತೆ, ದಿನಾಂಕ: 8,9,10 ಜುಲೈ 2018 ರಂದು 3 ದಿನಗಳ ಕಾಲ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಹೊಸ ಪಠ್ಯಕ್ರಮ ಸಂಬಂಧ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಶಿಕ್ಷಕರಿಗೆ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ. ಇದರಿಂದ ಶಿಕ್ಷಕರ ಬೋಧನಾ ಕೌಶಲ್ಯ ಹೆಚ್ಚಿಸಿಕೊಳ್ಳುವಲ್ಲಿ ಪರಿಣಾಮಕಾರಿಯಾಗಿರುತ್ತದೆ. ಇದು ಅತ್ಯಂತ ಸ್ವಾಗತಾರ್ಹ. ಸಾರ್ವಜನಿಕ ಶಿಕ್ಷಣ ಇಲಾಖೆಯು ರಾಜ್ಯದಲ್ಲಿ ಏಕರೂಪದ ಬೋಧನೆ, ಪರೀಕ್ಷಾ ಹಾಗೂ ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಂಡಿದ್ದು, ಬೋಧನಾ ಕೌಶಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರದ ತಜ್ಞರ ಅಭಿಪ್ರಾಯ ಪಡೆದು, ಕಾಲಕಾಲಕ್ಕೆ ಹೊಸ ಪಠ್ಯಕ್ರಮ ಜೋಡಣೆ, ತರಬೇತಿ / ಕಾರ್ಯಾಗಾರಗಳನ್ನು ರೂಪಿಸುವ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಸುಧಾರಣೆ ತರಲಾಗುತ್ತಿದೆ. ಶಿಕ್ಷಣ ಇಲಾಖೆಯ ನಿರ್ದೇಶನಗಳನ್ನು ಶಿಕ್ಷಕರು ಸದಾಕಾಲ ಅನುಸರಿಸುತ್ತಾ, ಗುಣಮಟ್ಟದ ಶಿಕ್ಷಣಕ್ಕೆ ಅಪಾರವಾದ ಕೊಡುಗೆಯನ್ನು ನೀಡುತ್ತಾ ಬಂದಿರುತ್ತಾರೆ. ಶಿಕ್ಷಣ ಇಲಾಖೆಯ ನಿಯಮಗಳನ್ನು ಬದಿಗೊತ್ತಿ ಹಾಸನ ಜಿಲ್ಲೆಯ ಶಿಕ್ಷಕರಿಗೆ ಮಾತ್ರ ಪರೀಕ್ಷೆ ನಡೆಸಲು ಹೊರಟಿರುವುದು ಶಿಕ್ಷಕರ ಬೋಧನಾ ಆಸಕ್ತಿಯನ್ನು ಕಡಿಮೆ ಮಾಡುವ ಕ್ರಮವಾಗಿದೆ. ಇದರಿಂದಾಗಿ ಶಿಕ್ಷಕರು ಒತ್ತಡ ಹಾಗೂ ಆತಂಕಕ್ಕೆ ಒಳಗಾಗಿರುತ್ತಾರೆ. ಸರ್ಕಾರ ಕೂಡಲೇ ಶಿಕ್ಷಕರಿಗೆ ಪರೀಕ್ಷೆ ನಡೆಸುವ ನಿರ್ಧಾರವನ್ನು ಕೈಬಿಡುವಂತೆ ಹಾಸನ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ವಿಷಯ:– ಕರ್ನಾಟಕ ಒನ್ ಕಾರ್ಯಕ್ರಮದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡದೇ ಇರುವ ಕುರಿತು.**

****

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇ–ಆಡಳಿತವನ್ನು ಅನುಷ್ಠಾನಕ್ಕೆ ತರುವ ಹಿನ್ನೆಲೆಯಲ್ಲಿ 'ಕರ್ನಾಟಕ ಒನ್' ಕಾರ್ಯಕ್ರಮದ ಮುಖಾಂತರ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರದ ವಿವಿಧ ಸೇವೆಗಳನ್ನು ನೀಡಲು ಸಿಬ್ಬಂದಿಗಳನ್ನು ಒದಗಿಸಲು ಗುತ್ತಿಗೆಯನ್ನು ಕರೆದಿದ್ದು, ಆ

ಗುತ್ತಿಗೆಯನ್ನು ಸಿ.ಎನ್.ಎಸ್. ಎನ್ನುವ ಕಂಪನಿಯು ಪಡೆದಿರುತ್ತದೆ. ಈ ಕಂಪನಿಯ ಅಡಿಯಲ್ಲಿ ಸುಮಾರು 2500ಕ್ಕೂ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಇವರಿಗೆ ರೂ.13,600 ಕನಿಷ್ಠ ವೇತನ ನಿಗದಿಪಡಿಸಲಾಗಿದೆ. ಆದರೆ ಗುತ್ತಿಗೆ ಪಡೆದ ಕಂಪನಿ ಸಿಬ್ಬಂದಿಗಳಿಗೆ ಕೇವಲ ರೂ.6000 ದಿಂದ 7000 ದವರೆಗೆ ವೇತನವನ್ನು ಪಾವತಿಸುತ್ತಿದೆ ಹಾಗೂ ತನ್ನಲ್ಲಿನ ಸಿಬ್ಬಂದಿಗಳಿಗೆ ನೀಡಬೇಕಾದ ಯಾವುದೇ ಸವಲತ್ತು ಹಾಗೂ ಸೌಲಭ್ಯಗಳನ್ನು ನೀಡುತ್ತಿಲ್ಲ. ಕನಿಷ್ಠ ವೇತನ ಹಾಗೂ ಸಿಗುವ ಸವಲತ್ತು ಮತ್ತು ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿದ ಮಂಗಳೂರಿನ 5 ಜನ ಸಿಬ್ಬಂದಿಗಳನ್ನು ಗುತ್ತಿಗೆ ಪಡೆದ ಕಂಪನಿ ಸೇವೆಯಿಂದಲೇ ವಜಾಗೊಳಿಸಿರುತ್ತದೆ. ಇದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ಸಿ.ಎನ್.ಎಸ್. ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಹಾಗೂ ಸಿಗಬೇಕಾದ ಸವಲತ್ತು ಹಾಗೂ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಬೇಕು ಹಾಗೂ ತಮ್ಮ ಹಕ್ಕನ್ನು ಕೇಳಿ ಕೆಲಸದಿಂದ ವಜಾಗೊಂಡಿರುವ ಸಿಬ್ಬಂದಿಗಳನ್ನು ಮರಳಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಇ) ವಿಷಯ:– ಮೈಸೂರು ನಗರದ ನಜರಬಾದ್ ಮೊಹಲ್ಲದ ವಾಣಿ ವಿಲಾಸ ಮೈಸೂರು ಮಾಲ್ ಎಂಬ ವಾಣಿಜ್ಯ ಸಂಕೀರ್ಣಕ್ಕೆ ಬರುವ ಜನರು ಸಾರ್ವಜನಿಕ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.**

****

**ಶ್ರೀ ಸಂದೇಶ ನಾಗರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರು ನಗರದ ನಜರ್‌ಬಾದ್ ಮೊಹಲ್ಲಾದ ವಾಣಿವಿಲಾಸ್ ರಸ್ತೆಯಲ್ಲಿ ಮೈಸೂರು ಮಾಲ್ ಎಂಬ ಬೃಹತ್ ವಾಣಿಜ್ಯ ಸಂಕೀರ್ಣವಿದ್ದು, ಈ ಸಂಕೀರ್ಣದಲ್ಲಿ ನೂರಾರು ವ್ಯಾಪಾರ ಮಳಿಗೆಗಳು, ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳು, ಫುಡ್ ಕೋರ್ಟ್‌ಗಳು, ಬಹು ಸಂಖ್ಯೆಯ ಕೊಠಡಿಗಳುಳ್ಳ ಹೋಟೆಲ್, ಇರುವ ಕಾರಣ ಇಲ್ಲಿಗೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಹಾಗೂ ಶನಿವಾರ ಭಾನುವಾರಗಳಲ್ಲಿ ಸುಮಾರು ಎರಡು ಮೂರು ಸಾವಿರ ಸಾರ್ವಜನಿಕರು ಬರುತ್ತಾರೆ. ಈ ಮಾಲಿಗೆ ಬರುವವರು ಹೆಚ್ಚಾಗಿ ನಾಲ್ಕು ಚಕ್ರದ ವಾಹನಗಳಲ್ಲಿ ಅಂದರೆ ಮುಖ್ಯವಾಗಿ ಕಾರ್‌ಗಳಲ್ಲಿ ಹಾಗೂ ಬೈಕ್ ಮೊದಲಾದ ದ್ವಿಚಕ್ರ ವಾಹನಗಳಲ್ಲಿ ಬರುತ್ತಾರೆ.

ಈ ವಾಣಿಜ್ಯ ಸಂಕೀರ್ಣದಲ್ಲಿ ಇಷ್ಟೊಂದು ಸಂಖ್ಯೆಯ ಕಾರ್‌ಗಳು ಹಾಗೂ ದ್ವಿಚಕ್ರ ವಾಹನಗಳನ್ನು ಪಾರ್ಕಿಂಗ್ ಮಾಡಲು ಅಂದರೆ ನಿಲುಗಡೆ ಮಾಡಲು, ಸೂಕ್ತ ಸ್ಥಳಾವಕಾಶ ಕಲ್ಪಿಸದ ಕಾರಣ, ಈ ವಾಹನಗಳನ್ನು ಪ್ರಮುಖವಾಗಿ ಕಾರ್‌ಗಳಲ್ಲಿ ಬರುವವರು, ಈ ಮೈಸೂರು ಮಾಲ್‌ಗೆ ಹೊಂದಿಕೊಂಡಿರುವ ಅನೇಕ ರಸ್ತೆಗಳಲ್ಲಿ ಹಾಗೂ ಈ ರಸ್ತೆಯಲ್ಲಿರುವ ವಾಸದ ಬಡಾವಣೆಯಲ್ಲಿರುವ ನಿವಾಸಿಗಳ ಮನೆಯ ಮುಂದೆ ಎಲ್ಲೆಂದರಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿ ಹೋಗುತ್ತಿದ್ದರು, ಇದರಿಂದ ಈ ರಸ್ತೆಗಳಲ್ಲಿ ಸುಗಮ ವಾಹನ ಸಂಚಾರಕ್ಕೆ ಅಡೆತಡೆ ಉಂಟಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಟ್ರಾಫಿಕ್ ಜಾಮ್ ಆಗುತ್ತಿದ್ದುದರ ಜೊತೆಗೆ, ಈ ಬಡಾವಣೆಯ ನಿವಾಸಿಗಳು ಮನೆಯೊಳಗೆ ನಿಲ್ಲಿಸುತ್ತಿದ್ದ ತಮ್ಮ ವಾಹನಗಳನ್ನು ಹೊರಗೆ ತೆಗೆಯಲು, ಒಳಗೆ ನಿಲ್ಲಿಸಲು ಕೂಡಾ ತೊಂದರೆ ಆಗುತ್ತಿತ್ತು. ಜೊತೆಗೆ ಮಧ್ಯರಾತ್ರಿ 12 ಘಂಟೆಯವರೆಗೆ ಸಿನಿಮಾ ಬಿಡುವವರೆಗೆ ಇಲ್ಲಿ ವಾಹನಗಳನ್ನು ನಿಲ್ಲಿಸಿ ಈ ಬಡಾವಣೆಯ ನಿವಾಸಿಗಳಿಗೆ ಕಿರಿಕಿರಿ ಉಂಟು ಮಾಡುತ್ತಿದ್ದರು. ಇಲ್ಲಿ ನಿಲುಗಡೆ ಮಾಡಲು ಬರುತ್ತಿದ್ದ ವಾಹನಗಳ ಸದ್ದು ಮತ್ತು ಹೊಗೆಯಿಂದ ಈ ಬಡಾವಣೆಯ ನಿವಾಸಿಗಳ ಮಾನಸಿಕ ನೆಮ್ಮದಿಗೆ, ಈ ಬಡಾವಣೆಯ ಶಾಂತ ವಾತಾವರಣಕ್ಕೆ ಭಂಗ ಬಂದಿತ್ತು.

ಈ ಬಗ್ಗೆ ಈ ಮೈಸೂರು ಮಾಲ್ ವಾಣಿಜ್ಯ ಸಂಕೀರ್ಣದ ಸುತ್ತಮುತ್ತಲ ರಸ್ತೆಗಳಲ್ಲಿರುವ ಬಡಾವಣೆಯ ನಿವಾಸಿಗಳು ಮೈಸೂರು ಮಾಲ್ ಸುತ್ತ ಮುತ್ತ ಇರುವ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧ ಮಾಡಬೇಕೆಂದು ಮುಖ್ಯವಾಗಿ ನಾಲ್ಕು ಚಕ್ರದ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿ, ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅಡೆತಡೆ ಉಂಟು ಮಾಡದಂತೆ, ಸಾರ್ವಜನಿಕರ ಶಾಂತಿಗೆ ಭಂಗ ತರದಂತೆ ಕ್ರಮ ಕೈಗೊಳ್ಳಬೇಕೆಂದು ಸಂಚಾರಿ ಪೊಲೀಸರಿಗೆ, ಮೈಸೂರು ಪೊಲೀಸ್ ಕಮೀಷನರ್ ಅವರಿಗೆ ಲಿಖಿತವಾಗಿ ಹಾಗೂ ಮೌಖಿಕವಾಗಿ ಅನೇಕ ಬಾರಿ ಮನವಿ ಮಾಡಿದರು. ಈ ವಿಚಾರವನ್ನು ಈ ಬಡಾವಣೆಯ ನಿವಾಸಿಗಳು ನನ್ನ ಗಮನಕ್ಕೂ ಕೂಡಾ ತಂದಿದ್ದರು.

ಈ ಬಗ್ಗೆ ನಾನೂ ಕೂಡಾ, ವಿಧಾನ ಪರಿಷತ್ತಿನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಅಂದಿನ ಗೃಹ ಮಂತ್ರಿಗಳ (ಇಂದಿನ ಉಪ ಮುಖ್ಯಮಂತ್ರಿಗಳ) ಗಮನಕ್ಕೂ ತಂದಿದ್ದೆ. ಮಾನ್ಯ ಗೃಹ ಸಚಿವರು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆಯನ್ನು ನೀಡಿದ್ದರು.

**ಈ ಪ್ರಕಾರ 22.01.2012 ರಲ್ಲಿ ಅಂದಿನ ಪೊಲೀಸ್ ಕಮೀಷನರ್ ಅವರು ಒಂದು ಅಧಿಸೂಚನೆಯನ್ನು ಹೊರಡಿಸಿ (ಅಧಿಸೂಚನೆ ಸಂಖ್ಯೆ ಸಿಒಪಿ/ಸಂಚಾರ/72/2011-12)** ಮಾಲ್‌ನಿಂದ 500 ಮೀಟರ್ ಸುತ್ತಳತೆಯಲ್ಲಿರುವ ರಸ್ತೆಗಳಲ್ಲಿ ಎಲ್ಲಾ ಬಗೆಯ ವಾಹನ ನಿಲುಗಡೆಯನ್ನು ನಿಷೇಧಿಸಿ ಆದೇಶ ಹೊರಡಿಸಿರುತ್ತಾರೆ ಹಾಗೂ ನೋ ಪಾರ್ಕಿಂಗ್ ಬೋರ್ಡ್‌ಗಳನ್ನು ಕೂಡಾ ಹಾಕಿರುತ್ತಾರೆ. ಸಂಚಾರಿ ಪೊಲೀಸರು, ಪೊಲೀಸ್ ಕಮೀಷನರ್‌ರವರು ಹೊರಡಿಸಿರುವ ಅಧಿಸೂಚನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಮೇಲ್ಕಂಡ ಐದು ಕಡೆಗಳಲ್ಲಿ ಎಲ್ಲಾ ಬಗೆಯ ವಾಹನ ನಿಲುಗಡೆಯನ್ನು ನಿಷೇಧಿಸಿ, ವಾಹನಗಳ ಸುಗಮ ಸಂಚಾರಕ್ಕೆ ಮತ್ತು ಈ ಬಡಾವಣೆಯ ನಿವಾಸಿಗಳಾದ ಸಾರ್ವಜನಿಕರ ನೆಮ್ಮದಿಗೆ ಸೂಕ್ತ ಕ್ರಮವನ್ನು ಕೈಗೊಂಡಿದ್ದರು.

ಈ ಬಡಾವಣೆಯ ನಿವಾಸಿಗಳು ಪೊಲೀಸರು ಕೈಗೊಂಡ ಕ್ರಮವನ್ನು ಮೆಚ್ಚಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿರುತ್ತಾರೆ. ಈ ರೀತಿ ವಾಹನ ನಿಲುಗಡೆ ನಿಷೇಧ ಮಾಡಿದ್ದರಿಂದ ಸಾರ್ವಜನಿಕ ಸಂಚಾರಕ್ಕೆ ಅನುಕೂಲವಾಗಿತ್ತು. ಟ್ರಾಫಿಕ್ ಜಾಮ್ ಕೂಡಾ ತಪ್ಪಿತ್ತು. ನಿವಾಸಿಗಳ ಮನೆಯ ಮುಂದೆ ವಾಹನ ನಿಲ್ಲಿಸುವುದೂ ತಪ್ಪಿ ಬಡಾವಣೆಯಲ್ಲಿ ಶಾಂತಿಯುತ ವಾತಾವರಣ ನೆಲೆಸಿತ್ತು.

ಎರಡು ಮೂರು ವರ್ಷಗಳಿಂದ ಈ ಸುವ್ಯವಸ್ಥೆ ಚೆನ್ನಾಗಿ ನಡೆದುಕೊಂಡು ಬಂದು, ವಾಹನಗಳ ಸುಗಮ ಸಂಚಾರಕ್ಕೆ ಬಡಾವಣೆಯ ನಿವಾಸಿಗಳ ನೆಮ್ಮದಿಗೆ ಕಾರಣ ಆಗಿತ್ತು. ಆದರೆ ಈಗ್ಗೆ ಎರಡು ಮೂರು ದಿನಗಳ ಹಿಂದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದೆರಡು ವಾರ್ತಾ ವಾಹಿನಿಗಳಲ್ಲಿ, ಈ ವಾಹನ ನಿಲುಗಡೆ ನಿಷೇಧದ ಬಗ್ಗೆ, ಒಂದು ವಾರ್ತೆ ಪ್ರಸಾರವಾಯಿತೆಂದು ಹೇಳಿ, ಈ ಮೇಲ್ಕಂಡ ಅಧಿಸೂಚನೆಯ ಪ್ರಕಾರ ವಾಹನ ನಿಲುಗಡೆಯನ್ನು ನಿಷೇಧಿಸಿರುವ ಸ್ಥಳಗಳಲ್ಲಿ ಮತ್ತೆ ವಾಹನಗಳ ನಿಲುಗಡೆಗೆ ಸಂಚಾರಿ ಪೊಲೀಸರು ಅವಕಾಶ ಮಾಡಿಕೊಟ್ಟಿರುತ್ತಾರೆ.

ಈಗ ಮತ್ತೆ ವಾಹನಗಳನ್ನು ಮೇಲ್ಕಂಡ ಅಧಿಸೂಚಿತ ನಿಷೇಧಿತ ಸ್ಥಳಗಳಲ್ಲಿ ಅಂದರೆ ನೋ ಪಾರ್ಕಿಂಗ್ ಜೋನ್‌ನಲ್ಲಿ ಅಡ್ಡಾದಿಡ್ಡಿಯಾಗಿ, ನಿವಾಸಿಗಳ ಮನೆಗಳ ಮುಂದೆ, ಎಲ್ಲೆಂದರಲ್ಲಿ, ಬೆಳಗಿನಿಂದ ರಾತ್ರಿ 12–1 ಘಂಟೆಯವರೆಗೆ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ, ಸ್ಥಳೀಯ ನಿವಾಸಿಗಳ ನೆಮ್ಮದಿಗೆ ಭಂಗ ಉಂಟಾಗಿರುತ್ತದೆ ಹಾಗೂ ವಾಹನ ಸಂಚಾರ ಅವ್ಯವಸ್ಥೆ ಉಂಟಾಗಲು ಕಾರಣವಾಗಿದೆ. ಈ ಬಗ್ಗೆ ಸ್ಥಳೀಯ ನಿವಾಸಿಗಳು ಮತ್ತೆ ಪ್ರತಿಭಟಿಸಿದ್ದಾರೆ. ಈ ವಿಚಾರ ಕೆಲವು ಪತ್ರಿಕೆಗಳಲ್ಲೂ ಕೂಡಾ ವರದಿಯಾಗಿರುತ್ತದೆ.

ಆದಕಾರಣ ತಾವು, ದಯಮಾಡಿ ಈ ಬಗ್ಗೆ ಪರಿಶೀಲಿಸಿ, ಈ ಮೊದಲು ಮೈಸೂರು ಮಾಲ್ ಸುತ್ತಮುತ್ತಲ ರಸ್ತೆಗಳಲ್ಲಿ ಎಲ್ಲೆಲ್ಲಿ ಎಲ್ಲಾ ಬಗೆಯ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತೋ, ಆ ರಸ್ತೆಗಳಲ್ಲಿ, ಆ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡದೇ ಇರುವಂತೆ ಹಾಗೂ ಮುಖ್ಯವಾಗಿ ವಾಹನ ನಿಲುಗಡೆಯಿಂದ ಈ ಬಡಾವಣೆಯ ನಿವಾಸಿಗಳಾದ ಸಾರ್ವಜನಿಕರ ನೆಮ್ಮದಿಗೆ ಭಂಗ ತಾರದಂತೆ ನೋಡಿಕೊಳ್ಳಲು, ಮೈಸೂರು ಪೊಲೀಸ್ ಕಮೀಷನರ್‌ರವರಿಗೆ ಹಾಗೂ ಸಂಚಾರಿ ಪೊಲೀಸರಿಗೆ ನಿರ್ದೇಶನ ನೀಡಬೇಕೆಂದು, ಈ ಮೂಲಕ ಸಾರ್ವಜನಿಕರ ನೆಮ್ಮದಿಗೆ ಹಾಗೂ ಈ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಹಾಗೂ ಮೈಸೂರಿನಲ್ಲಿ ಗೃಹ ಸಚಿವರು ಈ ಬಗ್ಗೆ ಸಭೆಯನ್ನು ಮಾಡಿದ್ದಾರೆ.

**ಸಭಾಪತಿಯವರು:–** ಸಾಕು. ಮಾನ್ಯ ಗೃಹ ಸಚಿವರು ಉತ್ತರವನ್ನು ನೀಡುತ್ತಾರೆ.

(ಮುಂದು) . . .

(167)/10.07.2018/12.10/ಎಸ್‌ಕೆ–ಎಂಡಿ

**ಡಾ॥ ಜಿ. ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿ ‘ಮೈಸೂರ್ ಮಾಲ್’ನ್ನು ಕಟ್ಟಿದ್ದಾರೆ. ಇದನ್ನುಕಟ್ಟುವುದಕ್ಕೆ, ಇವರಿಗೆ ಯಾವ ರೀತಿ ಅನುಮತಿ ಕೊಟ್ಟಿದ್ದಾರೆ. ಇಂತಹ ಮಳಿಗೆಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ಮೈಸೂರಿನ ಕಾರ್ಪೋರೇಷನ್‌ವರು ಇಂತಿಷ್ಟು ವಾಹನಗಳನ್ನು ನೀವು ನಿಲ್ಲಿಸಿಕೊಳ್ಳಬೇಕು ಎಂದು ಅವರಿಗೆ ಅನುಮತಿಯನ್ನು ಕೊಟ್ಟಿರುತ್ತಾರೆ. ಒಂದು ವೇಳೆ ಅದರಲ್ಲಿ ಏನಾದರೂ ತಪ್ಪಾಗಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇಷ್ಟೊಂದು ವಾಹನಗಳನ್ನು ಆ ಮಾಲ್‌ನ ಒಳಗಡೆಯೇ ನಿಲ್ಲಿಸಬೇಕಾಗುತ್ತದೆ. ಆ ಮಾಲ್‌ನ ಸುತ್ತಮುತ್ತ Residential Area ದಲ್ಲಿ ವಾಹನಗಳನ್ನು ನಿಲ್ಲಿಸುವುದಕ್ಕೆ ಅವಕಾಶವಿಲ್ಲ. ಈ ಹಿಂದೆ ನಾನು ಗೃಹಮಂತ್ರಿಯಾಗಿದ್ದಾಗ, ಮಾನ್ಯ ಸದಸ್ಯರಾದ ಸಂದೇಶ ನಾಗರಾಜ್‌ರವರು ಇಂತಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆಯನ್ನು ಕೇಳಿದ್ದರು. ನಾನು, ಅಂದಿನ ಪೊಲೀಸ್ ಕಮೀಷನ್‌ರವರಿಗೆ ಮತ್ತು ಸಂಚಾರಿ ಪೊಲೀಸ್‌ನವರಿಗೆ Residential Area ಸುತ್ತಮುತ್ತ ವಾಹನಗಳನ್ನು ನಿಲ್ಲಿಸುವಂಥದ್ದನ್ನು ತೆರವು ಮಾಡುವುದಕ್ಕೆ ಆದೇಶ ಕೊಟ್ಟಿದ್ದೆ. ಮತ್ತು ಇದು ಯಾವ ಟಿವಿ ಚಾನೆಲ್‌ಗಳಲ್ಲಿ, ಸುದ್ದಿ ವಾಹಿನಿಯಲ್ಲಿ ಬಂದಿದೆ ಎಂಬುದು ನನಗೆ ಗೊತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಯವರೇ ಅದನ್ನು ಕೇಳಿಕೊಂಡು ಹೇಳಿ.

**ಡಾ॥ ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ನಾನು ಖಂಡಿತವಾಗಿ, ಮತ್ತೆ ಮೈಸೂರಿನ ಪೊಲೀಸ್ ಕಮೀಷನರ್‌ರವರಿಗೆ ಮತ್ತು ಸಂಚಾರಿ ಪೊಲೀಸ್‌ನವರಿಗೆ ಅದನ್ನು ತೆರವುಗೊಳಿಸುವುದಕ್ಕೆ ಸೂಕ್ತವಾದ ಆದೇಶವನ್ನು ಮಾಡುತ್ತೇನೆ. Residential Area ದ ಸುತ್ತಮುತ್ತಲಿನವರಿಗೆ ಬಹಳ ತೊಂದರೆಯಾಗುತ್ತದೆ. ಅದನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಈ) ವಿಷಯ: ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಇದ್ದರೂ ಅನ್ಯ ಇಲಾಖೆಗಳು ಆದೇಶ ಹೊರಡಿಸುತ್ತಿರುವ ಬಗ್ಗೆ.

------

**ಶ್ರೀ ಪ್ರದೀಪ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಲ್ಲಿ ಗ್ರಾಮ ಸರ್ಕಾರವಾದ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧವಾದ ಅಧಿಕಾರವನ್ನು ನೀಡಿದೆ. ಕಾಯ್ದೆಯ ಪ್ರಕರಣ 64 ರಿಂದ 68ವರೆಗಿನ ಪ್ರಕರಣ ಗ್ರಾಮ ಪಂಚಾಯಿತಿಗಳಿಗೆ ಲೈಸೆನ್ಸ್ ನೀಡುವ ಅಧಿಕಾರವನ್ನು ನೀಡಿದೆ. ಈ ಅಧಿಕಾರದಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯೊಳಗಿನ ವಾಣಿಜ್ಯ ಉದ್ದಿಮೆ, ಹೋಟೆಲ್, ಕಾರ್ಖಾನೆಗಳಿಗೆ ಲೈಸೆನ್ಸ್‌ನ್ನು ನೀಡುವ ಪರಮೋಚ್ಛ ಅಧಿಕಾರವನ್ನು ಗ್ರಾಮ ಪಂಚಾಯಿತಿಗೆ ನೀಡಿದ್ದಾಗಿಯೂ, ಕೆಲವೊಮ್ಮೆ ಅನ್ಯ ಇಲಾಖೆಯ ಅಧಿಕಾರಿಗಳ ಪ್ರಮಾದದಿಂದ ಪಂಚಾಯತ್‌ರಾಜ್ ಕಾಯ್ದೆಯಲ್ಲಿ ನೀಡಿದ ಶಾಸನಬದ್ಧ ಅಧಿಕಾರವನ್ನು ಮೊಟಕುಗೊಳಿಸಿದೆ. ಇದಕ್ಕೆ ಉದಾಹರಣೆ ಎಂಬಂತೆ, ದಿನಾಂಕ: 06.11.2015ರಂದು ಅಬಕಾರಿ ಆಯುಕ್ತರ ನ್ಯಾಯಾಲಯವು ಅಪೀಲ್ ಸಂಖ್ಯೆ: ಇಸಿಎಸ್/271 ಎಪಿಪಿ 2015ರಲ್ಲಿ ಒಮ್ಮೆ ಅಬಕಾರಿ ಇಲಾಖೆಯು ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸ್ ನೀಡಿದ ನಂತರ ಸ್ಥಳೀಯ ಆಡಳಿತದಿಂದ ಉದ್ದಿಮೆ ಪರವಾನಿಗೆ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದು ತನ್ನ ಆದೇಶದಲ್ಲಿ ತಿಳಿಸಿದ್ದಾರೆ.

ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಮತ್ತು ಕಾಯ್ದೆಗೆ ರೂಪಿಸಿದ ಹಲವಾರು ನಿಯಮಗಳು ಶಾಸನಬದ್ಧವಾಗಿ ಮಾನ್ಯತೆಯನ್ನು ಪಡೆದಂತಹ ಕಾಯ್ದೆಯಾಗಿರುತ್ತದೆ. ಕಾಯ್ದೆಯಲ್ಲಿನ ಆಶಯಗಳನ್ನು ಅನ್ಯ ಇಲಾಖೆಯ ಅಧಿಕಾರಿಗಳು ಕೇವಲ ಆದೇಶವನ್ನು ಹೊರಡಿಸಿ, ಕಾಯ್ದೆಯನ್ನು ಉಲ್ಲಂಘಿಸುತ್ತಿರುವುದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಆದುದರಿಂದ, ಈ ವಿಚಾರವಾಗಿ ಮಾನ್ಯ ಅಬಕಾರಿ ಸಚಿವರ ಗಮನ ಸೆಳೆಯ ಬಯಸುತ್ತೇನೆ. ವಂದನೆಗಳು.

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು 2015ನೇ ಸಾಲಿನಲ್ಲಿ ನಡೆದಂತಹ ಘಟನೆಯನ್ನು ನಿರ್ದಿಷ್ಟವಾಗಿ ಉಲ್ಲೇಖ ಮಾಡಿ, ಅವರು ಮಾತನಾಡಿದ್ದಾರೆ. ಅದರ ಬಗ್ಗೆ ಅಬಕಾರಿ ಇಲಾಖೆಯಿಂದ ಉತ್ತರವನ್ನು ತರಿಸಿಕೊಡುತ್ತೇವೆ. ಇದರಜೊತೆಗೆ ನಮ್ಮ ಗ್ರಾಮ ಸ್ವರಾಜ್ ಕಾಯ್ದೆಗೆ ಅನ್ವಯಿಸುವುದರಿಂದ, ಆ ಪ್ರಕರಣಕ್ಕೆ ನಾನು ಕೂಡ ಉತ್ತರವನ್ನು ಕೊಡುತ್ತೇನೆ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಂಕನೂರವರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನನ್ನ ಮಾತನ್ನು ಒಂದು ನಿಮಿಷ ಕೇಳಿ. ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಸಂಕನೂರ್‌ರವರು ಮಾತನಾಡಿ.

**ಶ್ರೀ. ಎಸ್.ವ್ಹಿ. ಸಂಕನೂರ (ಪದವೀಧರರಕ್ಷೇತ್ರ):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಲ್ಲಿ ಏನಾಗಿದೆ ಎಂದರೆ, ...

**(ಗೊಂದಲ)**

**ಸಭಾಪತಿಯವರು:–**ದಯವಿಟ್ಟು, ಒಂದು ನಿಮಿಷ ನನ್ನ ಮಾತನ್ನು ಕೇಳಿ. ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ಇಲ್ಲಿ ಕೆಲವು ನಿಯಮಗಳು ಇರುತ್ತವೆ. ಆ ನಿಯಮಗಳನ್ನು ಪದೇ ಪದೇ ಮುರಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ನಾನು ನಿಯಮಗಳನ್ನು ಮುರಿಯುತ್ತಿಲ್ಲ. ...

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ನೀವು ನಮ್ಮ ನಿರ್ದೇಶನಗಳನ್ನು ಕೇಳುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ...ಇಡೀ ರಾಜ್ಯದಲ್ಲಿ ನಮ್ಮ ಸಮಸ್ಯೆಗಳನ್ನು ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಸಭಾಪತಿಯವರು:–**ಇವರಿಗೆ ಏನು ಹೇಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ನೋಡಿ ಇದು ಸರಿಯಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಡಾ॥ ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ನೀವು ವಿರೋಧ ಪಕ್ಷದ ನಾಯಕರಾಗಿ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಇದು ಸರಿಯಲ್ಲ. ನೀವು ನಿಯಮಗಳನ್ನು ಅನಸರಿಸಬೇಕೋ ಅಥವಾ ಬೇಡವೋ ಎಂದು ಹೇಳುತ್ತೀರಾ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಅಲ್ಲಿರುವಂತಹ ...

**(ಗೊಂದಲ)**

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಬೇರೆಯವರಿಗೆ ಮಾತನಾಡುವುದಕ್ಕೆ ಕೊಡಬೇಕಾ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಅಲ್ಲಿರುವಂತಹ ಸಮಸ್ಯೆಗಳು

**(ಗೊಂದಲ)**

**ಸಭಾಪತಿಯವರು:–**ನೀವು ತಿಳುವಳಿಕೆ ಇದ್ದವರು.

**(ಗೊಂದಲ)**

**ಡಾ. ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಆ ವಿಚಾರ ಪ್ರಸ್ತಾಪ ಮಾಡುವಂತಹದ್ದಲ್ಲ.

**(ಗೊಂದಲ)**

**ಸಭಾಪತಿಯವರು:–**ಅವರು ಹೇಳಿದ್ದನ್ನು ತಿಳಿದುಕೊಳ್ಳಬೇಕಲ್ಲ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಅವರಿಗೂ ಅವಕಾಶವನ್ನು ಕೊಟ್ಟಿದ್ದೀರಿ. ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡು ಬನ್ನಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಇನ್ನೂ ಎರಡು ದಿವಸ ಸದನ ನಡೆಸುವುದು. ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನಾನು ಪೀಠಕ್ಕೆ ಗೌರವವನ್ನು ಕೊಟ್ಟು, ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಅದನ್ನು ಬಿಡಿ. ಮಾನ್ಯ ಸಂಕನೂರರವರೇ ನೀವು ಮಾತನಾಡಿ.

ಉ) ವಿಷಯ: ಗದುಗಿನ ತೋಂಟದಾರ್ಯ ಮಠದ ಆವರಣಕ್ಕೆ ಹೊಂದಿಕೊಂಡ ಮದ್ಯದ ಅಂಗಡಿಗಳ ನವೀಕರಣಕ್ಕೆ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.

\------

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, "ಗದುಗಿನ ತೋಂಟದಾರ್ಯ ಮಠದ ಆವರಣಕ್ಕೆ ಹೊಂದಿಕೊಂಡ ಮದ್ಯದ ಅಂಗಡಿಗಳ ನವೀಕರಣಕ್ಕೆ ವಿರೋಧ", "ಬಾರ್ ಹಠಾವೋ ಮಠ ಬಚಾವೋ" ಎಂಬ ಶೀರ್ಷಿಕೆಗಳ ಅಡಿಯಲ್ಲಿ ಇತ್ತೀಚೆಗೆ ಪ್ರಜಾವಾಣಿ, ವಿಜಯವಾಣಿ, ವಿಜಯಕರ್ನಾಟಕ, ಕನ್ನಡ ಪ್ರಭ, ವಿಶ್ವವಾಣಿ, ಉದಯವಾಣಿ ಇನ್ನೂ ಹಲವು ಮುಂತಾದ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ತಿರಂಗಾ ಸಂಘಟನೆಯವರು ಹಾಗೂ ಸಾರ್ವಜನಿಕರು ತೋಂಟದಾರ್ಯ ಮಠದ ಆವರಣಕ್ಕೆ ಹೊಂದಿಕೊಂಡಿರುವ 6 ಬಾರ್ ಮತ್ತು ರೆಸ್ಟೋರೆಂಟ್‌ಗಳ ಪರವಾನಿಗಿ ನವೀಕರಿಸಬಾರದು ಎಂದು ಆಗ್ರಹಿಸಿ ಸಿದ್ದಲಿಂಗ ಮಹಾ ಸ್ವಾಮೀಜಿಯವರ ನೇತೃತ್ವದಲ್ಲಿ ನಗರದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವರು. ತೋಂಟದಾರ್ಯ ಮಠದ ಸುತ್ತಮುತ್ತ ಜನ ವಸತಿ ಪ್ರದೇಶವಿದ್ದು, ಹೆಣ್ಣು ಮಕ್ಕಳ ಹಾಸ್ಟೆಲ್, ಕಲಾಮಂದಿರ, ಕಾಲೇಜ್, ಮದುವೆ ಮಂಟಪಗಳು ಇದ್ದು, ಇಂತಹ ಪ್ರದೇಶದಲ್ಲಿ ಮದ್ಯದ ಅಂಗಡಿಗಳು ಇರಬಾರದು ಎಂಬ ನಿಯಮ ಇದೆ. ಹೀಗಿದಾಗ್ಯೂ ಕೂಡ, ಈ ಭಾಗದಲ್ಲಿ ಮದ್ಯದ ಅಂಗಡಿಗಳು ಹೆಚ್ಚಾಗಿದ್ದು, ಕುಡುಕರ ಮತ್ತು ಕಿಡಿಗೇಡಿಗಳ ಹಾವಳಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಕಷ್ಟು ಹೆಚ್ಚಾಗಿದೆ. ಇದರಿಂದಾಗಿ ಈ ಭಾಗದಲ್ಲಿಯ ಹೆಣ್ಣು ಮಕ್ಕಳು ತಲೆ ಎತ್ತಿಕೊಂಡು ಓಡಾಡುವುದು ಬಹಳ ಕಷ್ಟಕರವಾಗಿರುತ್ತದೆ. ಇಲ್ಲಿಯ ಮದ್ಯದ ಅಂಗಡಿಗಳ ಮಾಲೀಕರ ವಿರುದ್ಧ ಕಳೆದ 5 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಸಂಘಟನೆಗಳಿಗೆ ಮತ್ತು ಸಾರ್ವಜನಿಕರಿಗೆ ಇದುವರೆಗೂ ನ್ಯಾಯ ಸಿಕ್ಕಿರುವುದಿಲ್ಲ.

ಈ ಕುರಿತು ಜಿಲ್ಲಾಧಿಕಾರಿಗಳು ಇಲ್ಲಿಯ ಮದ್ಯದ ಅಂಗಡಿಗಳ ಮಾಲೀಕರಿಗೆ ಬೇರೆ ಬೇರೆ ಸ್ಥಳಗಳಿಗೆ ಸ್ಥಳಾಂತರಿಸಬೇಕೆಂಬ ಕರಾರಿಗೆ ಒಳಪಟ್ಟು, 2017–18ನೇ ಸಾಲಿಗೆ ನವೀಕರಣ ಮಾಡಿದ್ದುಂಟು. ಇತ್ತೀಚೆಗೆ ಹೈಕೋರ್ಟ್ ಪೀಠ, ಧಾರವಾಡ ಮದ್ಯದ ಅಂಗಡಿಗಳಿಗೆ ಪರವಾನಿಗಿ ನೀಡಬೇಕಾದ ಸಮಯದಲ್ಲಿ ಮತ್ತು ನವೀಕರಣ ಮಾಡುವ ಸಂದರ್ಭದಲ್ಲಿ ಕರ್ನಾಟಕ ಅಬಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಮುಂದಿನ ಕ್ರಮ ಕೈಗೊಳ್ಳಲು, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಇವರಿಗೆ ನಿರ್ದೇಶನ ನೀಡಿದ್ದುಂಟು. ಇದೂ ಅಲ್ಲದೇ ಗದಗ, ಬೆಟಗೇರಿ ನಗರಸಭೆಯವರು ಮದ್ಯದ ಅಂಗಡಿ ಮಾಲೀಕರಿಗೆ ಅನಧಿಕೃತವಾಗಿ ಕಟ್ಟಡ ಕಾಮಗಾರಿ ಮಾಡಿ ಹೋಟೆಲ್ ಉದ್ದಿಮೆ ನಡೆಸುತ್ತಿರುವವರಿಗೆ ಅವುಗಳನ್ನು ತೆರವುಗೊಳಿಸಲು ಕೂಡ ಸೂಚನೆ ನೀಡಿದ್ದುಂಟು.

ಈ ಎಲ್ಲಾ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನುಬಾಹಿರವಾಗಿ ಪ್ರಾರಂಭವಿರುವ ಬಾರ್ ಅಂಗಡಿಗಳನ್ನು ನವೀಕರಣ ಮಾಡಬಾರದು ಮತ್ತು ಮದ್ಯದ ಅಂಗಡಿಗಳ ಪರವಾನಿಗಿ ರದ್ದು ಮಾಡಲು ಅಬಕಾರಿ ಸಚಿವರಿಗೆ ಈ ಸದನದ ಮೂಲಕ ಅವರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಮಾತನಾಡಿ.

**ಡಾ. ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಮಂಜುನಾಥ್‌ರವರೇ ಮಾತನಾಡಿ.

**ಶ್ರೀ ಆರ್. ವಿ. ದೇಶಪಾಂಡೆ (ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮತ್ತೊಂದು...

**ಸಭಾಪತಿಯವರು:–** ಒಂದು ನಿಮಿಷ.

**5. ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಕ್ಕೆ ಸಚಿವರಿಂದ ಹೇಳಿಕೆ.**

ವಿಷಯ: ಮೈಸೂರು–ತಲಚೇರಿ ರೈಲು ಮಾರ್ಗಕ್ಕೆ ಜಿಲ್ಲೆಯಾದ್ಯಂತ ತೀವ್ರ ವಿರೋಧ ಕಂಡು ಬಂದು ಪ್ರತಿಭಟನೆ ನಡೆಸಿರುವ ಬಗ್ಗೆ.

----

**ಡಾ. ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ಪಿ. ಸುನೀಲ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸುಬ್ರಮಣಿಯವರು ದಿನಾಂಕ:09.07.2018 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ನಾನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಿದೆ)

**ಸಭಾಪತಿಯವರು:–** ಮಾನ್ಯಆರ್. ವಿ. ದೇಶಪಾಂಡೆರವರು ಏನು ಹೇಳಬೇಕೆಂದಿದ್ದೀರಲ್ಲಾ ಏನು ಹೇಳಿ.

**ಶ್ರೀ ಆರ್. ವಿ. ದೇಶಪಾಂಡೆ (ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತುಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮುಖ್ಯಮಂತ್ರಿಯವರ ಪರವಾಗಿ ಉತ್ತರವನ್ನು ನೀಡಲಾಗಿದೆ. ಈ ಪ್ರಶ್ನೆ ಪುನಃ ಪುನಃ ಏಕೆ ಬರುತ್ತದೆಂದು ಗೊತ್ತಿಲ್ಲ.

**ಸಭಾಪತಿಯವರು:–** ಅವರಿಗೆ ಉತ್ತರವನ್ನು ಕೊಟ್ಟುಬಿಟ್ಟಿದ್ದೀರಾ.

**ಶ್ರೀ ಆರ್. ವಿ. ದೇಶಪಾಂಡೆ:–**ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಉತ್ತರವನ್ನು ಕೊಟ್ಟುಬಿಟ್ಟಿದ್ದೇನೆ. ಅವರಿಗೆ ಸ್ಪಷ್ಟಪಡಿಸಬೇಕು. ಈ ಇಲಾಖೆಯ ಜವಾಬ್ದಾರಿ ಮೊದಲು ನನ್ನ ಬಳಿ ಇತ್ತು. ಆಗ ಸ್ಪಷ್ಟವಾಗಿ ಮೈಸೂರು–ತಲಚೇರಿ railway lane ಆಗುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದೇನೆ. ಏಕೆಂದರೆ ಅಲ್ಲಿ Elephant Corridor ಇದೆ. ಮಾನವ ಮತ್ತು ಆನೆಗಳ ಸಂಘರ್ಷ ಆಗುವ ಸಂಭವ ಇದೆ. ಪರಿಸರ ಸಂರಕ್ಷಣೆಯಾಗಬೇಕಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇರಳ ರಾಜ್ಯ ಈ ಬಗ್ಗೆ insist ಮಾಡುತ್ತಿದೆ. ಕೇರಳ ಮತ್ತು ನಮ್ಮ ರಾಜ್ಯದ Chief Secretary ಗಳ ಎರಡು ಸಭೆಗಳಾಗಿವೆ. ನಾವು ಅವುಗಳನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ, ಅವರು ಸರ್ವೆ ಮಾಡಿ ಎಂದು ಹೇಳಿದಾಗ, ನಿಮ್ಮ proposal ಏನು ಹೇಳಿ ಎಂದು ಹೇಳಿದ್ದೇವೆ. ಆ proposal ಇನ್ನೂ ಬಂದಿಲ್ಲ.

(ಮುಂದು...)

**(168) 10–07–2018 ಟಿಸಿಹೆಚ್:ಎಕೆ 12–20**

**ಶ್ರೀ ಆರ್.ವಿ.ದೇಶಪಾಂಡೆ (ಮುಂದು):–**

ಕೆಲವು ದಿವಸಗಳ ಹಿಂದೆ ನಾನು ಕೊಡಗಿನಲ್ಲಿ ಇದ್ದಾಗಲೂ ಸಹ ಜನ ಪ್ರತಿನಿಧಿಗಳು ಈ ಪ್ರಶ್ನೆಯನ್ನು ಕೇಳಿದರು. ಇದರ ಬಗ್ಗೆ ಪತ್ರಕರ್ತರು ಕೇಳಿದಾಗ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಅಪ್ರೋಚ್ ಬಹಳ ಕ್ಲಿಯರ್ ಇದೆ. ಇದರಿಂದ ಕೊಡಗಿಗೆ ಆಗಲೀ, ಮೈಸೂರಿಗೆ ಆಗಲೀ ಹಾನಿ ಹೆಚ್ಚಿದೆ ವಿನಃ ಇದರಿಂದ ಏನೂ ಉಪಯೋಗವಿಲ್ಲ. ಎಷ್ಟು ಕಾಸ್ಟ್ ಇದೆಯೆಂದು ಎಲ್ಲರಿಗೂ ಗೊತ್ತಿದೆ. ಈ ಕಾಸ್ಟ್‌ಗಿಂತ ಮುಖ್ಯವಾಗಿ environment, ecology, forest life ಇದೆಲ್ಲವೂ ಪ್ರೊಟೆಕ್ಟ್ ಆಗಬೇಕು. ಆಗಲೇ ಕೇರಳದವರು ಇದರ ಬಗ್ಗೆ ಸರ್ವೇ ಮಾಡುತ್ತಿದ್ದಾರೆಂದು ಹೇಳಿದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲವು ಬಾರಿ ಈ ರೀತಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಹೇಳಿದೆನು, "ಆ ರೀತಿ ಆಗಿದ್ದರೆ immediately take action against them." ಹಾಗಾಗಿ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಸರ್ಕಾರ ಯಾವುದೇ ಅನುಮತಿಯನ್ನು ಕೊಟ್ಟಿಲ್ಲ. ಮುಂದೆ ಅನುಮತಿ ಕೊಡುವ ಸಂಭವವೂ ಇಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

**6. ಸಭಾಪತಿಯವರ ಮತ್ತು ಉಪ ಸಭಾಪತಿಯವರ ಚುನಾವಣೆ ಬಗ್ಗೆ**

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಸದನದಲ್ಲಿ ಮಾನ್ಯ ಸಭಾಪತಿಯವರ ಸ್ಥಾನ, pro tem Speaker ಆಯ್ಕೆ ಇತ್ಯಾದಿ ಬಗ್ಗೆ ಬಹಳ ಗಂಭೀರವಾದಂತಹ ಚರ್ಚೆ ನಡೆಯಿತು. ಆ ಚರ್ಚೆ ನಿಯಮಾವಳಿಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆ ಚರ್ಚೆ ಬಹಳ ಹೊತ್ತು ನಡೆದು ಸದನದಲ್ಲಿ ಒಂದು ಇತ್ಯರ್ಥಕ್ಕೆ ಬಂದಿತ್ತು.

**ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ಇದು ಶೂನ್ಯವೇಳೆಯೇ?

**ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ರೇವಣ್ಣನವರೇ, ಇದು ಶೂನ್ಯವೇಳೆ ಅಲ್ಲ. ಮಾನ್ಯ ಸಭಾಪತಿಯವರು ನಾನು ಮಾತನಾಡಲು ಅನುಮತಿ ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಯಾವ ರೂಪದಲ್ಲಿ ಮಾನ್ಯ ಆಯನೂರು ಮಂಜುನಾಥ್‌ರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ ಎಂಬುದನ್ನು ದಯಮಾಡಿ ತಿಳಿಸಬೇಕು.

**ಸಭಾಪತಿಯವರು:–** ಮಾನ್ಯ ಹೆಚ್.ಡಿ.ರೇವಣ್ಣನವರೇ, ನಾನು ಹೇಳುವುದೇನೆಂದರೆ, ಮಾನ್ಯ ಆಯನೂರು ಮಂಜುನಾಥ್‌ರವರು ನನಗೆ ಯಾವುದೇ ರೀತಿಯಲ್ಲಿ ನೋಟಿಸ್ ಕೊಟ್ಟಿಲ್ಲ. ಅವರು ಯಾವ ವಿಷಯದ ಬಗ್ಗೆ ಮಾತನಾಡುತ್ತಾರೆಂದು ನನಗೆ ಗೊತ್ತಿಲ್ಲ. ಈ ಹಿಂದೆ ಸದನದಲ್ಲಿ ಒಮ್ಮೆ ಈ ವಿಷಯದ ಬಗ್ಗೆ raise ಮಾಡಿದ್ದರು. ಅವರು ಪ್ರಶ್ನೋತ್ತರ ಅವಧಿಗಿಂತ ಮೊದಲು ಪ್ರಸ್ತಾಪ ಮಾಡಿದ್ದರು. ಏನು ವಿಷಯವೆಂಬುದು ನನಗೆ ಗೊತ್ತಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವುದೇನೆಂದರೆ, ಯಾವ ರೂಪದಲ್ಲಿ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಲು ಅವಕಾಶ ಕೊಟ್ಟಿದ್ದೀರೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ ನಿಯಮಾವಳಿ ಅಡಿಯಲ್ಲಿ ಅನುಮತಿ ಕೊಟ್ಟಿದ್ದೀರೆಂದು ಕೇಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾವ ನಿಯಮಾವಳಿ ಅಡಿಯಲ್ಲಿ ಯಾವ ಸೂಚನೆ ಮೇರೆಗೆ ಈ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರೆಂದು ದಯಮಾಡಿ ಸದನಕ್ಕೆ ತಿಳಿಯಪಡಿಸಬೇಕು.

(ಗೊಂದಲ)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅನುಮತಿ ಕೊಟ್ಟಿದ್ದಾರೆ. ಅದನ್ನು ಪ್ರಶ್ನೆ ಮಾಡುವಂತಹ ಅಧಿಕಾರ ಯಾರಿಗೆ ಇದೆ?

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಾರಂಭದಲ್ಲಿ ನೀವು ಏನಾದರೂ ಪತ್ರ ಕೊಟ್ಟಿದ್ದೀರಾ ಎಂದು ನೀವು ಕೇಳಿದ್ದೀರಿ. ಅದಕ್ಕೆ ಅವರು ಏನೂ ಪತ್ರ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರಾದ ಶ್ರೀ ಹೆಚ್.ಡಿ.ರೇವಣ್ಣನವರು ಏನು ಕೇಳಿದರೆಂದರೆ, ಯಾವ ನಿಯಮಗಳಡಿ ಅವರಿಗೆ ಅವಕಾಶ ಕೊಟ್ಟಿದ್ದೀರೆಂದು ಕೇಳಿದರು. ಅದಕ್ಕೆ ತಾವು ಹೇಳಿಬಿಟ್ಟರೆ ಸಾಕು.

**ಸಭಾಪತಿಯವರು:-** ಒಂದು ವಿಚಾರವನ್ನು ನಾನು ಹೇಳುವುದೇನೆಂದರೆ, ಮಾನ್ಯ ಆಯನೂರು ಮಂಜುನಾಥ್‌ರವರು ವಿಷಯವನ್ನು raise ಮಾಡಿದರು. ಅದು ಬಹಳ ಮಹತ್ವದ ವಿಷಯ ಎನ್ನುವಂಥದ್ದೇನೋ ನನಗೆ ಗೊತ್ತಿರಲಿಲ್ಲ. ಒಬ್ಬ ಸದಸ್ಯರು ಸದನದಲ್ಲಿ ಮಾತನಾಡಲು ಹಕ್ಕು ಇರುತ್ತದೆ ಎಂದು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಸದನದಲ್ಲಿ ಯಾವ ವಿಷಯವನ್ನು raise ಮಾಡುತ್ತಾರೆ ಎನ್ನುವುದರ ಮೇಲೆ ಉತ್ತರ ಕೊಡಬೇಕಾಗುತ್ತದೆ. ನಾನು ಅದಕ್ಕಾಗಿ ಅವರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದು ನಿಜ. ಅದಕ್ಕೆ ನಿಯಮವಿಲ್ಲ, ಇದು ಯಾವ ನಿಯಮದಲ್ಲೂ ಬರುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನೋಟೀಸ್ ಏನಾದರೂ ಕೊಟ್ಟಿದ್ದಾರೆ?

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೇ, ಮಾನ್ಯ ಸಚಿವರು ಮಾತನಾಡುತ್ತಾರೆ, ತಾವು ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಯಾವ ನಿಯಮಗಳಡಿ ಅವಕಾಶ ಕೊಡಲಾಗಿದೆ ಎಂದು ಬೇಕಲ್ಲವೇ? ನಿಮಗೆ ಯಾವುದಾರೂ ನೋಟೀಸ್ ಇಲ್ಲದೇ, ಸುಮ್ಮನೆ ಮಾತನಾಡುವುದಾದರೆ ಇದು ಯಾವ ರೀತಿಯಾಗುತ್ತದೆ. ಅದಕ್ಕಾಗಿ, ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬಾರದು ಹಾಗೂ ಈ ಸಂಪ್ರದಾಯವನ್ನು ಮಾಡಬಾರದೆಂದು, ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇಂಥದ್ದಕ್ಕೆಲ್ಲಾ ಅವಕಾಶ ಕೊಟ್ಟು ಸದನದ ಸಂಪ್ರದಾಯವನ್ನು ಮುರಿಯಬೇಡಿ.

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಮಾನ್ಯ ಕಾನೂನು ಸಚಿವರು ಅದಕ್ಕೆ ಉತ್ತರ ಕೊಟ್ಟಮೇಲೆ ಮತ್ತೆ ಅದನ್ನೇ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ?

**ಶ್ರೀ ಕೃಷ್ಣಭೈರೇಗೌಡ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಸಚಿವರುಗಳು ಏನು ಹೇಳುತ್ತಿದ್ದಾರೆಂದರೆ, ಸದನದಲ್ಲಿ ಸದಸ್ಯರುಗಳು ಯಾವುದೇ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಹಕ್ಕು ಇದೆ. ನಾವು ಆ ಹಕ್ಕನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಆ ಹಕ್ಕನ್ನು ಯಾವ ರೀತಿ ಚಲಾವಣೆ ಮಾಡಬೇಕೆಂದು ನಾವೇ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದೇವೆ. ಸಾಂಪ್ರದಾಯಿಕವಾಗಿ ಯಾವುದೋ ಒಂದು ವಿಚಾರವನ್ನು

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸದನದಲ್ಲಿ ಪ್ರಸ್ತಾಪ ಮಾಡಬೇಕಾದರೆ, ತಮಗೆ ಒಂದು ಸೂಚನೆಯನ್ನು ಕೊಡಬೇಕು. ಆ ಸೂಚನೆಯಲ್ಲಿ ಕನಿಷ್ಠ ಒಂದು ಪ್ಯಾರಾಗ್ರಾಫ್‌ನಲ್ಲಿ ಏನು ವಿಚಾರ ಎಂದು ತಮಗೆ ಮನವರಿಕೆ ಮಾಡಿ, ಅದರ ಆಧಾರ ಮೇಲೆ ಅವರಿಗೆ ಯಾವ ರೂಪದಲ್ಲಿ ಇದನ್ನು ತೆಗೆದುಕೊಂಡು ಬರಬಹುದು ಎಂದು ಸಲಹೆ ಕೊಡಬಹುದು ಅಥವಾ ಅವರೇ ಯಾವುದಾದರೂಂದು ರೂಪದಲ್ಲಿ ತೆಗೆದುಕೊಂಡು ಬರಬಹುದು. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾದರೂ ಸಹ ಅದಕ್ಕೂ ಒಂದು ಪದ್ಧತಿ ಇದೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಶ್ರೀ ಕೆ.ಬಿ.ಶಾಣಪ್ಪನವರೇ, ಮಾನ್ಯ ಸಚಿವರು ಮಾತನಾಡಲಿ, ಅವರು ಮಾತನಾಡುವಾಗ ತಾವೇಕೆ ಮಧ್ಯೆ ಮಾತನಾಡುತ್ತೀರಿ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಇದನ್ನು ಶೂನ್ಯವೇಳೆಯಲ್ಲಿ ತಂದಿದ್ದಾರೆಂದು ಎಂದು ನಾನು ಹೇಳುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಿ ಮುಗಿಸಿದ ನಂತರ ನಾನು ಹೇಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಶೂನ್ಯವೇಳೆಯಲ್ಲಿ ತೆಗೆದುಕೊಂಡರೂ ಸಹ ಅದಕ್ಕೂ ಒಂದು ಪದ್ಧತಿ ಇದೆ. Adjournment Motion ಎಂದು ತೆಗೆದುಕೊಂಡರೂ ಕೂಡ ಅದಕ್ಕೂ ಒಂದು ಪದ್ಧತಿ ಇದೆ. ಹೀಗೆ ಪ್ರತಿಯೊಂದಕ್ಕೂ ಕೂಡ ಒಂದು ನಿಯಮ, ಪದ್ಧತಿ ಇದೆ. ಈ ಪದ್ಧತಿಗಳಿಗೆ ಎಲ್ಲೋ ಕೆಲವೊಂದು ಸಂದರ್ಭದಲ್ಲಿ ವಿನಾಯಿತಿ ಕೊಡುವುದು ಇದೆ. ಆದಾಗ್ಯೂ, ತಾವು ಪೀಠದಲ್ಲಿ ಕುಳಿತುಕೊಂಡು ಮಾನ್ಯ ವಿರೋಧ ಪಕ್ಷದವರಿಗೆ ಗೌರವ ಕೊಡಬೇಕು ಎನ್ನುವ ವಿಚಾರದಲ್ಲಿ ಸಾಕಷ್ಟು ಬಾರಿ ಅವರಿಗೆ ನಾನಾ ರೀತಿಯ ವಿನಾಯಿತಿಗಳನ್ನು ಕೊಟ್ಟಿರಬಹುದು. ಆದರೂ ತಾವು ವಿನಾಯಿತಿಗಳನ್ನೇ ಕೊಡುತ್ತಾ ಹೋದಲ್ಲಿ, ಈಗ ಇರುವಂತಹ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ ಎನ್ನುವುದನ್ನು ವಿಚಾರ ಮಾಡಬೇಕು ಎಂದು ಮಾನ್ಯ ಸದಸ್ಯರುಗಳೆಲ್ಲರೂ ಹೇಳುತ್ತಿದ್ದಾರೆ. ಈಗ ಮಾನ್ಯ ಸದಸ್ಯರುಗಳು ಕೇಳುತ್ತಿರುವುದು ಇಷ್ಟೇ, ಅವರು ಸದನದಲ್ಲಿ ಏನು ಪ್ರಸ್ತಾಪ ಮಾಡುತ್ತೇವೆ ಎನ್ನುವ ಮಾಹಿತಿಯನ್ನು ತಮಗೆ ಕೊಡದೇ, ಯಾವ ನಿಯಮದಡಿ ಯಾವ ರೂಪದಲ್ಲಿ ತೆಗೆದುಕೊಂಡು ಬರುತ್ತಿದ್ದೇವೆ ಎಂತಲ್ಲೂ ಸಹ ಸೂಚನೆ ಕೊಡದೇ, ಎಲ್ಲೋ ಒಂದು ಕಡೆ ವಿರೋಧ ಪಕ್ಷದ ಬಗ್ಗೆ ತಾವು ಹೊಂದಿರತಕ್ಕಂಥ ಸಹೃದಯವನ್ನು ಉಪಯೋಗ ಮಾಡಿಕೊಂಡು ಈ ರೀತಿಯಾಗಿ ಪದೇ ಪದೇ ನಾವು ನಿಯಮಾವಳಿಗಳನ್ನು ಬಿಟ್ಟು, ಮಾಡುವುದು ಸರಿಯೇ ಎಂದು ಪೀಠಕ್ಕೆ ಅವರೆಲ್ಲರೂ ಸಹ ತಮ್ಮನ್ನು ಕೇಳುತ್ತಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಒಂದು ಬಾರಿ ಸದನದಲ್ಲಿ ಚರ್ಚೆ ಆದ ಮೇಲೆ, ಅದೇ ವಿಷಯವನ್ನು ಮತ್ತೆ ಚರ್ಚೆಗೆ ತರುವುದಕ್ಕೆ ಅವಕಾವಿದೆಯೇ?

**ಸಭಾಪತಿಯವರು:–** ಒಂದು ನಿಮಿಷ ಮಾನ್ಯ ಸಚಿವರೇ, ನಾನು ಹೇಳುತ್ತೇನೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ತಾವು permission ಕೊಟ್ಟಿದ್ದೀರಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳೆಲ್ಲಾ ಮಾತನಾಡುತ್ತಾರೆ, ನನಗೆ ಮಾತ್ರ ಮಾತನಾಡಬೇಡಿ ಎಂದು ಹೇಳಿದರೆ ಹೇಗೆ? Everybody is speaking. Why are you not allowing me to speak?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈಗ ನಾವು object ಮಾಡಿದ್ದೇವೆ. ಆದ್ದರಿಂದ ತಾವು ರೂಲಿಂಗ್ ಕೊಡಬೇಕಾಗುತ್ತದೆ.

**ಸಭಾಪತಿಯವರು:–** ಒಂದು ನಿವಿಷ. ಮಾನ್ಯ ಶ್ರೀ ಕೆ.ಬಿ.ಶಾಣಪ್ಪನವರು ಮಾತನಾಡುತ್ತಾರೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಯಾವ ನಿಯಮಗಳಡಿ ಕೇಳುತ್ತಿದ್ದಾರೆ ಎನ್ನುವಂತಹ ಪ್ರಶ್ನೆಯನ್ನು ಅವರು ಕೇಳಿದ್ದು ಬಹಳ ಸರಿಯಾಗಿದೆ. ಯಾವ ನಿಯಮಗಳಡಿ ಮಾನ್ಯ ಸಭಾಪತಿಯವರ ಸ್ಥಾನವನ್ನು ತಾವು ಮುಂದುವರೆಸಿಕೊಂಡು ಬರುತ್ತಿದ್ದೀರಿ ಎಂಬುದರ ಬಗ್ಗೆ ನಾನು ಚರ್ಚೆ...

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಆದರೆ ಸದನದಲ್ಲಿ ಈಗಾಗಲೇ ಈ ಸಂಬಂಧ ಸುಮಾರು 3 ಗಂಟೆಗಳ ಕಾಲ ಚರ್ಚೆಯಾಗಿದೆ.

(ಗೊಂದಲ)

**ಸಭಾಪತಿಯವರು:–** ಶ್ರೀ ರಘುನಾಥ ರಾವ್ ಮಲ್ಕಾಪೂರೆರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಮಾತನಾಡುವುದು ಇದೇ ವಿಷಯದ ಬಗ್ಗೆ ಅಲ್ಲವೇ? ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಲಿ. (ಗೊಂದಲ) ನಾನು ಹೇಳುತ್ತೇನೆ ಕೇಳಿ. ಒಂದು ನಿಮಿಷ, ನಾನು ಮಾತನಾಡಲು ಬಿಡಿ. ನೋಡಿ, ಸರಿಯೋ ಅಥವಾ ತಪ್ಪೋ ಅವರಿಗೆ ಮಾತನಾಡಲು ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಅನುಮತಿ ಕೊಟ್ಟಾಗ, ನಾವು ಎರಡು ನಿಮಿಷ ಕೇಳಬೇಕಾಗಿರುವುದು ನಮ್ಮ ಕರ್ತವ್ಯವೆಂದು ಮಾನ್ಯ ಸದಸ್ಯರುಗಳಿಗೆ ಹೇಳುತ್ತಿದ್ದೇನೆ. ಅದಕ್ಕೆ ದಯಮಾಡಿ ಅವರು ಸರಿಯೋ ಅಥವಾ ತಪ್ಪೋ ಕೇಳಲಿ, ಆಮೇಲೆ ನಾನು ಉತ್ತರ ಹೇಳುತ್ತೇನೆ.

**ಶ್ರೀ ಕೆ.ಟಿ.ಶೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಒಂದು ನಿಮಿಷ ಮಾನ್ಯ ಸದಸ್ಯರುಗಳೇ, ನಾನು ನಿಮಗೊಂದು ವಿಚಾರವನ್ನು ಹೇಳುತ್ತೇನೆ. ತಾವುಗಳೆಲ್ಲರೂ ಮಧ್ಯ ಮಾತನಾಡಬೇಡಿ ದಯವಿಟ್ಟು ಕುಳಿತುಕೊಳ್ಳಿ. ನೋಡಿ, ನನ್ನ ಸೌಜನ್ಯವನ್ನು ನೀವು ದುರುಪಯೋಗ ಮಾಡಿಕೊಳ್ಳುತ್ತೀರೆಂದರೆ, ಅದಕ್ಕೆ ನಾನು ಒಪ್ಪುವುದಿಲ್ಲ. ನಾನು ಪದೇ ಪದೇ ಹೇಳಬಾರದು. ನಾನು ಅವರಿಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆ. ಮಾನ್ಯ ಆಯನೂರು ಮಂಜುಮಾಥ್‌ರವರೇ, ತಾವು ಮಾತನಾಡಿ.

**ಶ್ರೀ ಆಯನೂರು ಮಂಜುಮಾಥ್:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಾನು ಮಾತನಾಡುವ ಮೊದಲೇ ಮಾನ್ಯ ಆಡಳಿತ ಪಕ್ಷದವರು ಇಷ್ಟೊಂದು ಆತಂಕಗೊಂಡಿದ್ದನ್ನು ನೋಡಿದರೆ ಅವರು . . .

(ಗೊಂದಲ)

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುಮಾಥ್‌ರವರೇ, ಒಂದು ನಿಮಿಷ ಇರಿ.

**ಶ್ರೀ ಅಬ್ದುಲ್ ಜಬ್ಬಾರ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇವರೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ಈಗ ಎಲ್ಲರೂ ಸಹ ಅದನ್ನೇ ಕೇಳುತ್ತಾರೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಯಾವ ನಿಯಮದ ಮೇಲೆ ಮಾತನಾಡುತ್ತಿದ್ದಾರೆ ಹೇಳಿ.

**ಶ್ರೀ ಆಯನೂರು ಮಂಜುಮಾಥ್:-** ಆಯಿತು, ಮಾನ್ಯ ಸಭಾಪತಿಯವರು ಹೇಳುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಿರುವುದೇ ನಿಯಮಬಾಹಿರ. ಅದರಲ್ಲೂ ಈ ಮಾತು ಬೇರೆ.

**ಸಭಾಪತಿಯವರು:-** ನೋಡಿ, ಮಾನ್ಯ ಆಯನೂರು ಮಂಜುಮಾಥ್‌ರವರೇ, ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಏನಾದರೂ ಒಂದು ವಿಚಾರದ ಬಗ್ಗೆ ಕೇಳಬೇಕಾದರೆ, ಒಂದು ನೋಟಿಸ್ ಕೊಡಬೇಕು, ಅನುಮತಿ ಪಡೆದುಕೊಳ್ಳಬೇಕು. ಇಂತಹ ವಿಷಯದ ಬಗ್ಗೆ ಎಂದು ನಮಗೆ ತಿಳಿಸಬೇಕು. ನಾನು ಹೇಳುವುದೇನೆಂದರೆ, ನೀವು innocently ಎಂದು ಅವಕಾಶ ಕೊಟ್ಟಿರುವುದಿಲ್ಲ. ನಾನು ಒಬ್ಬ ಸದಸ್ಯರಿಗೆ ಗೌರವವನ್ನು ಕೊಡುವಂತಹ ದೃಷ್ಟಿಯಿಂದ, ನಾನು ಸರಿಯೋ ಅಥವಾ ತಪ್ಪೋ ಎಂಬುದು ಗೊತ್ತಿಲ್ಲ, ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಈ ರೀತಿ ಅವಕಾಶ ಕೊಟ್ಟಾಗ ತಾವು ಯಾವ ವಿಷಯದ ಬಗ್ಗೆ ಮಾತನಾಡುತ್ತಿದ್ದೀರೆಂದು ತಿಳಿಸಿದರೆ, ಆ ವಿಚಾರದ ಮೇಲೆ ನಾನು ಹೇಳುತ್ತೇನೆ. ಯಾವ ವಿಷಯದ ಬಗ್ಗೆ ಮಾತನಾಡುತ್ತೀದ್ದೀರೆಂದು ಹೇಳಬಹುದಲ್ಲವೇ?

**ಶ್ರೀ ಆಯನೂರು ಮಂಜುಮಾಥ್:-** ಮಾನ್ಯ ಸಭಾಪತಿಯವರೇ, ಸಂಕ್ಷಿಪ್ತವಾಗಿ ತಮ್ಮ ಗಮನಕ್ಕೆ ತರುತ್ತೇನೆ. ಅದರ ಬಗ್ಗೆಯೇ ಹೇಳುತ್ತೇನೆ. ಮೊನ್ನೆ ದಿವಸ ಸದನದಲ್ಲಿ ಮಾನ್ಯ ಸಭಾಪತಿಯವರ ಪೀಠದ ಬಗ್ಗೆ ಚರ್ಚೆ ಆಯಿತು.

**(ಮುಂದು...)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(169)10.7.2018/12.30/ಎಂ.ಎಂ–ಎ.ಕೆ**

**ಶ್ರೀ ಆಯನೂರು ಮಂಜುನಾಥ್ (ಮುಂದು):–**

ಆ ಸಂದರ್ಭದಲ್ಲಿ ಸಂಸದೀಯ ವ್ಯವಹಾರಗಳ ಸಚಿವರು ಸದನಕ್ಕೆ ಭರವಸೆಯನ್ನು ಕೊಟ್ಟರು. ಅದರ ನಂತರ ತಮ್ಮ ಚೇಂಬರ್‌ನಲ್ಲಿ ಕೂಡ ಮಾತುಕತೆಯನ್ನು ಆಡಿದರು. ಈ ಅಧಿವೇಶನ ಮುಗಿಯುವುದರೊಳಗಾಗಿ ಸಭಾಪತಿಯವರ ಚುನಾವಣೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಸಚಿವರು ಈ ಸದನಕ್ಕೆ ಕೊಟ್ಟಿದ್ದಾರೆ. ಈಗ ನನ್ನ ಪ್ರಶ್ನೆಯೇನೆಂದರೆ, ನಿಯಮಾವಳಿಗಳ ಪ್ರಕಾರ ಮೂರು ದಿನಗಳ ಮೊದಲೇ ಅಧಿಸೂಚನೆ ಆಗಬೇಕಾಗಿತ್ತು. ನಾಳೆ ನಾಳಿದ್ದು ಎರಡು ದಿನಕ್ಕೆ ಈ ಅಧಿವೇಶನ ಮುಕ್ತಾಯವಾಗುತ್ತಿದೆ. ಈ ಕ್ಷಣದವರೆಗೂ ಅಧಿಸೂಚನೆ ಆಗಿಲ್ಲ. ಸರ್ಕಾರದ ವತಿಯಿಂದ ಮಾನ್ಯ ರಾಜ್ಯಪಾಲರಿಗೆ ಪತ್ರ ಕೂಡ ಹೋಗಿಲ್ಲ. ಸದನಕ್ಕೆ ಕೊಟ್ಟಂತಹ ಮಾತು, ಭರವಸೆ ಉಲ್ಲಂಘನೆಯಾಗುತ್ತಿದೆ. ಸದನದಲ್ಲಿ ಒಬ್ಬ ಸಚಿವರು ಕೊಟ್ಟಂತಹ ಮಾತಿನಿಂದ ನಮ್ಮ ಈ ಎಲ್ಲಾ ಸದಸ್ಯರ ಹಕ್ಕುಚ್ಯುತಿ ಕೂಡ ಆಗುತ್ತಿದೆ. ಆದ್ದರಿಂದ ನನ್ನ ನೇರವಾದ ಪ್ರಶ್ನೆಯೇನೆಂದರೆ, ಸದನದಲ್ಲಿ ಸರ್ಕಾರ ಅರ್ಥಾತ್ ಮಂತ್ರಿಗಳು ಕೊಟ್ಟಂತಹ ಭರವಸೆ ಪ್ರಕಾರ ಯಾವಾಗ ಚುನಾವಣೆಯನ್ನು ನಡೆಸುತ್ತಾರೆ? ಅಥವಾ ಸದನಕ್ಕೆ ದಾರಿ ತಪ್ಪಿಸಿದ್ದೀರಾ ಎನ್ನುವಂತಹ ಸಂಶಯ ನನಗೆ ಕಾಡುತ್ತಿದೆ.

ಪತ್ರಿಕೆಗಳಲ್ಲಿ ಕೂಡ 'ಸಭಾಪತಿ ಚುನಾವಣೆ ಮುಂದಕ್ಕೆ, ಸಭಾಪತಿ ಕಛೇರಿಯ ಮೂಲಗಳಿಂದ ಮಾಹಿತಿ' ಈ ರೀತಿಯ ವರದಿಗಳು ಬರುತ್ತಿವೆ. ಅವತ್ತಿನ ದಿವಸ ಸದನದ ಗೌರವವನ್ನು ಕಾಪಾಡಬೇಕು ಎಂಬ ತಮ್ಮ ಆಶಯ ಮತ್ತು ಅಭಿಪ್ರಾಯವನ್ನು ವ್ಯಕ್ತ ಮಾಡಿದಾಗ ಎಲ್ಲಾ ಚರ್ಚೆಗಳಿಗೂ ಕೊನೆ ಹಾಡಿ ಸದನದ ಮೂಲಕ ಒಳ್ಳೆಯ ಸಂದೇಶ ಹೋಗಬೇಕು ಎನ್ನುವ ಕಾರಣಕ್ಕಾಗಿ ನಾವೆಲ್ಲಾ ನಡೆದುಕೊಂಡೆವು. ಅದರ ಪ್ರಕಾರ ಮುಂದುವರೆಯಿತು. ಆದರೆ ಅದರ ಬಳಕೆಯನ್ನು ಮಾಡಿಕೊಂಡ ಸಚಿವರು ಅರ್ಥಾತ್ ಸರ್ಕಾರ ಈ ಸದನಕ್ಕೆ ಭರವಸೆ ಕೊಟ್ಟ ಪ್ರಕಾರ 12ನೇ ತಾರೀಖಿನೊಳಗೆ ಚುನಾವಣೆ ಆಗಬೇಕು. ಇದು ನಿಯಮಾವಳಿ. ಯಾವ ನಿಯಮಾವಳಿಯನ್ನು ಮಾತನಾಡಬೇಕು ಎಂದು ಮಾರ್ಗದರ್ಶನ ಮಾಡಬಲ್ಲಂತಹ ಎಲ್ಲಾ ಜ್ಞಾನ ಇರುವಂತಹ ಸಂಸದೀಯ ಸಚಿವರು ತಮ್ಮ ಮಾತನ್ನು ಯಾವ ನಿಯಮಾವಳಿ ಪ್ರಕಾರ ಉಲ್ಲಂಘಿಸುತ್ತಾರೆ ಅಥವಾ ಉಳಿಸಿಕೊಳ್ಳುತ್ತಾರೆ? ಈ ಸದನಕ್ಕೆ ಒಮ್ಮೆ ಕೊಟ್ಟಂತಹ ಉತ್ತರ ಎಲ್ಲಾ ಸದಸ್ಯರ ಆಸ್ತಿಯಾಗಿದೆ. ಅದು ಅವರೊಬ್ಬರದೇ ತೀರ್ಮಾನ ಅಲ್ಲ. ಸದನದಲ್ಲಿ ನಮಗೆ ಕೊಟ್ಟಂತಹ ಮಾತಿಗೆ ತಪ್ಪಿದರೆ ನಾವು ನಾಳೆಯೇ ಹಕ್ಕುಚ್ಯುತಿ ನಿರ್ಣಯ ಮಾಡಬೇಕಾದ ಅವಕಾಶ ಬರುತ್ತದೆ. ಈ ಪೀಠದ ವಿಷಯಗಳಿಗೆ ಹಕ್ಕು ಚ್ಯುತಿಯ ಮಂಡನೆ ಇಂತಹವೆಲ್ಲಾ ಆಗಬಾರದು ಎನ್ನುವ ಕಾರಣಕ್ಕೆ ನಾನು ಸ್ಪಷ್ಟವಾದ ಮಾಹಿತಿಯನ್ನು ಬಯಸುತ್ತಿದ್ದೇನೆ. ಮಾನ್ಯ ಸಚಿವರು ಸದನದಲ್ಲಿ ಹೇಳಿರುವ ಮಾತಿನ ಪ್ರಕಾರ ನಾವೆಲ್ಲಾ ನಡೆದುಕೊಂಡಿದ್ದೇವೆ. ಆ ಮಾತು 12ನೇ ತಾರೀಖಿನೊಳಗೆ ನಡೆಯುತ್ತದೆಯೇ? ನಡೆಯುವುದಾದರೆ ಅಧಿಸೂಚನೆ ಏಕೆ ಆಗಿಲ್ಲ? ನಮಗಿರುವ ಮಾಹಿತಿ; ಅಧಿಸೂಚನೆ ಆಗಿದ್ದರೆ ಅದನ್ನು ಸದನದ ಗಮನಕ್ಕೆ ತಂದರೆ ಸಂತೋಷ. ಮೂರು ದಿನಗಳ ಮುಂಚೆ ಅಧಿಸೂಚನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗಬೇಕಾಗಿತ್ತು. ನಿಯಮಾವಳಿಗಳು, ಕಾನೂನುಗಳು ಸಚಿವರಿಗೂ ಗೊತ್ತಿದೆಯಲ್ಲವೇ? ಅವರು ಹೇಳಿದ ಮಾತಿನ ಪ್ರಕಾರ ಮೂರು ದಿನಗಳ ಮುಂಚೆ ಅಧಿಸೂಚನೆ ಹೊರಡಿಸುವಾಗ ಯಾವ ನಿಯಮಾವಳಿಗಳು, ಕಾನೂನುಗಳು ಮತ್ತು ಸಂಸದೀಯ ನಡವಳಿಕೆಗಳ ಪ್ರಜ್ಞೆ ಬರಲಿಲ್ಲ. ನಾನು ಇದನ್ನು ಪ್ರಶ್ನೆ ಮಾಡುವುದಕ್ಕೆ ಹೋದರೆ ಇಷ್ಟೆಲ್ಲಾ ಹೇಳಿದರೆ ಹೇಗೆ; ಆ ವಿಷಯದಲ್ಲಿ ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ಸದಸ್ಯರಾದಂತಹ ಶ್ರೀ ಆಯನೂರು ಮಂಜುನಾಥರವರು ಗಂಭೀರವಾದಂತಹ ವಿಚಾರವನ್ನು ಎತ್ತಿದ್ದಾರೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಭರವಸೆಯನ್ನು ಕೊಟ್ಟಿದ್ದರು, ಆ ಭರವಸೆಯನ್ನು ಈಡೇರಿಸುತ್ತಾರೋ ಇಲ್ಲವೋ ಅಥವಾ ಈಡೇರಿಸದೇ ಹೋದ ಪಕ್ಷದಲ್ಲಿ, ಕೊಟ್ಟಂತಹ ಭರವಸೆ ಈ ಸದನಕ್ಕೆ ಚ್ಯುತಿ ಆಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆ ಇಡುತ್ತಿದೆಯೇ? – ಎನ್ನುವುದಕ್ಕೆ ಅವರು ಸ್ಪಷ್ಟೀಕರಣವನ್ನು ಕೇಳುತ್ತಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಸದನದಲ್ಲಿ ಕೊಟ್ಟ ಮಾತಿನ ಪ್ರಕಾರ ನಾವು ನಡೆದುಕೊಳ್ಳಬೇಕು. ಪ್ರಾಸ್ತಾವಿಕವಾಗಿ ಹೇಳುವುದಾದರೆ, ಅಂದು ಯಾವ ಭರವಸೆಯನ್ನು ಕೊಟ್ಟಿದ್ದೇನೆ ಎನ್ನುವುದನ್ನು ಹೇಳುತ್ತೇನೆ. ಸರ್ಕಾರಕ್ಕೆ ಇಲ್ಲಿ ಕೊಟ್ಟಂತಹ ಭರವಸೆಯನ್ನು ಬಿಟ್ಟು ವ್ಯತಿರಿಕ್ತವಾಗಿ ನಡೆದುಕೊಳ್ಳುವಂತಹ ಯಾವುದೇ ಉದ್ದೇಶ ಇಲ್ಲ ಎನ್ನುವುದನ್ನು ಪ್ರಾಸ್ತಾವಿಕವಾಗಿ ಹೇಳುತ್ತೇನೆ. ಚ್ಯುತಿ ಮಾಡುವ ಪ್ರಶ್ನೆಯೂ ಇಲ್ಲ, ಚ್ಯುತಿ ಮಾಡಿದಲ್ಲಿ ಖಂಡಿತವಾಗಿ ತಾವು ನಮ್ಮ ಮೇಲೆ ಹಕ್ಕುಚ್ಯುತಿಯನ್ನು ಮಂಡನೆ ಮಾಡಬಹುದು. ಹಕ್ಕುಚ್ಯುತಿ ಮಾಡಿದಲ್ಲಿ ಸಂಬಂಧಪಟ್ಟವರು ತೀರ್ಮಾನವನ್ನು ತೆಗೆದುಕೊಳ್ಳಬಹುದು. ಅದಕ್ಕೆ ನಾನು ವೈಯಕ್ತಿಕವಾಗಿ ಹಾಗೂ ಒಬ್ಬ ಸಚಿವನಾಗಿ ಸಂಪೂರ್ಣವಾಗಿ ಜವಾಬ್ದಾರಿಯಾಗಿದ್ದೇನೆ. ಪ್ರಾಸ್ತಾವಿಕವಾಗಿ ಅಷ್ಟು ಹೇಳುತ್ತಾ, ಅಂದು ನಾನು ಮಾತನಾಡುವಂತಹ ಸಂದರ್ಭದಲ್ಲಿ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇನೆ. ಅದರ ಎಲ್ಲಾ ಭಾಗವನ್ನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ಭಾಗವನ್ನು ಮಾತ್ರ ಪುನರುಚ್ಚಾರ ಮಾಡಿ ಆಯ್ದು ಭಾಗವನ್ನು ಮಾತ್ರ ಹೇಳುತ್ತೇನೆ. ಮತ್ತೆ ಪೀಠಿಕೆ ಹಾಕುವುದು, ಮತ್ತೆ ಕಾನೂನು, ಸಂವಿಧಾನ ಎಲ್ಲವನ್ನೂ ಹೇಳುವುದನ್ನು ಬಿಟ್ಟುಬಿಡುತ್ತೇನೆ. ಏಕೆಂದರೆ ಅಂದು ಎಲ್ಲವನ್ನೂ ಹೇಳಿರುವುದರಿಂದ ಇವತ್ತು ಅವೆಲ್ಲವೂ ಅನ್ವಯಿಸುತ್ತದೆ ಎಂಬುದನ್ನು ತಿಳಿದುಕೊಂಡು ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗದೇ ಪ್ರಸ್ತುತವಾಗಿರುವಂತಹ ವಿಚಾರಕ್ಕೆ ಮಾತ್ರ ನೇರವಾಗಿ, ನಿರ್ದಿಷ್ಟವಾಗಿ ಬರುತ್ತೇನೆ. ಅವತ್ತು ನಾನು ಈ ಸದನದ ಹಿಂದಿನ ಸದಸ್ಯರು ನಮಗೆಲ್ಲರಿಗೂ ಗೌರವ ಮತ್ತು ಪ್ರೀತಿಗೆ ಪಾತ್ರರಾಗಿದ್ದಂತಹ ಡಾ: ವಿ.ಎಸ್. ಆಚಾರ್ಯ ಅವರನ್ನು ಉಲ್ಲೇಖ ಮಾಡಿ ಅಂದು ಸ್ಪಷ್ಟವಾಗಿ ಏನು ಹೇಳಿದೆನೆಂದರೆ, ಅವತ್ತಿನ ದಿವಸ ಅವರು ಈ ಸದನದ ಅಧಿವೇಶನ ಎಂದರೆ ಏನು ಎನ್ನುವುದನ್ನು ಅವರೇ ಹೇಳಿದ್ದಾರೆ. ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕದಲ್ಲೂ ಕೂಡ ಇದೆ. ಬಹುಶಃ ಕಳೆದ ಶುಕ್ರವಾರ ಇರಬಹುದು, ಅಂದು ನಾನು ಏನು ಹೇಳಿದೆನೆಂದರೆ, "This Government is committed to duly elect the Chairman before the prorogation of this

Session." ನಾನಾಗಿಯೇ ನಾನು ಹೇಳುತ್ತಾ ಇಲ್ಲ. ಅವರಿಂದ ಅವತ್ತು ಏನು ಹೇಳಿದ್ದೇನೆ ಎನ್ನುವ ನಡವಳಿಯ ಪ್ರತಿಯನ್ನು ಪಡೆದುಕೊಂಡು ಹೇಳುತ್ತಿದ್ದೇನೆ. ಅದಕ್ಕೆ ಮೊದಲು ಏನು ಹೇಳಿದೆನೆಂದರೆ, ಇದರಲ್ಲಿ ನಾವೆಲ್ಲರೂ ತೀರ್ಮಾನಿಸಿದಂತೆ ಮುಂದಿನ ಅಧಿವೇಶನಕ್ಕೆ ಮುಂಚೆ ಎಂದಿದೆ, ನಿಯಮಾವಳಿಗಳ ಪುಸ್ತಕದಲ್ಲೂ ಆ ರೀತಿ ಇದೆ. ಅದು ತಮಗೂ ಗೊತ್ತಿದೆ, ಅಂದು ಅದನ್ನು ನೀವೂ, ನಾವೂ ಓದಿದ್ದೇವೆ.

ಪುಟ ಆರರಲ್ಲಿ ಚಾಪ್ಟರ್ ಮೂರರಲ್ಲಿ ಸೆಕ್ಷನ್ 7 ಸಬ್–ಸೆಕ್ಷನ್ (6)ರಲ್ಲಿ, "The date so fixed should not be later than immediate next session…" ಎಂದು ಇದೆ. " ಮುಂದಿನ ಅಧಿವೇಶನ ಎಂದು ಇದೆ. ಅದಕ್ಕೆ ಮಾನ್ಯ ಆಚಾರ್ಯರವರು ಕೂಡ ಅದನ್ನು ಉಲ್ಲೇಖ ಮಾಡಿ ಇದೇ ಸ್ಥಳದಲ್ಲಿ ನಿಂತುಕೊಂಡು ಹೇಳಿದ್ದಾರೆ, ಅದನ್ನೇ ನಾನು ಉಲ್ಲೇಖ ಮಾಡಿ ನಾನು ತಿಳಿದ ಹಾಗೆ "This Government is committed to duly elect the Chairman before the prorogation of this Session" ಎಂದು ಹೇಳಿ, ಮತ್ತೆ ಎರಡು–ಮೂರು ಪುಟಗಳ ನಂತರ ಕೊನೆಗೆ ನಾವು ಸಭಾಪತಿಯವರ ಕಛೇರಿಯೊಳಗೆ ಕುಳಿತು ಮಾತನಾಡಿ ನಂತರ ಇಲ್ಲಿಗೆ ಬಂದಾಗ ನಾನು ಮತ್ತೊಮ್ಮೆ ಮಾತನಾಡಿದ ಸಂದರ್ಭದಲ್ಲಿ ಹೇಳಿದೆ; "ಮಾನ್ಯ ಸಭಾಪತಿಯವರೇ, ಈ ಅಧಿವೇಶನವನ್ನು ಮಾನ್ಯ ನಾರಾಯಣಸ್ವಾಮಿಯವರು ಇಲ್ಲಿಯೇ ಕುಳಿತುಕೊಂಡು 'prorogue' ಎಂದು ಹೇಳಿದಿರಿ, ಅದನ್ನು ಕನ್ನಡದಲ್ಲಿ ಹೇಳಿ ಎಂದು ಹೇಳಿದರು. ಆಗ ನಾನು 'ಅಧಿವೇಶನದ ಮುಕ್ತಾಯ' ಎಂದು ಹೇಳಿದೆ. ಆಗ ಅದಕ್ಕೆ ಸ್ಪಷ್ಟೀಕರಣವನ್ನೂ ಕೊಟ್ಟಿದ್ದೇನೆ. ಈ ಅಧಿವೇಶನ ಮುಂದೂಡುವುದಲ್ಲ, ಮುಂದೂಡಿದರೆ sine die ಎನ್ನುತ್ತೇವೆ, ಮುಕ್ತಾಯ ಮಾಡಿದರೆ ಅದು prorogue ಆಗುತ್ತದೆ. ಎಲ್ಲಿಯವರೆಗೆ ಸಭಾಪತಿಯವರು ಈ ಅಧಿವೇಶನ ಮುಕ್ತಾಯವಾಗಿದೆ ಎಂದು ಘೋಷಣೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಅಧಿವೇಶನ ಚಾಲ್ತಿಯಲ್ಲಿ ಇರುತ್ತದೆ. ಅದರಲ್ಲೂ ಒಂದು ಸ್ಪಷ್ಟೀಕರಣ ಕೊಡುತ್ತೇನೆ. ಅಂದು ನಾನು ತಪ್ಪು ಹೇಳಿದ್ದೇನೆ, ಈ ಅಧಿವೇಶನ ಮುಕ್ತಾಯ ಮಾಡುವುದು ಸಭಾಪತಿಯವರು ಅಲ್ಲ, ಮಾನ್ಯ ರಾಜ್ಯಪಾಲರು ಮುಕ್ತಾಯ ಮಾಡುತ್ತಾರೆ. ಇದನ್ನು ಸರಿಪಡಿಸಬೇಕೆಂದು ಕಾರ್ಯದರ್ಶಿಯವರಿಗೆ ಹೇಳುತ್ತೇನೆ. Cabinet recommendation ಮೇಲೆ ರಾಜ್ಯಪಾಲರು ಮಾಡುತ್ತಾರೆ. ಅವತ್ತಿನ ದಿವಸ ಮಾತನಾಡುವ ರಭಸದಲ್ಲಿ ಸಭಾಪತಿಯವರು ಎಂದು ಹೇಳಿದೆ, ಅದಕ್ಕೆ correction ಏನೆಂದರೆ, ಸಭಾಪತಿಯವರು sine die ಮಾಡುತ್ತಾರೆ, ಅದನ್ನು ಮುಕ್ತಾಯ ಮಾಡುವುದನ್ನು ಮಾನ್ಯ ರಾಜ್ಯಪಾಲರು ಮಾಡುತ್ತಾರೆ. ಅದೊಂದು ಕರೆಕ್ಷನ್ ಜೊತೆಗೆ ಎಲ್ಲಿಯವರೆಗೂ ಈ ಅಧಿವೇಶನ ಮುಕ್ತಾಯವಾಗಿದೆ ಎಂದು ಘೋಷಣೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಅಧಿವೇಶನವು ಚಾಲ್ತಿಯಲ್ಲಿ ಇರುತ್ತದೆ. ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರವು ನಿಯಮಾನುಸಾರವಾಗಿ ಸಭಾಪತಿಯವರನ್ನು ಆಯ್ಕೆ ಮಾಡುವಂತಹ ಎಲ್ಲಾ ಉದ್ದೇಶಗಳನ್ನು ಇಟ್ಟುಕೊಂಡಿದೆ ಎಂದು ಅಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಮತ್ತೆ ಅದನ್ನು ಪುನರುಚ್ಚಾರ ಮಾಡುತ್ತಿದ್ದೇನೆ, ನಾವು ಈ ಅಧಿವೇಶನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಕ್ತಾಯ ಆಗುವುದರೊಳಗೆ ಅಂದರೆ prorogue ಆಗುವುದರೊಳಗೆ; ನಾನು ಹೇಳಿದ್ದೇನೆ ಎಂದಲ್ಲ, ನಿಯಮವೂ ಅದನ್ನೇ ಹೇಳುತ್ತದೆ. ಮಾನ್ಯ ಆಚಾರ್ಯರವರೂ ಅದನ್ನೇ ಹೇಳಿದ್ದಾರೆ, ಪುಟ 3ರಲ್ಲಿ ಅಧಿವೇಶನ ಎಂದರೆ ಏನು ಎನ್ನುವುದಕ್ಕೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. "'Session' means the period of time between the first meeting of the Council upon the summons of the Governor under Article 174(1) of the Constitution and its prorogation." ಎಲ್ಲಿಯವರೆಗೂ ಅದು prorogue ಆಗುವುದಿಲ್ಲ, ಅಲ್ಲಿಯವರೆಗೂ ಈ ಅಧಿವೇಶನ ಚಾಲ್ತಿಯಲ್ಲಿ ಇದ್ದೇ ಇರುತ್ತದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಚಿವರೇ, ನನಗೆ ಅರ್ಥವಾಯಿತು.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ರೂಲ್ಸ್ ಏನಿದೆ, ಅದನ್ನು ಹೇಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಮಂಜುನಾಥರವರೇ, ಮಾನ್ಯ ಸಚಿವರು ಮಾತನಾಡಲಿ. ಯಾರೂ ಮಧ್ಯೆ ಮಾತನಾಡಬೇಡಿ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ನನ್ನ ಮಾತನ್ನು ಮುಗಿಸುತ್ತೇನೆ. ನಾನು ಅವತ್ತಿನ ದಿವಸವೂ ಅವಸರ ಮಾಡಲಿಲ್ಲ, ಇಂದೂ ಅವಸರ ಮಾಡುವುದು ಬೇಡ. ನಾನು ತಮಗೆ ಒಪ್ಪಿಸುವುದು ಇಷ್ಟೇ. ನಾನು ಇದರಲ್ಲಿ ಯಾವುದೇ ರೀತಿಯ ನನ್ನದೇ ಆದಂತಹ ವಿಶ್ಲೇಷಣೆ ಮಾಡುತ್ತಾ ಇಲ್ಲ.

(ಮುಂವ)

(170) 10–07–2018/12–40/ಕೆಹೆಚ್/ಆರ್‌ಎನ್

**ಶ್ರೀ ಕೃಷ್ಣಭೈರೇಗೌಡ (ಮುಂದು):–** ನಾನು interpretation ಅನ್ನು ಮಾಡುತ್ತಿಲ್ಲ. ಪುಸ್ತಕದಲ್ಲಿ ನಿಯಮದ ಬಗ್ಗೆ ಏನು ಬರೆದಿದೆ. ಅದರ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಅಧಿವೇಶನದ ಮುಕ್ತಾಯ ಅಂದರೆ prorogue ಆಗುವರೆಗೂ ಸಹ ಈ ಅಧಿವೇಶನ ಚಾಲ್ತಿಯಲ್ಲಿರುತ್ತದೆ. ಮತ್ತೊಮ್ಮೆ ಸರ್ಕಾರದ ಪರವಾಗಿ ನಾನು ತಮಗೆ ಹಾಗೂ ತಮ್ಮ ಮುಖಾಂತರ ಈ ಸದನಕ್ಕೂ ಭರವಸೆಯನ್ನು ಕೊಡುತ್ತಿದ್ದೇನೆ. ಈ ಅಧಿವೇಶನ ಮುಕ್ತಾಯವಾಗುವುದರೊಳಗೆ ನಾವು ಚುನಾವಣೆಯನ್ನು ಮಾಡುತ್ತೇವೆ. ವಿರೋಧ ಪಕ್ಷದವರು ಗುರುವಾರ ಅಧಿವೇಶನ ಮುಕ್ತಾಯವಾಗುತ್ತದೆಂದು ತಿಳಿದುಕೊಂಡಿದ್ದಾರೆ. ಗುರುವಾರ ಅಧಿವೇಶನ ಮುಕ್ತಾಯವಾಗುವುದಿಲ್ಲ ಎನ್ನುವುದಷ್ಟೆ ನಾನು ಹೇಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೋಟಿಫಿಕೇಷನ್ ಪ್ರಕಾರ ನಾನು ಮಾತನಾಡಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಕ್ತಾಯವಾಗುವುದರೊಳಗೆ ಖಂಡಿತವಾಗಿ ಚುನಾವಣೆಯನ್ನು ಮಾಡುತ್ತೇವೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಚಿವರು ಹೇಳುವುದನ್ನು ಮೊದಲು ಕೇಳಿ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಒಂದು ಕೊನೆಯ ಅಂಶವನ್ನು ಹೇಳುತ್ತೇನೆ. ಇದು ಹೇಗೆ ಚ್ಯುತಿಯಾಗುತ್ತದೆಂದು ಹೇಳಿದರೆ ನಾವು ಈ ಅಧಿವೇಶನ prorogue ಮಾಡಿ ಮುಂದಿನ ಅಧಿವೇಶನವನ್ನು ಕರೆಯಿಸಿ, ತಮ್ಮನ್ನೇ ಆ ಪೀಠದಲ್ಲಿ ಕೂರಿಸಿ, ನಾವು ಸರ್ಕಾರದ ಅಧಿವೇಶನವನ್ನು ನಡೆಸಿದರೆ ಇವತ್ತಿನ ದಿವಸ ನಾವು ಚ್ಯುತಿ ಮಾಡಿದಂತಾಗುತ್ತದೆ. ಅಧಿವೇಶನ ಮುಕ್ತಾಯ ಮಾಡಿ ಮುಂದಿನ ದಿನಗಳಲ್ಲಿ ಮತ್ತೊಂದು ಅಧಿವೇಶನವನ್ನು ತಮ್ಮ ನೇತೃತ್ವದಲ್ಲಿ ಅಂದರೆ ರಾಜ್ಯಪಾಲರು ಯಾರಿಗೆ ಆದೇಶವನ್ನು ಕೊಟ್ಟಿದ್ದಾರೆ, ಅವರೇ ಮುಂದುವರೆದರೆ ಮತ್ತು ಇವತ್ತಿನ ದಿವಸ ನಾವು 135ನೇ ಅಧಿವೇಶನವನ್ನು ಮಾಡುತ್ತಿದ್ದೇವೆ. 136ನೇ ಅಧಿವೇಶನದವರೆಗೂ ನಾವು ಚುನಾವಣೆಯನ್ನು ಮಾಡಲಿಲ್ಲವೆಂದರೆ ಖಂಡಿತವಾಗಿಯೂ ಅದು ನಮ್ಮ ತಪ್ಪಾಗುತ್ತದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ತಮಗೆ ಒಪ್ಪಿಸುತ್ತಾ, ನಾವು ಎಲ್ಲಿಯೂ ಸಹ ಮಾತಿಗೆ ತಪ್ಪುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ, ಇದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಹ ಅರ್ಥ ಮಾಡಿಕೊಂಡು ಸಹಕರಿಸಬೇಕೆಂದು ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನ್ನದೊಂದು clarification ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ ಮತ್ತು ಮಾನ್ಯ ಸಚಿವರೇ ಒಂದು ನಿಮಿಷ. ಈಗ ವಿರೋಧಪಕ್ಷದ ಸದಸ್ಯರು ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದಿಂದ ಉತ್ತರವನ್ನು ಕೊಡಲಾಗಿದೆ. ಸರ್ಕಾರದ ಉತ್ತರವೇನಾದರೂ ತಪ್ಪಿದ್ದರೆ, ನಿಮಗೆಲ್ಲಾ ಸದನದ ನಡವಳಿಕೆ ನಿಯಮಗಳು ಇವೆ. ಆ ನಿಯಮದ ಪ್ರಕಾರ ತಾವು ಮಾಡಬಹುದು. ಇದರಲ್ಲಿ ನನ್ನ ಕೆಲಸವೇನೆಂದರೆ ರಾಜ್ಯಪಾಲರು ಸದನವನ್ನು ನಡೆಸುವುದಕ್ಕೆ ಹೇಳಿದ್ದಾರೆ, ಮುಂದಿನ ಚುನಾವಣೆಯ ಆದೇಶ ಬರುವವರೆಗೆ ಮತ್ತು ರಾಜ್ಯಪಾಲರ ನಿರ್ದೇಶನ ಬರುವವರೆಗೂ ಸದನವನ್ನು ನಡೆಸಬೇಕಾಗುತ್ತದೆ. ಅಲ್ಲಿಯವರೆಗೂ ಸದನವನ್ನು ನಡೆಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಯಾವುದೇ ನಿಯಮವಿಲ್ಲ.

**ಸಭಾಪತಿಯವರು:–** ಈ ವಿಷಯದ ಬಗ್ಗೆ ಚರ್ಚೆ ಮಾಡುವುದು ಮುಗಿದಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಯಾವುದೇ ನಿಯಮವಿಲ್ಲ. ಚುನಾವಣೆಗೆ ಅವಕಾಶ ಕೊಡದೇ ಸರ್ಕಾರವು ಇಕ್ಕಟ್ಟಿನಿಂದ ಓಡಿಹೋಗುವಂತಹ ಕೆಲಸವನ್ನು ಮಾಡುತ್ತಿದೆ

(ಗೊಂದಲ)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ತಾವು ಹೇಳುವುದು ಸರಿಯಲ್ಲ.

**ಸಭಾಪತಿಯವರು:-** ಶ್ರೀ ಶಾಣಪ್ಪನವರೇ ಒಂದು ನಿಮಿಷ. ಎಷ್ಟು ಜನ ಮಾನ್ಯ ಸದಸ್ಯರು ಮಾತನಾಡುತ್ತೀರಿ. ಪದೇ ಪದೇ ಏಕೆ ಎದ್ದು ನಿಲ್ಲುತ್ತೀರಿ? ಒಬ್ಬರು ಮಾತ್ರ ಮಾತನಾಡಿ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 12ನೇ ತಾರೀಖುವರೆಗೂ ಸದನವನ್ನು ನಡೆಸಬೇಕೆಂದು ಒಪ್ಪಿರುವುದಲ್ಲವೇ?

**ಸಭಾಪತಿಯವರು:-** ಶ್ರೀ ಶಾಣಪ್ಪನವರೇ ತಾವು ಹಿರಿಯರಿದ್ದೀರಿ. ನಿಮ್ಮ ಮಾತನ್ನು ಸಹ ಕೇಳಿದ್ದೇವೆ. ಸರ್ಕಾರದ ಉತ್ತರವನ್ನು ಸಹ ಕೇಳಿದ್ದೇವೆ. ಇದರಲ್ಲಿ ನನ್ನ ಕೆಲಸವೇನು, ನಾನು ಏನು ಮಾಡುವುದಕ್ಕಾಗುತ್ತದೆ ಎನ್ನುವುದನ್ನು ಸಹ ಹೇಳಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ನೆನಪು ಮಾಡಬೇಕೋ, ಬೇಡವೋ? ಬಿ.ಎ.ಸಿ., ಸಭೆಯಲ್ಲಿ 12ನೇ ತಾರೀಖಿನವರೆಗೂ ಸದನವನ್ನು ನಡೆಸಬೇಕೆಂದು ತೀರ್ಮಾನವಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷ, ಇದರ ಬಗ್ಗೆ ಮೂರೂವರೆ ತಾಸುಗಳ ಕಾಲ ಚರ್ಚೆ ಮಾಡಿ . . .

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯಾವ ಶಬ್ದಕ್ಕೆ ಏನು ಅರ್ಥವೆನ್ನುವುದನ್ನು ಕಾನೂನು ಮಂತ್ರಿಗಳು ಹೇಳಿದ್ದಾರೆ.

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆ ಬೇಡ. ನಾನು ಹೇಳುವುದನ್ನು ಮೊದಲು ಕೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರಿಗಿಂತ ಗಟ್ಟಿಯಾಗಿ ಕೂಗುವುದಕ್ಕೆ ನಮಗೆ ಬರುತ್ತದೆ. ನಿಮ್ಮಗಿಂತ ಯುವಕರು ಬಹಳ ಮಂದಿ ಇದ್ದಾರೆ. ತಾವು ಗಟ್ಟಿಯಾಗಿ ಕೂಗಬೇಡಿ. ನಿಮ್ಮಗಿಂತ ಗಟ್ಟಿಯಾಗಿ ನಾವು ಕೂಗುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆಯೆಂದರೆ ಈ ಸದನ ಮುಗಿಯುವುದರೊಳಗೆ ಸ್ಪಷ್ಟವಾದ ಮಾಹಿತಿಯನ್ನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಕೊಟ್ಟಿದ್ದಾರೆ. ಇವತ್ತಿನ ದಿವಸ ನಾವು ಪ್ರಶ್ನೆಯನ್ನು ಕೇಳಿದಾಗ ಆಚಾರ್ಯರವರ ಬಗ್ಗೆ ಹೇಳುತ್ತಿದ್ದಾರೆ. ಆಗ ತಾವು ಇರಲಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಮುಗಿಯುವುದರೊಳಗೆ ಮುಂದಿನ ಅಧಿವೇಶನದಲ್ಲಿ . . .

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಇದರ ಬಗ್ಗೆ ಒಬ್ಬರು ಮಾತ್ರ ಮಾತನಾಡಿ. ಮಾನ್ಯ ಸಚಿವರೇ ಒಂದು ನಿಮಿಷ. ನಾನು ಏನು ಹೇಳುತ್ತೇನೆಂಬುದನ್ನು ಮೊದಲು ಕೇಳಿ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಒಂದೇ ಒಂದು ಸ್ಪಷ್ಟೀಕರಣ ಕೊಡುವುದೇನೆಂದರೆ ಅಧಿವೇಶನವನ್ನು ಮುಂದೂಡುವುದು, ಅಂದರೆ adjournment ಅದು ಅಧಿವೇಶನದ ಮುಕ್ತಾಯ ಅಲ್ಲ. ಆಗಲೇ ನಾನು ಈ ಪದವನ್ನು ಹೇಳಲಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. (ಗೊಂದಲ) ಆದರೂ ಸಹ ಪದೇ ಪದೇ ಅದೇ ಬರುತ್ತಿದೆ. ಎಲ್ಲೂ ಸಹ ಅಧಿವೇಶನವನ್ನು ಮುಂದೂಡುವುದು ಮತ್ತು ನಾನು ಇವತ್ತಿನ ದಿವಸ introduce ಮಾಡಿರುವಂತಹ ಪದ ಅಲ್ಲ. ಆವತ್ತಿನ ದಿವಸವೇ ಈ ಪದವನ್ನು ಹೇಳಿದ್ದೇನೆ. ಹಾಗಾಗಿ ಆವತ್ತಿನ ದಿವಸ ಒಂದು ಸಂದೇಶವನ್ನು ಕೊಟ್ಟೆ, ಇವತ್ತಿನ ದಿವಸ ಒಂದು ಸಂದೇಶವನ್ನು ಕೊಡುತ್ತಿದ್ದೇನೆಂಬ ಆ ರೀತಿಯ ಅಭಿಪ್ರಾಯ ಬರಬಾರದು. ನನ್ನ ಕೆಲಸದ ಬಗ್ಗೆ ಮತ್ತು ವಿರೋಧಪಕ್ಷದ ಬಗ್ಗೆ ಹಾಗೂ ಈ ಸದನದ ಬಗ್ಗೆ ಗೌರವವನ್ನಿಟ್ಟುಕೊಂಡಿದ್ದೇನೆ. ನಾವು ಕೊಡುವ ಮಾತಿನ ಪ್ರಕಾರ ನಡೆದುಕೊಳ್ಳಬೇಕೆನ್ನುವ ಇಚ್ಛಾಶಕ್ತಿ ನಮಗೆ ಇದೆ. ಅವತ್ತಿನ ದಿವಸವೇ ಅಧಿವೇಶನವನ್ನು ಮುಂದೂಡುವುದಲ್ಲ, ಅಧಿವೇಶನವನ್ನು ಮುಂದೂಡಿದರೆ sine-die ಎಂದು ಹೇಳುತ್ತೇವೆ. ಅಧಿವೇಶನವನ್ನು ಮುಕ್ತಾಯ ಮಾಡಿದರೆ prorogue ಆಗುತ್ತದೆ ಎಂದು ಹೇಳಿದ್ದೇವೆ. 12ನೇ ತಾರೀಖಿಗೆ ಅಧಿವೇಶನವು ಮುಂದೂಡುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಸಭಾಪತಿಯವರ ನಾಯಕತ್ವದಲ್ಲಿ ಬಿ.ಎ.ಸಿ., ಸಭೆಯಲ್ಲಿ 12ನೇ ತಾರೀಖಿನವರೆಗೂ ಅಧಿವೇಶನ ನಡೆಯುತ್ತದೆ ಎಂದು ಅವರೇ ಹೇಳಿದ್ದಾರೆ. Are they going to extend this Session? 12ನೇ ತಾರೀಖಿನವರೆಗೂ ಅಧಿವೇಶನ ನಡೆಯಬೇಕೆಂದು ಬಿ.ಎ.ಸಿ., ಸಭೆಯಲ್ಲಿ ತಾವು ಮತ್ತು ನಾವೆಲ್ಲಾ ಸದಸ್ಯರುಗಳು ತಮ್ಮ ನಾಯಕತ್ವದಲ್ಲಿಯೇ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಅದನ್ನು ತಾವು ಇನ್ನು ಮುಂದಕ್ಕೆ ಪುನಃ ವಿಸ್ತರಿಸುತ್ತೇವೆಂದು ಬಿ.ಎ.ಸಿ., ಸಭೆಗೆ ಬಂದಿದ್ದೀರಿಯೇ,

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದರ ಬಗ್ಗೆ ನಾನೇ ನಿಮಗೆ ಹೇಳುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನೀವೇ ನಿರ್ಣಯವನ್ನು ತೆಗೆದುಕೊಂಡು, ಸದನವನ್ನು ಮುಂದಕ್ಕೆ ಹಾಕುತ್ತೇವೆಂದು ಹೇಳುತ್ತೀರಿ. ಅದಕ್ಕೆ ನಾನು ಹೇಳುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಿ.ಎ.ಸಿ., ಸಭೆಯಲ್ಲಿ ನಾನು ಕೂಡ ಪಾಲ್ಗೊಂಡಿದ್ದೆ. 12ನೇ ತಾರೀಖಿನೊಳಗೆ ಚುನಾವಣೆ ಮಾಡುತ್ತೇವೆಂದು ಯಾರು ಮಾತನಾಡಲಿಲ್ಲ. ಈ ಅಧಿವೇಶದ ಮುಕ್ತಾಯದೊಳಗೆ ಮಾಡುತ್ತೇವೆ ಎನ್ನುವ ಮಾತು ಇತ್ಯರ್ಥವಾಯಿತು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, this is not correct.

**ಸಭಾಪತಿಯವರು:–** ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುವಾಗ ಈ ಸದನ ಮುಗಿಯುವುದರೊಳಗೆ ಮಾಡುತ್ತೇವೆಂದು ಹೇಳಿರುವ ಬಗ್ಗೆ ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೇವೆ. ಅವರ ಆಂತರಿಕ ಸಮಸ್ಯೆಗಳು ಏನಿದೆ ಎಂಬುದರ ಬಗ್ಗೆ ನಮಗೆ ಗೊತ್ತಿಲ್ಲ. ಅದರ ಬಗ್ಗೆ ಬೇಕಾಗಿಲ್ಲ. (ಗೊಂದಲ) ವಿರೋಧ ಪಕ್ಷದ ಬಗ್ಗೆ ಬಾಯಿಗೆ ಬಂದ ಹಾಗೆ ಮಾತನಾಡಿದರೆ ಇದನ್ನು ನಾವು ಒಪ್ಪುವುದಿಲ್ಲ. ತಾವು ಇದರ ಬಗ್ಗೆ ಸ್ಪಷ್ಟನೆ ನೀಡಬೇಕು. ಪೀಠ ನಮ್ಮನ್ನು ರಕ್ಷಣೆ ಮಾಡಬೇಕೆಂದು ಎಲ್ಲಿ ಹೇಳುತ್ತದೆ ಎಂದರೆ ವಿರೋಧ ಪಕ್ಷದವರು ಮಾತನಾಡುವ ಹಕ್ಕನ್ನು ಮೊಟಕುಗೊಳಿಸುವಂತಿಲ್ಲ ಎಂದು ಸರ್ಕಾರವು ಹೇಳುತ್ತದೆ. ದಯವಿಟ್ಟು ನಾವು ಹೇಳುವುದನ್ನು ತಾವು ಕೇಳಬೇಕು. ಈ ಸದನ ಮುಕ್ತಾಯವಾಗುವುದರೊಳಗೆ ಅಧಿಕೃತ ಸಭಾಪತಿಯವರ ಚುನಾವಣೆಯ ಪ್ರಕ್ರಿಯೆಗಳನ್ನು ಮುಗಿಸುತ್ತೇವೆಂದು ಹೇಳಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿರುವುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಈ ರೀತಿಯಲ್ಲ, ಆ ರೀತಿಯಲ್ಲ ಎಂದು ಕಥೆಗಳನ್ನು ಹೇಳಬೇಡಿ. ಅವರ ಸಮಸ್ಯೆಗಳು ನಮಗೆ ಗೊತ್ತಿರಲಿಲ್ಲ. ದಯವಿಟ್ಟು, ತಮ್ಮ ಹತ್ತಿರ ಆಗ್ರಹಪಡಿಸುವುದೇನೆಂದರೆ, ಇವತ್ತಿನ ದಿವಸ ಸರ್ಕಾರವು ಸ್ಪಷ್ಟವಾಗಿ ಚುನಾವಣೆಗೆ ವೇಳಾಪಟ್ಟಿಯನ್ನು ಪ್ರಕಟ ಮಾಡುತ್ತದೆಯೋ ಅಥವಾ ಇಲ್ಲವೇ ಎಂಬುದರ ಬಗ್ಗೆ ಉತ್ತರವನ್ನು ಹೇಳಬೇಕು

**ಸಭಾಪತಿಯವರು:–** ಮಾನ್ಯ ಸದಸ್ಯರೇ ಇದರ ಬಗ್ಗೆ ನಾನು ಮಾತನಾಡುತ್ತೇನೆ. ತಾವು ತಮ್ಮ ವಾದವನ್ನು ಮಂಡಿಸಿದ್ದೀರಿ. ಇನ್ನು ಸಾಕಷ್ಟು ವಾದವನ್ನು ಮಾಡಿದ್ದೀರಿ. ಈಗಾಗಲೇ ಸರ್ಕಾರವು ಉತ್ತರವನ್ನು ಕೊಟ್ಟಿದೆ. ನನ್ನ ಜವಾಬ್ದಾರಿಯೇನೆಂದರೆ, ತಾವು ನಿಯಮವನ್ನು ಮೀರಿದರೆ ನಮ್ಮ ನಿಯಮದ ಪ್ರಕಾರ ಏನು ಮುಂದುವರೆಯುತ್ತೀರೋ ಹಾಗೆಯೇ ಮುಂದುವರೆಯಿರಿ. ಇವತ್ತಿನ ದಿವಸ ರಾಜ್ಯಪಾಲರು ಮುಂದಿನ ಚುನಾವಣೆಯಾಗುವವರೆಗೆ ಈ ಸದನವನ್ನು ನಡೆಸುವುದಕ್ಕೆ ಹೇಳಿದ್ದಾರೆ. ಹಾಗೆಯೇ ಸದನವನ್ನು ನಡೆಸಿದ್ದೇನೆ. ಮುಂದಿನ ಚುನಾವಣೆ ಯಾವಾಗ ಘೋಷಣೆಯಾಗುತ್ತದೆ. ಆಗ ಚುನಾವಣೆಯನ್ನು ಮಾಡಿ ಸದನವನ್ನು ನಡೆಸಬೇಕೆಂಬುದು ಬಿಟ್ಟರೆ, ಇನ್ನು ಮುಂದೆ ಇದರ ಬಗ್ಗೆ ಚರ್ಚೆ ಮಾಡುವ ಆಗಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ಇದನ್ನು allow ಮಾಡುವ ಹಾಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಪೀಠದ ಗೌರವವನ್ನು ಉಳಿಸಬೇಕೆನ್ನುವ ಒಂದೇ ಕಾರಣಕ್ಕೋಸ್ಕರ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಏನು ಆದೇಶವನ್ನು ನೀಡಿದೆ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಗಮನ ಸೆಳೆಯುವ ಸೂಚನೆಯ ಮೇಲೆ ಶ್ರೀ ತೇಜಸ್ವಿನಿಗೌಡರವರು ಮಾತನಾಡಬೇಕು. ಶ್ರೀ ಅರುಣ ಶಹಾಪುರರವರೇ, ನಾನು ಹೇಳುವುದನ್ನು ಕೇಳಿ, ಏನೂ ಬೇಕಾದರೂ ಮಾತನಾಡಬಾರದು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಇದರ ಬಗ್ಗೆ ಹೊಂದಾಣಿಕೆ ಮಾಡಿಕೊಂಡಿದ್ದೇವೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ನನ್ನನ್ನು ಏನು ಮಾಡುಬೇಕೆಂದು ಹೇಳುತ್ತೀರಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಇದರ ಬಗ್ಗೆ ಹೇಳಿಕೆ ನೀಡಲು ಆದೇಶ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ಅವರ ಸಮಸ್ಯೆಗಳು ನಮ್ಮ ಸಮಸ್ಯೆಗಳಲ್ಲ. ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಬೇಕೆಂದು ನಮ್ಮದು ಆಗ್ರಹ ಇದೆ.

**ಸಭಾಪತಿಯವರು:–** ಕಾನೂನಿನ ಪ್ರಕಾರ ಏನು ಮಾಡುತ್ತೀರೋ, ಅದನ್ನು ಮಾಡಿ.

(ಗೊಂದಲ)

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಒಂದು ಪರಂಪರೆ ಎಂಬುದು ಇದೆ. ಸರ್ಕಾರವು ಒಂದು ಕಟ್ಟ ಪರಂಪರೆಯನ್ನು ಹಾಕುತ್ತಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರು ಈ ಸದನದ ಹಕ್ಕನ್ನು ಮೊಟಕು ಮಾಡುವುದಕ್ಕೆ ಆಗುವುದಿಲ್ಲ. ಶಾಶ್ವತವಾದ ಸಭಾಪತಿಯವರನ್ನು ಆಯ್ಕೆ ಮಾಡಬೇಕಾಗುತ್ತದೆ. ಅದನ್ನು ರಾಜ್ಯಪಾಲರು ಮಾಡುವುದಕ್ಕೆ ಯಾರು?

(ಗೊಂದಲ)

**ಸಭಾಪತಿಯವರು:–** ನಾನು ಹೇಳುವುದನ್ನು ಮೊದಲು ಕೇಳಿ, ನಾನು ಸದನದಲ್ಲಿ ಹಿಂದೆ ನಡೆದಂತಹ ಘಟನೆಗಳನ್ನು ಹೇಳಿದರೆ ಅದು ರೂಲಿಂಗ್ ಆಗುತ್ತದೆ. ಅದಕ್ಕೆ ಅದನ್ನು ಹೇಳಬಾರದೆಂದು ನಿಮನ್ನು ಬಿಟ್ಟಿದ್ದೇನೆ. ದಯಮಾಡಿ, ನನ್ನನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಆಗಾಗ ಎದ್ದೆದ್ದು ಏಕೆ ಮಾತನಾಡುತ್ತೀರಿ. ನಾನು ಹೇಳಿದರೂ ತಾವು ಕೇಳುವುದಿಲ್ಲ. ಎಲ್ಲಾ ಸದಸ್ಯರು ಎದ್ದು ಮಾಡಿದರೆ ಏನಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ ಒಂದು ನಿಮಿಷ. ತಾವು ನಿಮ್ಮ ವಾದವನ್ನು ಮಂಡಿಸಿದ್ದೀರಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ತಮ್ಮನ್ನು ಸಭಾಪತಿಯನ್ನಾಗಿ ಆಯ್ಕೆ ಮಾಡಲು ಚುನಾವಣೆಯನ್ನು ಪ್ರಕಟ ಮಾಡಲಿ ಆಗ ನಾವು ಒಪ್ಪುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರೇ ಕಾಯಿದೆಯ ಪ್ರಕಾರ ಅದು ಬರುವುದಿಲ್ಲ. ಇದರ ಬಗ್ಗೆ ತಾವು ಸಹ ಹೇಳಿದ್ದೀರಿ. ಅವರು ತಮ್ಮ ವಿಚಾರವನ್ನು ಹೇಳಿದ್ದಾರೆ. ಶ್ರೀ ಶಾಣಪ್ಪನವರೇ ನಾನು ಹೇಳುವುದನ್ನು ಕೇಳಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಚರ್ಚೆಗೋಸ್ಕರ ಈ ವಿಷಯವನ್ನು ಪ್ರಸ್ತಾಪ ಮಾಡಿರುವುದಲ್ಲ. ನಮಗೂ ಮತ್ತು ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಲ್ಲ. ನಾವು ಸಭಾಪತಿಯವರ ಚುನಾವಣೆಯ ಬಗ್ಗೆ ಹೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಿಯಮಾವಳಿಯ ಪ್ರಕಾರ ಸಭೆಯನ್ನು ನಡೆಸುತ್ತೀರೋ ಅಥವಾ ಮಾನ್ಯ ವಿರೋಧ ಪಕ್ಷದವರು ಹೇಳಿದ ಹಾಗೆ ಕೇಳುತ್ತೀರೋ ಎಂಬುದನ್ನು ಹೇಳಬೇಕು.

**ಸಭಾಪತಿಯವರು:-** ಸದನವನ್ನು ನಡೆಸಬೇಕಾದರೆ ನಿಯಮಗಳು ಇವೆ. ಅದರ ಬಗ್ಗೆ ಹೇಳುತ್ತೇನೆ. ಎಲ್ಲರೂ ಕೇಳಿ. ಸರ್ಕಾರಕ್ಕೆ ಹೀಗೆ ಉತ್ತರ ಕೊಡಿ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಸರ್ಕಾರದ ಉತ್ತರವನ್ನು ನೀಡಲಾಗಿದೆ. ತಾವು ಸಹ ಇದರ ಬಗ್ಗೆ ಹೇಳಿದ್ದೀರಿ. ಚುನಾವಣೆ ಬಗ್ಗೆ ಅವರು ಮಾಡಿಲ್ಲ ಎಂದು ಹೇಳಿದ್ದೀರಿ. ಇದರ ಬಗ್ಗೆ ತಪ್ಪಾಗಿದೆ ಎಂದು ಹೇಳಿದ್ದೀರಿ. ಕಾಯಿದೆಯನ್ನು ಭಂಗ ಮಾಡಿದ್ದೇವೆ ಎಂದು ಹೇಳಿದ್ದೀರಿ. ನಿಮ್ಮಲ್ಲಿಯೇ ಬೇಕಾದಷ್ಟು ಇದೆ. ತಾವು ಮಾಡಿರುವ ಪ್ರಕಾರ ಸದನವು ಇಷ್ಟು ದಿನದಿಂದ ನಡೆದು ಬಂದಿದೆ. ಇನ್ನು ಗಮನ ಸೆಳೆಯುವ ಸೂಚನೆ, ನಿಯಮ 330 ರ ಮೇಲೆ ಚರ್ಚೆ ಇದೆ. ಇನ್ನು ಬೇಕಾದಷ್ಟು ಕೆಲಸ ಇದೆ. ಸರ್ಕಾರದಿಂದ ಈಗಲೇ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ.

(ಮುಂದು)

**(171)10/07/2018/ಎಸ್‌ಪಿಆರ್/ಆರ್‌ಎನ್./12:50**

**ಸಭಾಪತಿಯವರು(ಮುಂದು):-**

ಇದಕ್ಕಿಂತ ಹೆಚ್ಚಾಗಿ ಮಾತನಾಡುವ ಅವಶ್ಯಕತೆ ಇಲ್ಲ. ಆದ್ದರಿಂದ ತಾವುಗಳು ಯಾರೂ ಸಹ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಯಾವ ನಿಯಮದಡಿ ಪ್ರಸ್ತಾವನೆಯನ್ನು ಸಲ್ಲಿಸುತ್ತಾರೋ ಸಲ್ಲಿಸಲಿ. ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಸಲ್ಲಿಸುವುದಾದರೆ ಸಲ್ಲಿಸಲಿ. ಯಾವುದಾದರೂ ಸೂಚನೆಯನ್ನು ನೀಡಲಿ.

**ಸಭಾಪತಿಯವರು:-** ಕಾನೂನು ಪ್ರಕಾರ ವಿರೋಧ ಪಕ್ಷದ ಸದಸ್ಯರುಗಳು ಕ್ರಮವನ್ನು ತೆಗೆದುಕೊಳ್ಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಯಾವುದಾದರೂ ಸೂಚನೆಯನ್ನು ನೀಡಲಿ. ಆದರೆ ಸೂಚನೆಯನ್ನು ನೀಡದೇ ಪ್ರಸ್ತಾವನೆ ಮಾಡುವುದಾದರೆ ಹೇಗೆ?

(ಗೊಂದಲ)

**ಶ್ರೀ ರಘುನಾಥರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಎಲ್ಲರಿಗಿಂತ ಹಿರಿಯ ಸದಸ್ಯರು ಇದ್ದೀರಿ. ತಾವು ಆ ಪೀಠವನ್ನು ಅಲಂಕರಿಸಿರುವುದಕ್ಕಾಗಿ ತುಂಬಾ ಗೌರವವಿದೆ. ತಮ್ಮ ಮಾರ್ಗದರ್ಶನದಲ್ಲಿ ಈ ಸದನವು ನಡೆಯಬೇಕೆಂಬ ಉದ್ದೇಶ ನಮಗೆ ಇದೆ. ಆದರೆ, ಈ ಸದನಕ್ಕೆ ತನ್ನದೇ ಆದ ಕಾರ್ಯಪದ್ಧತಿಗಳಿವೆ. ಆ ಕಾರ್ಯಪದ್ಧತಿಗಳ ಬಗ್ಗೆ ತಾವು ಯಾವ ರೀತಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

**ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರವು ಯಾವ ರೀತಿಯಾಗಿ ಉತ್ತರವನ್ನು ನೀಡಬೇಕು ಎಂಬುದನ್ನು ವಿರೋಧ ಪಕ್ಷದವರು ಬರೆದು ಕೊಡಲಿ; ಆ ರೀತಿಯಾಗಿಯೇ ಸರ್ಕಾರವು ಉತ್ತರವನ್ನು ನೀಡುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ತಮ್ಮ ಉಪಸ್ಥಿತಿಯಲ್ಲಿ ಬಿ.ಎ.ಸಿ.ಯಲ್ಲಿ ಈ ಬಗ್ಗೆ ತೀರ್ಮಾನವಾಗಿದೆ. ಆ ತೀರ್ಮಾನಕ್ಕೆ ತಕ್ಕಂತೆ ನಾವು ತಮಗೆ ನ್ಯಾಯವನ್ನು ಕೊಡಬೇಕು. ಈ ತಿಂಗಳ 12 ನೇ ತಾರೀಖಿನೊಳಗೆ ಸಭಾಪತಿಗಳ ಚುನಾವಣೆ ಆಗಬೇಕು.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರ ಕಲ್ಪನೆಯಲ್ಲಿ ಇತಿ-ಮಿತಿ ಇರಬೇಕು.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಿಯಮಾವಳಿಗಳ ಅರಿವು ಇಲ್ಲದೇ ಬಿ.ಎ.ಸಿ.ಯಲ್ಲಿ ಮಂಡನೆ ಮಾಡದೇ ಈ ಚರ್ಚೆ ಹೇಗೆ ಸಾಧ್ಯ?

**(ಗೊಂದಲ)**

**ಸಭಾಪತಿಯವರು:–** ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿದ್ದೇನೆ. ಮುಂದಿನದು ಗಮನ ಸೆಳೆಯುವ ಸೂಚನೆ. ಡಾ॥ ತೇಜಸ್ವಿನಿ ಗೌಡ ರವರೇ ತಾವು ಪ್ರಾರಂಭ ಮಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮ್ಮ ಮಾತನ್ನು ಕೇಳಿ. ಪೀಠ ನಮ್ಮ ರಕ್ಷಣೆಯನ್ನು ಮಾಡಬೇಕು. ಸರ್ಕಾರ ಸ್ಪಷ್ಟವಾಗಿ ಹೇಳಬೇಕು; ನಮ್ಮನ್ನು ಭ್ರಮೆಯಲ್ಲಿಡುವುದು ಬೇಡ. **(ಗೊಂದಲ)** ಅವರಿಗಿರುವುದು ಒಂದೇ ಮಾರ್ಗ.

**(ಗೊಂದಲ)**

**ಸಭಾಪತಿಯವರು :–** ಈಗ ಗಮನ ಸೆಳೆಯುವ ಸೂಚನೆ. ಹೀಗಾಗಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಸಭಾಪತಿಗಳ ಚುನಾವಣಾ ವೇಳಾ ಪಟ್ಟಿಯನ್ನು ಇವತ್ತಿನ ದಿವಸ ಪ್ರಕಟಿಸುತ್ತೇವೆ ಎಂಬುದಾಗಿ ಹೇಳಲಿ.

**ಸಭಾಪತಿಯವರು:–** ನಾನು ಆ ರೀತಿಯಾಗಿ ಸರ್ಕಾರಕ್ಕೆ ನಿರ್ದೇಶನವನ್ನು ಕೊಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷವನ್ನು ಕಟ್ಟಿ ಹಾಕುವಂತಹ ಕೆಲಸಗಳು ಬೇಡ. ಪೀಠ ನಮ್ಮ ರಕ್ಷಣೆಗೆ ಬರಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿತಂಡವಾದವನ್ನು ಮಾಡಬೇಡಿ. ನಾನು ನಿಮಗೆ ಹೇಳುತ್ತಿದ್ದೇನೆ. ಸರ್ಕಾರಕ್ಕೆ ನಿರ್ದೇಶನ ಕೊಡುವ ಯಾವುದೇ ಅಧಿಕಾರ ನನ್ನ ಬಳಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ವಿರೋಧ ಪಕ್ಷದವರು ಮಾತನಾಡುವಾಗ, ಕನಿಷ್ಠಪಕ್ಷ ನಮ್ಮ ಮಾತನ್ನು ತಾವು ಕೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಎಷ್ಟು ಮಾತನಾಡುತ್ತೀರಿ? ಮೊದಲು ನನ್ನ ಮಾತನ್ನು ಕೇಳಿ. ನೀವು ಮಾಡುವುದು ತಪ್ಪು. ಏಕೆಂದರೆ, ನೀವು ಮಾತನಾಡುವ ಮೊದಲು ಯಾವುದೇ ರೀತಿಯಾದ ನೋಟೀಸ್‌ನ್ನು ನೀಡುವುದಿಲ್ಲ. ಯಾವುದೇ ವಿಷಯವನ್ನು ಮೊದಲು ಹೇಳುವುದಿಲ್ಲ. ನೀವುಗಳು ನನ್ನ ಸೌಜನ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ. ನೀವು ಈ ರೀತಿಯಾಗಿ ಮಾಡುವುದು ಸರಿ ಅಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅನೇಕ ಸಂದರ್ಭಗಳಲ್ಲಿ ಇಂತಹ ಪರಿಸ್ಥಿತಿಯಲ್ಲಿ ವಿಷಯವನ್ನು ಶೂನ್ಯ ವೇಳೆಯಲ್ಲಿ ಉಲ್ಲೇಖ ಮಾಡಿರುವಂತಹ ಉದಾಹರಣೆಗಳಿವೆ. **(ಗೊಂದಲ)** ನೀವು ಅಜೆಂಡಾಗಳನ್ನು ತೆಗೆದು ನೋಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾನೂನುಗಳಿಲ್ಲವೇ? ಸಭೆಯ ನಿಯಮಗಳಿಲ್ಲವೇ? ನಡವಳಿಗಳಿಲ್ಲವೇ? (ಗೊಂದಲ) ಮಾನ್ಯ ವಿರೋಧ ಪಕ್ಷದವರು ಪೀಠ ಕೊಟ್ಟ ಅವಕಾಶವನ್ನು ದುರುಪಯೋಗ ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರು ಗಮನ ಸೆಳೆಯುವ ಸೂಚನೆಗೆ ಅವಕಾಶವನ್ನು ನೀಡಿದ್ದಾರೆ. ಹೀಗಾಗಿ ಸಭೆಯ ಕಲಾಪಗಳು ಮುಂದುವರೆಯಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಸರಿಯಾದ ಕ್ರಮವಲ್ಲ.

(ಗೊಂದಲ)

**ಸಭಾಪತಿಯವರು :–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿರವರೇ, ತಾವು ಸಮಾಧಾನವಾಗಿ ಕುಳಿತುಕೊಳ್ಳಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಂದೆರೆಡು ವಿಚಾರಗಳನ್ನು ಹೇಳಬಯಸುತ್ತೇನೆ. ಯಾರು ಏನೇ ಮಾತನಾಡಿದರೂ ಅದು ಕಡತಕ್ಕೆ ಹೋಗುತ್ತದೆ. ಸತ್ಯ ಯಾವುದು, ಏನೆಂದು ಗೊತ್ತಾಗುವುದಿಲ್ಲ. ಈ ವಿಚಾರವನ್ನು ನಾನು ಸ್ಪಷ್ಟಪಡಿಸುತ್ತೇನೆ. ಬಿ.ಎ.ಸಿ.ಯಲ್ಲಿ ಈ ವಿಚಾರ ಚರ್ಚೆಯಾಗಿಲ್ಲ. ಮಾನ್ಯ ಸದಸ್ಯರುಗಳಾದ ಶ್ರೀ ಶಾಣಪ್ಪ ಹಾಗೂ ಶ್ರೀ ರಘುನಾಥ ರಾವ್ ಮಲ್ಕಾಪೂರೆ ಅವರುಗಳು ಹೇಳಿರುವ ವಿಚಾರಗಳು ಬೇರೆಯಾಗಿವೆ. ಯಾವ ದಿನಾಂಕದವರೆಗೆ ಅಧಿವೇಶನವನ್ನು ನಡೆಸಬೇಕು ಎಂಬ ಬಗ್ಗೆ ಬಿ.ಎ.ಸಿ.ಯಲ್ಲಿ ಮಾತನಾಡಲಾಗಿದೆ. ಇದು ನಿಜ. ಬಿ.ಎ.ಸಿ.ಯಲ್ಲಿ ಸಭಾಪತಿಯವರ ಚುನಾವಣೆಯ ಬಗ್ಗೆ ಮಾತುಕತೆ ಆಗಿಲ್ಲ. It is very clear. ಮಾನ್ಯ ಸದಸ್ಯರಾದ ಶ್ರೀ ಅರುಣ್ ಶಹಾಪುರರವರು ಸಂಪ್ರದಾಯವನ್ನು ಹುಟ್ಟು ಹಾಕಬೇಡಿ ಎಂಬುದಾಗಿ ಬಹಳ ಏರುಧ್ವನಿಯಲ್ಲಿ ಮಾತನಾಡುತ್ತಿದ್ದಾರೆ. ಅವರ ಪಕ್ಷದ ಸರ್ಕಾರ 2008 ನೇ ಸಾಲಿನಲ್ಲಿ ಅಧಿಕಾರದಲ್ಲಿತ್ತು. ಮಾನ್ಯ ತಿಪ್ಪಣ್ಣರವರನ್ನು ಸಭಾಪತಿಯ ಪೀಠದಲ್ಲಿ ಒಂದು ತಿಂಗಳು ನಾಲ್ಕು ದಿವಸಗಳ ಕಾಲ ಸಭಾಪತಿಯಾಗಿ ಕೂಡಿಸಿದ್ದಿರಿ ಎನ್ನುವ ಅಂಶವನ್ನು ದಯಮಾಡಿ ವಿರೋಧ ಪಕ್ಷದ ಸದಸ್ಯರುಗಳು ಮರೆಯಬಾರದು ಎನ್ನುವುದನ್ನು ನಾನು ಅವರಿಗೆ ಮನವರಿಕೆ ಮಾಡುತ್ತೇನೆ. **(ಗೊಂದಲ)** ಈ ವಿಚಾರದಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಬಾರದು, ಎನ್ನುವ ಕಾರಣದಿಂದಾಗಿ ನಾನು ಯಾರನ್ನೂ ಸಹ ಚುಚ್ಚುವಂತಹ ಕೆಲಸವನ್ನು ಮಾಡಲು ಹೋಗಲಿಲ್ಲ. ಆದರೆ ಅನಿವಾರ್ಯವಾಗಿ ರಾಜಕೀಯಕರಣ ಮಾಡುವಂತೆ ಒತ್ತಾಯ ಮಾಡುವ ಸಂದರ್ಭದಲ್ಲಿ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ಅವತ್ತಿನ ದಿವಸ ದಿವಂಗತ ವೇದವ್ಯಾಸ ಶ್ರೀನಿವಾಸ ಆಚಾರ್ಯರವರು ಯಾವ ಕಾರಣಕ್ಕಾಗಿ ಉತ್ತರವನ್ನು ನೀಡಬೇಕಾದ ಸಂದರ್ಭ ಬಂದಿತೆಂದರೆ ಮಾನ್ಯ ತಿಪ್ಪಣ್ಣನವರು ಅಂದು ಸಭಾಪತಿಯವರ ಪೀಠದಲ್ಲಿ ಕುಳಿತಿದ್ದರಿಂದ ಆಚಾರ್ಯರವರು ಉತ್ತರ ಕೊಡುವಂತಹ ಪರಿಸ್ಥಿತಿ ಬಂತು. ಅವತ್ತಿನ ದಿವಸ ದಿವಂಗತ ವೇದವ್ಯಾಸ ಶ್ರೀನಿವಾಸ ಆಚಾರ್ಯರವರು ಸುಮ್ಮನೆ ಅವರ ಪಾಂಡಿತ್ಯ ಪದರ್ಶನಕ್ಕಾಗಿ ಉತ್ತರವನ್ನು ನೀಡಿಲ್ಲ. ಮಾನ್ಯ ತಿಪ್ಪಣ್ಣನವರು ಸಭಾಪತಿಯ ಪೀಠದಲ್ಲಿ ಕುಳಿತಿದ್ದರಿಂದ ಪ್ರಶ್ನೆ ಉದ್ಭವವಾಗಿದ್ದರಿಂದ ಆಚಾರ್ಯರವರು ಉತ್ತರವನ್ನು ಕೊಡಬೇಕಾದಂತಹ ಸಂದರ್ಭ ಬಂದಿತು. ಆಚಾರ್ಯರವರು ಯಾವುದನ್ನು ಯಾವ ರೀತಿಯಾಗಿ ವಿಶ್ಲೇಷಣೆ ಹಾಗೂ ಅನುಷ್ಠಾನವನ್ನು ಮಾಡಿದ್ದಾರೆ, ಆಚಾರ್ಯರವರು ಮಾಡಿದ್ದನ್ನು ಬಿಟ್ಟು ಇವತ್ತಿನ ದಿವಸ ನಾವು ಏನೂ ಮಾಡುತ್ತಿಲ್ಲ. ಈ ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣನವರ ಜೊತೆಗೆ ಶ್ರೀ ಟಿ.ಎನ್.ನರಸಿಂಹಮೂರ್ತಿಯವರೂ ಸಹ ದಿನಾಂಕ 07/07/1994 ರಿಂದ ದಿನಾಂಕ 26/08/1994 ರ ವರೆಗೆ '*protem* Chairman' ಆಗಿ ಕಾರ್ಯವನ್ನು ನಿರ್ವಹಿಸಿದ್ದರು. ಅದೇ ರೀತಿಯಾಗಿ ಶ್ರೀ ಪೋತೇದಾರ್ ರವರೂ ಸಹ ದಿನಾಂಕ 01/07/1984 ರಿಂದ ದಿನಾಂಕ 26/03/1985 ರ ವರೆಗೆ 'protem Chairman' ಆಗಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾರ್ಯವನ್ನು ನಿರ್ವಹಿಸಿದ್ದರು. ಇವತ್ತಿನ ದಿವಸ 'protem Chairman' ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಇವರು 7ನೆಯ 'protem Chairman' ಆಗಿದ್ದಾರೆ. ಈ ಹಿಂದೆ ಆರು ಬಾರಿ ಈ ರೀತಿಯಾಗಿ 'protem Chairman' ನ ಪರಂಪರೆಯಾಗಿದೆ. ಹೀಗಾಗಿ ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಸಭಾಪತಿಯ ಚುನಾವಣೆಯನ್ನು ಮಾಡುವಂತಹ ಮಾತಿಗೆ ಬದ್ಧರಾಗಿ ಎನ್ನುವಂತಹ ವಿರೋಧ ಪಕ್ಷದವರ ಮಾತನ್ನು ನಾವು endorse ಮಾಡುತ್ತೇವೆ.

**(ಗೊಂದಲ)**

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಸಭಾಪತಿಯವರ ಚುನಾವಣೆಯನ್ನು ಮಾಡಲಿಕ್ಕೆ ನಿಮಗೆ ಯಾವ ಸಮಸ್ಯೆ ಇದೆ?

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೊನೆಯ ಒಂದಂಶವನ್ನು ಮುಗಿಸಿಬಿಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಯಾರಾದರೂ ಒಬ್ಬರು ಮಾತನಾಡಿ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಸಭಾಪತಿಯ ಚುನಾವಣೆಯನ್ನು ಮಾಡಲಿಕ್ಕೆ ಸರ್ಕಾರಕ್ಕೆ ಯಾವ ಸಮಸ್ಯೆ ಇದೆ ಎಂದು ಕೇಳಿದ್ದಾರೆ. ಇದು ಕೇಳುವಂತಹ ಪ್ರಶ್ನೆಯಲ್ಲ. ನಿಯಮಗಳನ್ನು ಪಾಲಿಸುತ್ತಿದ್ದೀರೋ ಅಥವಾ ಇಲ್ಲವೋ ಎನ್ನುವುದನ್ನು ಕೇಳುವ ಹಕ್ಕು ವಿರೋಧ ಪಕ್ಷದ ಸದಸ್ಯರಿಗೆ ಇದೆ. ನಾವು ಎಲ್ಲಿಯಾದರೂ ನಿಯಮವನ್ನು ಉಲ್ಲಂಘಿಸಿದ್ದರೆ, ಅದನ್ನು ಅವರು ತಿಳಿಸಿ ಹೇಳಲಿ. ನಾವು ಯಾವ ರೀತಿಯಾಗಿ ಕಾನೂನನ್ನು ಓದಿದ್ದೇವೆ, ಇದರಲ್ಲಿ ಯಾವ ರೀತಿಯಾಗಿ ತಪ್ಪಾಗಿ ಓದಿದ್ದೇವೆ ಎಂಬುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರ ಪೈಕಿ ಯಾರಾದರೂ ಸಂಬಂಧಪಟ್ಟ ಪರಿಣಿತರು ಇದ್ದರೆ ಅವರಿಂದ ಮಾಹಿತಿಯನ್ನು ಪಡೆದುಕೊಂಡು ಸರ್ಕಾರಕ್ಕೂ ಸಹ ಯಾವ ರೀತಿಯಾಗಿ ಕಾನೂನು ಉಲ್ಲಂಘನೆ ಆಗಿದೆ ಎಂಬುದರ ಬಗ್ಗೆ ತಿಳಿ ಹೇಳಲಿ. ಮಾನ್ಯ ವಿರೋಧ ಪಕ್ಷದ ಸದಸ್ಯರು ಪ್ರಸ್ತಾಪಿಸಿರುವ ಪ್ರಶ್ನೆಗೆ ನಾನು ಸುಮ್ಮನೆ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಲು ಹೋಗದೇ, ಬಹಳ ಸ್ಪಷ್ಟವಾದ ಹಾಗೂ ನಿರ್ದಿಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ. ನಾನು ಬೇಕಾದರೆ ಎಲ್ಲಾ ಅಂಶಗಳ ಬಗ್ಗೆ ಮಾತನಾಡಬಹುದಿತ್ತು. ಎಲ್ಲಿಯೂ ಸಹ ನಾವು ನಿಯಮಾವಳಿಗಳ ಉಲ್ಲಂಘನೆಯನ್ನು ಮಾಡುತ್ತಿಲ್ಲ ಹಾಗೂ ಹಾಗೆ ಮಾಡುವ ಉದ್ದೇಶವೂ ಸಹ ಇಲ್ಲ. ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಅದಕ್ಕೆ ನಾವು ಉತ್ತರವನ್ನು ನೀಡಿದ್ದೇವೆ. ತಾವು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆ ನಿಯಮಾವಳಿಗಳಲ್ಲಿ ಅವಕಾಶವಿದೆ. ಅದನ್ನು ಅವರುಗಳು ಉಪಯೋಗಿಸಿಕೊಳ್ಳಲಿ. ಈ ಸದನ ಎಲ್ಲಾ ಸದಸ್ಯರುಗಳಿಗೆ ಸೇರಿದ್ದಾಗಿದೆ. ಈ ರೀತಿಯಾಗಿ ಮಾನ್ಯ ವಿರೋಧ ಪಕ್ಷದ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸದಸ್ಯರುಗಳು ಯಾವುದೇ ನಿಯಮಾವಳಿಗಳಿಲ್ಲದೆ ಒಂದೇ ವಿಚಾರವನ್ನು ಒತ್ತಾಯ ಮಾಡುವುದರಿಂದ ಸದನದ ಇತರೆ ಸದಸ್ಯರುಗಳ ಹಕ್ಕುಗಳಿಗೂ ಸಹ ಎಲ್ಲಿಯೋ ಒಂದು ಕಡೆ ಧಕ್ಕೆಯಾಗುತ್ತದೆ. Inconvenience is caused to other Members by such instances. ಕಾನೂನಿನಡಿಯಲ್ಲಿ ಏನೇ ಅವಕಾಶಗಳಿದ್ದರೆ ಅದನ್ನು ವಿರೋಧ ಪಕ್ಷದವರು ಬಳಸಿಕೊಳ್ಳಲಿ. ಅದಕ್ಕೆ ನಾವು ಬದ್ಧರಿದ್ದೇವೆ. ಎಲ್ಲಿಯೂ ಸಹ ನಾವು ಕಾನೂನನ್ನು ಉಲ್ಲಂಘನೆ ಮಾಡಿಲ್ಲ ಹಾಗೂ ಅದನ್ನು ಮಾಡುವ ಉದ್ದೇಶವೂ ಸಹ ಇಲ್ಲ. ನಿಯಮಾನುಸಾರ ಈ ಅಧಿವೇಶನ ಮುಕ್ತಾಯವಾಗುವುದರೊಳಗೆ ನಾವು ಸಭಾಪತಿಯ ಚುನಾವಣೆಯನ್ನು ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಯಾರಾದರೂ ಒಬ್ಬರು ಮಾತನಾಡಿ.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, kindly come to the conclusion. When do they want to complete this?

**(ಗೊಂದಲ)**

**ಸಭಾಪತಿಯವರು:–** ಒಬ್ಬರು ಮಾತನಾಡುವುದನ್ನು ಮಾತ್ರವೇ ಕಡತಕ್ಕೆ ಹಾಕಿ. ಎಲ್ಲರೂ ಮಾತನಾಡುವುದು ಕಡತಕ್ಕೆ ಹೋಗಬಾರದು. ಇನ್ನುಳಿದವರು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣ ಭೈರೇಗೌಡ ರವರು ಹೇಳಿದ ಎಲ್ಲಾ ಮಾತನ್ನು ನಾವು ಕೇಳಿದ್ದೇವೆ. ಮಾನ್ಯ ತಿಪ್ಪಣ್ಣನವರು ಹಂಗಾಮಿ ಸಭಾಪತಿಯಾಗಿದ್ದು ಹೌದು. ಸದನ ಮುಗಿಯುವುದರೊಳಗೆ ಚುನಾವಣೆ ನಡೆದಿತ್ತು. ನಂತರದಲ್ಲಿ ಮತ್ತಿಕಟ್ಟಿ ವೀರಣ್ಣನವರು ಸಭಾಪತಿಯಾದರು. ಈ ಅಂಶವನ್ನು ಸರಿಯಾಗಿ ನೆನಪು ಮಾಡಿಕೊಳ್ಳಿ. ದಿವಂಗತ ವೇದವ್ಯಾಸ ಶ್ರೀನಿವಾಸ ಆಚಾರ್ಯರವರು ಹೇಳಿದ್ದನ್ನೂ ಹಾಗೂ ಮಾನ್ಯ ಕೃಷ್ಣ ಭೈರೇಗೌಡ ರವರು ತಾವು ಈ ಹಿಂದೆ ಹೇಳಿದ ಮಾತುಗಳನ್ನು ನೆನಪು ಮಾಡಿಕೊಳ್ಳಲಿ. ನಾನು ಅಂದು ಸದನದಲ್ಲಿ ಉಪಸ್ಥಿತನಿದ್ದೆನು. ಮಾನ್ಯ ತಿಪ್ಪಣ್ಣನವರು ಹಂಗಾಮಿ ಸಭಾಪತಿಯಾಗಿದ್ದು ಸತ್ಯ. ಆದರೆ, ಅದೇ ಸದನ ಮುಗಿಯುವುದರೊಳಗೆ ಚುನಾವಣೆ ನಡೆದಿತ್ತು. ಇಷ್ಟು ದೊಡ್ಡ ಹುದ್ದೆಯಲ್ಲಿರುವ ಮಾನ್ಯ ಮಂತ್ರಿಗಳು ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಕೆಲಸಗಳನ್ನು ಮಾಡಬಾರದು ಎಂಬುದಾಗಿ ನಾನು ಆಗ್ರಹ ಮಾಡುತ್ತೇನೆ ಹಾಗೂ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಸರ್ಕಾರ . . . . **(ಗೊಂದಲ)** ನಾನು ಮಾತನಾಡುವುದನ್ನು ಇನ್ನೂ ಪೂರ್ಣಗೊಳಿಸಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿಯಾಗಿ ಮಾತನಾಡಿದಲ್ಲಿ ಅದರಿಂದ ತಪ್ಪು ಸಂದೇಶ ಹೋಗುತ್ತದೆ. ನಾನು ಪುಸ್ತಕವನ್ನು ಓದಿ ಹೇಳುತ್ತಿದ್ದೇನೆ. **(ಗೊಂದಲ)** Prorogation ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಸಭಾಪತಿಯ ಚುನಾವಣೆಯನ್ನು ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನೇ ಹೇಳುತ್ತಿದ್ದರೆ ನಾನೂ ಸಹ ಅದನ್ನೇ ಪುನರಾವರ್ತನೆ ಮಾಡಬೇಕಾಗುತ್ತದೆ. **(ಗೊಂದಲ)** ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದಲ್ಲಿ ಗೊಂದಲವನ್ನು ನಿರ್ಮಾಣ ಮಾಡುವುದು ಬೇಡ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನಲ್ಲ; ಮಾನ್ಯ ಕೃಷ್ಣ ಭೈರೇಗೌಡರವರು ಈ ವಿಚಾರದಲ್ಲಿ ಗೊಂದಲವನ್ನು ನಿರ್ಮಾಣ ಮಾಡುತ್ತಿದ್ದಾರೆ. ಅವರಿಗೆ ತಾಕತ್ತು, ಶಕ್ತಿ ಹಾಗೂ ಬಹುಮತ ಇದೆ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಪುಸ್ತಕ ತೆಗೆಯುವ ತಾಕತ್ತು ಇದೆ. ಸದನವು ನಿಯಮಾವಳಿಗಳ ಆಧಾರದ ಮೇಲೆ ನಡೆಯುತ್ತದೆ. (ಗೊಂದಲ) ಮಾನ್ಯ ವಿರೋಧ ಪಕ್ಷದವರು ಹೇಳಿರುವುದೇ ಕಾನೂನು ಆಗುವುದಿಲ್ಲ. ಈ ದೇಶದಲ್ಲಿ, ಈ ರಾಜ್ಯದಲ್ಲಿ ಕಾನೂನು ಕಟ್ಟಳೆಗಳಿವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣನವರು ಹಂಗಾಮಿ ಸಭಾಪತಿಯಾಗಿದ್ದು ಹೌದು.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಇವರುಗಳು ಹೇಳಿದ ಹಾಗೆ ನಾವು ಮಾಡಬೇಕೆಂಬ ಕಾನೂನು ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪುಸ್ತಕವನ್ನು ಹಿಡಿದುಕೊಂಡು ಯಾರದ್ದಾದರೂ ಬಾಯಿಯನ್ನು ಮುಚ್ಚಿಸುವುದಕ್ಕಾಗುತ್ತದೆಯೇ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**(ಮುಂದು)**

(172) 10–07–2018 01.00 ಬಿಎಸ್‌ಡಿ/ವಿಕೆ

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಅವರಿಗೆ ಸಂವಿಧಾನದ ಬಗ್ಗೆಯೂ ಗೌರವ ಇಲ್ಲ, ಸಂವಿಧಾನವನ್ನೇ ತಿದ್ದುಪಡಿ ಮಾಡುವುದಕ್ಕೆ ಹೊರಟಿದ್ದರು.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್ :–** ಅವರು ಸಂವಿಧಾನವನ್ನು ರದ್ದು ಮಾಡುವುದಕ್ಕೆ ಹೊರಟಿದ್ದರು. ಅವರಿಗೆ ಸಂವಿಧಾನದ ಬಗ್ಗೆ ಯಾವ ಗೌರವವೂ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಮಾನ್ಯ ಸಭಾಪತಿಯವರೇ, ಅವರು ಕಾಯಿದೆ, ಕಾನೂನು, ನಿಯಮ, ಸಂವಿಧಾನ ಯಾವುದನ್ನೂ ಪಾಲನೆ ಮಾಡುವುದಿಲ್ಲ. ಲೂಟಿಕೋರ ಸರ್ಕಾರ, ಕಾನೂನು ಕಾಯಿದೆ, ಸಂವಿಧಾನ ಏನೂ ಇಲ್ಲದೇ ಇರುವ ಈ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲರೂ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಶೇಮ್, ಶೇಮ್ ಎಂದು ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)**

**ಶ್ರೀ ಲಹರ್‌ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು :–** ನಿಮ್ಮ ಪಕ್ಷ walk out ಮಾಡುತ್ತಿರುವುದರಿಂದ ನಿಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ದಯಮಾಡಿ ತಾವು ಹೊರಗೆ ಹೋಗಿ. ಶ್ರೀ ಬಸವರಾಜ ಪಾಟೀಲ್ ಇಟಗಿ ರವರು ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉತ್ತರ ನೀಡಬೇಕಾದ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು :–** ಶ್ರೀಯುತ ಬಸವರಾಜ ಪಾಟೀಲ್ ಇಟಗಿ ರವರ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಇನ್ನೂ ಉತ್ತರ ಬಂದಿಲ್ಲ ಎಂದು ಪತ್ರವನ್ನು ಕಳುಹಿಸಿದ್ದಾರೆ. ಇದನ್ನು ನಂತರ ತೆಗೆದುಕೊಳ್ಳುವ ಬಗ್ಗೆ ತಮಗೆ ತಿಳಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನಾನು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಉತ್ತರ ನಂತರ ಕೊಡಲಿ. ಏನಾಗಿದೆ ಎಂದು ಸದನದ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು :–** ಉತ್ತರವನ್ನು ಯಾರು ಕೊಟ್ಟರೂ ಆಗಬಹುದೇ?

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಉತ್ತರವನ್ನು ಸಂಬಂಧಪಟ್ಟ ಸಚಿವರು ಕೊಡಬೇಕಾಗುತ್ತದೆ. ಕನಿಷ್ಠ ವಿಷಯಗಳು ಸದನಕ್ಕೆ ಗೊತ್ತಾಗಲಿ.

**ಸಭಾಪತಿಯವರು :–** ಅದರಿಂದ ಉಪಯೋಗ ಏನು? ಮಾನ್ಯ ಸಚಿವರು ಇರುವಾಗ ಉತ್ತರ ಕೊಡುವುದು ಒಳ್ಳೆಯದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾಳೆ ನಾಡಿದ್ದರಲ್ಲಿ ಸದನ ಮುಕ್ತಾಯವಾಗುತ್ತದೆ. ರಾಯಚೂರಿನಲ್ಲಿ ಬಹಳ ತೊಂದರೆ ಇದೆ.

**ಸಭಾಪತಿಯವರು :–** ನಾನು ಮಾನ್ಯ ಸಚಿವರನ್ನು ಕೇಳಿ ಸಾಧ್ಯವಾದರೆ ಮಧ್ಯಾಹ್ನ ಉತ್ತರ ಕೊಡಿಸಲು ಪ್ರಯತ್ನ ಮಾಡುತ್ತೇನೆ, ಇಲ್ಲದಿದ್ದರೆ ನಾಳೆ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರು ಹೇಳುವುದೇನೆಂದರೆ, ಸಂಬಂಧಪಟ್ಟ ಮಾನ್ಯ ಸಚಿವರು ಇರುವ ಸಂದರ್ಭದಲ್ಲಿ ವಿಚಾರ ಪ್ರಸ್ತಾಪ ಮಾಡಿದಾಗ ಮಾತ್ರ ಪ್ರಸ್ತಾಪ ಮಾಡಿದ್ದಕ್ಕೂ ಅರ್ಥ ಬರುತ್ತದೆ. ಮಾನ್ಯ ಸಚಿವರು ಇಲ್ಲದಿರುವಾಗ ಪ್ರಸ್ತಾಪ ಮಾಡುವುದು ಬೇಡ. ತಮ್ಮ ವಿಚಾರ ಪ್ರಸ್ತಾಪಿಸಲು ಅವಕಾಶವನ್ನು ಕೊಡುವ ಬಗ್ಗೆ ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಸಹಕಾರ ಮಾಡಿದರೆ ಒಳ್ಳೆಯದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನಾಳೆ–ನಾಡಿದ್ದರೊಳಗೆ ಉತ್ತರ ಕೊಟ್ಟರೆ ಒಳ್ಳೆಯದು.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಚಿವರನ್ನು ಕರೆಸುವ ಬಗ್ಗೆ ಹೇಳುತ್ತಿದ್ದಾರೆ.

**ಸಭಾಪತಿಯವರು :–** ಮಾನ್ಯ ಸಭಾನಾಯಕರೇ, ಸಾಧ್ಯವಾದರೆ ಮಧ್ಯಾಹ್ನದೊಳಗೆ ನೋಡಿ. ಇಲ್ಲದಿದ್ದರೆ ನಾಳೆ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾಳೆ ಇನ್ನೊಂದು ವಿಷಯ ಬಂದು ಅದು ಮತ್ತು ಇದಕ್ಕೂ ಉತ್ತರ ಕೊಡದಿದ್ದರೆ ಕಷ್ಟವಾಗುತ್ತದೆ. ಇದು ಬಹಳ ಮುಖ್ಯವಾದ ವಿಷಯವಾಗಿದೆ.

**ಸಭಾಪತಿಯವರು :–** ಇಲ್ಲ ಕೊಡಿಸುತ್ತೇನೆ, ಮಾನ್ಯ ಅಪ್ಪಾಜಿಗೌಡರು ಪ್ರಸ್ತಾಪ ಮಾಡಿ.

**ಶ್ರೀ ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಈಗ ತಾನೇ ಮಾನ್ಯ ಸಹಕಾರ ಸಚಿವರು ಸದನದಲ್ಲಿ ಇದ್ದರು. ಅವರೂ ಸಹ ಹೊರಗೆ ಹೋಗಿದ್ದು, ದಯಮಾಡಿ ಕರೆಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು :–** ಸದನದಲ್ಲಿ ಸಚಿವರು ಹಾಜರಿರಬೇಕೆಂದು ನಾನು ಪದೇ ಪದೇ ಹೇಳುತ್ತಿರುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡಬೇಕು, ಇಲ್ಲದಿದ್ದರೆ ಬೇರೆ ಸಚಿವರಾದರೂ ಉತ್ತರವನ್ನು ಕೊಡಬೇಕು.

**ಶ್ರೀ ವೆಂಕಟ್‌ರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

### *7. ಗಮನ ಸೆಳೆಯುವ ಸೂಚನೆ*

**ವಿಷಯ:– ಮಂಡ್ಯ ಜಿಲ್ಲೆಯ ಹಾಲು ಉತ್ಪಾದಕರ ಒಕ್ಕೂಟದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದಿಂದಾಗಿ ಭಾರಿ ನಷ್ಟ ಅನುಭವಿಸುತ್ತಿರುವ ಬಗ್ಗೆ.**

**ಶ್ರೀ ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ ಹಾಲು ಉತ್ಪಾದಕರ ಒಕ್ಕೂಟದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದಿಂದಾಗಿ ಭಾರಿ ನಷ್ಟ ಅನುಭವಿಸುತ್ತಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ವೆಂಕಟ್‌ರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವರು) (ಸಹಕಾರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

(ಉತ್ತರದ ಪ್ರತಿ ಲಗತ್ತಿಸಿದೆ)

(ಮುಂದು)

173/10.07.2018/1.10/ಹೆಚ್‌ವಿಃವಿಕೆ

**ಶ್ರೀ ವೆಂಕಟ್‌ರಾವ್ ನಾಡಗೌಡ (ಮುಂದು...)ಃ–**

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟವು ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಖರೀದಿಸಿರುವ ಹಾಲಿಗೆ ಕಳೆದ ವರ್ಷದ ಜೂನ್ ತಿಂಗಳಿನಲ್ಲಿ ಮತ್ತು ಈ ವರ್ಷದ ಜೂನ್ ತಿಂಗಳಿನಲ್ಲಿ ಎಷ್ಟು ದರಗಳನ್ನು ನಿಗದಿ ಮಾಡಿದೆ ಎನ್ನುವುದರ ಬಗ್ಗೆ ಉತ್ತರದಲ್ಲಿ ತಿಳಿಸಲಾಗಿದೆ. ಪ್ರತಿ ಲೀಟರ್ ಹಾಲಿನ ಬೆಲೆಯನ್ನು ಒಕ್ಕೂಟಗಳೇ ನಿರ್ಧಾರ ಮಾಡುತ್ತವೆ. ಒಕ್ಕೂಟದಲ್ಲಿ ಹಾಲು ಉತ್ಪಾದನೆ ಹೆಚ್ಚಾದಾಗ, ಕಡಿಮೆ ದರವನ್ನು ಕೊಟ್ಟಿದ್ದಾರೆ, ಹಾಲು ಉತ್ಪಾದನೆ ಕಡಿಮೆಯಾದಾಗ ಹೆಚ್ಚು ದರವನ್ನು ಕೊಡುತ್ತಾರೆ. ಕಳೆದ ವರ್ಷ ಸರಾಸರಿ ಒಂದು ಲೀಟರ್ ಹಾಲಿಗೆ 27 ರೂಪಾಯಿ procurement rate ಆಗಿದ್ದು, ಈ ವರ್ಷದ procurement rate ಸರಾಸರಿ 22.97 ರೂಪಾಯಿಗಳಾಗಿದೆ. ನಾವು ರೈತರಿಗೆ ಕೊಟ್ಟಿರುವ ದರ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸಹಕಾರ ಸಚಿವರು ಸದನಕ್ಕೆ ಆಗಮಿಸಿದರು.)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಅಪ್ಪಾಜಿಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ಈಗ ಸದನಕ್ಕೆ ಆಗಮಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಾಲಿನ ದರಕ್ಕೂ, ಮಂಡ್ಯ ಜಿಲ್ಲೆಯಲ್ಲಿರುವ ಹಾಲಿನ ದರಕ್ಕೂ ಸಾಕಷ್ಟು ವ್ಯತ್ಯಾಸವಿದೆ.

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಸಹಕಾರ ಹಾಲು ಉತ್ಪಾದಕರ ಒಕ್ಕೂಟಕ್ಕೆ ಸರ್ಕಾರ ಕಳೆದ 4 ವರ್ಷಗಳಲ್ಲಿ ಎಷ್ಟು ಬಾರಿ ಸಿಬ್ಬಂದಿ ವೃಂದ ಬಲ ಸೃಷ್ಟಿಸಲು ಅನುಮತಿ ನೀಡಿದೆ ಮತ್ತು ಎಷ್ಟು ಬಾರಿ ನೇಮಕಾತಿ ನಿಯಮಗಳಿಗೆ ಅನುಮೋದನೆಯನ್ನು ನೀಡಿದೆ ಎನ್ನುವ ಪ್ರಶ್ನೆಗಳನ್ನು ಮಾನ್ಯ ಸಹಕಾರ ಸಚಿವರಲ್ಲಿ ಹೇಳುತ್ತಿದ್ದೇನೆ. ಇದರ ಜೊತೆಗೆ ಈ ಒಕ್ಕೂಟದಲ್ಲಿ ನಕಲಿ ಅಂಕಪಟ್ಟಿಯನ್ನು ಕೊಟ್ಟು ಸುಮಾರು 04 ರಿಂದ 10 ಜನರು ನೇಮಕಗೊಂಡಿದ್ದಾರೆ. ಆದರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ 04 ಜನರ ಮಾಹಿತಿಯನ್ನು ಮಾತ್ರ ಹೇಳಿದ್ದಾರೆ. ಇವರಲ್ಲಿ ಸಾಕಷ್ಟು ಜನರು ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ಹೆಚ್ಚಿನ ಅಂಕಗಳನ್ನು ಪಡೆದುಕೊಂಡಿವರಾಗಿದ್ದು, ನೇಮಕಾತಿಯನ್ನು ಹೊಂದಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, 'ರೈತರ ಕಲ್ಯಾಣ ಟ್ರಸ್ಟ್'ನ ಮೂಲಕ ಶಾಲೆಯನ್ನು ತೆರೆಯುವುದಕ್ಕೆ ಹೊರಟಿದ್ದಾರೆ. ಯಾವ ಉದ್ದೇಶಕ್ಕಾಗಿ ಈ ಶಾಲೆಯನ್ನು ತೆರೆಯುವುದಕ್ಕೆ ಹೊರಟಿದ್ದಾರೆಂದರೆ, ಅಲ್ಲಿ ಒಂದು ಕ್ವಾರೆ ಇದೆ. ಹಣವನ್ನು ಗಳಿಸುವ ಉದ್ದೇಶಕ್ಕಾಗಿ ಆ ಜಮೀನನ್ನು ಖರೀದಿ ಮಾಡಲಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ಈ ಟ್ರಸ್ಟ್‌ಗಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಲಾಗಿದೆ. ಟ್ರಸ್ಟ್‌ನ ವತಿಯಿಂದ ವಸತಿ ಶಾಲೆಯನ್ನು ತೆರೆಯಲಾಗುವುದು ಎನ್ನುವ ಮಾತುಗಳನ್ನು ಹೇಳಿದ್ದಾರೆ. ಕ್ವಾರೆ ಇರುವಂತಹ ಜಾಗದಲ್ಲಿ ವಸತಿ ಶಾಲೆಯನ್ನು ಪ್ರಾರಂಭ ಮಾಡುವ ಅವಶ್ಯಕತೆ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಒಕ್ಕೂಟದವರು 1950ರಲ್ಲಿ ಕಾನೂನು ಬಾಹಿರವಾಗಿ ಸುಮರು 40 ಹುದ್ದೆಗಳನ್ನು ಭರ್ತಿ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸಹಕಾರ ಸಚಿವರು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾರೆನ್ನುವ ನಿರೀಕ್ಷೆ ನಮಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟದಲ್ಲಿ ಸಾಕಷ್ಟು ಅವ್ಯವಹಾರಗಳು ಮತ್ತು ಕೋಟ್ಯಾಂತರ ರೂಪಾಯಿಗಳ ಹಣದ ದುರುಪಯೋಗವಾಗಿದೆ. ಇವುಗಳ ಬಗ್ಗೆ ಮಾನ್ಯ ಸಹಕಾರ ಸಚಿವರು ನಿಷ್ಪಕ್ಷಪಾತವಾಗಿ ತನಿಖೆ ಮಾಡಿ, ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟಕ್ಕೆ ಕಾಯಕಲ್ಪವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಹಾಲು ಉತ್ಪಾದಕರ ಒಕ್ಕೂಟದಲ್ಲಿ ಮೂಲಭೂತ ಸೌಲಭ್ಯಗಳನ್ನು ಸ್ಥಾಪಿಸುವುದಕ್ಕೆ ಮಹಾಸಭೆಯಲ್ಲಿ ರೈತರ ಒಪ್ಪಿಗೆ ಪಡೆದು ಪ್ರತಿ ಲೀಟರ್ ಹಾಲಿನ ದರದಲ್ಲಿ 10 ಪೈಸೆಗಳನ್ನು, ಮತ್ತೊಮ್ಮೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಮತಿ ಪಡೆದು 15 ಪೈಸೆಗಳನ್ನು ವಸೂಲು ಮಾಡಿ, ಕೋಟಿಗಟ್ಟಲೆ ಹಣವನ್ನು ಸಂಗ್ರಹಿಸಲಾಗಿತ್ತು. ಆದರೆ, ಪ್ರಸ್ತುತ ಆಡಳಿತ ಮಂಡಲಿ ಏಕಾಏಕಿ ಕಾನೂನು ಬಾಹಿರವಾಗಿ ಮಹಾಸಭೆಯಲ್ಲಿ ರೈತರ ಒಪ್ಪಿಗೆಯನ್ನು ಪಡೆಯದೇ ರೈತರ ಪ್ರತಿ ಲೀಟರ್ ಹಾಲಿನ ದರದಲ್ಲಿ ಒಂದು ರೂಪಾಯಿಯನ್ನು ಕಡಿತಗೊಳಿಸಲು ಆರಂಭಿಸಿ, ಸುಮಾರು 100 ಕೋಟಿಗೂ ಅಧಿಕ ಹಣ ಸಂಗ್ರಹ ಮಾಡಿರುವುದರ ಬಗ್ಗೆ ಯಾವ ಕಾರಣಕ್ಕಾಗಿ ತನಿಖೆ ಮಾಡಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಪ್ರಕಟಿಸಿದ ವಿದ್ಯಾರ್ಹತೆ ಇಲ್ಲದಿರುವ ಅಭ್ಯರ್ಥಿಗೆ ಕೆಲಸ ನೀಡಿರುವ ಆರೋಪವನ್ನು ಸಾಬೀತು ಮಾಡಿದರೂ ಸಹ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸಂಪೂರ್ಣ ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಅಂಶಗಳಿಗೆ ಸ್ಪಷ್ಟೀಕರಣವನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಮೊದಲನೆಯದಾಗಿ, ಹಾಲಿನ ದರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ತಮ್ಮೆಲ್ಲರಿಗೂ ತಿಳಿದಿರುವಂತೆ ಇಡೀ ರಾಜ್ಯದಲ್ಲಿ ಹಾಲಿನ ಸಂಗ್ರಹ ಹೆಚ್ಚಾಗುತ್ತಿದೆ. ಆದ್ದರಿಂದ ಸ್ಥಳೀಯ ಹಾಲಿನ ಒಕ್ಕೂಟಗಳು ಹಾಲಿನ ದರವನ್ನು ನಿರ್ಧರಿಸುತ್ತಿವೆ. ಸರ್ಕಾರದ ವತಿಯಿಂದ ದರವನ್ನು ಕಡಿಮೆ ಮಾಡಿಲ್ಲ. ಸರ್ಕಾರದ ವತಿಯಿಂದ ಪ್ರತಿ ಲೀಟರ್ ಹಾಲಿಗೆ 5 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಕೆಲವು ಡೈರಿಗಳಲ್ಲಿ 2 ರೂಪಾಯಿಗಳನ್ನು ಸಹ ಕಡಿಮೆ ಮಾಡಿಲ್ಲ. ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟದಲ್ಲಿ ಹಾಲಿನ ಸಂಗ್ರಹ ಅತ್ಯಧಿಕವಾಗಿರುವುದರಿಂದ ಹಾಲಿನ ದರ ಕಡಿಮೆಯಾಗಿದೆ. ಆದ್ದರಿಂದ ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟದವರು ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ ಒಂದು ಕೆ.ಜಿ. ಹಾಲಿನ ಪುಡಿಯ ದರ 200 ರೂಪಾಯಿಗಳಾಗಿದ್ದು, ಈಗ ಅದು 120-125 ರೂಪಾಯಿಗಳಿಗೆ ಕುಸಿದಿದೆ. ಮಂಡ್ಯ ಜಿಲ್ಲೆಯಲ್ಲಿ ಒಂದು ದಿನಕ್ಕೆ ಸುಮಾರು 9 ಲಕ್ಷ ಲೀಟರ್‌ನಷ್ಟು ಹಾಲು ಸಂಗ್ರಹವಾಗುತ್ತಿದೆ. ಅದರಲ್ಲಿ 3 ಲಕ್ಷ ಲೀಟರ್‌ನಷ್ಟು ಹಾಲು ಮಾರಾಟವಾಗುತ್ತಿದೆ. ಉಳಿದ 6 ಲಕ್ಷ ಲೀಟರ್ ಹಾಲನ್ನು ಬೇರೆ ರೂಪಕ್ಕೆ ಪರಿವರ್ತಿಸಬೇಕಾಗಿದೆ. ನಾನು ಅಧಿಕಾರವಹಿಸಿಕೊಂಡ ಮೇಲೆ ಈ ವಿಚಾರವಾಗಿ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಇಡೀ ರಾಜ್ಯದಲ್ಲಿ ಪ್ರತಿದಿನ 84 ಲಕ್ಷ ದಶ ಲೀಟರ್‌ನಷ್ಟು ಹಾಲು ಸಂಗ್ರಹವಾಗುತ್ತಿದೆ. ಅದರಲ್ಲಿ 35 ರಿಂದ 36 ಲಕ್ಷ ಲೀಟರ್‌ನಷ್ಟು ಹಾಲನ್ನು ಮಾರಾಟ ಮಾಡಲಾಗುತ್ತಿದೆ. ಉಳಿದಂತೆ ಸುಮಾರು 48 ಲಕ್ಷ ಲೀಟರ್‌ನಷ್ಟು ಹಾಲನ್ನು ಬೇರೆ ರೂಪಕ್ಕೆ ಪರಿವರ್ತಿಸಬೇಕಾಗಿದೆ. ಹಾಲಿನ ಪುಡಿಯ ಬೇಡಿಕೆ ಕುಸಿದಿದೆ. ಅದಕ್ಕಾಗಿ ನಾವು ಕೆ.ಎಂ.ಎಫ್.ನ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ಅಧಿಕಾರಿಗಳು ಹೆಚ್ಚಿಗೆ ಹಾಲಿನ ಉಪ ಉತ್ಪನ್ನಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಯಾರು ಮಾಡಿ ಹೆಚ್ಚಿನ ಮಾರಾಟಕ್ಕೆ ಒತ್ತು ಕೊಡಬೇಕೆನ್ನುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇಷ್ಟಾದರೂ ಸಹ ಮಂಡ್ಯ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಒಕ್ಕೂಟ ಲಾಭದಲ್ಲಿ ನಡೆಯುತ್ತಿದೆ.

ಇನ್ನು ಎರಡನೆಯದಾಗಿ, ಮಾನ್ಯ ಸದಸ್ಯರು ಸಿಬ್ಬಂದಿಗಳ ನೇಮಕಾತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಕೆಲವು ತಪ್ಪುಗಳು ನಡೆದಿದ್ದವು. ನಕಲಿ ಅಂಕಪಟ್ಟಿಯನ್ನು ನೀಡಿರುವ 04 ಜನ ಸಿಬ್ಬಂದಿಗಳ ಮೇಲೆ ಕ್ರಿಮಿನಲ್ ಕೇಸ್ ದಾಖಲು ಮಾಡಿ, ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಇದನ್ನು ಬಿಟ್ಟು ಇಂಥಹದೇ ಬೇರೆ ಪ್ರಕರಣಗಳು ಇದ್ದರೆ, ಅದನ್ನು ನಮ್ಮ ಗಮನಕ್ಕೆ ತಂದರೆ, ನಾವು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಜರುಗಿಸುತ್ತೇವೆ.

**ಶ್ರೀ ಎಸ್.ಅಪ್ಪಾಜಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ನಾನು ಮಂಡ್ಯ ಜಿಲ್ಲೆಯ ವಿಧಾನ ಪರಿಷತ್ತಿನ ಸದಸ್ಯನಾಗಿ ಅಲ್ಲಿ ನಿಜವಾಗಿಯೂ ಏನು ನಡೆಯುತ್ತಿದೆ ಎನ್ನುವುದರ ಸಂಪೂರ್ಣ ಅರಿವು ನನಗಿದೆ. ಹೊರರಾಜ್ಯಗಳ ವಿಶ್ವವಿದ್ಯಾನಿಲಗಳಿಂದ ಹೆಚ್ಚಿನ ಅಂಕಗಳನ್ನು ಯಾರು ಪಡೆದುಕೊಂಡಿದ್ದಾರೆ ಅವರೇ ಈ ಒಕ್ಕೂಟದಲ್ಲಿ ಬಹು ಸಂಖ್ಯೆಯಲ್ಲಿ ನೇಮಕಗೊಂಡಿದ್ದಾರೆ. ಇವರುಗಳಿಗೆ ಈ ಒಕ್ಕೂಟದಲ್ಲಿ ನೇಮಕಾತಿ ಆಗುತ್ತದೆ ಎನ್ನುವುದು ಮೊದಲೇ ತಿಳಿದಿತ್ತು. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕಾಗಿದೆ. ಇಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಿವೃತ್ತ ಅಧಿಕಾರಿಗಳಿಂದ ತನಿಖೆ ಮಾಡಿಸಲಾಯಿತು. ಇದಕ್ಕೆ ಯಾವುದೇ ಬೆಲೆ ಸಿಗಲಿಲ್ಲ.

(ಮುಂದು)

(174) 10.7.2018 : 1.20 : ವಿಕೆ:ಬಿಎನ್‌ಎಸ್

**ಶ್ರೀ ಅಪ್ಪಾಜಿಗೌಡ (ಮುಂದುವರೆದಿದೆ)**

**ಆ** ವರದಿಗೆ ಯಾವುದೇ ರೀತಿಯ ಕಿಮ್ಮತ್ತು ಕೊಟ್ಟಿಲ್ಲ. ಮಾನ್ಯ ಸಚಿವರು ತಮ್ಮ ಅವಧಿಯಲ್ಲಿ, ನಿವೃತ್ತ ನ್ಯಾಯಾಧೀಶರಿಂದಲೋ ಅಥವಾ ಜಿಲ್ಲಾ ನ್ಯಾಯಾಧೀಶರಿಂದಲೋ ತನಿಖೆ ಮಾಡಿಸಿದರೆ ಆಗ ಸತ್ಯ ಗೊತ್ತಾಗುತ್ತದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ತನಿಖೆಗಿಂತಲೂ get the correct information from the concerned Universities with regard to the Certificates produced to the Dairy ಆ ದಾಖಲೆಗಳನ್ನು produce ಮಾಡಿ ಏನು ನೇಮಕಾತಿ ಮಾಡಿಕೊಂಡಿದ್ದಾರೋ ಅದರ ಸತ್ಯಾಸತ್ಯತೆಯನ್ನು ಸರ್ಕಾರ ಅರಿಯಬೇಕಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿರುವಂತಹ ಒಂದು ವಿಷಯವನ್ನು ನಾನು ಹೇಳಬಯಸುತ್ತೇನೆ. ಉನ್ನತ ಶಿಕ್ಷಣ ಇಲಾಖೆಯ ವತಿಯಿಂದ 2160 ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ತೆಗೆದುಕೊಂಡಾಗ, 49 ಜನ fake Certificates ಏನು ಕೊಟಿದ್ದರೋ ಅವರು ತಮಿಳುನಾಡಿನಿಂದ ಮತ್ತು ಮಹಾರಾಷ್ಟ್ರಗಳಿಂದ Certificate ಗಳನ್ನು ಪಡೆದುಕೊಂಡಿದ್ದರು. ರೂ.50 ಸಾವಿರ ಕೊಟ್ಟರೆ ತಮಿಳುನಾಡಿನಲ್ಲಿ Ph.D., Certificate ಕೊಡುತ್ತಾರೆ. ರೂ. 25 ಸಾವಿರ ಕೊಟ್ಟರೆ ಮಹಾರಾಷ್ಟ್ರದಲ್ಲಿ P.G. (Post Graduate) Certificate ಸಿಗುತ್ತದೆ. ಇದನ್ನು ಈಗಾಗಲೇ C.I.D. (Criminal Investigation Department) ಯವರು ತನಿಖೆ ಮಾಡಿ ವರದಿ ಕೊಟ್ಟಿದ್ದಾರೆ. I.T.I. (Industrial Training Institutes) ನಲ್ಲಿ ಕೆಲವರು Service Certificates ಪಡೆದಿರುವಂತಹ ಮತ್ತು higher education ನಲ್ಲಿ ಸಹ ಹೊರ ರಾಜ್ಯಗಳಿಂದ Certificates ಪಡೆದುಕೊಂಡಿರುವಂಥದ್ದೂ ಇದೆ. ನಮ್ಮ ವಿಶ್ವವಿದ್ಯಾಲಯದವರು ಪತ್ರವ್ಯವಹಾರ ಮಾಡಿದಾಗ ಸದರಿ ಪ್ರದೇಶಗಳಲ್ಲಿ ಆ ರೀತಿಯ ಯಾವುದೇ ವಿಶ್ವವಿದ್ಯಾಲಯಗಳು ಇಲ್ಲ ಎನ್ನುವುದು ಗೊತ್ತಾಯಿತು. Open University Certificates ಆಗಿರಬಹುದು ಅಥವಾ ಬೇರೆ ರಾಜ್ಯಗಳಿಂದ ಪಡೆದುಕೊಂಡಿರುವ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದರೆ ಅವುಗಳ ಪರಿಶೀಲನೆ ಮಾಡಿ ನಂತರ accept ಮಾಡುವುದು ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಸುಮಾರು 140 ಜನರ ನೇಮಕಾತಿ ಏನು ಆಗಿತ್ತೋ ಅವರಲ್ಲಿ ಸುಮಾರು ಜನ ಅಧ್ಯಕ್ಷರ ಸಂಬಂಧಿಕರಾಗಿದ್ದಾರೆ. ಅವರುಗಳು ನಕಲಿ ಅಂಕಪಟ್ಟಿಯನ್ನು ಸಲ್ಲಿಸಿದ್ದು, ಇವರ ಪೈಕಿ 4 ಜನರನ್ನು ಈಗಾಗಲೇ ಕೆಲಸದಿಂದ ತೆಗೆದಿದ್ದಾರೆ. ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರರವರು ಹೇಳಿದ ಹಾಗೆ, ಸುಮಾರು ಜನ ಬೇರೆ ರಾಜ್ಯದಿಂದ ಅಂಕಪಟ್ಟಿ ಪಡೆದು ನೇಮಕ ಆಗಿದ್ದಾರೆ.

ಮಾನ್ಯ ಸಭಾಪತಿಯವರೇ, ತಮಗೆ ವಿದ್ಯಾಕ್ಷೇತ್ರದಲ್ಲಿ ಸಾಕಷ್ಟು ಅನುಭವ ಇದೆ. Deemed Universities and private Universities, ನವರು ಇಲ್ಲಿ ಏನು ಮಾಡುತ್ತಾರೆ ಎಂದರೆ, ಸಂಸ್ಥೆಗಳಲ್ಲಿ call for ಮಾಡುವ ದಿನಾಂಕದಿಂದ 3 ವರ್ಷದ ಹಿಂದೆ ಇಂಥವರು ಸೇರಿದ್ದರು ಎಂದು ತೋರಿಸಿ, ಅತಿ ಹೆಚ್ಚಿನ ಅಂಕಗಳನ್ನು ಕೊಡುತ್ತಾರೆ. ಈ ರೀತಿ ಅಂಕಗಳನ್ನು ಪಡೆದುಕೊಂಡಿರುವವರು ಈ ಒಕ್ಕೂಟದಲ್ಲಿ ನೇಮಕವಾಗಿದ್ದಾರೆ. ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು. ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಗಳಿಂದ ತನಿಖೆ ಮಾಡಿಸಿದರೆ ನ್ಯಾಯ ಸಿಗುತ್ತದೆಯೇ? ನನಗೆ ಸಹಕಾರ ಸಚಿವರ ಮೇಲೆ ಬಹಳ ಗೌರವ ಇದೆ. ಆದರೆ, ಸಹಕಾರ ಇಲಾಖೆಯಲ್ಲಿ ನಡೆಯುವಂತಹ ಅವ್ಯವಹಾರ ಏನಿದೆ ಅದು ನಿಜವಾಗಿಯೂ ಕೂಡ ನಾಗರೀಕ ಸಮಾಜ ತಲೆತಗ್ಗಿಸುವಂಥದ್ದಾಗಿರುತ್ತದೆ. ಮತ್ತೆ, ಇಲ್ಲೇನು ನೇಮಕ ಆಗಿದ್ದಾರೋ ಅವರೊಬ್ಬೊಬ್ಬರಿಂದ ರೂ. 15 ರಿಂದ ರೂ.25 ಲಕ್ಷಗಳಷ್ಟು ಲಂಚ ಪಡೆದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸ ಕೊಟ್ಟಿದ್ದಾರೆ. ಇವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ಯಾರ್ಯಾರು ಎಷ್ಟೆಷ್ಟು ಲಂಚ ಕೊಟ್ಟಿದ್ದಾರೆ ಎಂದು ನಿಖರವಾಗಿ ಗೊತ್ತಾಗುತ್ತದೆ.

ನಮ್ಮ ಮಾನ್ಯ ಸಚಿವರು ಸುಮಾರು ವಿಷಯಗಳ ಬಗ್ಗೆ ಉತ್ಸುಕರಾಗಿದ್ದಾರೆ, ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಮನಸ್ಸು ಅವರಿಗಿದೆ. ಈ ಒಂದು Dairy ಯಲ್ಲಿ ಏನು ಅವ್ಯವಹಾರ ಆಗಿದೆಯೋ, ಅಂದರೆ ಅದು ಕಾಮಗಾರಿಯಲ್ಲಾಗಿರುವ ರೂ.100 ಕೋಟಿಯೂ ಸೇರಿದಂತೆ ಇತರ ಬೇರೆ ಬೇರೆ ವಿಷಯಗಳ ಸಂಬಂಧ ಸಮಗ್ರವಾದ ತನಿಖೆ ಮಾಡಬೇಕು. ಮಂಡ್ಯ ಜಿಲ್ಲೆಯ Dairy ಮೊದಲಿನಿಂದಲೂ ಶ್ರೇಷ್ಠವಾದ ಸ್ಥಾನವನ್ನೇನು ಪಡೆದುಕೊಂಡು ಬಂದಿದೆ, ಅದನ್ನು ಉಳಿಸಿಕೊಂಡು ಹೋಗಬೇಕು. ಮುಂದಿನ ದಿನಗಳಲ್ಲಿ ಈ ಕುರಿತು ಸಮಗ್ರ ತನಿಖೆ ಆಗಬೇಕು. ಈ ಒಕ್ಕೂಟದಲ್ಲಿರುವ M.D. (Managing Director), ಅಧಿಕಾರಿಗಳು, ನಿರ್ದೇಶಕರು ಮತ್ತು ಅಧ್ಯಕ್ಷರುಗಳ ಬಗ್ಗೆ ತನಿಖೆ ಕೈಗೊಂಡು ಅವರನ್ನು ಕೃಷ್ಣನ ಜನ್ಮಸ್ಥಾನಕ್ಕೆ ತಲುಪಿಸುವ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್. ಧರ್ಮೇಗೌಡ:- (ವಿಧಾನಸಭಾ ಕ್ಷೇತ್ರ) :-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದರಿ ಹಾಲು ಒಕ್ಕೂಟದಲ್ಲಿ ನೇಮಕಾತಿ ಸಂಬಂಧ ಆಗಿರುವಂತಹ ಅವ್ಯವಹಾರಗಳ ಬಗ್ಗೆ ಮಾತನಾಡಿದ್ದಾರೆ. ಅದು ಅಕ್ಷರಶಃ ಸತ್ಯವಾಗಿರಬಹುದು. ಆದರೆ, ಇದರ ಜೊತೆ ಇಡೀ ಸಹಕಾರ ಇಲಾಖೆಯನ್ನೇ ತೆಗಳಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಾನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷನಾಗಿದ್ದೇನೆ; ರಾಜ್ಯ ಮಾರಾಟ ಮಹಾಮಂಡಳದ ಅಧ್ಯಕ್ಷನಾಗಿದ್ದೇನೆ; ಅಪೆಕ್ಸ್ ಬ್ಯಾಂಕಿನಲ್ಲಿ ನಿರ್ದೇಶಕನಾಗಿದ್ದೇನೆ. ಹೊರ ರಾಜ್ಯಗಳಿಂದ ಸುಳ್ಳು ಪ್ರಮಾಣ ಪತ್ರಗಳನ್ನು ತರುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಮಂಡ್ಯ ಹಾಲು ಉತ್ಪಾದಕರ ಒಕ್ಕೂಟಕ್ಕೆ ಸಂಬಂಧಪಟ್ಟಂತೆ ಏನು ಅನ್ಯಾಯ ನಡೆದಿದೆಯೋ ಆ ಕುರಿತು ಪ್ರಸ್ತಾಪ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಅಪ್ಪಾಜಿಗೌಡ:-** ಬೇರೆ ಬೇರೆ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ D.C.C. (District Co-operative Central) Bank ಗಳಲ್ಲಿ ಅಥವಾ ಹಾಲು ಉತ್ಪಾದಕ ಸಹಕಾರ ಸಂಘಗಳಲ್ಲಿ ನೇಮಕಾತಿ ಮಾಡುವಾಗ ಎಲ್ಲಿಯೂ ಲಂಚ ನಡೆದಿಲ್ಲ, ಮೆರಿಟ್ ಮೇಲೆ ನೇಮಕ ಮಾಡಿಕೊಂಡಿದ್ದೇವೆ ಎಂದು ಆತ್ಮಸಾಕ್ಷಿಯಾಗಿ ಹೇಳಿದರೆ ನಿಜವಾಗಿಯೂ ನಾನು ಬಹಳ ಸಂತೋಷಪಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಗೆಳೆಯ ಅಪ್ಪಾಜಿಗೌಡರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನಮ್ಮ ಸಮಾಜದಲ್ಲಿ ದೊಡ್ಡ ಪಿಡುಗು ಇದೆ ಎನ್ನುವುದಾದರೆ ಅದು ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ. ಇದರಲ್ಲಿ ಎರಡನೆ ಮಾತಿಲ್ಲ. ಎಲ್ಲಿಯವರೆಗೆ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಹೋಗುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಸಂಸ್ಥೆ, ಯಾವುದೇ ರಾಜ್ಯ ಅಥವಾ ಯಾವುದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಷ್ಟ್ರವಾಗಲಿ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಕೊಟ್ಟಿರುವ ಉತ್ತರವನ್ನು ನೋಡಿದರೆ ನನಗೆ ಕೆಲವು ಸಂಶಯಗಳು ಬರುತ್ತಿವೆ. ಗಮನ ಸೆಳೆಯುವಾಗ ಏನು ಅನೇಕ ವಿಚಾರಗಳನ್ನು ಹೇಳಿದ್ದಾರೋ ನಾನು ಅವೆಲ್ಲವನ್ನೂ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. 140 ಜನರ ನೇಮಕಾತಿ ಮಾಡಿಕೊಳ್ಳುವಾಗ ಒಬ್ಬೊಬ್ಬರಿಂದ ರೂ. 20–25 ಲಕ್ಷಗಳ kickbacks ಅಥವಾ ಲಂಚ ಪಡೆಯಲಾಗಿದೆ ಎಂದು ಮಾನ್ಯ ಸದಸ್ಯರು ಸದನದ ಮುಂದೆ ಹೇಳಿದ್ದಾರೆ. It is a serious matter. ಉತ್ತರದಲ್ಲಿ, ನಕಲಿ ಅಂಕಪಟ್ಟಿಗಳನ್ನು ಕೊಟ್ಟಿದ್ದ ನಾಲ್ಕು ಜನರನ್ನು ತೆಗೆದು ಹಾಕಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ಅದರ ಅರ್ಥ, there is something fishy. There is a prima facie case against the Management as well as the employees. ನೇಮಕಾತಿ ಮಾಡುವಾಗ ಆ ನೇಮಕಾತಿ ಸಮಿತಿಯಲ್ಲಿ ಇದ್ದಂಥ ಅಧಿಕಾರಿಗಳು ಯಾರು? ಆ ಸಮಿತಿಯಲ್ಲಿದ್ದಂಥ ನಿರ್ದೇಶಕರುಗಳು ಯಾರು? Why the Government has not initiated any action against such erring officials and is it not the duty of the Government to initiate action against such officials?

ಎರಡನೆಯದಾಗಿ, under Section 200 of Code of Criminal Procedure, PCR (Private Complaint Report) ಹಾಕುತ್ತಾರೆ. Court has taken cognizance of that and there was an order for investigation by the Police officials. What was the answer and what was the role played by the Institution? ಒಬ್ಬರ ಮೇಲೆ ಮಾತ್ರ ಚಾರ್ಜ್‌ಶೀಟ್ ಹಾಕಿ ಮಿಕ್ಕವರನ್ನು ಏಕೆ ಬಿಟ್ಟರು? ನೀವೇಕೆ Higher Court ಗೆ ಅಪೀಲ್ ಹೋಗಲಿಲ್ಲ, if at all they were interested to safeguard the interest of the Institution. Have they preferred an appeal or revision? If not, why?

ಮೂರನೆಯದಾಗಿ, ಸುಮಾರು ಮೂರ್‍ನಾಲ್ಕು ಸರ್ವೆ ನಂಬರ್‌ಗಳಲ್ಲಿ ಒಂದು ಕಡೆ 9 ಮತ್ತೊಂದು ಕಡೆ 11 ಎಕರೆ ಜಾಗವನ್ನು ಖರೀದಿ ಮಾಡುತ್ತಾರೆ. ಯಾವ ಉದ್ದೇಶಕ್ಕೆ ಖರೀದಿ ಮಾಡಿದರು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಐಡಿಯಾ ಇರಬೇಕು ಅಲ್ಲವೇ? ಅಲ್ಲಿ ಇರಬಹುದಾದ quarry ಯನ್ನು 5 ಅಥವಾ 10 ವರ್ಷಗಳ ನಂತರ ಅದರ lease period ಮುಗಿದ ಮೇಲೆ ಮುಚ್ಚಲಾಗುತ್ತದೆ ಎಂದಿಟ್ಟುಕೊಳ್ಳೋಣ.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(175) 10–7–2018 1.30 ಡಿಎಸ್–ಬಿಎನ್ಎಸ್

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):–**

ಮಾನ್ಯ ಸದಸ್ಯರು ಅಲ್ಲಿ ವಸತಿ ಶಾಲೆ ಅಥವಾ ಹಾಸ್ಟೆಲ್ ತೆಗೆದರು ಎಂದು ಹೇಳುತ್ತಾರೆ. There is no answer. ಇದನ್ನು ವಸತಿ ಶಾಲೆಗೆ ತೆಗೆದುಕೊಂಡಿದ್ದಾರೆಂದು ಅವರು ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏಕೆ ಉತ್ತರ ಕೊಡುತ್ತಿಲ್ಲ? On the other hand, ಉತ್ತರದಲ್ಲಿ "ದಿನಾಂಕ:22.05.2017 ರಂದು ಭೂ ಸುಧಾರಣ ಕಾಯ್ದೆ ನಿಯಮ 109 ರಡಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಸರ್ವೆ ನಂ.82/03 ರಲ್ಲಿ 03 ಎಕರೆ 10 ಗುಂಟೆ, ಸರ್ವೆ ನಂ.79 ರಲ್ಲಿ 1 ಎಕರೆ 2 ಗುಂಟೆ, ಸರ್ವೆ ನಂ.81/1ರಲ್ಲಿ 2 ಎಕರೆ, ಸರ್ವೆ ನಂ.84/1 ರಲ್ಲಿ 2 ಎಕರೆ 18 ಗುಂಟೆ ಮತ್ತು ಸರ್ವೆ ನಂ.81/2 ರಲ್ಲಿ 3 ಎಕರೆ 23 ಗುಂಟೆ ಜಮೀನು ಖರೀದಿಸಲಾಗಿದೆ" ಎಂದು ಹೇಳಿದ್ದಾರೆ. ಇದನ್ನು ಏತಕ್ಕಾಗಿ ಖರೀದಿಸಿದ್ದಾರೆಂದು ಹೇಳಬೇಕಲ್ಲವೆ? "ಬದಲಿಗೆ ಕಸಹಾಮ ವತಿಯಿಂದ ನಂದಿನಿ ಪಶು ಆಹಾರ ಘಟಕ ಸ್ಥಾಪಿಸಲು ಜಮೀನನ್ನು ನಿಯಮಾನುಸಾರ ಕೆ.ಎಂ.ಎಫ್.ಗೆ ಟ್ರಸ್ಟ್‌ನಿಂದ ಹಸ್ತಾಂತರಿಸಲು ಪತ್ರ ವ್ಯವಹಾರ ನಡೆಸಿರುವುದು ಕಂಡು ಬರುತ್ತದೆ" ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಂದರೆ ಇಷ್ಟೆಲ್ಲಾ ಇನ್ವೆಸ್ಟ್ ಮಾಡಿ ಜಮೀನು ತೆಗೆದುಕೊಂಡಾದ ಮೇಲೆ ಈಗ ಪತ್ರ ವ್ಯವಹಾರ ಮಾಡುತ್ತಿದ್ದಾರೆ. ಇವರ ಪ್ರೇಮ ಪತ್ರ ವ್ಯವಹಾರ ಕೆ.ಎಂ.ಎಫ್.ನವರಿಗೆ ಮತ್ತು ಈ ಟ್ರಸ್ಟ್‌ನವರಿಗೆ ನಡೆಯುತ್ತಿದೆ. ನಾನೊಬ್ಬ ವಕೀಲನಾಗಿ, ಸಾರ್ವಜನಿಕ ಬದುಕಿನಲ್ಲಿ ನಾನು ಚಿಕ್ಕ ವಯಸ್ಸಿನಲ್ಲೇ ಭ್ರಷ್ಟಾಚಾರದ ವಿರುದ್ಧ, ಮತ್ತೊಂದು ವಿಚಾರದ ವಿರುದ್ಧ ಧ್ವನಿ ಎತ್ತಿ ಸುಮಾರು ಒಂದೂವರೆ ವರ್ಷಗಳ ಕಾಲ Emergency Period ನಲ್ಲಿ ಜೈಲಿಗೆ ಹೋಗಿ ಬಂದಿದ್ದೇನೆ. ಸದನಕ್ಕೆ ಬಂದ ಮೇಲೆ ಯಾವುದೇ ಸಂದರ್ಭದಲ್ಲೂ ಕೂಡ ಈ ರೀತಿಯ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಕ್ರಮವನ್ನು ಜರುಗಿಸಬೇಕಾಗುತ್ತದೆ. ನನಗನಿಸುವುದೇನೆಂದರೆ, it is a very good fit case. ಸದನ ಸಮಿತಿಯನ್ನು ಮಾಡಿ ಸದನ ಸಮಿತಿಯ ಮೂಲಕ ತನಿಖೆ ಮಾಡಿಸಿ ವರದಿಯನ್ನು ಪಡೆದು ಯಾರೆಲ್ಲಾ ಅಧಿಕಾರಿಗಳು ಭಾಗಿಯಾಗಿದ್ದಾರೆ, ಯಾರೆಲ್ಲಾ ನಾಯಕರು ಭಾಗಿಯಾಗಿದ್ದಾರೆ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಮೀನಾಮೇಷ ಎಣಿಸದೆ ಕ್ರಮ ಜರುಗಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರು ಕಾಳಜಿ ವಹಿಸಿ ಈ ಒಂದು ಪ್ರಶ್ನೆಗೆ ಬೆಳಕನ್ನು ಚೆಲ್ಲಿದ್ದಾರೆ, ಸಂತೋಷ. ಇದು ಸಹಕಾರ ಕ್ಷೇತ್ರದಲ್ಲಿ ಯಾವ ರೀತಿ ನಡೆಯಬೇಕೆಂಬುದನ್ನು ಹೇಳಿದ್ದಾರೆ. ಈ ಹೊಸ ಸಮ್ಮಿಶ್ರ ಸರ್ಕಾರ ಯಾವುದೇ ಅವ್ಯವಹಾರಗಳಿಗೆ ಅವಕಾಶ ಕೊಡುವುದಿಲ್ಲ. ಸನ್ಮಾನ್ಯ ಸದಸ್ಯರು ನನಗೆ ತಿಳಿದಮಟ್ಟಿಗೆ ಈ ಸದನದಲ್ಲಿ ಬಹಳಷ್ಟು ದಿನಗಳಿಂದ ಇದ್ದಾರೆ. ಇದು 2015–16 ರಲ್ಲಿ ಆಗಿರುವಂತಹ ನೇಮಕಾತಿ. ಇದು ನಿನ್ನೆ ಮೊನ್ನೆ ಆಗಿಲ್ಲ. ನಮ್ಮ ಬೀದರ್‌ನ ನಿಜಾಮರ ಭಾಗದಲ್ಲಿ "ದೇರ್ ಆಯಾ, ದುರಸ್ತ್ ಆಯಾ" ಎನ್ನುವ ಒಂದು ಗಾದೆ ಮಾತಿದೆ. ಹಾಗಾಗಿ ಮಾನ್ಯ ಸದಸ್ಯರು ಇವತ್ತು ಬೆಳಕಿಗೆ ತಂದಿದ್ದಾರೆ, ಸಂತೋಷ. ತಾವೆಲ್ಲಾ ನೇಮಕಾತಿಯಲ್ಲಿ ಬಹಳಷ್ಟು ಅವ್ಯವಹಾರವಾಗಿದೆ ತನಿಖೆ ಮಾಡಬೇಕೆಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದೀರಿ. ಖಂಡಿತವಾಗಿಯೂ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ ವರದಿಯನ್ನು ತರಿಸಿಕೊಳ್ಳುತ್ತೇವೆ. ಇದರಲ್ಲಿ ಮತ್ತೆ ಯಾವುದಾದರೂ ಅಂಶಗಳಿದ್ದರೆ ಅದನ್ನು ನೋಡಿ ಬೆಳಕು ಚೆಲ್ಲುತ್ತೇನೆ ಎಂದು ನಾನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ಮಾಡಬೇಕು.

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಮ್ಮಲ್ಲಿ "ದೇರ್ ಆಯಾ, ದುರಸ್ತ್ ಆಯಾ" ಎನ್ನುವ ಗಾದೆ ಮಾತು ಇದೆ. ಎರಡು ವರ್ಷ ಆಯಿತು.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏಕೆ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ?

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ನಾವು ಯಾರಿಗೂ ರಕ್ಷಣೆ ಮಾಡುತ್ತಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರ ಕಡೆ ಬೆರಳು ತೋರಿಸುವುದು ಬೇಡ.

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ನಾವು ಯಾರ ಕಡೆಗೂ ಬೆರಳು ತೋರಿಸುತ್ತಿಲ್ಲ. ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿಸೋಣ.

**ಸಭಾಪತಿಯವರು:–** ಮಾನ್ಯ ಸಚಿವರೇ, ಗಂಭೀರವಾದಂತಹ ಆರೋಪವನ್ನು ಇಬ್ಬರು ಸದಸ್ಯರು ಮಾಡಿದ್ದಾರೆ. ಯಾರೇ ಇರಲಿ, ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದ್ದಾರೆ, ಅದಕ್ಕೆ ತಾವು ಸ್ಪಷ್ಟವಾದ ಉತ್ತರವನ್ನು ಕೊಡಿ. ತನಿಖೆಯನ್ನು ಮಾಡಿಸಿ.

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲೇ ಕಠಿಣವಾದ ತನಿಖೆಯನ್ನು ಮಾಡಿಸುತ್ತೇನೆಂದು ತಮ್ಮ ಮುಖಾಂತರ ನಾನು ಹೇಳಬಯಸುತ್ತಿದ್ದೇನೆ. ಜಮೀನು ಖರೀದಿಯ ಬಗ್ಗೆ ಮಾನ್ಯ ಸದಸ್ಯರು ಹೇಳಿದರು, ನನಗೆ ಬಂದಿರುವ ಮಾಹಿತಿ ಪ್ರಕಾರ ಇದರ ಬಗ್ಗೆ ನಾನು ಕೂಲಂಕಷವಾಗಿ deep ಆಗಿ ಹೋಗುತ್ತೇನೆ. ಈಗ cattle field unit ಗೋಸ್ಕರ ಇದನ್ನು ಮಾಡಿಕೊಂಡಿದ್ದಾರೆ. Education Institution ಗಾಗಿ ಇಲ್ಲ. ಉದ್ದೇಶ ಬದಲಾಗಿದೆ. ಏಕೆಂದರೆ, ಮಂಡ್ಯದ ಸಮಗ್ರ ಅಭಿವೃದ್ಧಿ ಬಗ್ಗೆ ಮಾನ್ಯ ಅಪ್ಪಾಜಿಗೌಡರಿಗೆ ಬಹಳ ಆಸಕ್ತಿ ಇದೆ. ಅವರನ್ನು ಜೊತೆಗೂಂಡಂತೆ, ಏಕೆಂದರೆ ಇಲ್ಲಿ ಅವರು ಒಬ್ಬ ಸದಸ್ಯರು. ಮಂಡ್ಯದ ಸರ್ವಾಂಗೀಣಾಭಿವೃದ್ಧಿಗೆ ಯಾವ ರೀತಿ ಚಿಂತನೆ ಇದೆ ಆ ರೀತಿ ಸಭೆಯನ್ನು ಮಾಡಿ ಸರಿಪಡಿಸುತ್ತೇನೆಂದು ತಮ್ಮ ಮುಖಾಂತರ ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳಿಂದ ತನಿಖೆ ಮಾಡಿಸುತ್ತಾರೆಯೇ? ಏಕೆಂದರೆ, ಈಗ ನಿವೃತ್ತಿಯಾದ ಅಧಿಕಾರಿಗಳಿಂದ ಮಾಡಿಸಿ ಅದನ್ನು ಮುಚ್ಚಿ ಹಾಕಿದ್ದಾರೆಂದು ಸದನದ ಸದಸ್ಯರು ಈಗಾಗಲೇ ಸದನದಲ್ಲಿ ಹೇಳಿದ್ದಾರೆ. ಹಾಗಿರಬೇಕಾದರೆ ಈ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ Secretary ಯಿಂದ ತನಿಖೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿಸುತ್ತಾರೆಯೇ? ಸದನ ಸಮಿತಿಗೆ ವಹಿಸುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಸದನಕ್ಕೆ ಹೇಳಲಿ. Now, it has become property of the House.

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೇ, ಹಿಂದೆ ನಮ್ಮ ಇಲಾಖೆಯಿಂದ ತನಿಖೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. Higher Officers ಅವರಿಂದ ತನಿಖೆ ಮಾಡಿಸುತ್ತೇನೆಂದು ತಮ್ಮ ಮುಖಾಂತರ ಹೇಳಬಯಸುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಯಾರು, Deputy Registrar or Joint Registrar or Secretary, ಅವರು ಯಾರು? ಏಕೆಂದರೆ ಇಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿರುವುದರಿಂದ ಸದನ ಸಮಿತಿಗೆ ಒಪ್ಪಿಸಿ.

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೇ, Joint Registrar ಅವರಿಂದ ತನಿಖೆ ಮಾಡುವುದಕ್ಕೆ ಹೇಳುತ್ತೇನೆ. ಅವರಿಂದ ವರದಿ ಬಂದಾದ ಮೇಲೆ ಅದರಲ್ಲೇನಾದರೂ ಕಂಡು ಬಂದರೆ ಮತ್ತೆ ತನಿಖೆ ಮಾಡಿಸೋಣ.

**ಸಭಾಪತಿಯವರು:-** Joint Registrar ಅವರೆಲ್ಲಾ ಅಲ್ಲೇ ಇರುತ್ತಾರೆ. Secretary ಅವರಿಂದ ಮಾಡಿಸಿ ತಪ್ಪೇನಿದೆ?

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಿಂದ ಬೇಕಾದರೆ Additional Registrar ರವರನ್ನು ಹಾಕಿ ತನಿಖೆ ಮಾಡಿಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯ ಸದಸ್ಯರಾದ ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಸದನ ಸಮಿತಿ ಮುಖಾಂತರ ತನಿಖೆ ಮಾಡಿದರೆ ಸರಿಯಾದ ನ್ಯಾಯ ಸಿಗುತ್ತದೆ ಎನ್ನುವ ಭಾವನೆ ಇದೆ.

**8. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

ಅ) ವಿಷಯ: ಮೈಸೂರು ವಿಶ್ವವಿದ್ಯಾಲಯದಲ್ಲಿನ ಅರ್ಹ ಅಧ್ಯಾಪಕರಿಗೆ 2011ನೇ ಸಾಲಿನಿಂದ ಪ್ಲೇಸ್‌ಮೆಂಟ್ ಮತ್ತು ಸಿ.ಎ.ಎಸ್. ಯೋಜನೆಯಡಿ ಬಡ್ತಿ ನೀಡದಿರುವುದರಿಂದ ಅಧ್ಯಾಪಕರಿಗೆ ಹಾಗೂ ಶೈಕ್ಷಣಿಕ ಪ್ರಗತಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ.

-------

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶತಮಾನೋತ್ಸವವನ್ನು ಆಚರಣೆ ಮಾಡಿಕೊಂಡಿರುವಂತಹ ಮೈಸೂರು ವಿಶ್ವವಿದ್ಯಾಲಯದಲ್ಲಿ 2011 ರಿಂದ ಸುಮಾರು 170 ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರಿಗೆ ಇದುವರೆವಿಗೂ ಕೂಡ ಯು.ಜಿ.ಸಿ. ನಿಯಮಾವಳಿ ಪ್ರಕಾರ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿದ್ದರೂ ಕೂಡ ಅವರಿಗೆ ಸಿ.ಎ.ಎಸ್. ನಲ್ಲಿ ಸ್ಥಾನೀಕರಣ ಬಡ್ತಿಯನ್ನು ಕೊಡಲಿಲ್ಲ. ಇದು ನಿಜಕ್ಕೂ ಕೂಡ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶತಮಾನೋತ್ಸವ ಆಚರಣೆ ಮಾಡಿಕೊಂಡಿರುವಂತಹ ಮೈಸೂರು ವಿಶ್ವವಿದ್ಯಾಲಯ. ಇಲ್ಲಿನ ಆಡಳಿತ ಯಾವ ಮಟ್ಟಕ್ಕೆ ಇದೆ ಎಂದರೆ 6 ತಿಂಗಳಿಗೊಮ್ಮೆ ಸ್ಥಾನೀಕರಣ ಬಡ್ತಿ ನೀಡಬೇಕೆಂದು ಯು.ಜಿ.ಸಿ. ನಿಯಮಾವಳಿಗಳು ಹೇಳುತ್ತದೆ. ವರ್ಷಕ್ಕೆ ಎರಡು ಸಲ ಅರ್ಹರಿಗೆ ಬಡ್ತಿ ಕೊಡಬೇಕು. 2011 ರಿಂದ 7 ವರ್ಷಗಳ ಕಾಲ 170 ಜನ ಪ್ರಾಧ್ಯಾಪಕರಿಗೆ ಒಂದಲ್ಲ ಒಂದು ನೆಪ ಹೇಳಿಕೊಂಡು ಬಡ್ತಿಯನ್ನೇ ಕೊಟ್ಟಿಲ್ಲ. ಈ ಬಡ್ತಿಯನ್ನು ನಮಗೆ ಕೊಟ್ಟಿಲ್ಲ ಎಂದು ಕೋರ್ಟ್‌ಗೆ ಹೋಗುತ್ತಾರೆ. ದಿನಾಂಕ:10-11-2017 ರಲ್ಲಿ ಕೋರ್ಟ್ ಕೂಡ ಯು.ಜಿ.ಸಿ. ನಿಯಮಾವಳಿ ಪ್ರಕಾರ ಕೂಡಲೇ ಇವರಿಗೆ ಬಡ್ತಿ ಕೊಡಬೇಕೆಂದು ನಿರ್ದೇಶನ ಕೊಡುತ್ತದೆ. ಆದರೂ ಕೂಡ ಬಡ್ತಿ ನೀಡಲಿಲ್ಲ. 2007ನೇ ಸಾಲಿನಲ್ಲಿ 107 ಜನರು ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಆಗುತ್ತದೆ. ಅವರನ್ನು ಸರ್ಕಾರ ಒಮ್ಮೆ ಯಾವುದೋ ತನಿಖಾ ವರದಿಯನ್ನು ಆಧರಿಸಿ ಅವರನ್ನು ವಜಾ ಮಾಡುತ್ತಾರೆ. ಅವರೆಲ್ಲರೂ ಕೂಡ ಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತೆಗೆದುಕೊಳ್ಳುತ್ತಾರೆ. 2007ನೇ ಸಾಲಿನಲ್ಲಿ ನೇಮಕಗೊಂಡಂತಹ ಸಹ ಪ್ರಾಧ್ಯಾಪಕರಿಗೂ ಕೂಡ ಬಡ್ತಿ ಕೊಡಬೇಕೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಸರ್ಕಾರ 2007ನೇ ಸಾಲಿನಲ್ಲಿ ನೇಮಕಗೊಂಡಿರುವಂತಹ 107 ಜನರಿಗೂ ಕೂಡ ಕೋರ್ಟ್‌ನ ತೀರ್ಪಿಗೆ ಒಳಪಡಿಸಿ ಅವರಿಗೂ ಕೂಡ ಪದೋನ್ನತಿಯನ್ನು ಯು.ಜಿ.ಸಿ. ನಿಯಮಾವಳಿ ಪ್ರಕಾರ ಕೊಡಬೇಕು ಎಂದು ಸರ್ಕಾರ ದಿನಾಂಕ:3-2-2018 ರಲ್ಲಿ ಈ ವಿಶ್ವವಿದ್ಯಾಲಯಕ್ಕೆ ಪತ್ರ ಬರೆಯುತ್ತದೆ.

(ಮುಂದು)

176/10-07-2018/ಬಿಕೆಪಿ-ಕೆಎಸ್/1-40

**ಶ್ರೀ ಮರಿತಿಬ್ಬೇಗೌಡ(ಮುಂದು. . )**

ಆ ಸಂದರ್ಭದಲ್ಲಿ ಸರ್ಕಾರ 2007 ರಲ್ಲಿ ನೇಮಕಗೊಂಡ 107 ಮಂದಿಗೂ ಕೂಡ ಕೋರ್ಟ್‌ನ ತೀರ್ಪಿಗೆ ಒಳಪಡಿಸಿ, ಅವರಿಗೂ ಸಹ ಯುಜಿಸಿ ನಿಯಮಾವಳಿ ಪ್ರಕಾರ ಪದೋನ್ನತಿ ಕೊಡಬೇಕೆಂದು ಹೇಳಿ ಸರ್ಕಾರ ದಿನಾಂಕ: 03-02-2018 ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುತ್ತದೆ. ಆ ಪತ್ರವನ್ನೂ ಕೂಡ ಸಿಂಡಿಕೇಟ್ ಸಭೆಯಲ್ಲಿಟ್ಟು, ಕೆಲವು ಸಿಂಡಿಕೇಟ್ ಸದಸ್ಯರುಗಳು ಚರ್ಚೆ ಮಾಡುತ್ತಾರೆ. ಸಿಂಡಿಕೇಟ್ ಸದಸ್ಯರುಗಳು ಹೇಳಿದಂತೆ ಮೈಸೂರು ವಿಶ್ವವಿದ್ಯಾನಿಲಯ ನಡೆಯುತ್ತದೆ. ಸಿಂಡಿಕೇಟ್ ಸದಸ್ಯರುಗಳು ಹೇಗಿದ್ದಾರೆಂದರೆ 6 ಮಂದಿ ಸಿಂಡಿಕೇಟ್ ಸದಸ್ಯರುಗಳ ಪೈಕಿ 3 ಮಂದಿ ಪದವೀಧರರೇ ಆಗಿರುವುದಿಲ್ಲ. ಅಂತಹವರನ್ನು ಅಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನಾಗಿ ನೇಮಕ ಮಾಡಿದ್ದಾರೆ. ಕೆಲವು ಸಿಂಡಿಕೇಟ್ ಸದಸ್ಯರುಗಳೆಲ್ಲರೂ ಕೂಡ ಈ ಬಡ್ತಿ ವಿಚಾರ, ಮತ್ತೊಂದು ವಿಚಾರಕ್ಕೆ ಬಂದಾಗ ಎಲ್ಲಾ ಪ್ರಾಧ್ಯಾಪಕರ ಹತ್ತಿರ ಹಣ ವಸೂಲಿ ಮಾಡುವಂತಹ ದಂಧೆಯಲ್ಲಿ ಕೂಡ ಇಳಿದಿದ್ದಾರೆ. ಉದಾಹರಣೆಗೆ ಹೇಳುವುದಾದರೆ, 6 ಮಂದಿ ಸಿಂಡಿಕೇಟ್ ಸದಸ್ಯರುಗಳನ್ನು S.L.E.T. (State Level Eligibility Test) ಪರೀಕ್ಷೆ ಮಾಡುವಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವೇ ಅವರುಗಳನ್ನು ಪರೀಕ್ಷೆಯ ಉಸ್ತುವಾರಿಗೆ ನೇಮಕ ಮಾಡಿರುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಸ್ಪರ್ಧಾತ್ಮಕ S.L.E.T. ಪರೀಕ್ಷೆಗೆ 6 ಮಂದಿ ಸಿಂಡಿಕೇಟ್ ಸದಸ್ಯರುಗಳನ್ನು ಪರೀಕ್ಷಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಸ್ತುವಾರಿಗಳನ್ನಾಗಿ ನೇಮಕ ಮಾಡಿದ್ದಾರೆ. ಆ ಪರೀಕ್ಷೆಯನ್ನು ಬರೆದು ಬಂದಂತಹ ವಿದ್ಯಾರ್ಥಿಗಳು ನಮಗೆ ದೂರವಾಣಿಯಲ್ಲಿ ಮಾತನಾಡಿ ಈ ಬಗ್ಗೆ ಕೇಳುತ್ತಾರೆ. ಅಧಿಕೃತವಾಗಿ ಸಿಂಡಿಕೇಟ್ ಸದಸ್ಯರುಗಳೇ ಬಂದು ಪರೀಕ್ಷೆಯ ಉಸ್ತುವಾರಿಯನ್ನು ನೋಡುತ್ತಾರೆ, ನಮಗೆ ಈ ಪರೀಕ್ಷೆಯ ಬಗ್ಗೆ ಬಹಳ ಸಂಶಯವಿದೆ, ದಯಮಾಡಿ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಇದರ ಮೇಲೆ ತನಿಖೆ ಮಾಡಬೇಕೆಂದು, ಕ್ರಮ ಮಾಡಬೇಕೆಂದು ಈ ಬಗ್ಗೆ ನಾನು 3 ಪತ್ರಗಳನ್ನು ಬರೆದಿದ್ದೇನೆ. ಇವತ್ತಿಗೂ ಕೂಡ ಈ ಮೈಸೂರು ವಿಶ್ವವಿದ್ಯಾನಿಲಯದಿಂದ ಅದರ ಬಗ್ಗೆ ತನಿಖೆ ಮಾಡಿಸಲಿಕ್ಕೆ ಆಗಲಿಲ್ಲ. ಈ ಸಂಬಂಧ ಸರ್ಕಾರವೂ ಕ್ರಮ ಕೈಗೊಳ್ಳಲಿಲ್ಲ, ವಿಶ್ವವಿದ್ಯಾನಿಲಯವೂ ಕೂಡ ಕ್ರಮ ಕೈಗೊಳ್ಳಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನನ್ನ ಬೇಡಿಕೆ ಇಷ್ಟೆ, ಈ ಒಂದು ಹೆಸರಾಂತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 170 ಮಂದಿಗೆ 7 ವರ್ಷಗಳಿಂದ ಬಡ್ತಿ ಕೊಡದೇ ಇರುವಂತಹದ್ದು, ಯುಜಿಸಿ ನಿಯಮಾವಳಿಗಳ ವಿರುದ್ಧವಾಗಿ ನಡೆದುಕೊಂಡಿರುವಂತಹದ್ದು, ಈ ಬಗ್ಗೆ ಸರ್ಕಾರದ ನಿರ್ದೇಶನವನ್ನು ಪಾಲನೆ ಮಾಡದೇ ಇದ್ದುದರಿಂದ, ಇವತ್ತು ಶೈಕ್ಷಣಿಕ ಮಟ್ಟ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹಳ ಕುಸಿದಿದೆ. ವಿದ್ಯಾರ್ಥಿಗಳಿಗೆ ಸಂಶೋಧನೆ ಮಾಡಲಿಕ್ಕೆ ಮತ್ತು ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಬಹಳ ಅಡ್ಡಿಯುಂಟಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ಬಹಳ ವಿಷಾದ ದಿಂದ ಹೇಳಬೇಕಾಗಿದೆ. ಶತಮಾನೋತ್ಸವ ಆಚರಣೆ ಮಾಡಿಕೊಂಡಿರತಕ್ಕಂತಹ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿ ಹುದ್ದೆ ಖಾಲಿಯಾಗಿ ಇಲ್ಲಿಗೆ 1 ವರ್ಷ 5 ತಿಂಗಳಾಗಿದೆ. ಇದುವರೆವಿಗೂ ಕೂಡ 5 ಜನ ಹಂಗಾಮಿ ಕುಲಪತಿಗಳನ್ನು ನೇಮಕ ಮಾಡಲಾಗಿದೆ. ಆದರೆ, ಕುಲಪತಿಗಳನ್ನು ನೇಮಕಾತಿ ಮಾಡಲಿಲ್ಲ. ಹಂಗಾಮಿ ಕುಲಪತಿಗಳು ಕೂಡ ಇದರ ಬಗ್ಗೆ ಏನೂ ಕ್ರಮವನ್ನು ವಹಿಸಲಿಲ್ಲ.

ಇನ್ನೊಂದು ವಿಚಾರವಾಗಿ ಹೇಳಬೇಕೆಂದರೆ, ಸೀನಿಯರ್ ಕೆ.ಎ.ಎಸ್. ಅಧಿಕಾರಿಗಳನ್ನು Registrar ಆಗಿ ನೇಮಕ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡು ಒಬ್ಬ ಸೀನಿಯರ್ ಕೆ.ಎ.ಎಸ್. ಅಧಿಕಾರಿಗಯನ್ನೇ ಅಲ್ಲಿಗೆ Registrar ಆಗಿ ನೇಮಕ ಮಾಡಿದರು. ಅವರ ಅವಧಿಯಲ್ಲಿಯೇ ಈ ಸಿಂಡಿಕೇಟ್ ಸದಸ್ಯರಿಗೆ ಅವರೇ ಆದೇಶ ಕೊಟ್ಟು ಈ ಪರೀಕ್ಷೆಯ ಉಸ್ತುವಾರಿಯನ್ನು ನೋಡಿಕೊಳ್ಳಿ ಎಂದು ಮಾಡುತ್ತಾರೆ. ಆ ಅಧಿಕಾರಿಯೂ ಸಹ ರಿಜಿಸ್ಟ್ರಾರ್ ಆಗಿ, ಇವರ್ಯಾರಿಗೂ ಸಹ ಬಡ್ತಿಯನ್ನು ಕೊಡತಕ್ಕಂತಹ ಪ್ರಯತ್ನವನ್ನು ಮಾಡಲಿಲ್ಲ.

ದಯಮಾಡಿ ಯಾವ ಒಂದು ಕಾಲಾವಧಿಯಲ್ಲಿ ಇವರೆಲ್ಲರಿಗೂ ಕೂಡ ಸಿಎಎಸ್‌ನಲ್ಲಿ, ಯುಜಿಸಿ ನಿಯಮಾವಳಿಗಳಂತೆ ಅವರುಗಳು ಯ್ಯಾರ್ಯಾರು ಶಿಕ್ಷಣಿಕ ಅರ್ಹತೆಯನ್ನು ಪಡೆದಿದ್ದಾರೆ, ಅವರುಗಳಿಗೆ ಯುಜಿಸಿ ನಿಯಮಾವಳಿಗಳ ಪ್ರಕಾರ ಅವರುಗಳು ಎಂದಿನಿಂದ ಅರ್ಹತೆ ಪಡೆದಿದ್ದಾರೆ, ಅಂದಿನ ದಿನಾಂಕದಿಂದ ಬಡ್ತಿಯನ್ನು ನೀಡಬೇಕು. ಒಬ್ಬ ಪ್ರಾಧ್ಯಾಪಕರಿಗೆ 4 ವರ್ಷಗಳ ಹಿಂದೆಯೇ ಎಲ್ಲಾ ವಿದ್ಯಾರ್ಹತೆ ಇದೆ. ಆದರೆ, ಇವತ್ತು ಸಿಎಎಸ್ ನಲ್ಲಿ promotion ಕೊಡುವಾಗ, ಈ ದಿನಾಂಕದಿಂದ ಬಡ್ತಿಯನ್ನು ಕೊಡಲಿಕ್ಕೆ ಅದು ಕಾನೂನು ಬಾಹಿರ...

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಈ ಬಗ್ಗೆ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ 170 ಮಂದಿ ಪ್ರಾಧ್ಯಾಪಕರು ಯಾವ್ಯಾವ ದಿನಾಂಕದಿಂದ ಅವರಿಗೆ ಶೈಕ್ಷಣಿಕ ವಿದ್ಯಾರ್ಹತೆ ಮೇಲೆ ಯುಜಿಸಿ ನಿಯಮಾವಳಿಗಳ ಪ್ರಕಾರ ಬಡ್ತಿ ಸಿಗಬೇಕಾಗಿದೆಯೋ ಆ ದಿನಾಂಕದಿಂದಲೇ ಅವರುಗಳಿಗೆ ಬಡ್ತಿಯನ್ನು ಕೊಡಿಸುವಂತಹ ವ್ಯವಸ್ಥೆ ಆಗಬೇಕು. ಯಾವ ಸಮಯದೊಳಗಡೆ ಕೊಡಿಸುತ್ತಾರೆ ಎನ್ನುವುದನ್ನು ಹೇಳಬೇಕು. ಮತ್ತೆ. .

**ಸಭಾಪತಿಯವರು:-** ಶ್ರೀಯುತ ಮರಿತಿಬ್ಬೇಗೌಡರವರೇ, ಸಾಕು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡಲಿಕ್ಕೆ ಪ್ರಾರಂಭ ಮಾಡಿ ಇನ್ನೂ 5 ನಿಮಿಷಗಳಾಗಿಲ್ಲ. ಮಾತನಾಡಬಾರದು ಎಂದು ಹೇಳಿದರೆ ನಾನು ಮಾತನಾಡುವುದಿಲ್ಲ. ಇದು ಗಂಭೀರವಾದ ವಿಚಾರವಲ್ಲವೇ? ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂತಹದ್ದು ನಡೆಯುತ್ತದೆ ಎಂದರೆ ಅಲ್ಲಿನ ಕುಲಪತಿಗಳು ಹಾಗೂ Registrar ರವರು ಏನು ಮಾಡುತ್ತಿದ್ದಾರೆ? ಕಳೆದ 7 ವರ್ಷಗಳಿಂದ ಮುಂಬಡ್ತಿಯಿಲ್ಲ. ಅಲ್ಲಿ ಎಂತಹ ತೊಂದರೆಯಾಗಿದೆ. ಸಿಂಡಿಕೇಟ್ ಸದಸ್ಯರನ್ನು S.L.E.T ಪರೀಕ್ಷೆಗೆ ಉಸ್ತುವಾರಿಗೆ, ಮೇಲ್ವಿಚಾರಣೆಗೆ ಕಳುಹಿಸುತ್ತಾರೆಯೇ? ದಯಮಾಡಿ, ಕೂಡಲೇ ಆ ಸಿಂಡಿಕೇಟ್ ಸದಸ್ಯರ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಕೂಡಲೇ ವಜಾ ಮಾಡಬೇಕು. ಅವರನ್ನು ಯಾವ ಸಮಯದಲ್ಲಿ ವಜಾ ಮಾಡುತ್ತಾರೆ ಮತ್ತು ಈ ಎಲ್ಲಾ ಪ್ರಾಧ್ಯಾಪಕರಿಗೂ ಕೂಡ ಅವರುಗಳು ಅರ್ಹರಾದ ದಿನಾಂಕದಿಂದಲೇ ಬಡ್ತಿ ಕೊಡಿಸುತ್ತಾರೆಯೇ ಎನ್ನುವ ಬಗ್ಗೆ ದಯಮಾಡಿ ಮಾನ್ಯ ಸಚಿವರು ಉತ್ತರಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಸದಸ್ಯರಾದ ಶ್ರೀಯುತ ಮರಿತಿಬ್ಬೇಗೌಡರವರು ಸಕಾಲಿಕವಾದಂತಹ ವಿಚಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೇವಲ ಮೈಸೂರು ವಿಶ್ವವಿದ್ಯಾನಿಲಯ ಅಷ್ಟೇ ಅಲ್ಲ. ಈ ವಿಚಾರವಾಗಿ ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ . .

**ಸಭಾಪತಿಯವರು:-** ಶ್ರೀಯುತ ಶ್ರೀಕಂಠೇಗೌಡರವರೇ, ತಾವು ಈಗ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾತ್ರ ಮಾತನಾಡಿ. ತದನಂತರ ಮುಂದೆ ನೋಡೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಮಾನ್ಯ ಸಭಾಪತಿಯವರೇ, ಬರುತ್ತೇನೆ. ನಾವು ಇದರ ಬಗ್ಗೆ ಚರ್ಚೆ ಮಾಡದೇ ಹೋದರೆ ನೀವು ಕೊಡುತ್ತಿರುವಂತಹ ಖಾಸಗಿ ವಿಶ್ವವಿದ್ಯಾನಿಲಯಗಳು ಮುಂದೆ ಬರುತ್ತವೆ. ನಮ್ಮ ವಿಶ್ವವಿದ್ಯಾನಿಲಯಗಳೆಲ್ಲವೂ ಮುಚ್ಚಿ ಹೋಗುತ್ತವೆ. ಆದ್ದರಿಂದ, ಈ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಈಗ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಕೇಳುತ್ತೇನೆ. ಆದರೆ, this subject is universal. ಏತಕ್ಕೆ universal ಎಂದರೆ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ 100, 200, 300 ಸಂಖ್ಯೆಯ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹುದ್ದೆಗಳು ಖಾಲಿಯಿವೆ. ಅಲ್ಲಿ ಭೋಧನೆ ಮಾಡುವಲ್ಲಿ ಖಾಯಂ ಪ್ರಾಧ್ಯಪಕರುಗಳಿರುವುದಿಲ್ಲ. H.O.D. (Head of the Department) ಗಳ ಹುದ್ದೆಗಳಿಗೂ ಸಹ guest faculty ಗಳೇ? ಒಂದು ವಿಭಾಗದ ಮುಖ್ಯಸ್ಥರು ಒಂದು ಕಾಲದಲ್ಲಿ ಎಂ.ಎ. ವಿಷಯವನ್ನು ಅಧ್ಯಯನ ಮಾಡುವಾಗ ದೊಡ್ಡ ಗೌರವ–ಘನತೆ ಇರುವಂತಹ ವಿದ್ಯಾಂಸರುಗಳು ಅಲ್ಲಿ ಇರುತ್ತಿದ್ದರು. ಇವತ್ತು guest faculty H.O.D.ಗಳು ಇರುತ್ತಾರೆ. ಹೀಗಿರುವಾಗ ಇವತ್ತು ವಿಶ್ವವಿದ್ಯಾನಿಲಯಗಳು ಎಲ್ಲಿರುತ್ತವೆ? ಇವತ್ತು ನಾವು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಕೊಡುತ್ತಿದ್ದೇವೆ, ಅವರುಗಳು competition ಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ವಿಶ್ವವಿದ್ಯಾನಿಲಯಗಳ ಗುಣಮಟ್ಟ ಎಲ್ಲಿ ಹೋಗುತ್ತದೆ? ಇರುವಂತಹ ವಿಶ್ವವಿದ್ಯಾನಿಲಯಗಳನ್ನು ಉಳಿಸಿಕೊಳ್ಳಲಿಕ್ಕಾದರೂ ಖಾಲಿಯಿರುವಂತಹ ಎಲ್ಲಾ ಅಧ್ಯಾಪಕ ಹುದ್ದೆಗಳನ್ನು, ಪ್ರಾಧ್ಯಾಪಕ ಹುದ್ದೆಗಳನ್ನು, ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ದಯಮಾಡಿ ನೇಮಕಾತಿ ಮಾಡಲಿಕ್ಕೆ ಮಾನ್ಯ ಸಚಿವರು ಮುಂದಾಗಬೇಕು. ಮಾನ್ಯ ಸಚಿವರಿಗೆ ಆ ಒಂದು ಸಾಮರ್ಥ್ಯ ಇದೆ. ಎರಡನೆಯದಾಗಿ, ಯಾರಿಗೆಲ್ಲಾ ಅರ್ಹತೆ ಇರುತ್ತದೋ ಅವರುಗಳಿಗೆ ಸಕಾಲಿಕವಾಗಿ ಬಡ್ತಿ ನೀಡಬೇಕು. ಆ ಮೂಲಕ ಅವರ ಬೆನ್ನು ತಟ್ಟಬೇಕು, ಪ್ರೋತ್ಸಾಹಿಸಬೇಕು. ಬೇರೆ ಬೇರೆ ಇಲಾಖೆಗಳನ್ನು ನಾವು ಗಮನಿಸಿದಾಗ ಬಡ್ತಿ ಸಿಗುವಂತಹ ದಿನಾಂಕವನ್ನೇ ಪರಿಗಣಿಸುತ್ತೇವೆ. ಆದರೆ, ಆ ಮೇಸ್ಟ್ರುಗಳಿಗೆ, ಪ್ರೊಫೆಸರ್‌ಗಳಿಗೆ ಸಿಕ್ಕುವುದೇ ಒಂದು ಬಡ್ತಿ. ಅವರುಗಳು ಸಹಾಯಕ ಪ್ರಾಧ್ಯಾಪಕರಾಗಿದ್ದವರು, ಪ್ರಾಧ್ಯಾಪಕರಾಗುತ್ತಾರೆ. ಅದಕ್ಕೂ ಮೀನಾಮೇಷ ಏತಕ್ಕೆ ಮಾಡಬೇಕು. 2011ನೇ ಇಸವಿಯಿಂದ ಸುಮಾರು 7 ವರ್ಷಗಳಿಂದ ಬಡ್ತಿ ಕೊಟ್ಟಿಲ್ಲವೆಂದರೆ ಅರ್ಥ ಏನು? ಸಚಿವರು ಅವರುಗಳಿಗೆ ಬಡ್ತಿ ಕೊಡುವುದರ ಜೊತೆಗೆ ಈ ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲ್ಲಯಗಳಲ್ಲಿ ಖಾಲಿಯಿರುವಂತಹ ಹುದ್ದೆಗಳನ್ನು ತುಂಬಲಿಕ್ಕೆ ಮುಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ,

**(ಸರ್ಕಾರದ ಉತ್ತರವನ್ನು ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದೇನೆ. ಮಾನ್ಯ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡರವರು ಮತ್ತು ಶ್ರೀ ಶ್ರೀಕಂಠೇಗೌಡರವರು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಪ್ರಸ್ತಾಪ ಮಾಡಿ, ಅರ್ಹ ಅಧ್ಯಾಪಕರಿಗೆ ಸಿಎಎಸ್ ಯೋಜನೆಯಡಿಯಲ್ಲಿ ಇದುವರೆವಿಗೂ ಬಡ್ತಿಯನ್ನು ನೀಡಿಲ್ಲವೆಂದು, ಇದರಿಂದಾಗಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ ಎಂದು ಹೇಳಿ ಆ ಸಂಬಂಧ ಪ್ರಶ್ನೆ ಮಾಡಿದ್ದಾರೆ. ಯುಜಿಸಿ ನಿಯಮಾವಳಿಯ ರೀತ್ಯಾ ಕ್ರಮ ಕೈಗೊಳ್ಳಬೇಕು, 7 ವರ್ಷಗಳಿಂದ ಅದನ್ನು ಜಾರಿಗೆ ತಂದಿಲ್ಲ. ಈ ಸಂಬಂಧ ಸರ್ಕಾರ ಆದೇಶ ಮಾಡಿದ್ದರೂ ಜಾರಿಗೆ ತಂದಿಲ್ಲವೆನ್ನುವ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಚಾರವಾಗಿ ಯುಜಿಸಿ ನಿಯಮದಡಿ ಅದನ್ನು ಜಾರಿಗೆ ತರಲಿಕ್ಕೆ ನಾನು ಸಂಪೂರ್ಣವಾದಂತಹ ಕ್ರಮವನ್ನು ಕೈಗೊಳ್ಳುತ್ತೇನೆ. ಅದರ ಜೊತೆಯಲ್ಲಿಯೇ ಅವರು ಮತ್ತೊಂದು

ವಿಚಾರವಾಗಿ ಹಾಲಿ ಇರತಕ್ಕಂತಹ ಸಿಂಡಿಕೇಟ್ ಸದಸ್ಯರ ಬಗ್ಗೆ ಅಪಾದನೆಯನ್ನು ಮಾಡಿದ್ದಾರೆ. ಈ ಬಗ್ಗೆಯೂ ಸಹ ಒಂದು ವರದಿಯನ್ನು ತರಿಸಿ, ತನಿಖೆ ಮಾಡಿ, ಈ ಬಗ್ಗೆಯೂ ಸಹ ನಾನು ಕ್ರಮ ಕೈಗೊಳ್ಳುತ್ತೇನೆ.

**ಸಭಾಪತಿಯವರು:–** ಇಬ್ಬರು ಮಾನ್ಯ ಸದಸ್ಯರು ಕಳೆದ 5–6 ವರ್ಷಗಳಿಂದ ಅರ್ಹತೆ ಇದ್ದರೂ ಸಹ ಆ ದಿನಾಂಕದಿಂದ ಮುಂಬಡ್ತಿಯನ್ನು ಕೊಟ್ಟಿಲ್ಲ, ಅವರಿಗೆ ಅನ್ಯಾಯವಾಗಿದೆ, ಅದನ್ನು ಸರಿಪಡಿಸಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರುಗಳಿಗೆ ಮುಂಬಡ್ತಿಯನ್ನು ಕೊಟ್ಟಿಲ್ಲವೆಂದು ಏನು ಹೇಳುತ್ತಿದ್ದಾರೆ, ಅಂದಿನಿಂದಲೂ ಕೂಡ ಕಾನೂನಿನಡಿಯಲ್ಲಿ ಯಾರ್ಯಾರಿಗೆ ಅರ್ಹತೆ ಇದೆ, ಅವರೆಲ್ಲರಿಗೂ ಮುಂಬಡ್ತಿಯನ್ನು ಕೊಡಿಸುವಂತಹದ್ದು ಮತ್ತು ಅವರಿಗೆ ಏತಕ್ಕೆ ಮುಂಬಡ್ತಿಯನ್ನು ಕೊಟ್ಟಿಲ್ಲವೆಂದು ಹೇಳಿ ಸಂಬಂಧಪಟ್ಟವರಿಗೆ show cause notice ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಮತ್ತೆ, ಸಂಬಂಧಪಟ್ಟವರಿಗೆ ಮುಂಬಡ್ತಿಯನ್ನು ಕೊಡುವಂತಹ ಕೆಲಸವನ್ನು ಸಹ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ದಿನಾಂಕ: 21–6–2018 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗಿ ಪದೋನ್ನತಿ ನೀಡಲು ತೀರ್ಮಾನಿಸಲಾಗಿದೆ. 2007 ರಲ್ಲಿ ನೇಮಕಗೊಂಡಿರತಕ್ಕಂತಹ 107 ಮಂದಿಗೂ ಕೋರ್ಟ್‌ನಲ್ಲಿ ಕೇಸ್ ಇದ್ದರೂ ಕೂಡ ಕೋರ್ಟ್‌ನ ಷರತ್ತಿಗೊಳಪಟ್ಟು ಅವರೆಲ್ಲರಿಗೂ ನೀವು ಮುಂಬಡ್ತಿ ಕೊಡಬೇಕೆಂದು ಸರ್ಕಾರ ಪತ್ರ ಬರೆಯುತ್ತದೆ. ಈ ಪತ್ರದ ಬಗ್ಗೆ 3 ಜನ ಸಿಂಡಿಕೇಟ್ ಸದಸ್ಯರುಗಳು "ಸರ್ಕಾರ ಏನಾದರೂ ಪತ್ರ ಬರೆಯಲ್ರೀ, ಅವರ್ಯಾರಿಗೂ ಕೂಡ ಮುಂಬಡ್ತಿ ಕೊಡಲಿಕ್ಕೆ ಆಗುವುದಿಲ್ಲವೆಂದು ನಿರ್ಣಯ ಮಾಡಿಸುತ್ತಾರೆ. ಇದಕ್ಕೆ ಕುಲಪತಿಗಳು ರಿಜಿಸ್ಟ್ರಾರ್‌ಗಳು, ಸಮ್ಮತಿ ನೀಡುತ್ತಾರೆ. ಹಾಗಾದರೆ, ಸರ್ಕಾರದ ಆದೇಶಕ್ಕೆ 3 ಕಾಸಿನ ಕಿಮ್ಮತ್ತು ಇಲ್ಲವೇ? ಸರ್ಕಾರದಿಂದ ನಾಮಕರಣಗೊಂಡಿರುವ ಸಿಂಡಿಕೇಟ್ ಸದಸ್ಯರುಗಳು ಸರ್ಕಾರದ ಆದೇಶವನ್ನೇ ಪ್ರಶ್ನಿಸುತ್ತಿದ್ದಾರೆ.

ಮುಂದು. . .

**(177) 10.07.2018 01.50 ಎಸ್‌ವಿ–ಕೆಎಸ್**

**ಶ್ರೀ ಮರಿತಿಬ್ಬೇಗೌಡ (ಮುಂದು):–** ದಯಮಾಡಿ ದಿನಾಂಕ 21.06.2018 ರಂದು ನಡೆದಂತಹ ಸಿಂಡಿಕೇಟ್ ಸಭೆಯ ನಡವಳಿಕೆಗಳಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿದ್ದು, ಯಾವ ಮೂರು ಮಂದಿ ಸದಸ್ಯರು ಸರ್ಕಾರದ ತೀರ್ಮಾನವನ್ನು ಪ್ರಶ್ನೆ ಮಾಡಿದ್ದಾರೆಯೋ ಅವರ ಬಗ್ಗೆ ತನಿಖೆಯಾಗಬೇಕು. ಮಾನ್ಯ ಸಚಿವರಲ್ಲಿ ನನ್ನ ಮತ್ತೊಂದು ಮನವಿಯೇನೆಂದರೆ ಅವರು ಯಾವ ದಿನಾಂಕಗಳಿಂದ ಅರ್ಹತೆ ಹೊಂದಿದ್ದಾರೆಯೋ ಆ ದಿನಾಂಕದಿಂದಲೇ ಕೊಡಬೇಕು. ಏಕೆಂದರೆ ಏಳು ವರ್ಷಗಳಿಂದ ಕೊಟ್ಟಿರುವುದಿಲ್ಲ. ಒಂದು ತಿಂಗಳೊಳಗಾಗಿಯೇ ಅಥವಾ 20 ದಿನಗಳೊಳಗಾಗಿಯೇ ಹೀಗೆ ಎಷ್ಟು ನಿಗದಿತ ಸಮಯದಲ್ಲಿ ಬಡ್ತಿಯನ್ನು ಕೊಡಿಸಲಾಗುವುದು ಎಂಬುದನ್ನು ಸ್ಪಷ್ಟ ಪಡಿಸಬೇಕು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮತ್ತು ಮಾನ್ಯ ಶ್ರೀಕಂಠೇಗೌಡರು ಮೈಸೂರು ವಿಶ್ವವಿದ್ಯಾಲಯದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದವರಾಗಿರುತ್ತಾರೆ. ಅವರೊಡನೆ ಉಪಕುಲಪತಿಗಳನ್ನೂ ಕರೆಸಿ ಒಂದು ಸಭೆಯನ್ನು ನಡೆಸಿ ನೂರು ಪ್ರತಿಶತ ಕಾನೂನು ರೀತ್ಯಾ ಕ್ರಮವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಏಳು ವರ್ಷಗಳಿಂದ ಆಗಿರುವುದಿಲ್ಲ. ಅತಿ ಬೇಗ ಅಂದರೆ ಅದು ಹೇಗೆ ಆಗುತ್ತದೆ? ಪುನಃ ಏಳು ವರ್ಷಗಳೇ? ಒಂದು ತಿಂಗಳಿನಲ್ಲಿ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಲಿ. ಮೈಸೂರು ವಿಶ್ವವಿದ್ಯಾಲಯ ಶತಮಾನೋತ್ಸವ ಆಚರಿಸಿಕೊಂಡಿದೆ. ನಾವು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು. ಎಷ್ಟು ಸಮಯ ಬೇಕೆಂದು ಹೇಳಲಿ?

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಇವರು ಸಾಕಷ್ಟು ಹೋರಾಟ ಮಾಡಿದ್ದಾರೆ. ವಿಧಾನ ಪರಿಷತ್ತಿನಲ್ಲಿಯೂ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಮುಂದಿನ ತಿಂಗಳಿನಲ್ಲಿಯೇ ಸಭೆ ಕರೆಯುತ್ತೇನೆ. ನಾವು ನೀವು ಸೇರಿ ಆದಷ್ಟು ಬೇಗ ಇತ್ಯರ್ಥ ಮಾಡೋಣ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸಭೆ ಕರೆಯುವುದೇನು ಬೇಡ. 60 ದಿನಗಳೊಳಗಾಗಿ ಮಾಡುತ್ತಾರೆಯೇ? ಮೈಸೂರು ವಿಶ್ವವಿದ್ಯಾಲಯದ ಕಥೆಯೇ ಹೀಗಾದರೆ ಬೇರೆ ವಿಶ್ವವಿದ್ಯಾಲಯದ ಕಥೆ ಏನು?

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಎರಡು ದಿನಾಂಕಗಳಲ್ಲಿ ಬಹಳ relevancy ಕಂಡು ಬರುತ್ತಿದೆ. ಸರ್ಕಾರದ ಆದೇಶ ದಿನಾಂಕ 21.06.2017. ಸಿಂಡಿಕೇಟ್ ನಿರ್ಣಯ ದಿನಾಂಕ 21.06.2018. ಈ ಒಂದು ವರ್ಷ ಸರ್ಕಾರದ ಆದೇಶವನ್ನು ಯಾರು ಮತ್ತು ಏಕೆ ಧಿಕ್ಕರಿಸಿದರು? ಸರಿಯಾಗಿ ಅದೇ ದಿನಾಂಕಕ್ಕೆ ಮತ್ತೊಂದು resolution ಅನ್ನು ಮಾಡುತ್ತಾರೆಂದರೆ ಏನು ಕಾಕತಾಳೀಯ! Rightly or wrongly, they (Syndicate) have taken a decision. ದಿನಾಂಕ 21.06.2018ರಲ್ಲಿ ಸರ್ಕಾರದ ಆದೇಶವನ್ನು ಪಾಲನೆ ಮಾಡುವುದಕ್ಕೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಸಿಂಡಿಕೇಟ್‌ನ ನಿರ್ಧಾರವಾದ ನಂತರ ಬಡ್ತಿ ನೀಡುವುದಕ್ಕೆ ತಿಂಗಳಾನುಗಟ್ಟಲೆ ಏಕೆ ಬೇಕು? ಸಿಂಡಿಕೇಟ್‌ನಲ್ಲಿ ಆಗಿಲ್ಲ ಎಂದರೆ ಮೂರು ತಿಂಗಳು, ಆರು ತಿಂಗಳು ತೆಗೆದುಕೊಳ್ಳಲಿ. That is different issue. ಆದರೆ, when there is a resolution by the Syndicate to promote those Officials, ಏಕೆ ತಡ ಮಾಡಲಾಗುತ್ತಿದೆ? ಸರ್ಕಾರದ ಆದೇಶಗಳಿಗೆ ಕಿಮ್ಮತ್ತು ಬರಬೇಕೆಂದರೆ within no time ಸರ್ಕಾರ ಕ್ರಮ ಜರುಗಿಸಬೇಕು. ಮಾನ್ಯ ದೇವೇಗೌಡರು ಸಮರ್ಥರಿದ್ದಾರೆ. ಅವರು reforms ಅನ್ನು ತಂದು ಅವರಿಗೆ ನ್ಯಾಯವನ್ನು ಕೊಡಿಸುತ್ತಾರೆ ಎಂಬ ವಿಶ್ವಾಸವಿದೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಹೇಳುತ್ತಿರುವುದು ಸರಿಯಿದೆ. ಮಾನ್ಯ ಮರಿತಿಬ್ಬೇಗೌಡರ ಪ್ರಕಾರ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡಂತಹ ತೀರ್ಮಾನ ಸರಿಯಾದುದಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಒಪ್ಪಿಗೆ ಇದ್ದರೆ ಒಂದೇ ತಿಂಗಳಿನಲ್ಲಿ implement ಮಾಡಲಾಗುವುದು. ಯಾರು eligible ಇದ್ದಾರೆಯೋ ಅವರಿಗೆ promotion ನೀಡುವಂತಹ ತೀರ್ಮಾನ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡಿರುವುದಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿದೆ. ಇದನ್ನು ಪರಿಶೀಲಿಸಲಾಗುವುದು.

**ಸಭಾಪತಿಯವರು:–** ಮಾನ್ಯ ದೇವೇಗೌಡರೆ, ತಾವೆಲ್ಲರೂ ಮೈಸೂರಿನವರೇ ಆಗಿರುತ್ತೀರಿ. ಬರುವ 30ನೇ ತಾರೀಖಿನೊಳಗಾಗಿ ಒಂದು ಸಭೆಯನ್ನು ಕರೆದು ತೀರ್ಮಾನ ಮಾಡಿ.

**ಶ್ರೀ ಜಿ.ಟಿ.ದೇವೇಗೌಡ:–** ಆಗಲಿ ಮಾನ್ಯ ಸಭಾಪತಿಯವರೇ.

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 03.00 ಗಂಟೆಯವರೆವಿಗೆ ಮುಂದೂಡಲಾಗಿದೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 55 ನಿಮಿಷಗಳಿಗೆ ಮುಂದೂಡಲ್ಪಟ್ಟು ಮಧ್ಯಾಹ್ನ 03.00 ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು.)**

(178) 10.07.2018 3.20 ವೈಎಲ್–ಎಂಡಿ

(ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು)**

**ನಿಯಮ 330ರ ಮೇರೆಗೆ**

ಆ) **ವಿಷಯ: ಬೆಂಗಳೂರು ನಗರ ಚಿಕ್ಕಪೇಟೆ ಮುಖ್ಯರಸ್ತೆಯಲ್ಲಿರುವ ಸೈಟ್ ನಂ.202, 203 ಮತ್ತು 203/1ರ ಓಟಿಸಿ ರೋಡ್, ವಾರ್ಡ್ ಸಂಖ್ಯೆ: 109ರಲ್ಲಿ ನಿಯಮಬಾಹಿರವಾಗಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು, ಸದರಿ ಕಟ್ಟಡಗಳಿಗೆ ಬೆಸ್ಕಾಂ ಮತ್ತು ಬಿ.ಬಿ.ಎಂ.ಪಿ.ಯವರು ಕಾನೂನು ಬಾಹಿರವಾಗಿ ಸವಲತ್ತುಗಳನ್ನು ಒದಗಿಸಿರುವುದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗಳ ತೆರಿಗೆ ವಂಚನೆಯಾಗಿರುವ ಬಗ್ಗೆ.**

***

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಹಿಂದೆ ಸಹ ಇಬ್ಬರೂ ಮಾನ್ಯ ಸದಸ್ಯರೂ ಈ ವಿಚಾರವಾಗಿ ಪ್ರಶ್ನೆಯನ್ನು ಮಾಡಿದ್ದಾಗ ಸಹ ಕಟ್ಟಡವನ್ನು ತೆರವುಗೊಳಿಸುತ್ತೇವೆ ಎಂದು ಹೇಳಿದ್ದರು. ಆದರೂ ಸಹ ವಿದ್ಯುಚ್ಛಕ್ತಿಯನ್ನು ಮತ್ತು ನೀರು ಸರಬರಾಜು ಮಾಡಿ, ಕಟ್ಟಡವನ್ನು ಬಾಡಿಗೆಗೆ ನೀಡಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕು.

**ಡಾ॥ ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ,

(ಹೇಳಿಕೆಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚಿಕ್ಕಪೇಟೆ ಮುಖ್ಯರಸ್ತೆಯಲ್ಲಿರುವ ಸೈಟ್ ನಂ.202, 203 ಮತ್ತು 203/1 ಇದರಲ್ಲಿ ಕಟ್ಟಡವನ್ನು ನಿರ್ಮಿಸುವುದಕ್ಕೆ ನಕ್ಷೆಯನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ನಕ್ಷೆಯನ್ನು ಮಂಜೂರು ಮಾಡಿದ ಮೇಲೆಯೂ ಸಹ ಆ ಮಾಲೀಕರು ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡವನ್ನು ನಿರ್ಮಿಸಿದ್ದಾರೆ.

(ಮುಂದು) . . .

(179)/10.07.2018/03.30/ಎಸ್‌ಕೆ–ಎಂಡಿ

**ಡಾ ಜಿ. ಪರಮೇಶ್ವರ್ (ಉಪ ಮುಖ್ಯಮಂತ್ರಿ) (ಮುಂದು):–** ಮಾನ್ಯ ಸಭಾಪತಿಯವರೇ, ನಕ್ಷೆಗೆ ಅನುಮೋದನೆ ನೀಡಿದ್ದರೂ ಸಹ, ಅದರಂತೆ ಅವರು ಕಟ್ಟಡವನ್ನು ಕಟ್ಟಿರುವುದಿಲ್ಲ. ನಕ್ಷೆಗೆ ವ್ಯತಿರಿಕ್ತವಾಗಿ ಅಂದರೆ, ಕಟ್ಟಡವನ್ನು ಇನ್ನೂ ಸ್ವಲ್ಪ ದೊಡ್ಡದಾಗಿ ಮಾಲೀಕರಿಗೆ ಬೇಕಾದ ರೀತಿಯಲ್ಲಿ ನಿರ್ಮಿಸಿಕೊಂಡಿದ್ದಾರೆ. ಅವರು ನಕ್ಷೆಗೆ ವಿರುದ್ಧವಾಗಿ ಕಟ್ಟಡವನ್ನು ನಿರ್ಮಿಸಿಕೊಂಡಿದ್ದಾರೆ ಎಂಬುದು ಗೊತ್ತಾದ ಮೇಲೆ ಅದಕ್ಕೆ ನೋಟೀಸನ್ನು ಜಾರಿಗೊಳಿಸಿದ್ದಾರೆ. ಕೆ.ಎಂ.ಸಿ. ಕಾಯ್ದೆ, 1976 ರ ಪ್ರಕಾರ ನೋಟೀಸ್‌ಗಳನ್ನು ಸೆಕ್ಷನ್ 308, 321 ಮತ್ತು 321(2) ಮತ್ತು 321(3)ರ ಪ್ರಕಾರ ನೋಟೀಸ್ ಜಾರಿಗೊಳಿಸಿದ ಮೇಲೆ ಅವರು ಆ ನೋಟೀಸನ್ನು ತೆಗೆದುಕೊಂಡು, ತಪ್ಪಾಗಿರುವುದನ್ನು ಸರಿಪಡಿಸುವುದನ್ನು ಬಿಟ್ಟು, ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆಯನ್ನು ತಂದು, ಆ ಕೆಲಸವನ್ನು ಪೂರ್ಣಗೊಳಿಸಿದ್ದಾರೆ. ನನಗೆ ಆಶ್ಚರ್ಯವಾಗುತ್ತಿರುವುದೇನೆಂದರೆ, ಇದಕ್ಕೆ ಇಷ್ಟೆಲ್ಲಾ ತಡೆಯಾಜ್ಞೆ ಇದ್ದು ಕೂಡ ಬೆಸ್ಕಾಂರವರು ಮತ್ತು ನೀರು ಸರಬರಾಜು ಮಂಡಳಿಯವರು ಸಹ ಅವರಿಗೆ ಅನುಮತಿಯನ್ನು ನೀಡಿದ್ದಾರೆ. ಅವರಿಗೆ ಅನುಮತಿಯನ್ನು ಹೇಗೆ ನೀಡಿದರು ಎಂಬುದು ನನಗೆ ಇನ್ನೂ ಸಹ ಅರ್ಥವಾಗುತ್ತಿಲ್ಲ. ಆದ್ದರಿಂದ ಈಗ ಇರತಕ್ಕಂಥ status ಏನಿದೆಯೆಂದರೆ, ಬೆಸ್ಕಾಂನವರು ಅವರಿಗೆ ವಿದ್ಯುತ್‌ನ್ನು ಕಡಿತ ಮಾಡಿದ್ದಾರೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಅವರಿಗೆ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಬೇಕೆಂದು ಸೂಚನೆಗಳನ್ನು ನೀಡಿದ್ದಾರೆ. ಈ ಮಧ್ಯೆ ಮಾನ್ಯ ಸದಸ್ಯರು ಹೇಳಿದ ಹಾಗೆ ಹಿಂದೆ ಈ ಕಟ್ಟಡವನ್ನು ತೆರವುಗೊಳಿಸುತ್ತೇವೆ ಎಂದು ಇದಕ್ಕೆ ಉತ್ತರ ನೀಡಿದ್ದಾರೆ. ಆದರೆ, ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ನಾವು ಮುಂದುವರೆಯುವುದಕ್ಕಾಗುತ್ತಿಲ್ಲ. ತಡೆಯಾಜ್ಞೆ ತೆರವಾದ ನಂತರ ಕಾನೂನಿನ ಪ್ರಕಾರ ಆ ಕಟ್ಟಡವನ್ನು ಹೊಡೆದು ಹಾಕಿರುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**Mr.CHAIRMAN:-** Mr. A.Devegowda, are you satisfied from the Minister’s reply?

**ಅ. ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ ಜಿ. ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಮುಂದುವರೆದು ಬಿ.ಬಿ.ಎಂ.ಪಿ. ಯಲ್ಲಿ ಹೊಸದಾಗಿ ಒಂದು ಪ್ರಯೋಗವನ್ನು ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಇಂತಹ ಲಕ್ಷಾಂತರ ಕಟ್ಟಡಗಳು ಇವೆ. ನಾವು ಒಂದು ಖಾಸಗಿ ಏಜನ್ಸಿಗೆ ಕೊಟ್ಟು, ಮಹದೇವಪುರ ಕ್ಷೇತ್ರದಲ್ಲಿ ಒಂದು ಅನಧಿಕೃತವಾಗಿ ಅಥವಾ ಅವರು ನಕ್ಷೆಯನ್ನು ಬದಲಾಯಿಸಿ ಕಟ್ಟಿರತಕ್ಕಂಥದ್ದು, ಅದನ್ನು extend ಮಾಡಿರುವುದು ಮತ್ತು ಈ ರೀತಿ ಮಾಡಿರುವುದೆಲ್ಲವನ್ನು ನಾವು ಖಾಸಗಿ ಏಜನ್ಸಿಯ ಮೂಲಕ 75 ಕಟ್ಟಡಗಳನ್ನು ಪರಿಶೀಲನೆ ಮಾಡಿಸಿ ನೋಡಿದಾಗ, ಸುಮಾರು 450.00 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೇವೆ. BBMP has collected more than Rs. 450 crore. ಬೆಂಗಳೂರು ಪಟ್ಟಣದಲ್ಲಿ ಇಂತಹ ಕಟ್ಟಡವನ್ನು ಅನಧಿಕೃತವಾಗಿ ಕಟ್ಟಿರುವುದರ ಬಗ್ಗೆ, ಇದನ್ನು ಖಾಸಗಿ ಏಜನ್ಸಿಯ ಮೂಲಕ ಪರಿಶೀಲನೆ ಮಾಡಿದರೆ, ಬಹುಶಃ ಎಷ್ಟು ಹಣ ಬಿಬಿಎಂಪಿಗೆ ಬರುತ್ತದೆಂಬುದನ್ನು ಈಗಲೇ ಹೇಳುವುದಕ್ಕೆ ಆಗುವುದಿಲ್ಲ. ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ ಬಿಬಿಎಂಪಿಗೆ ಹಣ ಬರುತ್ತದೆ. ಅವರ ಕಟ್ಟಡವನ್ನು ಅಧಿಕೃತ ಮಾಡಬೇಕು; ಇಲ್ಲವಾದರೆ, ಅದನ್ನು ತೆರವುಗೊಳಿಸಬೇಕು. ಈಗ ಏನಾಗಿದೆ ಎಂದರೆ ಅವರಿಗೆ ದಂಡವನ್ನು ಹಾಕಿ, ಆ ಕಟ್ಟಡವನ್ನು ಅಧಿಕೃತವಾಗಿಯಾದರೂ ಮಾಡಿಕೊಟ್ಟರೆ ಖಂಡಿತವಾಗಿ ಇರುತ್ತದೆ. ಏಕೆಂದರೆ, ಅನೇಕ ಕಡೆ ಕಟ್ಟಡಗಳನ್ನು ತೆರವುಗೊಳಿಸುವ ಸ್ಥಿತಿಯಲ್ಲಿ ಇಲ್ಲ. ಅದು ಆ ರೀತಿ ಇದೆ. ಅದಕ್ಕೆ ದಂಡವನ್ನು ಕಟ್ಟಿದರೆ, ಅದು ಬಿಬಿಎಂಪಿಗೆ ಸರಿ ಸುಮಾರು ಮೂರ್ನಾಲ್ಕು ಸಾವಿರ ಕೋಟಿ ಹಣವಾದರೂ ಬರಬಹುದು. ಒಂದು ಖಾಸಗಿ ಏಜನ್ಸಿಯ ಮೂಲಕ ಪರಿಶೀಲನೆ ಮಾಡಿರುವುದಕ್ಕೆ ಈಗಾಗಲೇ ನಾವು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಇಂತಹ ಅನೇಕ ಕಟ್ಟಡಗಳು ಇರುವುದರಿಂದ ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ.

**ಅ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ಕೋರ್ಟ್‌ಗಳಲ್ಲಿ ಕೇಸ್ ಇರುವ ಇಲಾಖೆಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಕೋರ್ಟ್ ಕೇಸ್‌ನ್ನೇ move ಮಾಡುವುದಿಲ್ಲ.

**ಸಭಾಪತಿಯವರು:–** ಅದನ್ನು ಸಚಿವರ ಉತ್ತರ ನೀಡುವ ಸಂದರ್ಭದಲ್ಲಿ ಹೇಳುತ್ತಾರೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ದೇವೇಗೌಡರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಇದೊಂದು ಉದಾಹರಣೆ. ಇದೇ ಸದನದಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದೇವೆ. ಕೆ.ಎಂ.ಸಿ. ಕಾಯ್ದೆ, 1976ರ ಪ್ರಕಾರ ನೋಟಿಸ್‌ಗಳನ್ನು ಸೆಕ್ಷನ್ 321ರ ಪ್ರಕಾರ ಜಾರಿ ಮಾಡಲಾಗಿರುತ್ತದೆ. ಆದರೆ ಬಹಳಷ್ಟು ಜನ ಅಧಿಕಾರಿಗಳು ಅದರಲ್ಲಿ ಒಂದಿಷ್ಟು loopholes ನ್ನು ಇಟ್ಟು, ಮಾನ್ಯ ನ್ಯಾಯಾಲಯದಲ್ಲಿ ಸಹಜವಾಗಿ ತಡೆಯಾಜ್ಞೆ ಸಿಗುವ ಹಾಗೆ ಮಾಡುತ್ತಾರೆ. ನಾನು ಉಪ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ; Stay was granted as early as 30th of January 2018. Stay vacate ಮಾಡಲಿಕ್ಕೆ as a Lawyer ನನಗೆ ಅಲ್ಲಿಯ procedure ಚೆನ್ನಾಗಿ ಗೊತ್ತಿದೆ. ಎಷ್ಟು ಅರ್ಜಿಗಳನ್ನು Stay vacating ಗೆ ಹಾಕಿದ್ದಾರೆ; Stay vacating ಗೆ ಹಾಕಿಲ್ಲ

ಎಂದರೆ ಮೊದಲನೆಯದು defective notice ಕೊಡುವಂತಹದ್ದು. ಎರಡನೆಯದಾಗಿ, ಕೋರ್ಟ್‌ಗಳಲ್ಲಿ ಅಥವಾ Authorities ಮುಂದೆ ಈ ರೀತಿಯ Stay ಗಳನ್ನು ತೆಗೆದುಕೊಂಡು, ಅದನ್ನು Stay vacating ಹಾಕದೇ ಇದ್ದು, ಅದನ್ನು complete ಮಾಡಿಕೊಂಡು ಹೋಗಲಿ ಎನ್ನುವಂತಹದ್ದನ್ನು ಮಾಡತಕ್ಕಂತಹದ್ದು ಇದೆ.

ಮಾನ್ಯ ಗೋವಿಂದರಾಜುರವರು ಶೇಕಡಾ 90 ರಷ್ಟು ಈ ರೀತಿ ಇದೆ ಎಂದು ಹೇಳುತ್ತಿದ್ದಾರೆ. ನಾನು ಈ ಹಿಂದೆ ಸದನದಲ್ಲಿ ಚರ್ಚೆ ಮಾಡಿದಾಗ ಬಿ.ಬಿ.ಎಂ.ಪಿಯ ಕಮೀಷನರ್‌ಗೆ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳಿಗೆ ಮತ್ತು ಅವೊತ್ತಿನ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆವು. ನಿಯಮಾವಳಿಗಳನ್ನು especially Act ಗೆ ಯಾರು sanctioned plan ಗೆ ವಿರುದ್ಧವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಾರೋ, Residential Area ದಲ್ಲಿ ವಾಣಿಜ್ಯ ಕಟ್ಟಡ ಕಟ್ಟುವಂತಹದ್ದು; Ground plus Two Floors ಕಟ್ಟಡ ಕಟ್ಟಿ ಎಂದು ಅನುಮತಿಯನ್ನು ನೀಡಿದರೆ, Ground plus Four Floors ಕಟ್ಟಡವನ್ನು ಕಟ್ಟುವಂತಹದ್ದು ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ನನ್ನ ಮನೆಯ ಮುಂದೆ, ಒಂದು ವಸತಿ ಗೃಹ ಕಟ್ಟಲು ಯಾವುದೇ ಲಂಚ ತೆಗೆದುಕೊಳ್ಳದೇ ನಾನೇ plan ಕೊಡಿಸಿದ್ದೇನೆ. ಆತ ಕಟ್ಟಡವನ್ನು ಕಟ್ಟುತ್ತಾನೆ. ಕಟ್ಟಡದ ಯಾವುದೇ ಕಡೆಗಳಲ್ಲಿಯೂ ಸಹ ಒಂದು ಅಡಿಯ ಮೇಲೆ setbacks ಬಿಟ್ಟಿಲ್ಲ. ಏನಯ್ಯಾ ಎಂದು ಕೇಳಿದರೆ; 'ನಾನು ಗುಜರಾತಿ' ಎಂದು ಹೇಳುತ್ತಾನೆ, ಏನೆಲ್ಲಾ ಶಿಫಾರಸ್ಸು ತರುವುದಕ್ಕೆ ಪ್ರಯತ್ನ ಮಾಡುತ್ತಾನೆ. ನಾನು ಕಾನೂನಿನ ಚೌಕಟ್ಟಿನೊಳಗೆ, ಅನೇಕ ಬಾರಿ ಸಲಹೆಯನ್ನು ನೀಡಿದ್ದೆ. ಕಾನೂನುಬಾಹಿರವಾಗಿ ಯಾರು Floor ಗಳನ್ನು ಕಟ್ಟುತ್ತಾರೆ. ಅದನ್ನು automatically ಅಥವಾ vested with the local Authorities like Corporation ಎಂದು ಹೇಳಿ, ಕಾನೂನಿಗೆ ಬದಲಾವಣೆಯನ್ನು ತಂದರೆ, ಬಹುಶಃ extra Floor ಕಟ್ಟಿದರೆ, ಅದು ಸರ್ಕಾರಕ್ಕೆ ಅಥವಾ Corporation ಗೆ ಹೋಗುತ್ತದೆ ಎನ್ನುವ ಕಾರಣಕ್ಕಾಗಿ ಅವರು ಕಟ್ಟಡವನ್ನು ಹೆಚ್ಚುವರಿಯಾಗಿ ಕಟ್ಟದೇ ಇರುವುದಕ್ಕೆ ಸಾಧ್ಯತೆ ಇದೆ. ಯಾವೆಲ್ಲಾ amenities ಇದೆಯೆಲ್ಲಾ, ಉದಾಹರಣೆಗೆ water, electricity and sewage ಇವೆಲ್ಲವೂ ಸಹ without the clearance of BBMP ಯಾರೂ ಸಹ ಕೊಡಬಾರದು ಎನ್ನುವ ಷರತ್ತನ್ನು ಹಾಕಿದರೆ, ಬಹುಶಃ ಇದನ್ನು ತಡೆಯುವುದಕ್ಕೆ ಸಾಧ್ಯತೆ ಇದೆ. ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ಕಾನೂನು ಮಾಡುವುದಕ್ಕೆ ಮುಂದಾಗುತ್ತದೆಯೇ; ಆಗುವುದಾದರಲ್ಲಿ ಯಾವಾಗ ಮಾಡುತ್ತೀರಿ ಎಂದು ನಾನು ಸರ್ಕಾರವನ್ನು ಕೇಳವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರು ಸ್ವಲ್ಪ ಶಾರ್ಟ್ ಆಗಿ ಮಾತನಾಡಿ. ನನ್ನ ಬಳಿ ಸಮಯವಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪಿ.ಆರ್. ರಮೇಶ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಬೆಂಗಳೂರು ಬಹಳ ಅಗಲವಾಗಿ rapid ಆಗಿ urbanization ಆಗುತ್ತಿದೆ. ಇವತ್ತು ಬೆಂಗಳೂರಿನಲ್ಲಿ ಮೂರು ತರಹ violations ಇದೆ. ಮೊದಲನೆಯದಾಗಿ, sanction ಕೊಟ್ಟಿದ್ದರ ವಿರುದ್ಧವಾಗಿ ಕಟ್ಟಡಗಳನ್ನು ಕಟ್ಟುತ್ತಿರುವುದು. ಎರಡನೆಯದಾಗಿ, ಖಾತೆ ಕಂದಾಯ ಕಟ್ಟಿರುವಂತಹದ್ದು; ಪ್ಲ್ಯಾನ್ ಇಲ್ಲದೇ ಕಟ್ಟಿರುವಂತಹದ್ದು, ಮೂರನೆಯದಾಗಿ, ಖಾತೆಯೂ ಇಲ್ಲ. Agriculture land status ಇರುವಂತಹ ಭೂಮಿಯಲ್ಲಿ urbanize ಆಗಿರುವಂತಹದ್ದು. ಅದನ್ನು unplanned urbanization ಎನ್ನುತ್ತಾರೆ. ಈ ಮೂರು ರೀತಿ violations ಆಗುತ್ತಿವೆ. ಇದರಲ್ಲಿ ಯಥೇಚ್ಛವಾಗಿ ಏನು plan sanction ಗೆ ಹಣವನ್ನು ಕಟ್ಟಬೇಕು, ಆ ಹಣ ಸರ್ಕಾರಕ್ಕೆ ಬರುತ್ತಿಲ್ಲ. ಇವತ್ತು ಭೂ ಉಪಯೋಗದಲ್ಲಿ Residential ಇರುವಂತಹ ಜಾಗದಲ್ಲಿ, Non-Residential ಮಾಡುವುದು ಮತ್ತು Industiral Area ಮಾಡುವುದು, ಈ ರೀತಿ ಮಾಡಿ. ಇದು ಯಾವುದೇ ಒಂದು ಪ್ಲ್ಯಾನ್ ಪ್ರಕಾರ ನಗರ ಅಭಿವೃದ್ಧಿ ಹೊಂದುತ್ತಿರತಕ್ಕಂತಹದ್ದರಲ್ಲಿ ನಮಗೆ ಸ್ವಲ್ಪ ಮಟ್ಟಿಗೆ ಅಡೆ–ತಡೆ ಆಗಿದೆ. ಯಾವುದೇ ಒಂದು high rise building 15 ಮೀಟರ್‌ಗಿಂತ ಹೆಚ್ಚಿಗೆ ಯಾವುದೇ ಬಿಲ್ಡಿಂಗ್ ಕಟ್ಟಿದರೂ they should obtain CC (Commencement Certificate). Commencement Certificate ತೆಗೆದುಕೊಂಡ ಮೇಲೆ, ಅವರದು ಪೂರ್ತಿಯಾದ ಮೇಲೆ OC (Occupation Certificate) ತೆಗೆದುಕೊಳ್ಳಬೇಕು. ಅವರೆಡು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡಾಗ ಮಾತ್ರ BESCOM ಆಗಲೀ ಅಥವಾ Commencement BWSSB ಯಾಗಲೀ ಎಲ್ಲರ ಹತ್ತಿರವೂ ಅವರಿಗೆ ಬೇಕಾದಂತಹ ಸವಲತ್ತುಗಳನ್ನು ಪಡೆಯುವಂತಹದ್ದಕ್ಕೆ ಕಾನೂನಿನಲ್ಲಿ ಅವಕಾಶ ಇದೆ.

(ಮುಂದು...)

**(180) 10–07–2018 3–40 ಟಿಸಿಹೆಚ್:ಎಕೆ**
**ಶ್ರೀ ಪಿ.ಆರ್.ರಮೇಶ್ (ಮುಂದು):–**

ಆದರೆ, ಇದರಲ್ಲಿ ನಮ್ಮಲ್ಲಿ ಶೇ.25 ರಷ್ಟು commercial violation ಮಾಡಿರುವುದು ಮತ್ತು ಶೇ.50ರಷ್ಟು ವಾಸದ ಮನೆ violation ಆಗಿರತಕ್ಕಂಥದ್ದನ್ನು ರೆಗ್ಯೂಲರೈಸ್ ಮಾಡಬೇಕೆಂದು ಒಂದು ಕಾಯ್ದೆ ಬಂತು. ಇದು ಯಾವ ಹಂತದಲ್ಲಿ ಇದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ತಿಳಿಸಬೇಕು. ಇವತ್ತು ಅದನ್ನೇನಾದರೂ ಮಾಡಿದರೆ, ತಾವು ಹೇಳಿದ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಯಾವುದಕ್ಕೆ ಮಂಜೂರಾತಿ ಪಡೆದುಕೊಂಡು, ವ್ಯತಿರಿಕ್ತವಾಗಿ ಡೀವಿಯೇಟ್ ಮಾಡಿ ಕಟ್ಟಿರುವ ಕಟ್ಟಡಗಳನ್ನು ನಾವು ಕ್ರಮಬದ್ಧವಾಗಿ ವಾಣಿಜ್ಯ ಮಳಿಗೆಗಳನ್ನು ಶೇ.25

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಷ್ಟು ತರಬಹುದು ಮತ್ತು ವಾಸದ ಮನೆಗಳು ಯಾವುವು ಶೇ.50 ನಿಯಮದ ಉಲ್ಲಂಘನೆ ಇವೆ ಅವುಗಳನ್ನು ಮಾಡಬಹುದು. ಅದಕ್ಕಿಂತ ಹೆಚ್ಚಿಗೆ ಉಲ್ಲಂಘನೆಯಾಗಿರುವುದನ್ನು ಏನು ಮಾಡಬೇಕೆಂದು ಮತ್ತೊಂದು ಪ್ರಶ್ನೆ ಉದ್ಭವವಾಗುತ್ತದೆ. ನನಗೆ ಅನಿಸುವುದೇನೆಂದರೆ, ತಾವು ಹೇಳಿದಂತಹ ರೀತಿಯಲ್ಲಿ ಮಾಡಿದರೆ, ಬೆಂಗಳೂರು ಮಹಾನಗರ ಪಾಲಿಕೆಗೆ ಒಂದು ಸಾವಿರ ಕೋಟಿ ರೂಪಾಯಿಗಳಿಂದ ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಹಣ ತುರ್ತಾಗಿ ಬರುತ್ತದೆ. ಹಾಗಾಗಿ, ಈ ವಿಚಾರದಲ್ಲಿ ಏನು ಮಾನ್ಯ ಅ.ದೇವೇಗೌಡರವರು ಎತ್ತಿರತಕ್ಕಂಥದ್ದು ಯಾವುದೋ ಒಂದು ಸಣ್ಣ tip of the iceberg. ಅಷ್ಟೆ. ಆದರೆ ಬೆಂಗಳೂರಿನಲ್ಲಿ ಸಂಪೂರ್ಣವಾಗಿ ಈ ರೀತಿಯಲ್ಲಿವೆ. ಇದೇ ರೀತಿ ಕೆಲವೊಂದು ಕಡೆಗಳಲ್ಲಿ ಸುಮಾರು ಶೇ.5 ರಿಂದ ಶೇ.10ರಷ್ಟು apartment ಗಳು, ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳು ಸ್ವಲ್ಪ ಮಟ್ಟಿಗೆ ಇದೆ. ಇನ್ನೊಂದು ಪ್ರಾವಿಜನ್ ಏನೆಂದರೆ, ಇವತ್ತಿನ ಪರಿಸ್ಥಿಯಲ್ಲಿ ಕಾನೂನಿನಲ್ಲಿ ಶೇ.5 ಕ್ಕಿಂತ ಮೇಲಿರತಕ್ಕಂಥ ಡಿವಿಯೇಷನ್‌ನ್ನು ರೆಗ್ಯೂಲರೈಸ್ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಾಗಿ, ಇದನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕು. ಇದನ್ನು ಏನಾದರೂ ನಾವು ತಡೆಯಬೇಕೆಂದರೆ, ನಮ್ಮ ಕೆಳಹಂತದಲ್ಲಿರತಕ್ಕಂಥ ಇಂಜಿನಿರ್‌ಗಳನ್ನು ಬಿಗಿ ಮಾಡಿ, ಅವರನ್ನು accountable ಮಾಡಿ, ಅವರ ಮೇಲೆ responsibility fix ಮಾಡಲಿಲ್ಲವೆಂದರೆ, ಈ ರೀತಿಯ menace ಬೆಂಗಳೂರಿನಲ್ಲಿ ನಡೆಯುತ್ತಲೇ ಇರುತ್ತದೆ. ರ್‍ಯಾಪಿಡ್ ಆಗಿ ಬಹಳಷ್ಟು ಉಲ್ಲಂಘನೆ ಆಗುತ್ತಿರುತ್ತವೆ. ಇದ್ಯಾವುದೂ ಹತೋಟಿಯಲ್ಲಿ ಇರತಕ್ಕಂಥ ರೀತಿಯಲ್ಲಿ ಆಗುತ್ತದೆ.

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಬೇಕು.

**ಡಾ॥ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು, ಒಳಾಡಳಿತ, ಬೆಂಗಳೂರು ಅಭಿವೃದ್ಧಿ, ನಗರ ಯೋಜನೆ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):–** ಮಾನ್ಯ ಸಭಾಪತಿಯವರೇ, ನಾವು ಒಂದು ಕಡೆ regularization of unauthorized constructions ಎಂದು ಕಾನೂನು ಮಾಡುವುದಕ್ಕೆ ಹೋಗುತ್ತೇವೆ. ಇನ್ನೊಂದು ಕಡೆ ಈ ರೀತಿ ಡೀವಿಯೇಟ್ ಮಾಡಿ ಕನ್‌ಸ್ಟ್ರಕ್ಷನ್ಸ್ ಮಾಡಿರುವುದಾಗಲೀ, unauthorized ಆಗಿ constructions ಮಾಡಿರುವುದಾಗಲೀ ಇವುಗಳಿಗೆ ಹೊಸದಾಗಿ ಕಾನೂನನ್ನು ತರುವುದಕ್ಕೂ ನಾವು ಹೋಗುತ್ತೇವೆ, ಇದು ಒಂದು ರೀತಿಯಲ್ಲಿ contradiction. ಮಾನ್ಯ ವಿ.ಎಸ್.ಉಗ್ರಪ್ಪನವರು ಮತ್ತು ಮಾನ್ಯ ಅ.ದೇವೇಗೌಡರವರು ಇಲ್ಲಿ intentional ಆಗಿ ಅವರು ಹೇಳಿದರು. ಇದರಿಂದ ನನಗೆ ಏನು ಅನಿಸುತ್ತದೆ ಎಂದರೆ, Defective notice ನ್ನು ಉದ್ದೇಶಪೂರ್ವಕವಾಗಿ ಅವರಿಗೆ ಕೋರ್ಟ್‌ನಲ್ಲಿ ಅವರಿಗೆ ತಡೆಯಾಜ್ಞೆ ಸಿಗಬಾರದು ಎನ್ನುವಂಥ ರೀತಿಯಲ್ಲಿ ಕೊಡತಕ್ಕಂಥದ್ದು. ಇದೆಲ್ಲಾ interested officers ಮಾಡುತ್ತಾರೆ. ಅವರಿಗೆ ಏನು ಯಾವುದೇ accountability ಇಲ್ಲ. ಮಾನ್ಯ ಪಿ.ಆರ್ ರಮೇಶ್‌ರವರು ಹೇಳಿದಂತೆ, ವಾಣಿಜ್ಯ ಮಳಿಗೆಗಳು ಹಾಗೂ ವಾಸದ ಮನೆಗಳನ್ನು ಡೀವಿಯೇಷನ್ ಮಾಡಿ ಕಟ್ಟುತ್ತಿರುವುದು ಆ ಅಧಿಕಾರಿಗಳಿಗೆ ಗೊತ್ತಿದೆ. ಅದಾದ ನಂತರ, ಇದು ಡೀವಿಯೇಷನ್ ಆಗಿದೆ ಅದಕ್ಕೆ ನಾವು ಪರ್ಮಿಷನ್‌ನ್ನು ಕೊಡಬಾರದೆಂದು ಹೇಳಿದ್ದರೂ ಕೂಡ ಬೆಸ್ಕಾಂನವರು

ಪರ್ಮಿಷನ್‌ನ್ನು ಕೊಡುತ್ತಾರೆ. ಎಲ್ಲೋ ಒಂದು ಕಡೆ, ನಾವು ಇದರಲ್ಲಿ ಪ್ರತಿಯೊಬ್ಬರ ಮೇಲೂ ಕೂಡ accountability ಯನ್ನು fix ಮಾಡತಕ್ಕಂಥ ರೀತಿಯಲ್ಲಿ ಕಾನೂನು ಮಾಡಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮುಂದಿನ ದಿನಗಳಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಷ್ಟೇ ಅಲ್ಲದೇ, ಮಾನ್ಯ ಶಾಸಕರು ಇರಬಹುದು ಅಥವಾ ಅನುಭವಿ ಕಾನೂನು ಪಂಡಿತರು ಇರಬಹುದು, ಅವರ ಜೊತೆಯಲ್ಲಿ ನಾನು ಚರ್ಚೆ ಮಾಡಿ, ಯಾವ ರೀತಿ ಒಂದಕ್ಕೊಂದಕ್ಕೆ ಲಿಂಕ್ ಮಾಡಿ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಂದು ಒಂದು ಹೊಸ ಕಾನೂನನ್ನು ಜಾರಿಗೆ ತರುವುದಕ್ಕೆ ಮಾನ್ಯ ವಿ.ಎಸ್.ಉಗ್ರಪ್ಪನವರು ಸಲಹೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಆ ದಿಕ್ಕಿನಲ್ಲಿ ಚಿಂತನೆ ಮಾಡುತ್ತೇವೆಂದು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

**9. ಗಮನ ಸೆಳೆಯುವ ಸೂಚನೆಗಳು**

ವಿಷಯ:– ಕರ್ನಾಟಕ ರಾಜ್ಯದಲ್ಲಿ ಅಸಂಖ್ಯಾತ ಪ್ರಾಚೀನ–ಪುರಾತತ್ವ–ಪಾರಂಪರಿಕ ತಾಣ/ಸ್ಮಾರಕಗಳಿದ್ದು, ಇವುಗಳು ಸೂಕ್ತ ನಿರ್ವಹಣೆಯಿಲ್ಲದೆ ಶಿಥಿಲಾವಸ್ಥೆಯಲ್ಲಿರುವುದರಿಂದ ಅವುಗಳ ಸಂರಕ್ಷಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಬಗ್ಗೆ.

----

**ಡಾ॥ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಅಸಂಖ್ಯಾತ ಪ್ರಾಚೀನ–ಪುರಾತತ್ವ–ಪಾರಂಪರಿಕ ತಾಣ/ಸ್ಮಾರಕಗಳಿದ್ದು, ಸೂಕ್ತ ನಿರ್ವಹಣೆಯಿಲ್ಲದೆ ಶಿಥಿಲಾವಸ್ಥೆಯಲ್ಲಿರುವುದರಿಂದ ಅವುಗಳ ಸಂರಕ್ಷಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಬಂಧಪಟ್ಟಂತಹ ಸಚಿವರ ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

**ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):** ಮಾನ್ಯ ಸಭಾಪತಿಯವರೆ,

**(ಹೇಳಿಕೆಯನ್ನು ಲಗತ್ತಿಸಿದೆ.)**

**(ಮುಂದು...)**

**(181)10.7.2018/3.50/ಎಂ.ಎಂ–ಎ.ಕೆ**

**ಡಾ: ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸ್ಮಾರಕಗಳು, ಪುರಾತತ್ವ ಇಲಾಖೆಯ ಪರಂಪರೆ ಮೂಲಕ ಕರ್ನಾಟಕ ರಾಜ್ಯಕ್ಕೆ ಜಗತ್ತಿನ ಅತ್ಯಂತ ಹೆಚ್ಚು ಸಂಪನ್ಮೂಲವನ್ನು ತರುವಂತಹ ಅತ್ಯಂತ ದೊಡ್ಡ ಸಿರಿವಂತಿಕೆ ನಮ್ಮಲ್ಲಿದೆ. ಇಲ್ಲಿ ಆತಂಕಗೊಳಿಸುವ ಸಂಗತಿಯೆಂದರೆ, ಸುಮಾರು 25,000 ದಿಂದ 30,000ಕ್ಕೂ ಹೆಚ್ಚು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅರಕ್ಷಿತ ಸ್ಮಾರಕಗಳಿರುವ ಅಂದಾಜಿದೆ ಎಂದು ಹೇಳುತ್ತಾರೆ. ಕರ್ನಾಟಕದ ಇತಿಹಾಸ ಪ್ರಾರಂಭವಾಗುವುದೇ; ಭಾರತೀಯ ಚಿತ್ರರಂಗದಲ್ಲಿ ಐತಿಹಾಸಿಕ ಸಿನಿಮಾಗಳ ಗಳಿಕೆ ಎಷ್ಟಿದೆ ಎಂದರೆ, ಮಾನ್ಯ ಜಯಮಾಲಾರವರು ಚಿತ್ರರಂಗದಿಂದ ಬಂದಿದ್ದಾರೆ. ಇವತ್ತಿನ ಯುವ ಪೀಳಿಗೆಗೆ ಅತ್ಯಂತ ದೊಡ್ಡ ಆಸಕ್ತಿ ಹುಟ್ಟಿಸುವಂತಹದ್ದು, ಕನ್ನಡ ಚಿತ್ರರಂಗ ತೊಂದರೆಯಲ್ಲಿದೆ, ಆದರೂ ಕೂಡ ವರನಟ ಡಾ: ರಾಜಕುಮಾರ್ ಅವರ 'ಮಯೂರ' ಸಿನಿಮಾದಿಂದ ಹಿಡಿದು ಅನೇಕ ಐತಿಹಾಸಿಕ ಸಿನಿಮಾಗಳು ಕೂಡ ತುಂಬಾ ಗಳಿಕೆ ಮಾಡಿದ್ದು ನಮ್ಮ ಕಣ್ಣ ಮುಂದಿದೆ. ನಮ್ಮ ನೆರೆ ರಾಜ್ಯವಾದ ತೆಲುಗು ಚಿತ್ರರಂಗದಲ್ಲಿ 'ಮಗಧೀರ' ಅಥವಾ 'ಬಾಹುಬಲಿ' ಭಾಗ–1 ಮತ್ತು ಭಾಗ–2 ಅಂತಹ ಸಿನಿಮಾಗಳು ತುಂಬಾ ಆಸಕ್ತಿಕರವಾಗಿದೆ. ಅಲ್ಲಿ ಅಳಿದುಹೋಗಿರುವಂತಹ, ಶಿಥಿಲಾವಸ್ಥೆಯಲ್ಲಿರುವಂತಹ ಕೆಲವನ್ನು ಇಟ್ಟುಕೊಂಡು ಕೋಟಿ ಕೋಟಿ ಗ್ರಾಫಿಕ್ಸ್‌ಗಳನ್ನು ಮಾಡುವುದರ ಮೂಲಕ ನಮಗೆ ಚಿತ್ರಗಳನ್ನು ಕಣ್ಣಿಗೆ ಕಟ್ಟಿ ಕೊಡುತ್ತಾರೆ. ನಮ್ಮಲ್ಲಿ ಕೆಳದಿ ಚೆನ್ನಮ್ಮನ ಸಂಸ್ಥಾನ, ವೀರ ರಾಣಿ ಕಿತ್ತೂರು ಚೆನ್ನಮ್ಮನವರ ಸಂಸ್ಥಾನ ನಮ್ಮ ಕಣ್ಣೆದುರೇ ಶಿಥಿಲಗೊಳ್ಳುತ್ತಿದೆ. ನಾಡಪ್ರಭು ಕೆಂಪೇಗೌಡರು; ಇವತ್ತು ನಾವು ಈ ಸದನದಲ್ಲಿ ಕುಳಿತಿದ್ದೇವೆ ಎಂದರೆ, ಮಾಗಡಿಯಲ್ಲಿ ಅವರು ತೀರಿಕೊಂಡ ಸಮಾಧಿಯನ್ನು ಇತ್ತೀಚೆಗೆ ಉತ್ಖನನ ಮಾಡಿ ತೆಗೆದಿದ್ದಾರೆ. ಅಲ್ಲಿ ಒಂದು ಸ್ಮಾರಕ ಇಲ್ಲ. ಇದು ನಾವೆಲ್ಲರೂ ತಲೆತಗ್ಗಿಸಬೇಕಾದ ನೋವಿನ ಸಂಗತಿಯಾಗಿದೆ. ಬೆಂಗಳೂರು ಕೋಟೆಯನ್ನು ನಿರ್ಮಿಸುವಾಗ ಕೋಟೆಯ ಬಾಗಿಲು ನಿಲ್ಲುವುದಿಲ್ಲ, ಬಲಿದಾನ ಮಾಡಬೇಕು ಎನ್ನುವಂತಹ ಅಭಿಪ್ರಾಯ ಬರುತ್ತದೆ. ಆ ಸಂದರ್ಭದಲ್ಲಿ ಯಾರೋ ಜನಸಾಮಾನ್ಯರನ್ನು ಬಲಿ ಕೊಡಬಾರದು ಎಂದು ನಾಡಪ್ರಭು ಕೆಂಪೇಗೌಡರ ಸೊಸೆಯಾದ ಲಕ್ಷ್ಮೀದೇವಿ ಅವರ ಬಲಿದಾನ ಆಗಿದ್ದಕ್ಕಾಗಿ ಇವತ್ತಿಗೂ ನಗರಪಾಲಿಕೆ ಎದುರು ಅವರನ್ನು ಸ್ಮರಿಸುವಂತಹ ಲಕ್ಷ್ಮೀದೇವಿಯವರ ಸ್ಮಾರಕವನ್ನು ನೋಡುತ್ತೇವೆ. ಇಂತಹ ಸುಂದರವಾದ ರಾಜಧಾನಿಯನ್ನು ಕೊಟ್ಟಂತಹ ಆ ಹಳೆಯ ಕೋಟೆಯ ಸಣ್ಣ ತುಣುಕು ಕೂಡ ಇಂದು ನಮ್ಮೆದುರಿಗೆ ಕಾಣುತ್ತಿಲ್ಲ. ಮೇಲುಕೋಟೆ ತೆಗೆದುಕೊಂಡರೆ, ಎಷ್ಟು ಕೋಟಿ ಹಣ ನಮ್ಮ ರಾಜ್ಯಕ್ಕೆ ಬಂದಿದೆ, ಹೆಸರು ಕೂಡ; ಮಾನ್ಯ ಸಚಿವರನ್ನು ನಾನು ಟೀಕೆ ಮಾಡುತ್ತಿಲ್ಲ, ಕನಿಷ್ಟ ಎಷ್ಟು ಸ್ಮಾರಕಗಳಿವೆ, ಅದರ ಹೆಸರು ಕೂಡ ನಮಗೆ ಗೊತ್ತಿಲ್ಲ. ಅದನ್ನು ನಾವು ಕಂಡುಕೊಳ್ಳಬೇಕಾಗಿದೆ. ರಾಜ್ಯದ 831 ಮತ್ತು ಕೇಂದ್ರದ 608 ಸ್ಮಾರಕಗಳನ್ನು ಹಣ ಕೊಟ್ಟು ಮಾರುತ್ತಿದ್ದಾರೆ, ನಮ್ಮ ರಾಜ್ಯ ಒಂದು ರೂಪಾಯಿಯನ್ನೂ ಬೊಕ್ಕಸದಿಂದ ಖರ್ಚು ಮಾಡಬೇಕಾಗಿಲ್ಲ. ಮುಜರಾಯಿ ಇಲಾಖೆ interconnect ಆದರೆ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದಿಂದ ಸುಮಾರು 28 ರಿಂದ 29 ಕೋಟಿ ಹಣ ಸಂಗ್ರಹವಾಗುತ್ತದೆ. ನೋವಿನ ಸಂಗತಿ ಎಂದರೆ ideologically ನೀವು ಒಪ್ಪಿ ಅಥವಾ ಬಿಡಿ ಅದು ಬೇರೆ ವಿಚಾರ. Ideologically, ಹಿಂದುತ್ವ ಎಂದು ಬಂದಾಕ್ಷಣ ಪರಂಪರೆಯನ್ನು ಇತಿಹಾಸವನ್ನು ವಿರೋಧ ಮಾಡಬೇಕೆಂದು ಅಲ್ಲ. ಕ್ರೈಸ್ತ ವಾಸ್ತುಶಿಲ್ಪ ಅದು ಬೇರೆ. ಯೂರೋಪ್ ದೇಶಗಳಿಗೆ ಹೋದರೆ gothic ಸಂಸ್ಕೃತಿ, ಕ್ರೈಸ್ತ ಸಂಸ್ಕೃತಿ ಇದೆ. ಮೈಸೂರಿನಲ್ಲಿರುವ ಸಂಸ್ಕೃತಿಯನ್ನು ನಾವು ಗೌರವಿಸುತ್ತೇವೆ ಮತ್ತು ಅದು ನಮ್ಮ ಭಾಗದಲ್ಲಿದೆ ಎಂದು ಹೆಮ್ಮೆ ಪಡುತ್ತೇವೆ. ಅದೇ ರೀತಿ ನಮ್ಮ ಸ್ಮಾರಕಗಳ ಬಗ್ಗೆ ಅಸಡ್ಡೆ ಏಕೆ? ಶ್ರೀರಂಗಪಟ್ಟಣದಲ್ಲಿ ಒಂದು ಹಳೆಯ ಸೇತುವೆ ಇದೆ. ಅತಿ ಹೆಚ್ಚು ಸಿನಿಮಾಗಳಲ್ಲಿ ಅದನ್ನು ಚಿತ್ರೀಕರಣ ಮಾಡಲಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೇಲುಕೋಟೆಯನ್ನು ಅತಿ ಹೆಚ್ಚು ಚಿತ್ರೀಕರಣ ಮಾಡಲಾಗಿದೆ. ಆದರೆ ಅವುಗಳ ಜೀರ್ಣೋದ್ಧಾರಕ್ಕಾಗಿ ಇಷ್ಟು ಅಸಡ್ಡೆ ಏಕಿದೆ ಎಂದು ಕೇಳಬಯಸುತ್ತೇನೆ. ಮಾನ್ಯ ಸಚಿವರನ್ನು ಇಕ್ಕಟ್ಟಿಗೆ ಸಿಲುಕಿಸುವುದಿಲ್ಲ, ನಿಮ್ಮಿಂದ ಹೆಚ್ಚು ನಿರೀಕ್ಷೆ ಮಾಡುತ್ತೇನೆ. ನಾನು ಹೇಳುವುದು ಇಷ್ಟೇ. ನಮ್ಮ ನಾಡಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟ ಮಾಸ್ತಿ ವೆಂಕಟೇಶ ಅಯ್ಯಂಗಾರರು ರಚಿಸಿರುವ 'ಚಿಕ್ಕವೀರ ರಾಜೇಂದ್ರ' ಕಾದಂಬರಿಯಲ್ಲಿ ಬರುವ ಕೊಡಗಿನ ಮಡಿಕೇರಿಯಲ್ಲಿರುವ ಅತಿ ದೊಡ್ಡ ಮೂರ್ನಾಡು ಮತ್ತು ನಾಲ್ಕ್‌ನಾಡು ಅರಮನೆ ಇರಬಹುದು ಇವೆಲ್ಲಾ ಶಿಥಿಲಾವಸ್ಥೆಯಲ್ಲಿವೆ. ಅದೇ ರೀತಿ ಗ್ರಾಮ ಗ್ರಾಮಗಳಲ್ಲಿ ಕೋಟೆ ಕೊತ್ತಲುಗಳಿವೆ.

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಯವರೇ, ಅವೆಲ್ಲವುಗಳ ಲಿಸ್ಟ್ ಕೊಡಿ ಹೇಳಬೇಡಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಜೈನ ಬಸದಿ ಎಲ್ಲವೂ ಇವೆ, ಸುಮಾರು 25,000 ದಿಂದ 30,000 ಸ್ಮಾರಕಗಳು ಎಂದು ಹೇಳಿದ್ದೀರಿ. ಲಕ್ಷಾಂತರ ಸ್ಮಾರಕಗಳು ಮಂಡ್ಯ ಜಿಲ್ಲೆಯಲ್ಲಿ ಗ್ರಾಮ ಗ್ರಾಮಗಳಲ್ಲಿ ಅಂತಹ ಪುಟ್ಟ ಪುಟ್ಟ ಸ್ಮಾರಕಗಳಿವೆ. ಆದ್ದರಿಂದ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ಈ ಇಲಾಖೆಗೆ ಅತಿ ಹೆಚ್ಚಿನ ಗಮನವನ್ನು ಕೊಡುವ ಮೂಲಕ ಇವೆಲ್ಲವನ್ನೂ ಆಕರ್ಷಕ ಪ್ರವಾಸೋದ್ಯಮ ತಾಣಗಳನ್ನಾಗಿ ಮಾಡುವುದರ ಮೂಲಕ ನಾಡು–ನುಡಿಯ, ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಯನ್ನು ಮಾಡಬೇಕು, ಪ್ರವಾಸೋದ್ಯಮದ ಮೂಲಕ ನಾಡಿಗೆ ಅತಿ ಹೆಚ್ಚು ಸಂಪನ್ಮೂಲವನ್ನು ಗಳಿಸುವಂತಹ ಹಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು, ಸರ್ಕಾರ ಅತಿ ಹೆಚ್ಚು ಅನುದಾನವನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಆಗ್ರಹ ಮಾಡುತ್ತೇನೆ.

**ಸಾ.ರಾ. ಮಹೇಶ್ (ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, 25,000 ದಿಂದ 30,000 ಕ್ಕಿಂತ ಹೆಚ್ಚು . . .

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಉಗ್ರಪ್ಪನವರು ಎರಡು ಮಾತುಗಳನ್ನಾಡುತ್ತಾರೆ, ಅದನ್ನು ಕೇಳಿಕೊಂಡು ನಂತರ ಉತ್ತರವನ್ನು ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಯವರು ಬಹಳ ಉತ್ತಮವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅವರನ್ನು ನಾನು ಅಭಿನಂದಿಸುತ್ತೇನೆ. ಮೊದಲನೆಯದಾಗಿ ಸಂವಿಧಾನದ ಅನುಚ್ಛೇದ 51(ಎ) ಪ್ರಕಾರ, "It shall be the duty of every citizen of India..." ಎಲ್ಲಾ ಹೇಳುತ್ತಾ ಅದರಲ್ಲಿ (ಎಫ್) ನಲ್ಲಿ ಈ ರೀತಿ ಹೇಳುತ್ತಾರೆ, "to value and preserve the rich heritage of our composite culture." ಸಂವಿಧಾನದ ಆಶಯಗಳ ಪ್ರಕಾರ ಈ ದೇಶದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಈ ದೇಶದ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸುವುದಾಗಿದೆ. ಎರಡನೆಯದಾಗಿ, ಸಂವಿಧಾನದ ಅನುಚ್ಛೇದ 49 ಇದು ಬಹಳ ಪ್ರಮುಖವಾಗಿದೆ. ನಮಗೆ ಸ್ವಾತಂತ್ರ್ಯ ಬಂದು 70 ವರ್ಷಗಳಾಗಿದೆ. ನಮ್ಮಲ್ಲಿ ಈಗ ಹೇಳುತ್ತಿದ್ದೇವೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಸಂರಕ್ಷಣೆ ಮಾಡಿರುವ ಸ್ಮಾರಕಗಳು 831 ಮತ್ತು 608 ಸ್ಮಾರಕಗಳು ಒಟ್ಟು 1439 ಸ್ಮಾರಕಗಳು ಎಂದು ಇನ್ನು ಉಳಿದ 25,000 ದಿಂದ 30,000 ಸ್ಮಾರಕಗಳು ಈ ದೇಶದ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ಯದ ಇತಿಹಾಸವನ್ನು ಸಾರುವಂತಹ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹ ಸ್ಮಾರಕಗಳಿವೆ ಅವುಗಳನ್ನು ಇನ್ನೂ ಕೂಡ ಗುರುತಿಸುವುದರಲ್ಲಿ ಇದ್ದೇವೆ ಎಂದರೆ, ನಾವು ಯಾವ ಕಾಲದಲ್ಲಿದ್ದೇವೆ? ಸಂವಿಧಾನದ ಅನುಚ್ಛೇದ 49 ಏನು ಹೇಳುತ್ತದೆ ಎಂದರೆ,

> "**Protection of monuments and places and objects of national importance.** It shall be the obligation of the State to protect every monument or place or object of artistic or historic interests, declared by or under law made by Parliament to be of national importance, from spoliation, disfigurement, destruction, removal, disposal or export, as the case may be."

ನಮಗೆ ಸ್ವಾತಂತ್ರ್ಯ ಬಂದು 70 ವರ್ಷಗಳಾಗಿದೆ. ನನಗೆ ಅಯ್ಯೋ ಎನಿಸುತ್ತದೆ, ನೋವಾಗುತ್ತದೆ. ಚಿತ್ರದುರ್ಗದ ಕೋಟೆಯನ್ನು ಹೋಗಿ ನೋಡಿದರೆ, ಪಾವಗಡದಲ್ಲಿರುವ ನಿಡುಗಲ್ ಕೋಟೆ, ಮಾನ್ಯ ಗೃಹಸಚಿವರ ಮಧುಗಿರಿಯ ಕೋಟೆಯನ್ನು ನೋಡಿದರೆ, ಯಾವುದನ್ನು ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ಇದು ನಮ್ಮ ಸಂಸ್ಕೃತಿ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ? ಮೊನ್ನೆಯ ದಿವಸ ಏಳನೇ ತಾರೀಖಿನಂದು ಶನಿವಾರ ನಾನು ಹಂಪೆಗೆ ಹೋಗಿದ್ದೆ. ಅಲ್ಲಿಗೆ ಹೋದಾಗ ನನಗೆ ಬಹಳ ನೋವಾಯಿತು, ದುಃಖವಾಯಿತು. ಇಡೀ ವಿಶ್ವದಲ್ಲಿ World Heritage Centre ಎಂದು ಯಾವುದಾದರೂ ಘೋಷಣೆಯಾಗಿದ್ದರೆ ಮೊದಲನೆಯದು ಕಾಂಬೋಡಿಯಾ ಎರಡನೆಯದು ಹಂಪಿ. Hampi is declared as a World Heritage Centre as early as 1958. ಏಳನೇ ಶತಮಾನದಲ್ಲಿ ಅಲ್ಲಿ ವಿರೂಪಾಕ್ಷೇಶ್ವರನ ದೇವಸ್ಥಾನವನ್ನು ಕಟ್ಟಿದ್ದಾರೆ. 1336ರಲ್ಲಿ ವಿದ್ಯಾರಣ್ಯರು ಕುಮಾರರಾಮನ ಅಕ್ಕನ ಮಕ್ಕಳಾದಂತಹ ಹಕ್ಕ–ಬುಕ್ಕರ ಮೂಲಕ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡುತ್ತಾರೆ. ವಿಜಯನಗರ ಸಾಮ್ರಾಜ್ಯದ ಹಂಪೆ ಇವತ್ತು ಸುಮಾರು 4,100 ಹೆಕ್ಟೇರ್ ಜಾಗದಲ್ಲಿ ಇದೆ. ಸುಮಾರು 16 ಸ್ಕ್ವೇರ್ ಕಿ.ಮೀ. ಅಷ್ಟು ಆ ಪ್ರದೇಶ ಇದೆ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ಸುಮಾರು 1600ಕ್ಕೂ ಹೆಚ್ಚು monuments ಇವೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ವಿರೂಪಾಕ್ಷನ ದೇವಸ್ಥಾನ, ಪಂಪಾದೇವಿ ದೇವಸ್ಥಾನ, ನವಗ್ರಹಗಳ ದೇವಸ್ಥಾನ, ವಿಜಯವಿಠಲ ದೇವಸ್ಥಾನ, ಕಲ್ಲಿನ ರಥ ಹೀಗೆ ಇಷ್ಟೆಲ್ಲಾ ಇವೆ. ಅಲ್ಲಿ ಅವು 'ರಾಮಾಯಣ'ದ ಕಾಲದಿಂದಲೂ ಇದೆ ಎಂದು ಹೇಳುತ್ತಾರೆ.

(ಮುಂವ)

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸ

(182) 10–07–2018/4–00/ಕೆಹೆಚ್/ಆರ್‌ಎನ್

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು):–** ರಾಮಾಯಣ, ಪುರಾಣಗಳಲ್ಲಿ ಪಂಪಾದೇವಿ ತೀರ್ಥಕ್ಷೇತ್ರ ಎಂದೇ ಪ್ರಸಿದ್ಧವಾಗಿದೆ. ಆದರೆ ಸುಮಾರು 230 ವರ್ಷಗಳ ಕಾಲ ಸಂಗಮ, ಸಾಳ್ವ, ತುಳು, ಅರವೀಡು ಈ 4 ವಂಶಸ್ಥರು ಆಳ್ವಿಕೆ ನಡೆಸಿದ್ದು, 1509ನೇ ಸಾಲಿನಿಂದ 1530ನೇ ಸಾಲಿನವರೆಗೆ ಶ್ರೀ ಕೃಷ್ಣ ದೇವರಾಯರು ಆಳ್ವಿಕೆಯನ್ನು ಮಾಡುತ್ತಾರೆ. ಆಗಿನ ಕಾಲದಲ್ಲಿ ಮುತ್ತು, ರತ್ನಗಳು ಬೀದಿ ಬೀದಿಯಲ್ಲಿ ಮಾರಾಟವಾಗುತ್ತಿತ್ತು ಎಂದು ಹೇಳುತ್ತಾರೆ. ಆದರೆ ಇವತ್ತಿನ ದಿವಸ ಆ ಬೀದಿಗಳನ್ನು ಹೋಗಿ ನೋಡಬೇಕು. ನಾನು ಇತ್ತೀಚೆಗೆ ಅಲ್ಲಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿ ಎಲ್ಲಿ ನೋಡಿದರೂ ಸಹ ಪಾರ್ಥೇನಿಯಂ ಬೆಳೆದಿರುವಂತಹದ್ದು ಕಾಣುತ್ತದೆ. ಅಲ್ಲಿ ನೂರಾರು, ಸಾವಿರಾರು ವಾನರ ಸೈನ್ಯಗಳಿದ್ದು, ಅದಕ್ಕೆ ಆಹಾರವೇ ಸಿಗುತ್ತಿಲ್ಲ. ಅವುಗಳನ್ನು ನಿಯಂತ್ರಣ ಮಾಡುವುದಕ್ಕೆ ಯಾರೂ ಇಲ್ಲ. ಸುಮಾರು 100 ಜನ Trained guides ಮತ್ತು ಸುಮಾರು 50 ಜನ untrained ಇದ್ದಾರೆ. ಅವರನ್ನು ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲ. ಅವರ ಬದುಕು ದುಸ್ತರವಾಗಿದೆ. ಸುಮಾರು 50 ಜನ ಅರ್ಚಕರು ಇದ್ದು, ಅವರನ್ನು ಸಹ ಹೇಳುವವರು, ಕೇಳುವವರು ಯಾರು ಇಲ್ಲ. ನಾನು ಆ ಸ್ಥಳದಿಂದಲೇ ಡಿ.ಸಿ., ಎ.ಸಿ., ಮತ್ತು Archealogical Department ನವರಿಗೆ ದೂರವಾಣಿ ಮಾಡಿದೆ. ಒಂದು ಕಡೆ ಸ್ವಚ್ಛ ಭಾರತ ಎಂದು ದೇಶದಲ್ಲಿ ಘೋಷಣೆ ಮಾಡಲಾಗುತ್ತದೆ. ಇನ್ನೊಂದು ಕಡೆ ಇಡೀ ವಿಶ್ವದಲ್ಲಿಯೇ ಎರಡನೇ ಪ್ರೇಕ್ಷಣೀಯ ಅದ್ಭುತ ಸ್ಥಳ ಎಂದು ಪ್ರವಾಸೋದ್ಯಮಕ್ಕೆ ಒತ್ತು ಕೊಡಬೇಕೆಂದು ಹೇಳಲಾಗುತ್ತದೆ. ಬಹುಶಃ ಸರ್ಕಾರವು ಇವತ್ತಿನ ದಿವಸ ತುದಿಗಾಲಿನಲ್ಲಿ ನಿಂತು ಮಹತ್ವವನ್ನು ಕೊಟ್ಟರೆ ಹಂಪೆಯನ್ನು ನೋಡದೇ ಯಾರು ಸಹ ಕರ್ನಾಟಕವನ್ನು ನೋಡುವುದಕ್ಕೆ ಸಾಧ್ಯತೆ ಇಲ್ಲ ಎಂದು ನಾನು ಹೇಳುತ್ತೇನೆ. ಭಾರತ ದೇಶವನ್ನು ಪ್ರವಾಸ ಮಾಡಬೇಕೆಂದರೆ ಹಂಪೆಯನ್ನು ನೋಡಬೇಕೆನ್ನುವಂತಹ ಸ್ಥಿತಿ ನಿರ್ಮಾಣವಾಗಬೇಕು. ಆದರೆ ಹಂಪೆಯಲ್ಲಿ ಕುಡಿಯುವುದಕ್ಕೆ ನೀರಿಲ್ಲ ಮತ್ತು ಶುಚಿತ್ವ ಇಲ್ಲ, ಆ ಸ್ಥಳದಲ್ಲಿ ವಾಸ ಮಾಡುವುದಕ್ಕೆ ಯಾವುದೇ ಲಾಡ್ಜ್‌ಗಳು ಇಲ್ಲ. ಅಲ್ಲಿನ ರಾಜಬೀದಿಯು ಎಷ್ಟು ಕೆಟ್ಟದಾಗಿದೆ ಎಂದರೆ ಆ ದೇವಸ್ಥಾನದಲ್ಲಿರುವಂತಹ ಪರಿಸರವನ್ನು ನೋಡಿದರೆ ಯಾರಿಗೂ ಸಹ ಇಷ್ಟವಾಗುವುದಿಲ್ಲ. ಆ ಸ್ಥಳಕ್ಕೆ ಕೆಲವು ವಿದೇಶಿಯರು ಬರುತ್ತಾರೆ. ಇದರ ಬಗ್ಗೆ ಬಹಳ ನೋವಿನಿಂದ ಡಿ.ಸಿ., ಯವರಿಗೆ ಹೇಳಿದೆ. ಎಲ್ಲರೂ ಸಹ ದೇವಸ್ಥಾನಕ್ಕೆ ಬರುತ್ತಾರೆ. ಆದರೆ ಮೂರು ಇಂಚು ಇರುವಂತಹ ಚಡ್ಡಿ ಹಾಕಿಕೊಂಡಿರುವವರನ್ನು ಆ ದೇವಸ್ಥಾನಕ್ಕೆ ಬಿಡುತ್ತಾರೆ. ಅರೆ ಬೆತ್ತಲೆಯಲ್ಲಿ ಇರುವಂತಹವರು ಕೂಡ ದೇವಸ್ಥಾನಕ್ಕೆ ಬರುತ್ತಾರೆ. ಇದರ ಬಗ್ಗೆಯೂ ಕೂಡ ಡಿ.ಸಿ., ಯವರಿಗೆ ಹೇಳಿದೆ. ಧರ್ಮಸ್ಥಳ, ತಿರುಪತಿ ಮತ್ತು ಇನ್ನಿತರ ದೇವಸ್ಥಾನಗಳಲ್ಲಿ ಆ ರೀತಿಯಲ್ಲಿ ಮಾಡುತ್ತಾರೆಯೇ, ಇದರ ಬಗ್ಗೆ ಏಕೆ ಪ್ರಯತ್ನ ಮಾಡುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆ ದೇವಸ್ಥಾನಗಳೆಲ್ಲಾ ಶರ್ಟ್‌ನ್ನು ತೆಗೆದು ಹೋಗುವಂಥದ್ದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ತಿರುಪತಿಯಲ್ಲಿ ಸೇವೆಗೆ ಮಾತ್ರ ಶರ್ಟ್‌ನ್ನು ತೆಗೆದು ಹೋಗಬೇಕು. ದರ್ಶನಕ್ಕೆ ಆ ರೀತಿ ಏನು ಇಲ್ಲ.

**ಡಾ॥ ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಶ್ರೀ ತೇಜಸ್ವಿನಿಗೌಡರವರೇ ಒಂದು ನಿಮಿಷ. ಅವರು ಬೇಗ ಮಾತನಾಡಿ ಮುಗಿಸಲಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾರ್‍ಯಾರ taste ಹೇಗೆ ಎನ್ನುವುದನ್ನು ಅವರ ಮಾತಿನಿಂದಲೇ ಗೊತ್ತಾಗುತ್ತದೆ. ದಾಸರ ಪದಗಳಲ್ಲಿ ಏನು ಹೇಳುತ್ತಾರೆ ಎಂದರೆ, "

"ಉದರ ವೈರಾಗ್ಯವಿದು,
ನಮ್ಮ ಪದುಮನಾಭನಲಿ ಲೇಶ ಭಕುತಿ ಇಲ್ಲ,
ಉದರ ವೈರಾಗ್ಯವಿದು.

ಉದಯ ಕಾಲದಲೆದ್ದು, ಗಡಗಡ ನಡುಗುತಾ,
ನದಿಯಲಿ ನಿಂದೆನೆಂದು ಇಗ್ಗುತಲಿ,
ಮದ ಮತ್ಸರ ಕ್ರೋಧ, ಒಳಗೆ ತುಂಬಿಟ್ಟುಕೊಂಡು,
ಬದಿಯಲ್ಲಿದ್ದವರಿಗೆ ಆಶ್ಚರ್ಯ ತೊರುವುದು.
ಕಂಚುಗಾರನ ಬಿದಾರರಂದಹಿ,
ಕಂಚು ಹಿತ್ತಾಳೆ ಪ್ರತಿಮೆಯನೆರಗಿ,
ಮಿಂಚ ಬೇಕೆನುತ ಜೊತಿಗಳನು ಹಚಿ,
ವಂಚನೆಯಿಂದಲಿ ಪೂಜೆಯ ಮಾಡುವುದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಾವು ವಕೀಲರು ಎಂದು ಗೊತ್ತಿತ್ತು. ಆದರೆ ಸಾಹಿತಿಗಳೆಂದು ಗೊತ್ತಿರಲಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಹಾಗಾಗಿ ನಮ್ಮ ದೇಶದ ಪರಂಪರೆಯನ್ನು . . .

**ಶ್ರೀ ಬಂಡೆಪ್ಪ ಕಾಶಂಪೂರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸ್ವಲ್ಪ ಬಿಡಿಸಿ ಹೇಳಿ, ನಮಗೇನು ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಇದರ ಬಗ್ಗೆ ಬಿಡಿಸಿ ನಂತರ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಬಹುಶಃ ನಾನು ಹಳೆಗನ್ನಡದಲ್ಲಿ ಹೇಳಲಿಲ್ಲ ಅಥವಾ ನಾನು ನನ್ನ ದ್ವಿತೀಯ ಭಾಷೆ ಸಂಸ್ಕೃತ ಭಾಷೆಯಲ್ಲಿ ಹೇಳಲಿಲ್ಲ. ನಾನು ಕನ್ನಡದಲ್ಲಿ ಹೇಳಿದ್ದೇನೆ.

**ಸಭಾಪತಿಯವರು:-** ಇದರ ಬಗ್ಗೆ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕನ್ನಡ ಅರ್ಥವಾಗುವುದಿಲ್ಲವೆಂದರೆ . . .

**ಶ್ರೀ ಬಂಡೆಪ್ಪ ಕಾಶಂಪೂರ್:-** ಮಾನ್ಯ ಸಭಾಪತಿಯವರೇ, ಕನ್ನಡ ಬರುತ್ತದೆ. ನಾವು ಬೀದರ್ ಜಿಲ್ಲೆಯವರಾಗಿರುವುದರಿಂದ ಸ್ವಲ್ಪ ಕಡಿಮೆ ಅರ್ಥವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಸ್ವಲ್ಪ ಕಡಿಮೆ ಅರ್ಥವಾಗುತ್ತದೆ. ಶುದ್ಧ ಕನ್ನಡ ಬರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಆದರೆ ಅಶುದ್ಧವಾದಂತಹದ್ದು ಇದೆ.

**ಶ್ರೀ ಬಂಡೆಪ್ಪ ಕಾಶಂಪೂರ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಚಿವರೇ ಸಾಕು, ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮೊದಲನೆಯದು ಹಂಪೆಯನ್ನು ಅಭಿವೃದ್ಧಿಪಡಿಸಬೇಕು. ಏಕೆಂದರೆ, ಉದಾಹರಣೆಗೆ ಸುರಪುರವನ್ನು ತೆಗೆದುಕೊಂಡಾಗ ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ್ದಂತಹ ವೆಂಕಟಪ್ಪ ನಾಯ್ಕರವರ ಶವ ಇವತ್ತಿನವರೆಗೂ ಎಲ್ಲಿದೆ ಎಂಬುದು ಗೊತ್ತಿಲ್ಲ. ಏಕೆಂದರೆ ಬ್ರಿಟೀಷರು ಇವರನ್ನು ಬಂಧಿಸಿದ್ದರು. ಆ ಕೋಟೆ–ಕೊತ್ತಲಗಳ ಸಂರಕ್ಷಣೆಯಾಗುತ್ತಿಲ್ಲ. ಹಾಗಾಗಿ ಈ ವಿಚಾರಗಳ ಬಗ್ಗೆ ಸರ್ಕಾರವು ಮೀನಾ–ಮೇಷವನ್ನು ಎಣಿಸದೆ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ನನಗೆ ಆಶ್ಚರ್ಯವಾಯಿತು.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೇ ಸಾಕು ಕುಳಿತುಕೊಳ್ಳಿ, ಅವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, 40:40:20 ಎಂದು ಮಾಡಿದೆ. ಸರ್ಕಾರವು ಏನಾದರೂ ಬಡವಾಗಿದೆಯೇ, ಇದರಲ್ಲಿ ಶೇಕಡ 40ರಷ್ಟು ಸರ್ಕಾರ, ಶೇಕಡ 40ರಷ್ಟು ಖಾಸಗಿ, ಇನ್ನು ಶೇಕಡ 20ರಷ್ಟು ಸಾರ್ವಜನಿಕರು ಎಂದು ಹೇಳುತ್ತಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಇನ್ನು ಆಯವ್ಯಯದ ಮೇಲೆ ಮಾತನಾಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ ಯಾರು ಸಹ ಧರ್ಮಸ್ಥಳ ದೇವಸ್ಥಾನದ ಉತ್ಪತ್ತಿ ಏನಿದೆ. ಅದರಲ್ಲಿ ಕೊಡಬಹುದು. ಅನೇಕ ದೇವಸ್ಥಾನಗಳಲ್ಲಿ ಅನೇಕ ಜನರು ಬಂದ ಕಡೆಯಲ್ಲಿ ತೆಗೆದುಕೊಳ್ಳಬೇಕು. ಸರ್ಕಾರವು ಕೂಡಲೇ ಈ ಇಲಾಖೆಗೆ ಹೆಚ್ಚು ಹಣವನ್ನು ಕೊಡುವಂತಹ ಸ್ಮಾರಕಗಳು, ದೇವಸ್ಥಾನಗಳು, ಗುಡಿ–ಗೋಪುರಗಳನ್ನು National Monuments ಆಗಿರುವಂತಹದ್ದು ಸಂರಕ್ಷಣೆ ಮಾಡುವುದಕ್ಕೆ ಯಾವ ರೀತಿಯ ಕ್ರಮವನ್ನು ಜರುಗಿಸುತ್ತದೋ, ವಿಶೇಷವಾಗಿ ಶುಚಿತ್ವವನ್ನು ನಿರ್ವಹಣೆ ಮಾಡುವುದಕ್ಕೆ ಹಂಪಿಯಲ್ಲಿ ಯಾವ ರೀತಿಯ ಕ್ರಮವನ್ನು ಜರುಗಿಸುತ್ತದೆ ಎಂಬುದರ ಬಗ್ಗೆ ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ.

**ಡಾ|| ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಹೇಳಿರುವ ವಿಚಾರದ ಬಗ್ಗೆ ನಾನು ಕೂಡ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರವು ಯಾವುದೇ ರೀತಿಯಲ್ಲಿ ಬಡವಾಗಿಲ್ಲ. ಸರ್ಕಾರಕ್ಕೆ ಇನ್ನೂ ಹೆಚ್ಚು ಸಂಪನ್ಮೂಲಗಳನ್ನು ಕೊಡುವ ನಿಟ್ಟಿನಲ್ಲಿ ಉತ್ಪನ್ನ ಇದೆ. ಮುಜರಾಯಿ ಇಲಾಖೆ ಎಂಬುದು ಬೇರೆ ಯಾವುದೂ ಅಲ್ಲ. ಅದು ನಮ್ಮ ದೇವಸ್ಥಾನಗಳು, ಸ್ಮಾರಕಗಳು, ಪೂಜಾ ಮಂದಿರಗಳು, ವಿರೂಪಾಕ್ಷ ದೇವಸ್ಥಾನವು ಇವತ್ತಿಗೂ ಕೂಡ ಪ್ರಾಚೀನವಾದದ್ದು ಮತ್ತು ಅಲ್ಲಿ ಪೂಜೆಯನ್ನು ಸಹ ಸಲ್ಲಿಸುತ್ತೇವೆ. ಅದನ್ನು ಬೇರೆ ಕಡೆಗೆ ತಿರುಗಿಸದೆ, ಅವುಗಳ ಜೀರ್ಣೋದ್ಧಾರಕ್ಕೆ ಮೀಸಲಾಗಿಡಬೇಕು. ಉದಾಹರಣೆಗೆ ಕೆ.ಆರ್.ಎಸ್., ಅಣೆಕಟ್ಟನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಟ್ಟುವಾಗ ಕನ್ನಂಬಾಡಿ ಅಣೆಕಟ್ಟಿನ ಹತ್ತಿರ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನ ಮುಳುಗಿ ಹೋಗಿತ್ತು. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಭೀಕರ ಬರಗಾಲ ಬಂದಾಗ ಆ ದೇವಸ್ಥಾನವು 25 ವರ್ಷಗಳ ನಂತರ ಕಾಣಿಸಿಕೊಂಡಿತು. ಅವತ್ತಿನ ದಿವಸ ಮಾಧ್ಯಮದಲ್ಲಿ ನಾನು ಇದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಒಂದು ದೊಡ್ಡ ಸ್ಟೋರಿಯನ್ನು ದೃಶ್ಯ ಮಾಧ್ಯಮಗಳ ಮೂಲಕ ತೋರಿಸಿದ್ದಕ್ಕಾಗಿ ಆ ಇಡೀ ದೇವಸ್ಥಾನವನ್ನು ತೆಗೆದು ಅಲ್ಲಿರುವ ದಂಡೆಯ ಮೇಲೆ ಇಡಲಾಯಿತು. ಆ ಕಲಾಕೃತಿಯ ಶ್ರೀಮಂತಿಕೆಯನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಆ ರೀತಿಯಾಗಿ ಸರ್ಕಾರವೇ ಇದನ್ನು ನಿರ್ವಹಣೆ ಮಾಡಬೇಕು. ಯಾವುದೇ ಖಾಸಗಿ ವ್ಯಕ್ತಿಗಳಿಗೆ ಇದನ್ನು ಕೊಡಬಾರದು. ಏಕೆಂದರೆ ಯಾವುದೇ ಸರ್ಕಾರವು ಅಧಿಕಾರಕ್ಕೆ ಬಂದರೂ ಕೂಡ ಈ ದೇವಸ್ಥಾನಗಳು ರಾಜ್ಯದ ಸ್ವತ್ತು ಆಗಿರುವುದರಿಂದ ಯಾವುದೇ ರೀತಿಯಲ್ಲಿ ದುರ್ಬಳಕೆಯಾಗುವುದಿಲ್ಲ ಮತ್ತು ಪ್ರವಾಸಿಗರಿಗೆ ಕಡಿಮೆ ಶುಲ್ಕವನ್ನು ವಿಧಿಸಿ ಶೋಷಣೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರವು ತ್ವರಿತಗತಿಯಲ್ಲಿ ಕ್ರಮವನ್ನು ಜರುಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ವೇಣುಗೋಪಾಲ ಸ್ವಾಮಿ ದೇವಸ್ಥಾನವನ್ನು ಖಾಸಗಿಯವರೇ ಸ್ಥಳಾಂತರ ಮಾಡಿರುವುದು.

**ಸಭಾಪತಿಯವರು:–** ಮಾನ್ಯ ಸಚಿವರಾದ ಸಾ.ರಾ.ಮಹೇಶ್‌ರವರು ಇದರ ಬಗ್ಗೆ ಉತ್ತರವನ್ನು ಕೊಡಬೇಕು.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಅವತ್ತಿನ ದಿವಸವೂ ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದೇವೆ. ಸರ್ಕಾರದವರೇ ಈ ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳನ್ನು ನಡೆಸಬೇಕೆಂದು ಮಾಧ್ಯಮದಲ್ಲಿದ್ದಾಗಲೂ ಒತ್ತಾಯ ಮಾಡಿದ್ದೆ. ಖಾಸಗಿಯವರಿಗೆ ಕೊಡಬಾರದು. ಸರ್ಕಾರವೇ ಇದರ ಹೊಣೆಯನ್ನು ಹೊರಬೇಕೆಂಬುದು ನನ್ನ ಸ್ಪಷ್ಟ ಒತ್ತಾಯವಾಗಿದೆ.

**ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿಗೌಡರವರು ಮತ್ತು ಹಿರಿಯ ಸದಸ್ಯರಾದ ಶ್ರೀ ಉಗ್ರಪ್ಪನವರು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. 1439 ಸ್ಮಾರಕಗಳನ್ನು ಸರ್ಕಾರದ ವತಿಯಿಂದ ನೋಡಿಕೊಳ್ಳುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಸ್ಮಾರಕಗಳು ಎರಡೂ ಇವೆ. ಜೊತೆಗೆ 25 ಅಥವಾ 30 ಸಾವಿರ ಸ್ಮಾರಕಗಳು ಇವೆಯೆಂದು ಏನು ಹೇಳಿದ್ದೇವೆ. ಅದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ್ದು ಎಷ್ಟು ಎಂಬುದನ್ನು ನೋಡಬೇಕಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅರ್ಚಕರ ವಿಚಾರವನ್ನು ಪ್ರಸ್ತಾಪ ಮಾಡಿದರು. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಇದನ್ನು ಮುಜರಾಯಿ ಇಲಾಖೆಯವರು ನೋಡಿಕೊಳ್ಳುತ್ತಾರೆ. ಆದರೆ ಗೈಡ್ಸ್ ವಿಚಾರದಲ್ಲಿ ಈಗಾಗಲೇ ಚರ್ಚೆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿ ನುರಿತ ಗೈಡ್ಸ್ ಯಾರಿದ್ದಾರೆ. ಅವರನ್ನು ವಿದೇಶಕ್ಕೆ ಕಳುಹಿಸಿ ಟ್ರೈನಿಂಗ್‌ನ್ನು ಕೊಟ್ಟು, ಅವರನ್ನು ಸರ್ಕಾರದ ವತಿಯಿಂದ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ಸರ್ಕಾರವು ಯೋಚನೆ ಮಾಡುತ್ತಿದೆ.

ಇನ್ನು ಎರಡನೆಯದಾಗಿ, ಈ ಸ್ಮಾರಕಗಳನ್ನು ನೋಡುವಂತಹ ಸಂದರ್ಭದಲ್ಲಿ ಒಂದು ಕಲ್ಲನ್ನು ತೆಗೆಯಬೇಕೆಂದರೂ Central Archealogy ಇಲಾಖೆಯವರ ಅನುಮತಿ ಬೇಕಾಗುತ್ತದೆ. ಆ ಕಲ್ಲನ್ನು ತೆಗೆಯುವುದು ತುಂಬಾ ಕಷ್ಟ. ಅದಕ್ಕೆ ಅನುಮತಿಯನ್ನು ತೆಗೆದುಕೊಳ್ಳಬೇಕು. ಅದು ತುಂಬಾ ದಿನಗಳ ಕಾಲ ಕೆಲಸ ಹಿಡಿಯುತ್ತದೆ. ಹಾಗಾಗಿ ಈ ವಿಚಾರದಲ್ಲಿ ಅದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ. ಈ ಬಾರಿ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಯವರು ಪ್ರವಾಸೋದ್ಯಮ ಮತ್ತು Archealogy ಗೆ ಹೆಚ್ಚು ಒತ್ತನ್ನು ಕೊಡುವಂತಹ ತೀರ್ಮಾನವನ್ನು ಮಾಡಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಮನವಿ ಮಾಡುವುದೇನೆಂದರೆ, ಹಿಂದೆ ಆಗಿರುವಂತಹವುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಹೆಚ್ಚು ಆಸಕ್ತಿಯಿಂದ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸ್ಮಾರಕಗಳಿವೆ, ಸಾಧ್ಯವಾದಷ್ಟು ಒತ್ತನ್ನು ಕೊಟ್ಟು ಸರ್ಕಾರದಿಂದ ಸ್ಮಾರಕಗಳನ್ನು ನವೀಕರಣಗೊಳಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

(ಮುಂದು)

**(183)10/07/2018/ಎಸ್‌ಪಿಆರ್/ಆರ್.ಎನ್./4:10**

**ಶ್ರೀ ಸಾ.ರಾ.ಮಹೇಶ್(ಮುಂದು):–**

ನಾವು ಸರ್ಕಾರದಿಂದ ಮಾಡುತ್ತಿದ್ದೇವೆ ಇದರ ಜೊತೆಗೆ, ಯಾರಿಗೆ ಆಸಕ್ತಿ ಇದೆ, ಸಮಾಜ ನಮಗೆ ಇಷ್ಟೆಲ್ಲವನ್ನು ಕೊಟ್ಟಿದೆ, ಹೀಗಾಗಿ ನಾವು ಸಮಾಜಕ್ಕೆ ಏನಾದರೂ ಕೊಡಬೇಕು ಎಂಬ ಬದ್ಧತೆಯಿಂದ ಖಾಸಗಿಯವರು ಮುಂದೆ ಬಂದು ಒಪ್ಪಿಕೊಂಡು ಮಾಡುತ್ತೇವೆ ಎಂಬುದಾಗಿ ಹೇಳುತ್ತಾರೆ, ಅವರಿಗೆ 40:40:20 ರ ಅನುಪಾತದಲ್ಲಿ ನಾವು ಕೆಲಸಗಳನ್ನು ಮಾಡಿಸುತ್ತಿದ್ದೇವೆ. ಯಾರಿಗೆ ಆಸಕ್ತಿ ಇದೆ, ಅವರು ಮಾಡಲಿ. ನಾವು ಯಾರನ್ನೂ ಸಹ ಒತ್ತಾಯ ಮಾಡುತ್ತಿಲ್ಲ. ಯಾರಿಗೂ ಸಹ ಆಸಕ್ತಿ ಇಲ್ಲದೆ ಹೋದರೆ, ನಾವು ಸರ್ಕಾರದ ವತಿಯಿಂದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬದ್ಧರಿದ್ದೇವೆ. ಆದಾಗ್ಯೂ ಸಹ ಈ ವಿಚಾರದಲ್ಲಿ ಹೆಚ್ಚಿನ ಒತ್ತನ್ನು ನೀಡಬೇಕೆಂದು ಇಬ್ಬರು ಮಾನ್ಯ ಸದಸ್ಯರುಗಳು ಸರ್ಕಾರವನ್ನು ಒತ್ತಾಯಿಸಿರುವುದರಿಂದ, ಇದರ ಬಗ್ಗೆ ಕಾರ್ಯೋನ್ಮುಖರಾಗುತ್ತೇವೆ ಎನ್ನುವಂತಹ ನಂಬಿಕೆಯನ್ನು ಮಾನ್ಯ ಸದಸ್ಯರುಗಳು ಇಟ್ಟುಕೊಳ್ಳಲಿ ಎಂದು ನಾನು ಮಾನ್ಯ ಸಭಾಪತಿಯವರ ಮೂಲಕ ಹೇಳಲು ಬಯಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು) :–** ಮಾನ್ಯ ಸಭಾಪತಿಯವರೇ, . . .

ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ನೀವು ಮಾತನಾಡಿದ್ದು ಸಾಕು. ಈಗ ಆಯವ್ಯಯ ಅಂದಾಜುಗಳ ಮೇಲೆ ಚರ್ಚೆಯನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರು ನೀಡುವ ಸಲಹೆಗಳನ್ನು ಮಂತ್ರಿಗಳು ತೆಗೆದುಕೊಂಡು, ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಿ.

**ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ವಿ.ದೇಶಪಾಂಡೆ ರವರು ಹಾಗೂ ಈ ಹಿಂದೆ ಶ್ರೀ ಪಿಯಾಂಕ ಖರ್ಗೆರವರು ಪ್ರವಾಸೋದ್ಯಮ ಸಚಿವರಾಗಿದ್ದ ಸಂದರ್ಭದಲ್ಲಿ ಸುಮಾರು 20 ಪ್ರವಾಸಿ ತಾಣಗಳನ್ನು ಮೂರು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಮಾಡಬೇಕೆಂದು ಎಲ್ಲಾ ರೀತಿಯ ಅಂದಾಜು ಪಟ್ಟಿಗಳನ್ನು ಸಲ್ಲಿಸಿದ್ದಾರೆ. ಸದರಿ ಯೋಜನೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಹಂಪಿ ತಾಣವೂ ಸಹ ಒಳಗೊಂಡಿದೆ. ಇದರ ಬಗ್ಗೆಯೂ ಸಹ ಹೆಚ್ಚು ಗಮನವನ್ನು ಹರಿಸಲಾಗುವುದು.

## 10. <u>ನೂತನ ಸಚಿವರ ಪರಿಚಯ</u>

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರಾದ ಜಮೀರ್ ಅಹ್ಮದ್ ಖಾನ್‌ರವರು ಮೊದಲ ಬಾರಿಗೆ ನಮ್ಮ ಸದನಕ್ಕೆ ಬಂದಿದ್ದಾರೆ. ಅವರನ್ನು ಈ ಸದನಕ್ಕೆ ಪರಿಚಯಿಸುತ್ತಿದ್ದೇನೆ.

**ಸಭಾಪತಿಯವರು:-** ಸದರಿ ಸಚಿವರು ಆಗ್ಗಾಗ್ಗೆ ಮಾಯ ಆಗುವುದು ಬೇಡ ಎಂಬುದಾಗಿ ತಿಳಿಸಿ. ಸದನದಲ್ಲಿ ಸ್ವಲ್ಪ ಹೊತ್ತಾದರೂ ಅವರು ಕುಳಿತುಕೊಳ್ಳಲಿ. ಈಗ 2018-2019 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ.

## *11. <u>ವಿತ್ತೀಯ ಕಾರ್ಯಕಲಾಪ</u>*

## *<u>2018-19 ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ</u>*

**ಶ್ರೀ ಎಸ್.ಎಲ್.ಧರ್ಮೇಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಜೆ.ಡಿ.ಎಸ್. ಮತ್ತು ಕಾಂಗ್ರೆಸ್ ಪಕ್ಷಗಳ ಸಮ್ಮಿಶ್ರ ಸರ್ಕಾರದ ಚೊಚ್ಚಲ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಹೃತ್ಪೂರ್ವಕವಾದ ವಂದನೆಗಳನ್ನು ಹೇಳಬಯಸುತ್ತೇನೆ. ಮಂಡಿಸಿರುವ ಆಯವ್ಯಯದಲ್ಲಿ ಜನಪರ, ಅನ್ನದಾತನಾದ ರೈತನ ಪರವಾಗಿ ಹಾಗೂ ಎಲ್ಲಾ ಜಾತಿ, ವರ್ಗದವರ ಜೀವನವನ್ನು ಮೇಲೇತ್ತುವಂತಹ ಕ್ರಮವನ್ನು ಜರುಗಿಸಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹಳಷ್ಟು ಕನಸನ್ನು ಹೊಂದಿರುವ

ಈ ಆಯವ್ಯಯದ ಮೇಲೆ ಮಾತನಾಡಲು ನನಗೆ ಬಹಳಷ್ಟು ಅಂಶಗಳಿವೆ. ರೈತರ ಜೀವನದ ಮೇಲಿನ ಕಾಳಜಿಯ ಬಗ್ಗೆ ನನಗೆ ಸಂತೋಷವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯಕ್ಕೆ ತಾಯಿ ಹೃದಯವಿದೆ ಎಂಬುದಾಗಿ ಹೇಳುತ್ತಾರೆ. ಇದು ನಿಜವಾಗಿಯೂ ಸಹ ಸತ್ಯವಾದ ಮಾತು. ಒಬ್ಬ ತಾಯಿ ತನ್ನೆಲ್ಲಾ ಮಕ್ಕಳನ್ನು ಹೇಗೆ ಸಮನಾಗಿ ಹಾಗೂ ಪ್ರೀತಿಯಿಂದ ಕಾಣತ್ತಾಳೆಯೋ ಅದೇ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಆಯವ್ಯಯದಲ್ಲಿ ತೋರಿಸಿದ್ದಾರೆ ಎನ್ನುವ ಮಾತನ್ನು ಹೇಳಲು ಬಯಸುತ್ತೇನೆ. ಅದೇ ರೀತಿಯಾಗಿ ಎಲ್ಲಾ ಜನರ ಸಂಕಷ್ಟವನ್ನು ನಿವಾರಿಸುವ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಆಯವ್ಯಯದಲ್ಲಿನ ಸಂಪೂರ್ಣ ವಿಚಾರಗಳನ್ನು ತಿಳಿದುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಆದರೆ ನಾವು ಕೇವಲ ರಾಜಕೀಯಕ್ಕಾಗಿ ಮಾತ್ರವೇ ವಿರೋಧ ಪಕ್ಷದವರನ್ನು ವಿರೋಧಿಸುತ್ತೇವೆ ಎನ್ನುವುದು ಸಮಂಜಸವಾದುದಲ್ಲ. ವಿರೋಧ ಪಕ್ಷದಲ್ಲಿಯೂ ತುಂಬಾ ವಿಶಾಲ ಹೃದಯವಂತರಿದ್ದಾರೆ. ಏಕೆಂದರೆ ಒಳ್ಳೆಯದನ್ನು ಒಳ್ಳೆಯದು ಎಂದು ಹೇಳಬೇಕಾಗುತ್ತದೆ. ಒಳ್ಳೆಯದನ್ನು ವಿರೋಧ ಪಕ್ಷದವರು ಸ್ವಾಗತಿಸಬೇಕೆಂದು ನಾನು ವಿನಂತಿಸುತ್ತೇನೆ. ಇಷ್ಟೆಲ್ಲಾ ಅಂಶಗಳನ್ನು ನಾನು ಯಾವ ಕಾರಣಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಸರ್ಕಾರವನ್ನು ನಡೆಸಬೇಕಾದರೆ, ಬಹಳಷ್ಟು ಮಟ್ಟಿಗೆ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸಹಕಾರವಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಇದರ ಜೊತೆಗೆ ಆಡಳಿತ ಪಕ್ಷವು ಎಡವಿದಾಗ ಹಾಗೂ ತಪ್ಪು ಮಾಡಿದಾಗ ನಮ್ಮನ್ನು ತಿದ್ದುವಂತಹ ಕೆಲಸಗಳನ್ನು ವಿರೋಧ ಪಕ್ಷದವರು ಮಾಡಬೇಕಾಗುತ್ತದೆ ಹಾಗೂ ಎಲ್ಲಿ ತಪ್ಪು ಇದೆ ಎಂಬುದರ ಬಗ್ಗೆಯೂ ಸಹ ಪರಾಮರ್ಶೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಅನ್ನದಾತನ ನೋವಿಗೆ ನೆರವಾಗಿದ್ದಾರೆ ಮತ್ತು ಸಾಲದ ಸುಳಿಗೆ ಸಿಕ್ಕಿ, ಬೇರೆ ದಾರಿ ಕಾಣದೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ರೈತನನ್ನು ಹಿಡಿದಿಟ್ಟು, ಅವರಿಗೆ ನೋವಿನ ಆಸೆ ಬತ್ತಿ ಹೋಗದಂತೆ ಅವರುಗಳ ಕಣ್ಣುಗಳಲ್ಲಿ ಜೀವ ಅಭಯವನ್ನು ತುಂಬುವಂತೆ ಮಾಡಿದ್ದಾರೆ. ಇವತ್ತಿನ ದಿವಸ 34,000 ಕೋಟಿ ರೂಪಾಯಿಗಳಷ್ಟು ರೈತರು ಮಾಡಿರುವ ಬೆಳೆ ಸಾಲವನ್ನು ಮನ್ನಾ ಮಾಡಿದ್ದಾರೆ. ಇದರ ಮೂಲಕ ಅನ್ನದಾತನಿಗೆ ಧೈರ್ಯವನ್ನು ತುಂಬಿದ್ದಾರೆ. ಈ ಆಯವ್ಯಯದಲ್ಲಿ ಪ್ರತಿಯೊಂದು ರೈತ ಕುಟುಂಬಕ್ಕೆ ಎರಡು ಲಕ್ಷ ರೂಪಾಯಿಗಳವರೆಗಿನ ಬೆಳೆ ಸಾಲವನ್ನು ಮನ್ನಾ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ಇಂತಹ ಬೃಹತ್ ಆರ್ಥಿಕ ಹೊರೆಯ ಸವಾಲು ಇದ್ದರೂ ಸಹ ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನಾ ಮಾಡಿದ್ದಾರೆ ಎನ್ನುವ ಅಂಶವನ್ನು ನಾವು ಗಮನಿಸಬೇಕು. ಮಾನ್ಯ ಸಭಾಪತಿಯವರು ಸಹಾ ರೈತರಾಗಿರುವುದರಿಂದ, ಇವತ್ತಿನ ದಿವಸ ರೈತರ ಸಂಕಷ್ಟ ಏನೆಂದು ತಮಗೆ ತಿಳಿದಿದೆ. ಪ್ರಕೃತಿ ವಿಕೋಪದ ಕಾರಣದಿಂದಾಗಿ ಸುಮಾರು ನಾಲ್ಕೈದು ವರ್ಷಗಳಿಂದ ಸತತವಾಗಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಇದನ್ನು ನಾವು ನೋಡಿದ್ದೇವೆ. ಇಂತಹ ಸಂದರ್ಭದಲ್ಲಿ ರೈತನ ಬದುಕಿಗೆ ಆಸರೆಯಾಗಿ ನಮ್ಮ ಸರ್ಕಾರ ಬಂದಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಬಯಸುತ್ತೇನೆ. ಇದರ ಜೊತೆಗೆ ಕೇವಲ ರೈತರ ಸಾಲ ಮನ್ನಾ ಮಾಡುವುದು ಅಲ್ಲ ಇದಕ್ಕೆ ಪೂರಕವಾಗಿ ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಬೇಕಾದ ಸಲಹೆಯನ್ನು ಪಡೆಯಬೇಕಾದರೆ, ಯಾವತ್ತಿಗೂ ಸಹ ಪ್ರಾಯೋಗಿಕವಾದ ಅನುಭವವನ್ನು ಪಡೆಯಬೇಕಾಗುತ್ತದೆ. ಪ್ರತಿಯೊಂದು ಜಿಲ್ಲೆಗಳಿಂದ ಅಂತಹ ಅನುಭವವನ್ನು ಹೊಂದಿರುವಂತ ಆಯ್ದ ಇಬ್ಬರು ರೈತರುಗಳನ್ನು ಕರೆಸುವುದರ ಮುಖಾಂತರ ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ರೈತರ ಅಹವಾಲುಗಳನ್ನು ಸ್ವೀಕರಿಸಿ, ಅವರಿಗಿರುವ ಸಮಸ್ಯೆಗಳ ಬಗ್ಗೆ ಕೇಳಬೇಕು. ಹಿಂದೆ ರೈತರ ಸಾಲ ಮನ್ನಾ ಮಾಡಿದ ಹಣವು ಸಂಪೂರ್ಣವಾಗಿ ಎಲ್ಲಾ ರೈತರಿಗೆ ಸಾಲ ಮನ್ನಾ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಮಾಡಿರುವುದು ತುಂಬಾ ಸಂತೋಷದ ವಿಷಯವಾಗಿದೆ. ಪ್ರಸ್ತುತ ಸಹಕಾರ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ಹೀಗಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುತ್ತದೆ. ಹೀಗೆ ಸಾಲವನ್ನು ಮನ್ನಾ ಮಾಡುವಾಗ ರಾಜ್ಯದಲ್ಲಿನ 22 ಸಹಕಾರಿ ಬ್ಯಾಂಕುಗಳಲ್ಲಿ ಇದ್ದ ರೈತರ ಬೆಳೆ ಸಾಲ ಮನ್ನಾ ಮಾಡಲಾಗಿದೆ. ಇದರ ಜೊತೆಗೆ 5400 ಪ್ರಾಥಮಿಕ ಸಹಕಾರ ಸಂಘಗಳ ಪಾತ್ರವೂ ಸಹ ಇದೆ. ಈ ಸಾಲ ಮನ್ನಾದ ಸಂಪೂರ್ಣ ಪಾಲು ರಾಜ್ಯದಲ್ಲಿನ ಸುಮಾರು 22 ಲಕ್ಷಕ್ಕೂ ಹೆಚ್ಚಿನ ರೈತರಿಗೆ ತಲುಪಲಿದೆ. ಇದನ್ನು ಮಾನ್ಯ ವಿರೋಧ ಪಕ್ಷದವರು ಗಮನಿಸಿದ್ದಾರೆ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರಕ್ಕೆ ಜಿಲ್ಲಾ ಸಹಕಾರ ಬ್ಯಾಂಕುಗಳು ಒಂದಲ್ಲ ಒಂದು ರೀತಿಯಲ್ಲಿ ಸಹಕಾರವನ್ನು ನೀಡುತ್ತಿವೆ. ಸಹಕಾರ ಬ್ಯಾಂಕುಗಳು ಜನಪರವಾಗಿದ್ದು, ಇವುಗಳನ್ನು ಜನರೇ ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಶೇಕಡಾ 95 ರಷ್ಟು ಕೃಷಿಕರು ತಮ್ಮ ಖಾತೆಯನ್ನು ಹೊಂದಿದ್ದಾರೆ. ಇಲ್ಲಿ ಬೇರೆ ಯಾರೂ ಶ್ರೀಮಂತರುಗಳು ತಮ್ಮ ಖಾತೆಯನ್ನು ಹೊಂದಿರುವುದಿಲ್ಲ. ಮಧ್ಯಮ ಹಾಗೂ ಕಡು ಬಡ ವರ್ಗದ ಜನರು ಇಂತಹ ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿದ್ದಾರೆ. ಇಂತಹ ಬ್ಯಾಂಕುಗಳು ರೈತರಿಗಾಗಿಯೇ ಇವೆ. ಇಂತಹ ಬ್ಯಾಂಕುಗಳಿಗೆ ಹೆಚ್ಚು ಉತ್ತೇಜನವನ್ನು ಕೊಡುವುದರ ಜೊತೆಗೆ, ಸಾಲವನ್ನು ಮನ್ನಾ ಮಾಡಿದ ನಂತರ, ಕಳೆದ ಸಾಲಿನಲ್ಲಿಯೂ ಸಹ ಆರು ತಿಂಗಳುಗಳಿಂದ ಒಂದೂವರೆ ವರ್ಷದ ವರೆಗೆ ಸಹಕಾರಿ ಬ್ಯಾಂಕುಗಳಲ್ಲಿನ ರೈತರ ಸಾಲ ಮನ್ನಾ ಮಾಡಿರುವ ಹಣ ಬ್ಯಾಂಕ್‌ಗಳಿಗೆ ಸರ್ಕಾರದಿಂದ ಮರುಪಾವತಿಯಾಗದೇ ಇರುವ ಕಾರಣ ಬ್ಯಾಂಕು ಕ್ಷೀಣದ ಸ್ಥಿತಿಗೆ ಹೋಗುತ್ತಿದೆ. ಸೇವಾ ಮನೋಭಾವದಿಂದ ಸ್ಥಾಪಿತಗೊಂಡಿರುವ ಸಹಕಾರಿ ಬ್ಯಾಂಕುಗಳು ಯಾವುದೇ ಕಾರಣಕ್ಕಾಗಿಯೂ ಸಹ ಆದಾಯ ಮನೋಭಾವವನ್ನು ಹೊಂದಿರುವುದಿಲ್ಲ. ಸದರಿ ಬ್ಯಾಂಕುಗಳು ಕುಂಟುತ್ತಾ ಲಕ್ಷಾಂತರ, ಕೋಟ್ಯಂತರ ರೂಪಾಯಿಗಳಷ್ಟು ವ್ಯವಹಾರವನ್ನು ಮಾಡಿದರೂ ಸಹ ಇವುಗಳ ಲಾಭ ತುಂಬಾ ಕಡಿಮೆ ಇರುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಸಾಲ ಮನ್ನಾ ಮಾಡಿರುವ ಮೊತ್ತವನ್ನು ಆದಷ್ಟು ಬೇಗನೇ ಅಂದರೆ ಕೇವಲ ಮೂರ್ನಾಲ್ಕು ತಿಂಗಳುಗಳಲ್ಲಿ ಬ್ಯಾಂಕುಗಳಿಗೆ ಸಂದಾಯವಾದರೆ ಬ್ಯಾಂಕುಗಳು ಉಳಿಯುತ್ತದೆ ಎನ್ನುವ ಅಂಶವನ್ನು ಗಮನಿಸಬೇಕಾಗುತ್ತದೆ. ಇವತ್ತಿನ ದಿವಸ ಬ್ಯಾಂಕುಗಳಿಗೆ ಸರ್ಕಾರವು ಬೇರೆ ರೀತಿಯಲ್ಲಿ ಸಹಕಾರವನ್ನು ನೀಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಎ.ಪಿ.ಎಂ.ಸಿ.ಗಳಲ್ಲಿ ಸಂಗ್ರಹಣೆ ಮಾಡುವ ಸೆಸ್ ಹಣ ಹಾಗೂ ಮುಜರಾಯಿ ಇಲಾಖೆಯಿಂದ ಬರುವ ಆದಾಯವನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದೆಯೇ ಎನ್ನುವುದನ್ನು ಸರ್ಕಾರ

ಗಮನಿಸಬೇಕು. ಪರಿಸ್ಥಿತಿ ಹೀಗಿದ್ದಾಗ್ಯೂ ಸಹ ಸರ್ಕಾರವು ಉದಾರತೆಯಿಂದ ಸಹಕಾರಿ ಬ್ಯಾಂಕುಗಳಿಗೆ ಸಹಕಾರವನ್ನು ನೀಡಬೇಕು. ಸರ್ಕಾರದಿಂದ ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡರೆ, ಅವುಗಳನ್ನು ಬಹಳಷ್ಟು ಐ.ಎ.ಎಸ್.ವೃಂದದ ಅಧಿಕಾರಿಗಳು ನಂಬುವುದಿಲ್ಲ. ಮಂತ್ರಿಗಳು ಹೇಳಿದರೂ ಸಹ ಫಲಾನುಭವಿಗಳ ವಿಚಾರದಲ್ಲಿ ಮಲತಾಯಿ ಧೋರಣೆಯನ್ನು ತೋರುತ್ತಾರೆ. ಅಧಿಕಾರಿಗಳು ಈ ರೀತಿಯಾಗಿ ಏಕೆ ಮಾಡುತ್ತಾರೆಂದು ಗೊತ್ತಾಗುತ್ತಿಲ್ಲ. ಸಹಕಾರ ಸಚಿವರಿಗೆ ಬಹಳಷ್ಟು ಅನುಭವವಿರುವುದರಿಂದ ಈ ವಿಚಾರವನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಬಹಳಷ್ಟು ಒಳ್ಳೆಯ ವಿಚಾರಗಳನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಅನುಭವ ಹಾಗೂ ಅವರು ಹೊದ ಕಡೆಗಳಲ್ಲೆಲ್ಲಾ ಕಂಡಂತಹ ಸತ್ಯಾಂಶ ಅದರ ಆಧಾರದ ಮೇಲೆ ಹಾಗೂ ಬಹಳ ಪ್ರಾಯೋಗಿಕವಾಗಿ ಯೋಜನೆಗಳನ್ನು ಕೈಗೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಹಳ್ಳಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾಮಾನ್ಯ ಹಾಗೂ ರೈತಾಪಿ ವರ್ಗದ ಜನರೊಂದಿಗೆ, ತುಂಬಾ ಬಡವರ, ಅಂಕವಿಕಲರ ಜೊತೆಯಲ್ಲಿ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಅವರ ಕಷ್ಟಕ್ಕೆ ಸ್ಪಂದಿಸುವಂತಹ ಮನೋಭಾವವು ಸಾಕ್ಷಿಭೂತವಾಗಿದೆ ಎನ್ನುವ ಮಾತು ಈ ಆಯವ್ಯಯದಲ್ಲಿ ಸಂಪೂರ್ಣವಾಗಿ ಅಡಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

(ಮುಂದು)

(184) 10–07–2018 04.20 ಬಿಎಸ್‌ಡಿ/ವಿಕೆ

**ಶ್ರೀ ಎಸ್.ಎಲ್. ಧರ್ಮೇಗೌಡ (ಮುಂದು)**

ಮಾನ್ಯ ಮುಖ್ಯಮಂತ್ರಿಗಳು ಎಲ್ಲದಕ್ಕೂ ಅವಕಾಶ ಮಾಡಿಕೊಟ್ಟಿದ್ದು, ರಾಜ್ಯದಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುವ ವಿಷಯದ ಬಗ್ಗೆ ಗಮನಹರಿಸಿದ್ದಾರೆ. ನಾವೆಲ್ಲರೂ ಪತ್ರಿಕೆಗಳಲ್ಲಿ ನೋಡಿದಂತೆ ಬೆಂಗಳೂರಿನ ಕೆರೆ ನೀರು ಹರಿಯುವಾಗ ನೊರೆ ನೊರೆಯಾಗಿ ನೀರು ಹೊರಬರುವುದು, ಆ ಕೆರೆಯಲ್ಲಿ ರಸಾಯನಿಕ ವಸ್ತುಗಳು ಸೇರುವುದರಿಂದ ಅದುಕಲುಷಿತವಾಗುತ್ತಿದೆ. ಇದರಿಂದ ಪರಿಸರದ ಮೇಲೆ ಹಾನಿಯಾಗುತ್ತದೆ ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಮನಗಂಡಿದ್ದಾರೆ. ಆದ್ದರಿಂದ ರಸಾಯನಿಕ ಪದಾರ್ಥಗಳುಳ್ಳ ಡಿಟರ್ಜೆಂಟ್ ಸಾಬೂನು ಉಪಯೋಗಿಸುವುದು ಸರಿಯಲ್ಲ. ಅದಕ್ಕೆ ಪೂರಕವಾಗಿ ಒಂದು ಕಡೆ ಪರಿಸರ ಉಳಿಸಬೇಕು, ಮತ್ತೊಂದು ಕಡೆ ರೈತರಿಗೆ ಉತ್ತೇಜನ ಕೊಡುವ ದಿಸೆಯಲ್ಲಿ ರೂ.10 ಕೋಟಿಗಳನ್ನು ಮೀಸಲಿಟ್ಟಿರುವುದು ಶ್ಲಾಘನೀಯವಾದ ವಿಚಾರ. ಇವತ್ತು ಸಾಬೂನಿಗೆ ಸಂಬಂಧಪಟ್ಟ ಪದಾರ್ಥ ತಯಾರು ಮಾಡುವಾಗ ಕಚ್ಚಾ ಪದಾರ್ಥವಾದ ಅಂಟುವಾಳವನ್ನು ಉಪಯೋಗಿಸುತ್ತಾರೆ. ಈಗ ಅಂಟುವಾಳ ಸಿಗುತ್ತಿಲ್ಲ ಎಂದು ಅದರ ಬಗ್ಗೆ ಮರೆತಿದ್ದಾರೆ. ಈ ಗಿಡವು ಹೆಚ್ಚು ಮಳೆ ಬೀಳುವ ಪ್ರದೇಶವಾದಂತಹ ಮಲೆನಾಡು ಹಾಗೂ ಕಡಿಮೆ ಮಳೆ ಬೀಳುವ ಬಯಲು ಸೀಮೆ ಭಾಗದಲ್ಲಿಯೂ ಬೆಳೆಯಬಹುದಾದ ಮರವಾಗಿದೆ. ಹಿಂದೆ ಹಳ್ಳಿಗಳಲ್ಲಿ ಕೈ ತೊಳೆಯುವುದು, ಸ್ನಾನ ಮಾಡುವುದು ಹಾಗೂ ಪಾತ್ರೆ ತೊಳೆಯುವುದಕ್ಕೂ ಅಂಟುವಾಳವನ್ನು ಉಪಯೋಗಿಸುತ್ತಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ

ಇದಲ್ಲದೇ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ತೊಳೆಯುವುದಕ್ಕೂ ಉಪಯೋಗಿಸುತ್ತಿದ್ದು, ಇದೆಲ್ಲವನ್ನು ಕ್ರಮೇಣ ನಾವು ಮರೆತುಬಿಟ್ಟಿದ್ದೇವೆ. ಏಕೆಂದರೆ ಇಂತಹ ವಿಷಯಗಳ ಬಗ್ಗೆ ಇತ್ತೀಚೆಗೆ ಹೆಚ್ಚು ಗಮನ ಹರಿಸುವುದಿಲ್ಲ. ಇಂತಹ ಪುರಾತನ ವಿಷಯಗಳನ್ನು ಮರೆತಿದ್ದರಿಂದಲೇ ನಾವು ಇಂತಹ ದುಸ್ಥಿತಿಗೆ ತಲುಪಿದ್ದೇವೆ. ಇದನ್ನು ಹೆಚ್ಚು ಹೆಚ್ಚಾಗಿ ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸಿದರೆ ಅಂಟುವಾಳಕ್ಕೆ ಮಾರುಕಟ್ಟೆ ದೊರಕಿಸಿದಂತೆಯೂ ಆಗುತ್ತದೆ. ತನ್ಮೂಲಕ ರೈತರ ಬದುಕು ಸಹ ಹಸನಾಗುತ್ತದೆ.

ಇನ್ನು ರೈತನು ತಾನು ಬೆಳೆದ ಬೆಳೆಗಳನ್ನು ದೀರ್ಘಕಾಲದವರೆಗೂ ದಾಸ್ತಾನು ಮಾಡಲು ಅನುಕೂಲವಾಗುವಂತೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ರೂ.3 ಕೋಟಿ ಒದಗಿಸಿರುವುದಲ್ಲದೇ, ರಾಜ್ಯದ ಇನ್ನಿತರ ಭಾಗಗಳಿಗೂ ಅದನ್ನು ವಿಸ್ತರಿಸಿದರೆ ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಒಂದು ತೆಂಗಿನ ಮರವನ್ನು ನೆಟ್ಟರೆ 5 ವರ್ಷಗಳಿಗೆ ಫಸಲು ಬರುತ್ತದೆ ಎಂದು ಹೇಳುತ್ತಾರೆ. I am a practical man over here. ಅದರಿಂದ ಸರಿಯಾದ ರೀತಿಯ ಫಲವನ್ನು ನಿರೀಕ್ಷೆ ಮಾಡಬೇಕಾದರೆ 10 ವರ್ಷಗಳು ಬೇಕಾಗುತ್ತದೆ. ಒಂದು ತೆಂಗಿನ ಮರದಿಂದ ಒಬ್ಬ ರೈತನು ಸಂಪೂರ್ಣವಾಗಿ ತನ್ನ ಜೀವನವನ್ನು ಅವಲಂಬಿಸಿರುತ್ತಾನೆ. ಆದರೆ ಸತತ ಐದಾರು ವರ್ಷಗಳ ಮಳೆಯ ಕೊರತೆಯಿಂದ ಸುಮಾರು 44 ಲಕ್ಷಕ್ಕೂ ಹೆಚ್ಚು ತೆಂಗಿನ ಮರಗಳು ಒಣಗಿಹೋಗಿವೆ. ಈ ರೀತಿ 100 ವರ್ಷ ಬದುಕುವ ಒಂದು ಮರ ಹೋದರೆ ಒಬ್ಬ ರೈತನಿಗೆ ಆತನ ಮಕ್ಕಳು ಸತ್ತಂತೆ ಆಗುತ್ತದೆ. ಒಬ್ಬ ಮಗ ಆತನನ್ನು ಸಾಕುತ್ತಾನೆ ಎಂದು ನಂಬಿ, ಆ ಮಗ ಸತ್ತು ಹೋದರೆ ಎಷ್ಟು ನೋವಾಗುತ್ತದೆಯಲ್ಲವೆ. ಏಕೆಂದರೆ ಉಳ್ಳವರಿಗೆ ಕಷ್ಟ ಗೊತ್ತಾಗುವುದಿಲ್ಲ. ಕೇವಲ ತೆಂಗಿನ ಮರವನ್ನು ನಂಬಿ ಹೆಂಡತಿ, ಮಕ್ಕಳನ್ನು ಸಂಪೂರ್ಣವಾಗಿ ಸಾಕಬೇಕಾದರೆ, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕಾದರೆ ಕಷ್ಟದ ಅರಿವು ಎಷ್ಟೆಂಬುದು ಆ ರೈತನಿಗೆ ಗೊತ್ತಾಗಿರುತ್ತದೆ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರವು ಬಜೆಟ್‌ನಲ್ಲಿ ರೂ.190 ಕೋಟಿಗಳನ್ನು ಇಟ್ಟಿರುವುದು ಬಹಳ ಸಂತೋಷದಾಯಕ ವಿಚಾರವಾಗಿದ್ದು, ಇದು ರೈತರ ಬಗ್ಗೆ ಅವರು ಇಟ್ಟಿರುವ ಕಾಳಜಿ ಮತ್ತು ಕಳಕಳಿಯನ್ನು ತೋರಿಸುತ್ತದೆ.

ತೆಂಗಿನ ನಾರಿನ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವಾರ್ಷಿಕವಾಗಿ ರೂ.10 ಸಾವಿರಗಳ ಪ್ರೋತ್ಸಾಹ ಧನವನ್ನು ಕೊಡುವ ಬಗ್ಗೆ ಸಹ ಮಾನ್ಯ ಮುಖ್ಯಮಂತ್ರಿಗಳು ಮರೆತಿಲ್ಲ ಎಂದು ಹೇಳಬಯಸುತ್ತೇನೆ. ರೈತಾಪಿ ವರ್ಗದ ಹಳ್ಳಿಗಾಡಿನಲ್ಲಿ ಜೀವನ ಮಾಡಬೇಕೆಂದರೆ ಪಶುಗಳು ಇಲ್ಲದೇ ಬದುಕಲು ಸಾಧ್ಯವಿಲ್ಲ. ಇವತ್ತು ಪಶುಸಂಗೋಪನೆಯ ಸಚಿವರು ಮತ್ತು ಪಶುಸಂಗೋಪನೆ ಇಲಾಖೆ ಇರಲು ಪಶುಗಳೇ ಕಾರಣವಾಗಿವೆ. ಇದರಲ್ಲಿ ಘನೀಕೃತ ವೀರ್ಯ ವಿತರಣಾ ಕೇಂದ್ರಗಳ ಸ್ಥಾಪನೆಗೆ ರೂ.2.25 ಕೋಟಿಗಳ ಹಣವನ್ನು ಇಟ್ಟಿದ್ದಾರೆ. ಪಶುಸಂಗೋಪನೆಗೆ ಹೆಚ್ಚು ಒತ್ತು ಕೊಡಲು ಇನ್ನೂ ಹೆಚ್ಚಿನ ಹಣವನ್ನು ಇಟ್ಟಿರುವುದು ಸಂತೋಷದಾಯಕ. ಜೊತೆಗೆ ಈಗ ಹೊಸ ಹೊಸ ತಳಿಗಳು ಬಂದಿದ್ದು, ಹಿಂದಿನ ಅಮೃತ್‌ಮಹಲ್ ತಳಿಯು ಅತ್ಯಂತ ಶ್ರೇಷ್ಠವಾದ ತಳಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಸುಮಾರು 500 ವರ್ಷಗಳಿಗಿಂತಲೂ ಹೆಚ್ಚು ಇತಿಹಾಸವುಳ್ಳ ಈ ತಳಿಯ ಹಸುಗಳು ಮೈಸೂರು ಮಹಾರಾಜರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆಯಲ್ಲಿ ಇತ್ತು. ಮಾನ್ಯ ಸಭಾಪತಿಯವರೇ, ನಾನು ತಮ್ಮ ಡೈರಿಗೆ ಬಂದಿದ್ದು, ಅಲ್ಲಿ ಇಂತಹ ನೂರಾರು ದನಗಳನ್ನು ತಾವು ಸಾಕಿದ್ದೀರಿ.

**ಸಭಾಪತಿಯವರು :–** ಇನ್ನು 5 ನಿಮಿಷಗಳಲ್ಲಿ ತಾವು ಮುಕ್ತಾಯ ಮಾಡಿ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಇನ್ನೂ ಸ್ವಲ್ಪ ಕಾಲ ಅವಕಾಶ ಕೊಡಬೇಕು. ತಾವು ಹೇಳಿದಂತೆ ನಾನು ಶಿಸ್ತನ್ನು ಪಾಲನೆ ಮಾಡುತ್ತಿದ್ದೇನೆ. ತಾವು ಹೊಸದಾಗಿ ಬಂದಿರುವ ಸದಸ್ಯರು, ಪದೇ ಪದೇ ಎದ್ದೇಳಬಾರದು, ಕುಳಿತಿರಬೇಕು ಎಂದು ತಾವು ಹೇಳಿದಂತೆ ಚಾಚೂ ತಪ್ಪದೇ ನಡೆದುಕೊಳ್ಳುತ್ತಿದ್ದೇವೆ. ಸಭೆಯಲ್ಲಿ ಗೊಂದಲ ಮಾಡಬಾರದು ಎಂದು ತಾವು ಏನು ಆದೇಶ ಕೊಟ್ಟಿದ್ದೀರಿ. ಅದನ್ನು ನಾನು ಕಾಪಾಡಿದ್ದೇನೆ. ನಾನು ಪದೇ ಪದೇ ಏಳುತ್ತಿಲ್ಲ. ಆದ್ದರಿಂದ ಒಂದು ಬಾರಿ ಮಾತನಾಡಲು ದಯಮಾಡಿ ತಾವು ನನಗೆ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಶ್ರೀ ಧರ್ಮೇಗೌಡ ಮತ್ತು ಶ್ರೀ ಭೋಜೇಗೌಡ ಬೇರೆ ಬೇರೆಯವರು ಇದ್ದಾರೆ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕೆಂದು ಮಾತನಾಡುತ್ತಿಲ್ಲ. ದಯಮಾಡಿ ಇದನ್ನು ಗಮನಿಸಬೇಕು. ಅಮೃತ್‌ಮಹಲ್ ವಿಶೇಷವಾದ ತಳಿಯಾಗಿದ್ದು ಮುಂದಿನ ಪೀಳಿಗೆ ಬರುವಷ್ಟರಲ್ಲಿ ಈ ತಳಿ ನಶಿಸಿ ಹೋದರೆ ಅವರಿಗೆ ಗೊತ್ತಾಗುವುದೇ ಇಲ್ಲ. ಬೆಂಗಳೂರಿಗೆ ವಿಶೇಷವಾದ ಒತ್ತು ಕೊಟ್ಟು ಗಂಟೆಗಟ್ಟಲೆ ಮಾತನಾಡುತ್ತೇವೆ. ಆದರೆ ನಾನು ಗ್ರಾಮಾಂತರ ಪ್ರದೇಶದ ಕೊರಗು ಹಾಗೂ ರೈತಾಪಿ ವರ್ಗದ ನೋವನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ತಳಿಯ ಹಸುಗಳು ಸುಮಾರು 500 ವರ್ಷಗಳ ಕಾಲ ಮೈಸೂರು ಮಹಾರಾಜರ ಮನೆಯಲ್ಲಿ ಇದ್ದವು.

**ಸಭಾಪತಿಯವರು:–** ನಾನು ಈ ಅಮೃತ್‌ಮಹಲ್ ತಳಿಯ ಬಗ್ಗೆ ಹೇಳಿದ ವಿಚಾರವನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು.

**ಶ್ರೀ ವೆಂಕಟರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ನನ್ನ ಜೊತೆ ಚರ್ಚೆ ಮಾಡಿದ್ದೀರಿ. ಈ ರೀತಿ ನಶಿಸಿ ಹೋಗುವ ತಳಿಗಳನ್ನು ಕಾಪಾಡಿಕೊಳ್ಳಬೇಕು. ಅಮೃತ್‌ಮಹಲ್, ಮಲೆನಾಡು ಗಿಡ್ಡ, ಹಳ್ಳಿಕಾರ್ ತಳಿಗಳು ಇರಬಹುದು ಹಾಗೂ ನಮ್ಮ ಭಾಗದಲ್ಲಿ ಬರುವ ದೇವಣಿ ಇಂತಹ ತಳಿಗಳ ಅಭಿವೃದ್ಧಿ ಬಗ್ಗೆ ನಾವು ಹೆಚ್ಚು ಗಮನ ಕೊಡುತ್ತಿದ್ದೇವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದು, ಅಂತಹವುಗಳ ರಕ್ಷಣೆಗೆ ಈ ಸರ್ಕಾರ ಒತ್ತು ಕೊಡುತ್ತದೆ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು :–** ನಾನು ಈ ವಿಚಾರವನ್ನು ಮೂರು ಬಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ತಾವು ಮಂತ್ರಿಗಳಾಗಿ ನಾಲ್ಕನೆಯದಾಗಿ ಭರವಸೆ ಕೊಡುತ್ತಿದ್ದೀರಿ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಮೈಸೂರು ಮಹಾರಾಜರ ಕಾಲದಲ್ಲಿ ಇದ್ದ ಇಂತಹ ಉತ್ತಮವಾದ ತಳಿಗೆ ದೊಡ್ಡ ಇತಿಹಾಸವೇ ಇದೆ. ಇದನ್ನು ಪೂರ್ತಿಯಾಗಿ ಹೇಳಲು ಬಹಳ ಸಮಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇಕಾಗುತ್ತದೆ. ಬ್ರಿಟಿಷ್ ಸರ್ಕಾರ ಇರುವಾಗ ಯುದ್ಧ ಮಾಡುವಾಗ ಸೈನಿಕರನ್ನು ಎದುರಿಸಲು ಅಮೃತ್ ಮಹಲ್ ತಳಿಯ ಹೋರಿಗಳ ಕೋಡಿಗೆ ಪಂಜು ಕಟ್ಟಿ, ಸಮಯ ನೋಡಿ ಬಿಡುತ್ತಿದ್ದರು. ಆ ರಾತ್ರಿ ಸಮಯದಲ್ಲಿ ಪಂಜನ್ನು ನೋಡಿ ಶತ್ರುಗಳು ಹೆದರಿ ಓಡಿ ಹೋಗುತ್ತಿದ್ದರು. ಕುದುರೆ ಹಾಗೂ ಒಂಟೆಗಳನ್ನು ಉಪಯೋಗಿಸಿದಂತೆ ಈ ತಳಿಗಳನ್ನು ಉಪಯೋಗಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಇವುಗಳ ರಕ್ಷಣೆಗೆ ಚಿಕ್ಕಮಗಳೂರು ಸೇರಿದಂತೆ ಸುಮಾರು 7 ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಿರುವಂತೆ ಮಹಾರಾಜರು ಸುಮಾರು 4 ಲಕ್ಷಕ್ಕೂ ಹೆಚ್ಚು ಎಕರೆಗಳಷ್ಟು ಜಮೀನನ್ನು ನೀಡಿದ್ದು, ಕ್ರಮೇಣವಾಗಿ ಆ ಜಾಗವನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸಿದ್ದರಿಂದ ಈಗ ಸುಮಾರು 50 ಸಾವಿರ ಎಕರೆ ಮಾತ್ರ ಉಳಿದಿದೆ. ಅಷ್ಟು ಜಾಗ ಇದ್ದರೂ ಪರವಾಗಿಲ್ಲ. ಉಳಿದಂತಹ ಜಮೀನು ರೈತಾಪಿ ವರ್ಗದವರು ಉಳುಮೆ ಮಾಡಿದ್ದರಿಂದ ಸುಮಾರು 70–80 ವರ್ಷಗಳ ನಂತರ ಅವರಿಗೆ ಸಾಗುವಳಿ ಚೀಟಿ ಸಿಕ್ಕಿರುವುದು ಬಹಳ ಸಂತೋಷ. ಉಳಿದ 50 ಸಾವಿರ ಎಕರೆ ಜಮೀನಿನಲ್ಲಿ ಈ ತಳಿಯ ಪಳೆಯುಳಿಕೆಯನ್ನು ಸಂರಕ್ಷಣೆ ಮಾಡುವ ದಿಟ್ಟ ಕ್ರಮವನ್ನು ಸರ್ಕಾರವು ತೋರಿಸಿರುವುದು ನಿಜಕ್ಕೂ ಶ್ಲಾಘನೀಯ ಅಂಶವಾಗಿದೆ.

ಇನ್ನು ಸ್ವಸಹಾಯ ಸಂಸ್ಥೆಗಳಿಗೆ ಕಾಯಕ ಎನ್ನುವ ಯೋಜನೆ ರೂಪಿಸಿ, ಇಂತಹ ಕಾರ್ಯಕ್ರಮಗಳು ಬಡವರ ನೋವಿಗೆ ಮಿಡಿಯುವ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ರೂ.5 ಲಕ್ಷ ಬಡ್ಡಿರಹಿತ ಸಾಲ ಹಾಗು ರೂ.10 ಲಕ್ಷಗಳಿಗೆ ಶೇಕಡ 4ರ ಬಡ್ಡಿ ದರದಲ್ಲಿ ಸಾಲ ನೀಡುವುದರಿಂದ ಇದು ಬಡವನಿಗೆ ಒಂದು ರೀತಿ ಸಂತೋಷವಾಗುತ್ತದೆ. ಅದರಲ್ಲಿ 3 ಸಾವಿರ ಸಂಘಗಳನ್ನು ಆರಿಸಿಕೊಂಡು ಅಲ್ಲಿ ಪ್ರಾಯೋಗಿಕವಾಗಿ ಮಾಡಬೇಕೆಂದು ಸರ್ಕಾರವು ಕ್ರಮ ಕೈಗೊಂಡಿದೆ. ಅದರ ಜೊತೆಗೆ 'ಬಡವರ ಬಂಧು' ಯೋಜನೆಯಲ್ಲಿ ಸುಮಾರು 5 ನಗರಗಳನ್ನು ತೆಗೆದುಕೊಂಡು, ಆ ನಗರಗಳಲ್ಲಿ ಕೆಳಸ್ತರದಲ್ಲಿರುವವರನ್ನು ಆರ್ಥಿಕವಾಗಿ ಮೇಲೆತ್ತಲು ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ಪೆಟ್ಟಿಗೆ ಅಂಗಡಿ, ರಸ್ತೆ ಬದಿ ಕೆಲಸ ಮಾಡುವವರು, ಇನ್ನಿತರರು ಖಾಸಗಿ ವ್ಯಕ್ತಿಗಳಿಂದ 5%, 10% ಮತ್ತು ಚಕ್ರಬಡ್ಡಿಯಲ್ಲಿ ಹಣ ತೆಗೆದುಕೊಂಡು ಅಭಿವೃದ್ಧಿಯೂ ಆಗುವುದಿಲ್ಲ ಅಥವಾ ಕೆಳಗೂ ಬರುವುದಿಲ್ಲ. ಇಂತಹ ಜನರ ಬಗ್ಗೆ ಕನಿಕರ ಇಟ್ಟು 'ಬಡವರ ಬಂಧು' ಯೋಜನೆಯನ್ನು ಜಾರಿಗೊಳಿಸಿದ್ದು, ಇದರಿಂದ ಬಡವರಿಗೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ರಾಜ್ಯದಲ್ಲಿ ಬರುವ 4,100 ಅಂಗನವಾಡಿ ಕೇಂದ್ರಗಳಲ್ಲಿ ಕಲಿಕೆಯ ಗುಣಮಟ್ಟವನ್ನು ಹೆಚ್ಚು ಮಾಡಲು ಬಾಲಸ್ನೇಹಿ ಕಾರ್ಯಕ್ರಮವನ್ನು ಪರಿಚಯ ಮಾಡಿಸಿರುವುದು ಸಂತೋಷದಾಯಕವಾದ ವಿಚಾರವಾಗಿದೆ. ಅದರ ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಉಪಾಧ್ಯಾಯರುಗಳು ಬಿಟ್ಟು ಹೋಗುತ್ತಿರುವ ಸಂದರ್ಭ ಸಹ ಇದೆ. ಒಂದು ರೀತಿ ವ್ಯಾಮೋಹದಿಂದ ಮಕ್ಕಳು ಆಂಗ್ಲ ಭಾಷೆಯ ಎಲ್‌ಕೆಜಿ ಮತ್ತು ಯುಕೆಜಿ ಓದಬೇಕೆಂಬ ಭಾವನೆ ಹಳ್ಳಿಯ ಜನರಲ್ಲಿ ಸಹ ಬಂದಿರುವುದನ್ನು ಸರ್ಕಾರ ಮನಗಂಡು 'ಬಾಲಸ್ನೇಹಿ' ಯೋಜನೆಯ ಮೂಲಕ ಎಲ್‌ಕೆಜಿ ಮತ್ತು ಯುಕೆಜಿ ಗಳನ್ನು ಪರಿಚಯ ಮಾಡಲು ಹೊರಟಿರುವುದು ಬಹಳ ಸಂತೋಷವಾದ ವಿಚಾರವಾಗಿದೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

185/10.07.2018/4.30/ಹೆಚ್‌ವಿಃವಿಕೆ

**ಶ್ರೀ ಧರ್ಮೇಗೌಡ(ಮುಂದು...):–**

ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಪ್ರವಾಸಿ ತಾಣಗಳಿಗೆ ನಾವು ಹೆಚ್ಚು ಒತ್ತು ಕೊಡಬೇಕಾಗಿದೆ. ವಿದೇಶಗಳ ಮುಖ್ಯ ಆದಾಯ ಮೂಲ ಪ್ರವಾಸೋದ್ಯಮವಾಗಿದೆ. ಆ ದೇಶಗಳಿಗೆ ಭೇಟಿ ನೀಡುವ ಪ್ರವಾಸಿಗಳಿಂದ ಬರುವಂತಹ ಆದಾಯದಿಂದ ಮೇಲೇ ಆ ದೇಶಗಳ ಆರ್ಥಿಕ ಸ್ಥಿತಿ ನಿಂತಿದೆ. ಸಣ್ಣ ದೇಶಗಳಾಗಿರುವ ಸಿಂಗಾಪೂರ್, ಮಲೇಷಿಯಾ ಮತ್ತು ಸ್ವಿಟ್ಜರ್‌ಲ್ಯಾಂಡ್‌ಗಳಂತಹ ದೇಶಗಳು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಟ್ಟಿರುವ ಕಾರಣದಿಂದಾಗಿ ಮುಂದುವರೆದ ದೇಶಗಳಾಗಿ ಪರಿಗಣಿಸಲ್ಪಟ್ಟಿವೆ. ನಮ್ಮ ರಾಜ್ಯದಲ್ಲಿಯೂ ಸಹ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿರುವುದು ಸಂತೋಷದ ವಿಚಾರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಐತಿಹಾಸಿಕ ಪರಂಪರೆಯುಳ್ಳ ಹಂಪಿಯಲ್ಲಿ ಪ್ರವಾಸಿ ಮಾರ್ಗದರ್ಶಿಗಳಾಗಿ ಕೆಲಸ ಮಾಡಲು ಮುಂದೆ ಬರುವ ಯುವಕ–ಯುವತಿಯರಿಗೆ ತರಬೇತಿ ನೀಡಲು ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಕ್ರಮ ಕೈಗೊಳ್ಳಲಾಗಿದೆ ಮತ್ತು ಪ್ರವಾಸೋದ್ಯಮ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಹಾಸನ, ಚಿಕ್ಕಮಗಳೂರು, ಕೊಡಗು ಮತ್ತು ಬೆಳಗಾವಿ ಮುಂತಾದ ಕಡೆಗೆ ವಾರಾಂತ್ಯದಲ್ಲಿ ಬೆಂಗಳೂರಿನ ಜನರು ಪ್ರವಾಸಕ್ಕೆ ಹೋಗುತ್ತಾರೆ. ಈ ರೀತಿ ಜನರು ಪ್ರವಾಸಕ್ಕೆ ಹೋಗಬೇಕಾದರೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಿಶ್ರಾಂತಿ ಪಡೆದು ಊಟ ತಿಂಡಿ ಮಾಡಿಕೊಂಡು ಪ್ರಯಾಣ ಮುಂದುವರೆಸಲು ಅನುಕೂಲವಾಗುವ ರೀತಿಯಲ್ಲಿ ರಸ್ತೆ ಬದಿ ಸೌಲಭ್ಯಗಳನ್ನು ನಿರ್ಮಿಸಲು ಈ ಆಯವ್ಯಯದಲ್ಲಿ ಉದ್ದೇಶಿಸಲಾಗಿದೆ. ಮಾರ್ಗದರ್ಶಿಗಳಾಗಿ ಕೆಲಸ ಮಾಡಲು ಮುಂದೆ ಬರುವ ಯುವಕ–ಯುವತಿಯರಿಗೆ ತರಬೇತಿ ನೀಡುವುದರಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಬಡಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಮೊದಲ ಹಂತವಾಗಿ bone marrow transplant ಚಿಕಿತ್ಸೆಗಾಗಿ ಪ್ರತ್ಯೇಕ ಘಟಕ ಸ್ಥಾಪಿಸಲು 12 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿರುವುದು ನಿಜಕ್ಕೂ ಸ್ವಾಗತಾರ್ಹವಾಗಿದೆ. ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಮಾನವೀಯತೆಯನ್ನು ಮೆರೆದಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರೊಬ್ಬರು ಮಾತನಾಡುತ್ತಾ, ಬಹಳ ಉತ್ತಮವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಗುಣಕ್ಕೆ ಮತ್ಸರವೇಕೆ ಎನ್ನುವ ದೃಷ್ಟಿಯಿಂದ ಅವರ ಮಾತುಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಕೆಳಸ್ತರದಲ್ಲಿರುವ ಶಿಳ್ಳೇಕ್ಯಾತ, ದೊಂಬಿದಾಸ, ಗೌಳಿ, ಹೆಳವ, ಶಿಕಾರಿಗಳು, ಹೂವಾಡಿಗ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಂಚುಗಾರ, ಕಮ್ಮಾರ, ದರ್ಜಿ, ದೇವಾಡಿಗ, ಬುಡಬುಡಿಕೆ, ತಿಗಳ, ಬಡಿಗೆ, ಮತ್ತು ಹಟ್ಗಾರ ಇತ್ಯಾದಿ ಸಮುದಾಯಗಳ ಹೆಸರುಗಳನ್ನು ನಾವು ಕೇಳಿದ್ದೇವೆ. ಆದರೆ, ನಗರ ಪ್ರದೇಶದ ಜನರು ಕೇಳಿರುವುದಕ್ಕೆ ಸಾಧ್ಯವಿಲ್ಲ. ಹೆಸರು ಕೇಳದೇ ಇರುವಂತಹ ಜಾತಿಗಳನ್ನು ಗುರುತಿಸಿ, ಈ ಸಮುದಾಯಗಳ ಅಭಿವೃದ್ಧಿಗೆ 10 ಕೋಟಿ ರೂಪಾಯಿಗಳ ಅನುದಾನವನ್ನು ಆಯವ್ಯಯದಲ್ಲಿ ಮೀಸಲಿಟ್ಟಿದ್ದಾರೆ. ಆ ಮೂಲಕ ಈ ಜನಾಂಗದವರನ್ನು ಮುಖ್ಯವಾಹಿನಿಗೆ ತರುವಂತಹ ಪ್ರಯತ್ನವನ್ನು ಮಾಡಿರುವುದು ಬಹಳ ಸ್ವಾಗತಾರ್ಹವಾಗಿರುವ ವಿಚಾರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಹೆರಿಗೆ ಪೂರ್ವ 3 ತಿಂಗಳು ಹಾಗೂ ಹೆರಿಗೆ ನಂತರ 3 ತಿಂಗಳ ಕಾಲ ಮಾಸಿಕ 1000 ರೂಪಾಯಿಗಳಂತೆ 6 ಸಾವಿರ ರೂಪಾಯಿಗಳ ಭತ್ಯೆ ನೀಡುವುದರ ಬಗ್ಗೆ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ನೀಡಲಾಗುತ್ತಿರುವ ಭತ್ಯೆಯನ್ನು ಹೆಚ್ಚು ಮಾಡಿರುವುದು ಅಭಿನಂದನಾರ್ಹವಾಗಿದೆ.  ಇದು ಬಡ ಹೆಣ್ಣುಮಕ್ಕಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗಿರುವ ಕಾಳಜಿಯನ್ನು ತೋರಿಸುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪ ವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿರುವುದು ಮಾನ್ಯ ಕುಮಾರಸ್ವಾಮಿಯವರ ಹೃದಯ ಶ್ರೀಮಂತಿಕೆಯನ್ನು ತೋರಿಸಿದೆ. ಇದರ ಜೊತೆಗೆ ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದಿಂದ ವಿಕಲಚೇತನರಿಗೆ ನೀಡಿರುವ ಸಾಲ ಮತ್ತು 2014ರಿಂದ ಸುಸ್ತಿಯಾಗಿರುವ ಬಡ್ಡಿ ಮೊತ್ತವನ್ನು ಮನ್ನಾ ಮಾಡಲು 4 ಕೋಟಿ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. ನಿಜಕ್ಕೂ ಮಾನ್ಯ ಕುಮಾರಸ್ವಾಮಿಯವರು ವಿಕಲಚೇತನರೆಡೆಗೆ ತಾಯಿ ಹೃದಯದಂತೆ ಮಿಡಿದಿದ್ದಾರೆ. ವಿಕಲಚೇತನರ ಕ್ಯಾಂಪಸ್ ನಿರ್ಮಾಣ ಮಾಡಲು 20 ಎಕರೆ ಜಾಗವನ್ನು ಮೀಸಲಿಡಲಾಗಿದೆ. ಇದೊಂದು ಅದ್ಭುತವಾಗಿರುವ ಕಾರ್ಯಕ್ರಮವಾಗಿದೆ. ಇವೆಲ್ಲವೂ ಬಡವರ ಬಗ್ಗೆ ಇರುವಂತಹ ಕಾರ್ಯಕ್ರಮಗಳೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, 65 ವರ್ಷ ವಯಸ್ಸಾಗಿರುವ ವಯೋವೃದ್ಧರಿಗೆ ಈ ಹಿಂದೆ 600 ರೂಪಾಯಿಗಳ ಭತ್ಯೆಯನ್ನು ನೀಡಲಾಗುತ್ತಿತ್ತು. ಈಗ ಅದರ ಮೊತ್ತವನ್ನು 1000 ರೂಪಾಯಿಗಳಿಗೆ ಏರಿಸುವುದರ ಮೂಲಕ ಇದಕ್ಕಾಗಿ 660 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇದು ಶ್ಲಾಘನೀಯವಾದ ವಿಚಾರವಾಗಿದೆ. ಸುಮಾರು 32 ರಿಂದ 92 ಲಕ್ಷ ಫಲಾನುಭವಿಗಳಿಗೆ ಇದು ನೆರವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ಆರ್ಥಿಕವಾಗಿ ಹಿಂದುಳಿದಿರುವ ಬ್ರಾಹ್ಮಣ ಸಮಾಜದವರಿಗೆ 'ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪನೆ ಮಾಡಿ ಅದಕ್ಕಾಗಿ 25 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇದು ನಿಜಕ್ಕೂ ಸಂತೋಷದ ವಿಚಾರವಾಗಿದೆ. ಧಾರ್ಮಿಕ ಪರಂಪರೆಯ ಮೇರು ವ್ಯಕ್ತಿಯಾದ ಆದಿ ಶಂಕರಾಚಾರ್ಯರ ಗೌರವಾರ್ಥ ರಾಜ್ಯಾದ್ಯಂತ 'ಆದಿ ಶಂಕರಚಾರ್ಯರ ಜಯಂತಿ'ಯನ್ನು ಆಚರಿಸುವ ಬಗ್ಗೆ ಆ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಇದನ್ನು ತುಂಬು ಹೃದಯದಿಂದ ನಾನು ಸ್ವಾಗತಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, 'ಹಸಿರು ಕರ್ನಾಟಕ ಯೋಜನೆ'ಯ ಬಗ್ಗೆ ನಾನು ಈಗಾಗಲೇ ಕೆಳಮನೆಯಲ್ಲಿ ಮಾತನಾಡಿದ್ದೇನೆ. ಈಗ ಈ ಮನೆಯಲ್ಲಿ ಮಾತನಾಡುತ್ತಿದ್ದೇನೆ. ಹಸಿರು ಕರ್ನಾಟಕ ಯೋಜನೆ ಸಾಮಾಜಿಕ ಅರಣ್ಯ ಬೆಳವಣಿಗೆಗೆ ಸಹಾಯಕವಾಗಿದೆ. ವರ್ಷದಿಂದ ವರ್ಷಕ್ಕೆ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ನಾವು ತುಲನೆ ಮಾಡಿ ನೋಡಿದಾಗ ವರ್ಷದಿಂದ ವರ್ಷಕ್ಕೆ 0.5 ಯಿಂದ 0.6 ಡಿಗ್ರಿ ತಾಪಮಾನ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟಬೇಕಾದರೆ, ಅರಣ್ಯಗಳನ್ನು ರಕ್ಷಣೆ ಮಾಡಬೇಕಾಗುತ್ತದೆ. ಅರಣ್ಯ ರಕ್ಷಣೆ ಮಾಡುವುದಕ್ಕೆ ಅರಣ್ಯ ಇಲಾಖೆ ಇದೆ. ಅರಣ್ಯ ಇಲಾಖೆಯಲ್ಲಿರುವ ಮ್ಯಾನೇಜ್‌ಮೆಂಟ್ ಸರಿ ಇಲ್ಲವೋ ಅಥವಾ ನಾವು ಸರಿ ಇಲ್ಲವೋ ನನಗೆ ಗೊತ್ತಿಲ್ಲ. ಪ್ರಕೃತಿ ಇಷ್ಟೊಂದು ಹಾಳಾಗಿರುವುದಕ್ಕೆ ಅರಣ್ಯ ಇಲಾಖೆಯವರೇ ಕಾರಣರಾಗಿದ್ದಾರೆ. ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಯಬಾರದು, ಪರಿಸರದ ಮೇಲೆ ಇದು ವೈಪರೀತ್ಯ ಪರಿಣಾಮವನ್ನುಂಟು ಮಾಡುತ್ತದೆ ಎನ್ನುವ ನಿರ್ಣಯವನ್ನು ಈ ಸದನಗಳಲ್ಲಿ ತೆಗೆದುಕೊಳ್ಳಲಾಗಿದೆ. ನೀಲಗಿರಿ ಮರಗಳ ಬುಡದಲ್ಲಿ ಹುಲ್ಲು ಸಹ ಹುಟ್ಟುವುದಿಲ್ಲ. ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಳೆಯಾಗು ಪ್ರದೇಶಗಳೆಂದರೆ ಚಿರಾಪುಂಜಿ ಮತ್ತು ಅಗುಂಬೆ ಎಂದು ಹೇಳಬಹುದು. ಅರಣ್ಯ ಇಲಾಖೆಯಲ್ಲಿ ಎಲ್ಲರಿಗೂ ಕೆಲಸವನ್ನು ಕೊಡುವುದಿಲ್ಲ. ಇಲ್ಲಿ ಕೆಲಸ ಮಾಡುವವರು ಭೂಗರ್ಭ ಶಾಸ್ತ್ರಜ್ಞರಾಗಿರಬೇಕು ಅಥವಾ ಸಸ್ಯಶಾಸ್ತ್ರವನ್ನು ಓದಿರಬೇಕು. ಇಂತಹ ವಿದ್ಯಾವಂತರಿಂದ ಮೂರ್ಖತನದ ಕೆಲಸವಾಗುತ್ತಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಚಿರಾಪುಂಜಿ, ಅಗುಂಬೆ ಮತ್ತು ಕೆಮ್ಮಣ್ಣುಗುಂಡಿಗಳಲ್ಲಿ ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದಾರೆ. ನೀಲಗಿರಿ ಬೀಜವನ್ನು ಸುಮ್ಮನೆ ಎಸೆದರೆ ಸಾಕು ಹುಟ್ಟುತ್ತವೆ. ಇದು ಪ್ರಕೃತಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇಲಾಖೆಯ ಅಧಿಕಾರಿಗಳಿಗೆ ಇಲಾಖೆಯಿಂದ ದುಡ್ಡು ಡ್ರಾ ಮಾಡಬೇಕು, ಗಿಡವನ್ನು ಬೆಳೆಸಿದಂತೆ ಇರಬೇಕು ಎನ್ನುವ ಕಾರಣದಿಂದ ಅಧಿಕಾರಿಗಳು ನೀಲಗಿರಿ ಮತ್ತು ಅಕೇಶಿಯಾ ಗಿಡಗಳನ್ನು ಬೆಳೆಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಸಸಿ ನೆಡುವ ಯೋಜನೆಗೆ ನೆರವು ನೀಡಲು ಈ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಅದೇ ರೀತಿ 750

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಿಲಿಮೀಟರ್‌ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಮಾನವ ಹಸ್ತಕ್ಷೇಪವಾಗದಂತೆ ಬೆಟ್ಟ ಗುಡ್ಡಗಳಿಗೆ ಕೇವಲ ಬೇಲಿ ಸಂರಕ್ಷಣೆ ಮಾಡಿದರೂ ಸಾಕು, ಅರಣ್ಯ ಪ್ರದೇಶ ತನ್ನಿಂದ ತಾನೇ ವೃದ್ಧಿಯಾಗುತ್ತದೆ ಎನ್ನುವುದು ಅರಣ್ಯ ತಜ್ಞರ ಅಭಿಪ್ರಾಯವಾಗಿದೆ. ಇದಕ್ಕೆ ಬೆಂಬಲವಾಗಿ ನಾನು ರಾಜ್ಯದಲ್ಲಿನ ಇಂತಹ ಪ್ರದೇಶಗಳಲ್ಲಿರುವ ಸರ್ಕಾರಿ ಬೆಟ್ಟ ಗುಡ್ಡದ ಜಮೀನುಗಳಿಗೆ ಬೇಲಿ ಸಂರಕ್ಷಣೆ ಮಾಡಿ ಅರಣ್ಯ ವೃದ್ಧಿಯಾಗಲು ಅನುಕೂಲವಾಗುವಂತೆ 40 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಿಂದ ಪರಿಸರ ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಟ್ಯಾಂಕರ್‌ಗಳ ಮೂಲಕ ಒದಗಿಸಲಾಗುತ್ತಿದೆ. ಎಷ್ಟು ದಿನಗಳ ಕಾಲ ಟ್ಯಾಂಕರ್‌ಗಳ ಮೂಲಕ ನೀರನ್ನು ಕೊಡುವುದಕ್ಕೆ ಸಾಧ್ಯ? ಪ್ರಕೃತಿಯ ವಿರುದ್ಧವಾಗಿ ನಾವು ನಡೆದರೆ ನಮ್ಮ ಬದುಕೇ ದುಸ್ತರವಾಗುತ್ತದೆಂದು ಪರಿಗಣಿಸಿ ಪ್ರಾಣಿ ಪಕ್ಷಿಗಳನ್ನು ಉಳಿಸುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ಪಕ್ಷಿ ಪ್ರಾಣಿಗಳನ್ನು ಉಳಿಸುವುದಕ್ಕೆ ಗೋಣಿಮರ, ಅತ್ತಿಮರ, ಆಲದಮರ, ಅರಳಿಮರ ಮತ್ತು ಬಸರಿಮರ ಇತ್ಯಾದಿಯಾಗಿ ಪಕ್ಷಿಗಳಿಗೆ ಹಣ್ಣು ಕೊಡುವ ಗಿಡಗಳನ್ನು ನೆಡುವುದರ ಮೂಲಕ ಪಕ್ಷಿಗಳಿಗೆ ತಿನ್ನಲು ಹಣ್ಣು ಸಿಗುವಂತಹ ಕೆಲಸ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರು ತಾಯಿ ಹೃದಯದ ಮಮತೆ ಹೊತ್ತು ಮಂಡಿಸಿರುವ ಈ ಆಯವ್ಯಯ ನಾಡಿನ ಸಮಗ್ರ ಅಭಿವೃದ್ಧಿಯ ಕನಸನ್ನು ಹೊತ್ತಿದೆ. ವಿಶೇಷವಾಗಿ ಅನ್ನದಾತನ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸುವಂತಹ ಮತ್ತು ರಾಜ್ಯದ ಎಲ್ಲ ಜನರ ಹಿತವನ್ನು ತುಂಬಿದೆ ಎನ್ನುವ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, 2018–19ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸಿ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಇದೇ ತಿಂಗಳ 5ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳಾಗಿರುವ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮಂಡಿಸಿದ ಆಯವ್ಯಯದಲ್ಲಿ, '16ನೇ ಫೆಬ್ರವರಿ 2018ರಂದು ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಆಯವ್ಯಯದಲ್ಲಿನ ಯೋಜನೆಗಳನ್ನು ನಾವು ಮುಂದುವರೆಸುತ್ತೇವೆ' ಎಂದು ಹೇಳಿರುವ ಮಾತುಗಳು ಗಮನಾರ್ಹವಾಗಿದೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ್ದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಯವ್ಯಯದಲ್ಲಿ ಅನೇಕ ಜನಪರವಾದ ಕಾರ್ಯಕ್ರಮಗಳ ಜೊತೆಗೆ ರಾಜ್ಯದಲ್ಲಿ ರೈತರಿಗಾಗಿ ನೀಡಿರುವ ವಿಶೇಷ ಕಾರ್ಯಕ್ರಮಗಳನ್ನು ನಾವು ಮನಗಾಣಬೇಕಾಗಿದೆ.

(ಮುಂದುವರಿದಿದೆ)

(186) 10.7.2018 4.40 ಪಿಕೆ:ಬಿಎನ್ಎಸ್

ಶ್ರೀ ಎನ್.ಎಸ್.ಭೋಸರಾಜು(ಮುಂದುವರೆದಿದೆ)

ರೈತರಿಗೆ ಕೊಟ್ಟಿರುವಂತಹ ಅನೇಕ ಕಾರ್ಯಕ್ರಮಗಳ ಬಗ್ಗೆ ನಾವು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ 5 ವರ್ಷದಲ್ಲಿ Universal Health Coverage Scheme ಬಗ್ಗೆ ಮತ್ತು ಎಸ್.ಸಿ./ಎಸ್.ಟಿ. ಜನಾಂಗಕ್ಕೆ 24% ಅಂದರೆ, ರೂ.88,395 ಕೋಟಿಗಳಷ್ಟು ಹಣವನ್ನು ಖರ್ಚು ಮಾಡಿದೆ. ಪ್ರತಿಯೊಂದು ಹೋಬಳಿಗೂ ಮೊರಾರ್ಜಿದೇಸಾಯಿ ಶಾಲೆ, ಇಂದಿರಾ ವಸತಿ ಶಾಲೆ ಈ ರೀತಿ 270 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಲಾಯಿತು. ಬೆಂಗಳೂರು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಡವರಿಗಾಗಿ ಇಂದಿರಾ ಕ್ಯಾಂಟೀನ್ ಪ್ರಾರಂಭ ಮಾಡಲಾಯಿತು. 'ಕೃಷಿ ಭಾಗ್ಯ', 'ಕ್ಷೀರ ಭಾಗ್ಯ', 'ಅನ್ನಭಾಗ್ಯ' ಹೀಗೆ ಅನೇಕ ಕಾರ್ಯಕ್ರಮಗಳನ್ನು ಮುಂದುವರೆಸುವುದರ ಸಂಬಂಧ ಪ್ರಸ್ತುತ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರುವುದನ್ನು ನಾವು ಗಮನಿಸಬಹುದು. ಈ ಬಜೆಟ್‌ನಲ್ಲಿ ರಾಜ್ಯದ ಅನೇಕ ಭಾಗಗಳಿಗೆ ಪ್ರಾತಿನಿಧ್ಯ ಸಿಗಲಿಲ್ಲ ಎನ್ನುವ ಮಾತುಗಳು ಕೇಳಿಬಂತು. ಆಗ ನಾವು ಎರಡೂ ಬಜೆಟ್‌ನಲ್ಲಿ ಇದ್ದ ವಿಷಯಗಳನ್ನು ಗಮನಿಸಿ, ಅದರಲ್ಲಿರುವ ಜನಪರ ಕಾರ್ಯಕ್ರಮಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕಾಗಿದೆ. ಈ ದಿಸೆಯಲ್ಲಿ ನಮ್ಮ ರೈತರಿಗಾಗಿ ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು, ಸಹಕಾರ ಸಂಘಗಳಲ್ಲಿ ರೈತರು ರೂ.50000ದ ತನಕ ಮಾಡಿದ್ದ ಸಾಲ ಮನ್ನಾ ಮಾಡಿದರು. ಇದರ ಉಪಯೋಗವನ್ನು ಸುಮಾರು 22 ಲಕ್ಷ ರೈತರು ಪಡೆದುಕೊಂಡರು. ಅಂದರೆ ಒಟ್ಟು ರೂ.2165 ಕೋಟಿ ಸಾಲ ಮನ್ನಾ ಮಾಡಿತು. ಇಡೀ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ರೈತರು, ಸಾಲ ಮನ್ನಾ ಮಾಡಬೇಕೆನ್ನುವ ವಿಷಯವನ್ನು ಸರ್ಕಾರದ ಮುಂದೆ ತಂದಾಗ ಅದನ್ನು ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಮನವಿ ಮಾಡುವ ಪ್ರಯತ್ನ ಮಾಡಲಾಯಿತು. ಕೇಂದ್ರ ಸರ್ಕಾರ ಇದಕ್ಕೆ ಕಿವಿಗೊಡದೇ ಇದ್ದಾಗ, ಸಹಕಾರ ಸಂಘಗಳಲ್ಲಿರುವ ರೂ. 8000 ಕೋಟಿಯಷ್ಟು ಲೋನ್‌ಗಳನ್ನು ಮನ್ನಾ ಮಾಡಿತು. ಈಗ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಈ ಕುರಿತು ಯೋಚನೆ ಮಾಡಿ, ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಸದಸ್ಯರಿರುವಂತಹ ಸಮನ್ವಯ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಂಡು ರೂ.34000 ಕೋಟಿಯಷ್ಟು, ಅಂದರೆ ಪ್ರತಿಯೊಬ್ಬ ರೈತರಿಗೆ ರೂ. 2 ಲಕ್ಷ ಮೀರದಂತೆ ಸಾಲ ಮನ್ನಾ ಮಾಡಿರುವ ವಿಷಯ ಎಲ್ಲರಿಗೂ ಗೊತ್ತಿದೆ. ಅಂದರೆ ರೂ. 34000 ಕೋಟಿ ಮತ್ತು ರೂ.8000 ಕೋಟಿ, ಒಟ್ಟು ರೂ.42000 ಕೋಟಿಯಷ್ಟು ರೈತರಿಗೆ ರಿಯಾಯಿತಿ ನೀಡುವ ತೀರ್ಮಾನ ಮಾಡಿದೆ. ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿಸೆಯಲ್ಲಿ ಅನೇಕ ಬಾರಿ ನಾವು ಈ ಸದನದಲ್ಲಿ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡುವ ಪ್ರಯತ್ನ ಮಾಡಿದ್ದೇವೆ. ಹಿಂದೆ ಮಾನ್ಯ ಸಿದ್ಧರಾಮಯ್ಯನವರು ಎರಡು–ಮೂರು ಬಾರಿ ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರಕ್ಕೆ ಮನವಿ ಕೊಟ್ಟಿದ್ದರು. ನೂತನ ಮುಖ್ಯಮಂತ್ರಿಗಳೂ ಸಹಿತ ಪ್ರಧಾನ ಮಂತ್ರಿಗಳಿಗೆ ವಿನಂತಿ ಮಾಡಿದರೂ ಇವತ್ತಿನವರೆಗೆ ಕೇಂದ್ರ ಸರ್ಕಾರ ರೈತರಿಗೆ ಸಹಕಾರ ಕೊಡುವ ಪ್ರಯತ್ನ ಮಾಡಲಿಲ್ಲ. ಮಾನ್ಯ ಸಭಾಪತಿಯವರೇ, ಹಿಂದೆ U.P.A. (United Progressive Alliance) ಸರ್ಕಾರ ಇದ್ದಾಗ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮನಮೋಹನ್‌ಸಿಂಗ್‌ರವರು ರಾಷ್ಟ್ರದ ರೈತರ ಪರಿಸ್ಥಿತಿ ನೋಡಿ ರೂ.72000 ಕೋಟಿ ಸಾಲವನ್ನು ಮನ್ನಾ ಮಾಡಿದರು. ಈ ವಿಚಾರವನ್ನು ನಮ್ಮ ಸರ್ಕಾರ ಮತ್ತು ಬೇರೆ ಬೇರೆ ರಾಜ್ಯ ಸರ್ಕಾರಗಳು ಗಮನಕ್ಕೆ ತಂದರೂ ಕೇಂದ್ರ ಸರ್ಕಾರ ರೈತರಿಗೆ ಸಹಾಯ ಮಾಡುವಂತಹ ಪ್ರಯತ್ನ ಮಾಡಲಿಲ್ಲ. ನಮ್ಮ ರಾಜ್ಯದಲ್ಲಿ ಈಗೇನು ಒಟ್ಟು ರೂ.42000 ಕೋಟಿಗಳನ್ನು ಮನ್ನಾ ಮಾಡುತ್ತಿದ್ದಾರೋ ಈ ದಿಸೆಯಲ್ಲಿ ರಾಷ್ಟ್ರದಲ್ಲೇ ಇತರ ರಾಜ್ಯಗಳು ಸಾಲ ಮನ್ನಾ ಮಾಡಿರುವ ಉದಾಹರಣೆಗಳು ಬಹಳ ಕಡಿಮೆ ಎಂದು ಹೇಳಬಹುದು. ಇಂತಹ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವಂತಹ ಪ್ರಯತ್ನ ಮಾಡಬೇಕು. ಈ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಇಲ್ಲಿರುವ ಎಲ್ಲಾ ಜನಪ್ರತಿನಿಧಿಗಳು ಗಮನಹರಿಸಬೇಕು. ಕೇಂದ್ರ ಸರ್ಕಾರದ ಮುಖಾಂತರ ರೈತರಿಗೆ ಹೆಚ್ಚು ಸಹಕಾರ ಸಿಗುವ ಹಾಗೆ ಪ್ರಯತ್ನವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತರ ಸಾಲ ಮನ್ನಾ ಮಾಡಿಬಿಟ್ಟರೆ ಅವರ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ನಾವು ವಿಚಾರ ಮಾಡಬಾರದು. ನೂತನ ಸರ್ಕಾರಗಳು ಬಂದರೆ ಸಾಲ ಮನ್ನಾ ಮಾಡಬೇಕು ಎನ್ನುವ ಒತ್ತಡ ಬರುತ್ತದೆ. ಅವರ ಸಮಸ್ಯೆಗಳನ್ನು ನೀಗಿಸಲು ಕೇವಲ ಸಾಲ ಮನ್ನಾ ಮಾಡಿದರೆ ಸಾಕಾಗುವುದಿಲ್ಲ ಎನ್ನುವ ಮಾತನ್ನು ನಾವು ಅರಿತುಕೊಳ್ಳಬೇಕು. ರೈತರಿಗೆ ಯಾವರೀತಿಯಾಗಿ ಶಕ್ತಿ ತುಂಬಬೇಕು ಎನ್ನುವುದರ ಕಡೆ ಹೆಚ್ಚಿನ ಗಮನಹರಿಸಬೇಕು. ನೀರಾವರಿಯನ್ನು ಹೆಚ್ಚು ಮಾಡುವುದು, ರೈತರ ಅವಶ್ಯಕತೆಗನುಗುಣವಾಗಿ ವಿದ್ಯುತ್ ಸರಬರಾಜು ಮಾಡುವುದು, fertilizers, seeds, pesticides, ಈ ಎಲ್ಲವನ್ನು ಸಮಯಕ್ಕೆ ಸರಿಯಾಗಿ ಸಿಗುವ ವ್ಯವಸ್ಥೆ ಮಾಡಬೇಕು. ರೈತರು ಬೆಳೆದಂತಹ ಬೆಳೆಗಳಿಗೆ M.S.P. (Minimum Support Price) ನೀಡುವುದರ ಮುಖಾಂತರ ಮಾರುಕಟ್ಟೆಯನ್ನು ಸರಿದೂಗಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ರೈತರು ಅನೇಕ ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಮಾರುಕಟ್ಟೆಗೆ ಬರುವಂತಹ ಬೆಳೆಗಳಿಗೆ ಸರಿಯಾದ ಬೆಲೆ ಸಿಗುವಂತಹ ಪ್ರಯತ್ನವನ್ನು ಮಾಡಬೇಕು. ಆ ದಿಸೆಯಲ್ಲಿ support price ಇರಬಹುದು, stabilization of market ಮಾಡುವಂಥದ್ದರ ಕಡೆ ಗಮನಹರಿಸುವ ಪ್ರಯತ್ನ ಮಾಡಿದಾಗ ಮಾತ್ರ ರೈತರ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಮ್ಮ ಭಾಗದ ತುಂಗಭದ್ರಾ ಪ್ರಾಜೆಕ್ಟ್ 1953ರಲ್ಲಿ ಪ್ರಾರಂಭವಾಯಿತು. ಅಂದರೆ ಇವತ್ತಿಗೆ 65 ವರ್ಷವಾಗಿದೆ. ಆ ಪ್ರಾಜೆಕ್ಟ್‌ನ ಕೆಳಗೆ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆ ಬರುತ್ತದೆ. ಇದರ ಜೊತೆ ಆಂಧ್ರಪ್ರದೇಶ ಸಹ ಬರುತ್ತದೆ. 14 ಲಕ್ಷ ಎಕರೆ ನೀರಾವರಿ ಇದೆ. 133 ಟಿ.ಎಂ.ಸಿ. ಸಾಮರ್ಥ್ಯದ ಜಲಾಶಯದಲ್ಲಿ 33 ಟಿ.ಎಂ.ಸಿ. ಹೂಳು ತುಂಬಿ ಕೇವಲ 100 ಟಿ.ಎಂ.ಸಿ. ನೀರು ಮಾತ್ರ ಸಂಗ್ರಹಣೆ ಆಗುತ್ತಿದೆ. ಈ ಹೂಳು ತೆಗೆಸಲು ಯಾವುದೇ ಸರ್ಕಾರ ಬರಲಿ, ಅಂದರೆ, ಜೆ.ಡಿ.(ಎಸ್) ಇರಬಹುದು, ಕಾಂಗ್ರೆಸ್ ಇರಬಹುದು, ಬಿ.ಜೆ.ಪಿ. ಇರಬಹುದು, ಬಿಜೆಪಿ–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇರಬಹುದು ಹೀಗೆ ಯಾವುದೇ ಸರ್ಕಾರ ಬಂದರೂ ಹೂಳು ತೆಗೆಸುವಂತಹ ಪ್ರಯತ್ನ ಮಾಡಬೇಕು. ಹೂಳು ತೆಗೆಸುವುದಕ್ಕೆ ಆಗದೇ ಹೋದರೆ 33 ಟಿ.ಎಂ.ಸಿ. ನೀರು ಸಂಗ್ರಹಣೆ ಏನು ಕಡಿಮೆ ಆಗುತ್ತಿದೆಯೋ ಅಷ್ಟು ಪ್ರಮಾಣದ ನೀರು ಸಂಗ್ರಹಣೆ ಮಾಡಲು ಪರ್ಯಾಯ ವ್ಯವಸ್ಥೆ ಮಾಡಬೇಕು, ಬೇರೆ ಯೋಜನೆಗಳನ್ನು ಮಾಡಬೇಕು ಎಂದು ಒತ್ತಾಯ ಮಾಡುತ್ತಾ ಬಂದಿದ್ದೇವೆ. ಈ ವಿಷಯವಾಗಿ D.P.R. (Detailed Project Report) ಮಾಡುವುದಕ್ಕೆ ಅವಕಾಶ ಇದೆ ಎನ್ನುವ ಮಾತನ್ನು ಮೂರು ಜಿಲ್ಲೆಗಳ ಪ್ರತಿನಿಧಿಗಳು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರ ಗಮನಕ್ಕೆ ತಂದಾಗ, ಅವರು ಫೆಬ್ರವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ D.P.R. ಮಾಡುವುದಕ್ಕೆ ಪ್ರಸ್ತಾವನೆ ಕೊಟ್ಟಿದ್ದಾರೆ. ಇವತ್ತು ಆ D.P.R. ಮಾಡುವುದರ ಮುಖಾಂತರ ಸಮತೋಲನ ಜಲಾಶಯ ನಿರ್ಮಾಣ ಮಾಡುವುದಕ್ಕೆ ಅವಕಾಶ ಇದೆ ಎಂದು ತಜ್ಞರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಹೆಚ್ಚಿನ ಗಮನಹರಿಸುವುದರ ಮುಖಾಂತರ ಆ ಭಾಗದ ರೈತರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಇತ್ತು. ಒಂದು ಬೆಳೆಗೂ ಕೂಡ ಸರಿಯಾದ ಪ್ರಮಾಣದಲ್ಲಿ ನೀರನ್ನು ಒದಗಿಸುವುದಕ್ಕೆ ಆಗಲಿಲ್ಲ. ಇಡೀ ರಾಷ್ಟ್ರಕ್ಕೆ ಅಲ್ಲದೇ ಪರದೇಶಗಳಿಗೂ ರಫ್ತು ಮಾಡುವ ಸೋನಾಮಸೂರಿ ಅಕ್ಕಿಯನ್ನು ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಅಲ್ಲದೇ ರಾಯಚೂರು ಜಿಲ್ಲೆಯಲ್ಲಿ long staple cotton in black soil ಮತ್ತು ಇತರೆ ಪದಾರ್ಥಗಳನ್ನು ಬೆಳೆಸಬೇಕಾದರೆ ಸಾಕಷ್ಟು ನೀರಿನ ಕೊರತೆ ಕಾಣುತ್ತಿದೆ. ಸರಿಯಾಗಿ ಒಂದು ಬೆಳೆ ತೆಗೆಯುವುದಕ್ಕೂ ಅನಾನುಕೂಲವಾಗುತ್ತಿದೆ. ರೈತರಿಗೆ ಮೂಲಭೂತವಾಗಿ, ನೀರು ಸಂಗ್ರಹಣೆ, tail end ಪ್ರದೇಶಕ್ಕೆ ನೀರುಣಿಸುವಂಥದ್ದು ಇರಬಹುದು, ನದಿಗಳ ಮುಖಾಂತರ lift irrigation ಮಾಡುವುದಿರಬಹುದು, ಬೋರ್‌ವೆಲ್‌ಗಳ ಬಳಕೆಗೆ ವಿದ್ಯುತ್ ಸರಬರಾಜು ಮಾಡುವಂಥದ್ದು ಆಗಬೇಕು. ಈ ನಿಟ್ಟಿನಲ್ಲಿ ಹೆಚ್ಚಿನ ಗಮನಹರಿಸುವುದರ ಮುಖಾಂತರ ಅವರಿಗೆ ಹೆಚ್ಚಿನ ಶಕ್ತಿ ಕೊಡುವ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಭಾಗದ NRBC (Narayanpur Right Bank Canal) ಏನಿದೆ ಅದು ಆಲಮಟ್ಟಿಯ ಮುಖಾಂತರ ನಮ್ಮ ರಾಯಚೂರು ಜಿಲ್ಲೆಗೆ ಬರುತ್ತದೆ. Left Bank Canal ಏನಿದೆ ಅದು ಗುಲ್ಬರ್ಗಾ ಜಿಲ್ಲೆಗೆ ಹೋಗುತ್ತದೆ. NRBC ಏನಿದೆ ಇದು 0–95 ಕಿ.ಮೀ. ತನಕ ಕಳೆದ 15 ವರ್ಷಗಳಿಂದ ಆ ಭಾಗದ ರೈತರಿಗೆ ನೀರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತಿದೆ. ರೈತರಿಗೆ ಸರಿಯಾದ ರೀತಿಯಲ್ಲಿ ನೀರು ಸಿಗದೇ ಇದ್ದಾಗ ಅದನ್ನು modernisation ಮಾಡಬೇಕೆನ್ನುವ ಒತ್ತಾಯ ಬರುತ್ತಿದೆ. ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ ಬಜೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ರೂ. 750 ಕೋಟಿಗಳನ್ನು modernisation ಗಾಗಿ ನಿಗದಿಪಡಿಸಲಾಗಿದೆ. ತಕ್ಷಣ ಇದನ್ನು ಜಾರಿಗೊಳಿಸುವ ಪ್ರಯತ್ನ ಮಾಡಿ ರಾಯಚೂರು ಭಾಗದಲ್ಲಿರುವ ನಾಲ್ಕೂವರೆ ಲಕ್ಷ ಎಕರೆ ಭೂಮಿಗೆ ಅನುಕೂಲವಾಗುವ ನಿಟ್ಟಿನಲ್ಲಿ modernisation ಮಾಡುವ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು . . .)

(187)10–7–2018 4.50 ಡಿಎಸ್–ಬಿಎನ್‌ಎಸ್

**ಶ್ರೀ ಎನ್.ಎಸ್.ಬೋಸ್‌ರಾಜ್(ಮುಂದು):–**

ಅದೇ ರೀತಿ NRBC (Narayanpur Right Bank Canal) 95–168 ಕಿ.ಮೀ. ವರೆಗೂ ಮುಂದುವರೆಸುವಂತಹ ಕೆಲಸ ನಡೆಯುತ್ತಿದೆ. ಐದು ಪ್ಯಾಕೇಜ್‌ಗಳಲ್ಲಿ ಇವತ್ತು ಕೆಲಸ ಪ್ರಾರಂಭವಾಗಿದೆ. ಆದಷ್ಟು ವೇಗವಾಗಿ, ನಿಗದಿತ ಸಮಯದಲ್ಲಿ ಆ canal ಕೆಲಸ ಪೂರ್ತಿ ಪೂರೈಸುವುದರ ಮುಖಾಂತರ ಅದಕ್ಕೆ ಬೇಕಾಗಿರುವಂತಹ distributaries, sub-distributaries, field channel ಗಳನ್ನು ಮಾಡುವಂತಹ ಕೆಲಸ simultaneously ಆಗಬೇಕಾಗಿದೆ. ಅದು ಒಂದು ಸಲ main canal ಮಾಡುವಂಥದ್ದು, ಆಮೇಲೆ ಮುಂದಿನ ವರ್ಷಗಳಲ್ಲಿ field channel ಗಳನ್ನು ಮಾಡುವಂಥದ್ದು, ತಳಭಾಗದಿಂದ ನಿಗದಿತ ಸಮಯದಲ್ಲಿ ಮಾಡುವುದಕ್ಕಾಗುವುದಿಲ್ಲ. ಎಷ್ಟರ ಮಟ್ಟಿಗೆ ನಾವು main canal ಮಾಡುತ್ತೇವೆಯೋ ಆ ದಿಸೆಯಲ್ಲಿ distributaries, sub-distributaries, field channel ಗಳನ್ನು simultaneously ಮಾಡುವುದರ ಮುಖಾಂತರ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಆ ಭಾಗದಲ್ಲಿ ರಾಯಚೂರು ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ. ಆ ಜಿಲ್ಲೆಯಲ್ಲಿ ರೈತರು ಕೇವಲ ಕೃಷಿಯ ಮೇಲೆ ಆಧಾರವಾಗಿದ್ದಾರೆ. ಒಂದು ಕಡೆ ಕೃಷ್ಣ, ಒಂದು ಕಡೆ ತುಂಗಭದ್ರಾ ಇವೆರಡೂ ನದಿಗಳು ಇರತಕ್ಕಂಥ ಪ್ರದೇಶವಾಗಿದೆ. ಆದರೆ ಮುಖ್ಯವಾಗಿ ನೋಡಿದಾಗ ಡ್ಯಾಮ್‌ನ ಕೆಳಗಡೆ ಇರತಕ್ಕಂಥ ಪ್ರದೇಶ ಇದಾಗಿದೆ. ತುಂಗಭದ್ರಾ ಡ್ಯಾಮ್ ಕೆಳಗಡೆ ಇರತಕ್ಕಂಥ ಪ್ರದೇಶ ಹೊಸಪೇಟೆ. ಆ ನೀರು surplus ಆದಾಗ ಹೊರ ರಾಜ್ಯಕ್ಕೆ ಹೋಗುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ರೈತರು ತಾವೇ ನದಿ ಮುಖಾಂತರ lift irrigation ಮಾಡಿಕೊಂಡು, ತಮ್ಮದೇ ಆದಂತಹ ರೀತಿಯಲ್ಲಿ land levelling ಮಾಡಿಕೊಂಡು, ಕಾಲುವೆಗಳನ್ನು ಮಾಡಿಕೊಂಡು ಕೃಷಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮಾಡುತ್ತಿದ್ದಾರೆ. ಸರ್ಕಾರ ಯಾವುದೇ ರೀತಿಯಲ್ಲಿ downstream of the dam ಕೆಳಗಡೆ ಯಲ್ಲಿರತಕ್ಕಂಥ, ಅದು ಕೃಷ್ಣ ನದಿಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾರಾಯಣಪುರ ಡ್ಯಾಮ್ ಕೆಳಗಡೆ ಇರತಕ್ಕಂಥದ್ದು ಇರಬಹುದು, ಅದೇ ರೀತಿ ತುಂಗಭದ್ರಾ ಡ್ಯಾಮ್ ಇದೆ. ಅವರೇ ಮಾಡಿಕೊಳ್ಳುತ್ತಿರುವುದರಿಂದ ಅವರಿಗೆ ಕೇವಲ ವಿದ್ಯುತ್‌ನ್ನು ಹೆಚ್ಚು ಸಮಯ ಕೊಟ್ಟರೆ ಅನುಕೂಲವಾಗುತ್ತದೆ. ಅವರಿಗೆ 7 ಗಂಟೆಗಳ ಬದಲು 10–12 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಟ್ಟರೆ ಅವರಿಗೆ ಸಾಕಷ್ಟು ಕೃಷಿಯನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಡ್ಯಾಮ್ ಮೇಲೆ ಏನು canal ಮುಖಾಂತರ ನೀರು ಹರಿಸುವುದಕ್ಕೆ, ಕಾಲುವೆಗಳನ್ನು ಮಾಡುವುದಕ್ಕೆ ಸರ್ಕಾರ ಜಮೀನು ಅಭಿವೃದ್ಧಿ ಮಾಡುವುದಕ್ಕೆ ಸಾಕಷ್ಟು ಸರ್ಕಾರ ಹಣ ಕೊಡುತ್ತದೆ. ಅಲ್ಲಿಂದ ಹಣ ಕೊಡುತ್ತದೆ, field channels ಮಾಡುವುದಕ್ಕೆ ಸಾಕಷ್ಟು ಹಣವನ್ನು ಸರ್ಕಾರ ಖರ್ಚು ಮಾಡುತ್ತಿದೆ. ಆದರೆ, downstream of the dams ಕೆಳಗೆ ಹೊರ ರಾಜ್ಯಕ್ಕೆ ಹೋಗುವ ನೀರನ್ನು ಜನರು recycling ಮಾಡಿ ಉಪಯೋಗ ಮಾಡಿಕೊಳ್ಳಬೇಕಾದರೆ ಅವರಿಗೆ ಕೇವಲ 7 ಗಂಟೆ ವಿದ್ಯುತ್‌ನ್ನು ಕೊಡುವುದನ್ನು 12 ಗಂಟೆ ಕಾಲ ಕೊಟ್ಟರೆ ಸಾಕಷ್ಟು irrigation ಮಾಡುವುದಕ್ಕೆ potentiality create ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ವಿದ್ಯುತ್ ಹೆಚ್ಚು ಸಮಯ ಕೊಡಬೇಕೆಂದು ನಾನು ಅನೇಕ ಸಲ ಒತ್ತಾಯ ಮಾಡುತ್ತಿದ್ದೇನೆ. ಕೇವಲ ರಾಯಚೂರು ತಾಲ್ಲೂಕಿನಲ್ಲಿ ಮಾತ್ರ ಕಳೆದ ಸಲ ಸನ್ಮಾನ್ಯ ಸಚಿವರಿಗೆ, ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ 12 ಗಂಟೆಗಳ ಕಾಲ ವಿದ್ಯುತ್ ಕೊಡಿಸುವ ಪ್ರಯತ್ನ ಮಾಡಿದ್ದೇವೆ. ಏಕೆಂದರೆ, ಅಲ್ಲಿಂದ 3200 ಮೆಗಾವ್ಯಾಟ್ ವಿದ್ಯುತ್‌ನ್ನು ಸರಬರಾಜು ಮಾಡುತ್ತೇವೆ. ರಾಯಚೂರಿನಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದರಿಂದ 8 ಘಟಕಗಳು ಮತ್ತು Y.T.P.S. (Yermarus Thermal Power Station) and R.T.P.S.(Raichur Thermal Power Station) ಮುಖಾಂತರ ಒಟ್ಟಿಗೆ 3200 ಮೆಗಾವ್ಯಾಟ್ ವಿದ್ಯುತ್‌ನ್ನು ಸರಬರಾಜು ಮಾಡುತ್ತೇವೆ. ರೈತರ ಸಾಕಷ್ಟು ಭೂಮಿ ಸರ್ಕಾರ ತೆಗೆದುಕೊಂಡಿದೆ. ಅದರ ಮುಖಾಂತರ ನಮಗೆ 1.5–2°C ಉಷ್ಣಾಂಶ ಹೆಚ್ಚಾಗಿದೆ. ಈ ಕಡೆ 40°C ಉಷ್ಣಾಂಶ ಇದ್ದರೆ ನಮ್ಮ ಕಡೆ 42°C ಉಷ್ಣಾಂಶ ಇರುತ್ತದೆ. ತಾವು ಕೂಡ ಅಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದೀರಿ. ಇಡೀ ರಾಜ್ಯಕ್ಕೆ ಶೇಕಡ 40 ರಷ್ಟು ವಿದ್ಯುತ್ ಸರಬರಾಜು ಮಾಡುವ ಜಿಲ್ಲೆಗೆ ಸ್ವಲ್ಪ ಜಾಸ್ತಿ ವಿದ್ಯುತ್‌ನ್ನು ಕೊಡಬೇಕೆನ್ನುವುದು ನಮ್ಮ ಬೇಡಿಕೆಯಾಗಿದೆ. 24 ಗಂಟೆ ವಿದ್ಯುತ್ ಕೊಡಿ ಎಂದು ಹೇಳುವುದಿಲ್ಲ, 12 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಬೇಕೆನ್ನುವುದು ಆ ಭಾಗದ ರೈತರ ಬೇಡಿಕೆಯಾಗಿದೆ. ಆ ದಿಸೆಯಲ್ಲಿ ರೈತರನ್ನು ಸರ್ಕಾರ ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಸ್‌ರಾಜ್‌ರವರು ತಮಗೆ ಕೈ ತೋರಿಸಿ ಹೇಳಿದರು. ಪ್ರತಿ ಸಲ ಸಭೆಗೆ ಬಂದಾಗ ಬೈಯ್ದು ಹೋಗುತ್ತಾರೆ. ಏನಾದರೂ ಉತ್ತರ ಕರ್ನಾಟಕಕ್ಕೆ ಆಗಬೇಕಾದರೆ ಹಿರಿಯೂರು ವರೆಗೂ ಕಾರು ಬರುತ್ತದೆ. ಹಿರಿಯೂರಿಗೆ ಬಂದ ತಕ್ಷಣ deviate ಆಗಿ ಮತ್ತೆ ತಾವು ಹುಬ್ಬಳ್ಳಿ–ಧಾರವಾಡದ ಕಡೆಗೆ ಹೋಗುತ್ತೀರಿ. ಹೈದರಾಬಾದ್–ಕರ್ನಾಟಕ ಅವರಿಗೆ ನೆನಪೇ ಆಗುವುದಿಲ್ಲ. ಅದನ್ನು ತಮಗೆ ನೆನಪು ಮಾಡಿದೆ.

**ಶ್ರೀ ಎಸ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ತಾವು ಅಲ್ಲಿಗೆ ಬಂದು ಅಲ್ಲಿ ರಸ್ತೆಗಳು ಸರಿಯಿಲ್ಲ, ನೀರು ಸರಬರಾಜು ಸರಿಯಾಗಿಲ್ಲ, ವಿದ್ಯುತ್ ಸರಿಯಾಗಿಲ್ಲ ಎನ್ನುವ ಮಾತನ್ನು ನಮಗೆಲ್ಲಾ ತಾವು ಹೇಳಿದ್ದೀರಿ. ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ತುಂಗಭದ್ರಾ ಪ್ರಾಜೆಕ್ಟ್‌ನ ಪ್ರದೇಶಕ್ಕೆ ಮತ್ತು ಬಸವ ಸಾಗರ ಜಲಾಶಯಕ್ಕೆ ಬರತಕ್ಕಂಥ ನೀರಿನ ಉಪಯೋಗ ರೈತರಿಗೆ ಸರಿಯಾಗಿ ಆಗಬೇಕಾದರೆ ಅಲ್ಲಿ ನಮಗೆ ಅತೀ ಮುಖ್ಯವಾಗಿ ಬೇಕಾಗಿರುವಂಥದ್ದರ ಬಗ್ಗೆ ನೂತನವಾಗಿ ಸಚಿವರಾಗಿರುವಂತಹ ಮಾನ್ಯ ವೆಂಕಟರಾವ್ ನಾಡಗೌಡರವರ ಜೊತೆಯಲ್ಲಿ ನಾಲ್ಕು ದಿವಸಗಳ ಹಿಂದೆ ಮಾತನಾಡಿದ್ದೇನೆ, ಇವತ್ತು ಮಾತನಾಡಿದ್ದೇನೆ. ತುಂಗಭದ್ರಾ ಪ್ರಾಜೆಕ್ಟ್‌ನ 45 ವರ್ಷ ಹಳೆಯ ಪ್ರಾಜೆಕ್ಟ್‌ನಲ್ಲಿ ಕೆಲಸ ಮುಗಿದು ಹೋಗಿದೆ. ಈಗೇನು ಅಲ್ಲಿ ರಿಪೇರಿ ಕೆಲಸ ಮತ್ತು ನಿರ್ವಹಣೆಯ ಕೆಲಸ ಇಲ್ಲ. ಅಲ್ಲಿ ಕಾಂಕ್ರೀಟ್ ಎಲ್ಲಾ ಮಾಡಿ ಮುಗಿಸಿದರು. ಹಾಗಾಗಿ, ಈಗ ಅಲ್ಲಿಗೆ ಯಾವ ಇಂಜಿನಿಯರ್ ಬರುವುದಕ್ಕೆ ತಯಾರಿಲ್ಲ. ಹಾಗಾಗಿ ಅಲ್ಲಿ ಶೇಕಡ 30 ರಷ್ಟು ಅಧಿಕಾರಿಗಳು ಇಲ್ಲ. Chief Engineer, Executive Engineer, Assistant Engineer, Junior Engineer, ಇವರ್‍ಯಾರು ಅಲ್ಲಿ ಇಲ್ಲ. ಈ ರೀತಿಯ ಪರಿಸ್ಥಿತಿ ಅಲ್ಲಿದೆ. 16ನೇ ತಾರೀಖು All India Congress Committee meeting ನಿಗದಿ ಮಾಡಿದರೆ ಮೊದಲು ಸಚಿವರ ಹತ್ತಿರ ಮಾತನಾಡಿ.....

**ಸಭಾಪತಿಯವರು:-** ಮಾನ್ಯ ಬೋಸ್‌ರಾಜ್‌ರವರೇ, ಅಲ್ಲಿ ಟೆಂಡರ್ ಹಾಕುವಾಗ ಬರುತ್ತಾರೆ. ಟೆಂಡರ್ ಹಾಕಿ ವಾಪಸ್ ಬರುತ್ತಾರೆ.

**ಶ್ರೀ ಎಸ್.ಎಸ್.ಬೋಸ್‌ರಾಜ್:-** ಮಾನ್ಯ ಸಭಾಪತಿಯವರೇ, ಸಾಲ ಮನ್ನಾ ಎಂದು ಹೇಳುವುದರ ಜೊತೆಗೆ ರೈತನು ಕೃಷಿ ಮಾಡುವುದಕ್ಕೆ ಏನು ಬೇಕು ಎಂಬುವುದನ್ನು ವಿಚಾರ ಮಾಡಿ ಆ ದಿಸೆಯಲ್ಲಿ ಅವರಿಗೆ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಈಗ ನಾವು 42 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದೇವೆ. ನಮ್ಮ ಬಜೆಟ್‌ನ 2 ಲಕ್ಷ ಕೋಟಿ ರೂಪಾಯಿಗಳಲ್ಲೇ ಮಾಡಬೇಕಲ್ಲವೆ? ಆ 42 ಸಾವಿರ ಕೋಟಿ divert ಆಗಿರುತ್ತದೆ. ನೀರಾವರಿಗೆ, ಪಂಚಾಯತ್ ರಾಜ್‌ಗೆ ಮತ್ತು ರಸ್ತೆಗಳಿಗೆ ಏನು ಮಾಡಬೇಕು? ನಮ್ಮ ಹಣವನ್ನು ಈ ರೀತಿ divert ಮಾಡುವುದರ ಮುಖಾಂತರ ಎಲ್ಲರೂ ರೈತರ ಸಾಲ ಮನ್ನಾ ಮಾಡಬೇಕು, ರೈತರ ಸಾಲ ಮನ್ನಾ ಮಾಡದಿದ್ದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಹಣ ಎಲ್ಲಿಂದ ತರುತ್ತಾರೆ? ತೆರಿಗೆ ಹಾಕಿದರೆ ತೆರಿಗೆ ಏಕೆ ಹಾಕಿದ್ದೀರಿ ಎಂದು ಕೇಳುತ್ತಾರೆ. ಹಾಗಾಗಿ ರೈತರಿಗೆ ಶಕ್ತಿ ಕೊಡಬೇಕೆನ್ನುವುದು ನಮ್ಮೆಲ್ಲರ ಭಾವನೆಯಾಗಿದೆ. ಅವರಿಗೆ ಮೂಲಭೂತವಾಗಿ ಬೇಕಾಗಿರುವುದು ನೀರು, ವಿದ್ಯುತ್. ರೈತರಿಗೆ ಸಬ್ಸಿಡಿ ಕೊಡುತ್ತಾರೆಯೋ, ಸಾಲ ಮನ್ನಾ ಮಾಡುತ್ತಾರೆಯೋ ಅದು ಬೇರೆ. ನಮಗೆ ಬೇಕಾಗಿರುವಂತಹ ರೀತಿಯಲ್ಲಿ ನಾಲೆಗಳ ಮುಖಾಂತರ, lift irrigation ಮುಖಾಂತರ ಮತ್ತು ground water, ಅಂದರೆ ವಿದ್ಯುತ್‌ನ್ನು ಕೊಡುವುದರ ಮುಖಾಂತರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಭೂತವಾಗಿ ಮಾಡಿದರೆ ಬಂದಿರತಕ್ಕಂಥ ಬೆಳೆಗೆ ಸರ್ಕಾರ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ನೀಡುವುದನ್ನು ಮಾಡಬೇಕು. Market stabilise ಮಾಡುವಂತಹ ರೀತಿಯಲ್ಲಿ ಮಾಡಬೇಕು ಎಂಬುದೇ ಮೂಲಭೂತವಾಗಿ ಇರತಕ್ಕಂಥ ರೈತರ ಬೇಡಿಕೆ. ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ನಾವು ಪ್ರಯತ್ನ ಮಾಡಬೇಕು. ಅದೇ ರೀತಿಯಲ್ಲಿ NRBC ಇಂದು ಒಂದು link canal ಆಗಬೇಕೆಂದು ಬಹಳ ವರ್ಷಗಳಿಂದ ಕೇಳುತ್ತಿದ್ದೇವೆ. ಇವತ್ತು canal ಹೊಸದಾಗಿ ನಿರ್ಮಾಣವಾಗಿದೆ. ಇದರ ಸಲುವಾಗಿ ಶ್ರೀ ರಾಕೇಶ್ ಸಿಂಗ್‌ರವರ ಜೊತೆಯಲ್ಲಿ ಎರಡು–ಮೂರು ಸಲ ಸಭೆಯನ್ನು ಮಾಡಿದ್ದೇವೆ. NRBC ಯಿಂದ Ganekal reservoir ಗೆ ಸಂಪರ್ಕ ಕೊಡಬೇಕೆಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ಆಶ್ವಾಸನೆಯನ್ನು ಕೊಟ್ಟಿದ್ದರು. ಅಧಿಕಾರಿಗಳು, ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಕೆಲಸ ಈಗಿನ ಸರ್ಕಾರದಿಂದ ಆಗಬೇಕು. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. NRBC 160 ಕಿಲೋ ಮೀಟರ್‌ನಿಂದ Ganekal reservoir ಗೆ link canal ಮಾಡಬೇಕು. ಅದು ಕೇವಲ 720 ಮೀಟರ್ ಇದೆ. ಅದನ್ನು ಮಾಡಬೇಕೆಂಬುದು ರೈತರ ಬೇಡಿಕೆಯಾಗಿದೆ. ಕುಡಿಯುವ ನೀರು ಸರಬರಾಜನ್ನು ರಾಯಚೂರು ನಗರಕ್ಕೆ ಮತ್ತು 37 ಗ್ರಾಮಗಳಿಗೆ link canal ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಅತೀ ಮುಖ್ಯವಾಗಿ ಹೈದರಾಬಾದ್–ಕರ್ನಾಟಕ ಭಾಗದ ಬಗ್ಗೆ ತಮಗೆಲ್ಲರಿಗೂ ಸಾಕಷ್ಟು ಕಳಕಳಿ ಇದೆ. ಅದು ಹಿಂದುಳಿದ ವಿಭಾಗ. ಅನೇಕ ವರ್ಷಗಳ ಪ್ರಯತ್ನ ಮತ್ತು ನಮ್ಮ ನಾಯಕರುಗಳಾಗಿರುವಂತಹ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ದಿವಂಗತ ಧರ್ಮಸಿಂಗ್‌ರವರು ಹಾಗೂ ಅವರ ಜೊತೆಯಲ್ಲಿರುವಂತಹ ಎಲ್ಲಾ ಜನಪ್ರತಿನಿಧಿಗಳು, ಆ ಭಾಗದ ಅನೇಕ ಸಂಘ–ಸಂಸ್ಥೆಗಳು, ಜನರ ಒತ್ತಾಯದಂತೆ ಅನುಚ್ಛೇದ 371ಕ್ಕೆ ತಿದ್ದುಪಡಿ ಮಾಡುವುದಕ್ಕೆ, N.D.A. (National Democratic Alliance) ಸರ್ಕಾರ ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಪತ್ರದ ಮುಖಾಂತರ ಹೇಳಿದರು. ಆಗ ನಾನು ಶಾಸಕನಾಗಿದ್ದೆ. ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ (HKRDB) Hyderabad-Karnataka Region Development Board Chairman ಆಗಿ ನಾನು ಐದು ವರ್ಷ ಕೆಲಸ ಮಾಡಿದ್ದೇನೆ. ಮೂರು ಸಲ ದೆಹಲಿಗೆ ಹೋಗಿ ಬಂದೆವು. ಶ್ರೀಮಾನ್ ಲಾಲ್ ಕೃಷ್ಣ ಅಡ್ವಾಣಿಯವರು, HKRDB ಕಛೇರಿಯ ಬಳಿ ಇರುವ Aiwan-E-Shahi Guest House ನಲ್ಲಿ ಇದ್ದಾಗ ಶ್ರೀಮಾನ್ ಯಡಿಯೂರಪ್ಪನವರು, ಶ್ರೀಮಾನ್ ಅನಂತಕುಮಾರ್‌ರವರು ಜೊತೆಯಲ್ಲಿದ್ದರು. ನಮಗೆ ಊಟದ ಸಮಯದ ನಂತರ ಅವರನ್ನು ಭೇಟಿಯಾಗುವುದಕ್ಕೆ ಅವಕಾಶ ಕೊಟ್ಟಿದ್ದರು. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಶ್ರೀಮಾನ್ ಧರ್ಮಸಿಂಗ್‌ರವರು, ಶ್ರೀಮಾನ್ ಖಮರುಲ್ಲ ಇಸ್ಲಾಂ ರವರು, ಶ್ರೀಮಾನ್ ತಂಗಾರವರು, ಶ್ರೀಮಾನ್ ಉದಾಸಿಯವರು, ಇವರೆಲ್ಲರೂ ಸೇರಿ ಸಮಯವನ್ನು ಕೇಳಿದ್ದೆವು. ಅವರನ್ನು ಭೇಟಿ ಮಾಡುವುದಕ್ಕೆ ಸಮಯ ಕೊಟ್ಟರು. ಊಟ ಮಾಡಿ ಕೈಯನ್ನು ಒರೆಸಿಕೊಳ್ಳುತ್ತಿದ್ದರು. ಆಯಿಯೇ ಧರ್ಮಸಿಂಗ್‌ಜೀ, ಖರ್ಗೆಜೀ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆದರು. ಸರ್, ನಾವು ಇದಕ್ಕೆ ನಿಯೋಗ ಬಂದಿದ್ದೇವೆಂದು ಹೇಳಿದೆವು. "ಆಪ್‌ಕೋ ಮಾಲುಮ್ ಹೈ ಕೈಸೇ ದೇ ಸಕ್ತೇ ಹೈ" ಎಂದು ಹೇಳಿದರು. ಮಾನ್ಯ ಅನಂತಕುಮಾರ್‌ರವರು ಮತ್ತು ಮಾನ್ಯ ಯಡಿಯೂರಪ್ಪನವರು ಅವರ ಪಕ್ಕದಲ್ಲಿಯೇ ಇದ್ದರು.

(ಮುಂದು)

188/10–07–2018/ಬಿಕೆಪಿ–ಕೆಎಸ್/5–00

**ಶ್ರೀ ಎನ್.ಎಸ್.ಬೋಸ್‌ರಾಜು(ಮುಂದು. . )**

ಈ ರೀತಿಯ ಪ್ರತಿಕ್ರಿಯೆ ಸಿಕ್ಕಿತು. ಈ ದಿಸೆಯಲ್ಲಿ ಮಾನ್ಯ ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರ ಇದ್ದಂತಹ ಸಮಯದಲ್ಲಿ ಪತ್ರವನ್ನು ಸಹಿತ ಬರೆದಿದ್ದೆ. ಆ ಸಮಯದಲ್ಲಿ ನಾನು HKDB (Hyderabad Karnataka Development Board) ನ ಅಧ್ಯಕ್ಷನಾಗಿದ್ದೆ. ಹೀಗಾಗಿ, ಆ ಭಾಗದ ಮಾಹಿತಿ ನನಗೆ ಗೊತ್ತಿದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಸಂದೇಶ ಹೋಗಬಾರದು. ಮಾನ್ಯ ಸದಸ್ಯರು ಕೊನೆಯದಾಗಿ, ಆ ಸಮಯದಲ್ಲಿ ಯಾರು ಮುಖ್ಯಮಂತ್ರಿಗಳಿದ್ದರು ಎಂದು ಉಲ್ಲೇಖ ಮಾಡಿದರು. ಆ ಸಮಯದಲ್ಲಿ ಮಾನ್ಯ ಶ್ರೀ ಎಸ್.ಎಂ.ಕೃಷ್ಣ ರವರು ಮುಖ್ಯಮಂತ್ರಿಗಳಿದ್ದರು. ಆದರೆ, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪ್ರಸ್ತಾವನೆ ಹೋದಂತಹ ಸಂದರ್ಭದಲ್ಲಿನ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎನ್.ಎಸ್.ಬೋಸ್‌ರಾಜು ರವರಿಗೆ ನೆನಪು ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ವಿಧಾನಸಭೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಇರಲಿಲ್ಲ. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ಗೆ ಬಹುಮತವಿರಲಿಲ್ಲ. ಕೇಂದ್ರದಲ್ಲಿ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ 2/3rd majority ಅವರಿಗೆ ಇರಲಿಲ್ಲ. ಅದರೂ ಸಹ ಎಲ್ಲಾ ಪಕ್ಷಗಳು ಸೇರಿ 2/3rd majority ನಿಂದಾಗಿ ಲೋಕಸಭೆಯಲ್ಲಿ ಮಾಡಿರುವಂತಹದ್ದನ್ನು ಮತ್ತು ಕರ್ನಾಟಕ ರಾಜ್ಯದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಅಂದರೆ, ವಿಧಾನಮಂಡಲದಿಂದ unanimous resolution ನಿಂದಾಗಿ ಕೇಂದ್ರಕ್ಕೆ ಹೋಗಿದ್ದರಿಂದಾಗಿ ಈ ಒಂದು ಕೆಲಸ ಆಗಿದೆ. ಎರಡನೆಯದಾಗಿ, ಶ್ರೀಯುತ ಬೋಸ್‌ರಾಜು ರವರು ಆಗಲಿ ಅಥವಾ ಉಳಿದಂತಹ ನಮ್ಮ ನಾಯಕರುಗಳು ಲಾಲ್ ಕೃಷ್ಣ ಅಡ್ವಾಣಿಯವರು reject ಮಾಡಿದ್ದಾರೆ, ಕೇಂದ್ರ ಸರ್ಕಾರದವರು ರೀತಿಯಲ್ಲಿ ಹೇಳುವುದನ್ನು ಪರಿಪಾಠ ಮಾಡಿಕೊಂಡಿದ್ದಾರೆ.

(ಗೊಂದಲ)

ನಾನು ಹೇಳುವುದನ್ನು ಪೂರ್ಣಗೊಳಿಸುತ್ತೇನೆ. ನಾನು ಜವಾಬ್ದಾರಿಯಿಂದ ಹೇಳುತ್ತೇನೆ. ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ಎಸ್.ಎಂ.ಕೃಷ್ಣರವರು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಈ ಶಿಫಾರಸ್ಸನ್ನು ಮಾಡಬೇಕಾದರೆ, ಹೈದ್ರಾಬಾದ್–ಕರ್ನಾಟಕದ ಎಲ್ಲಾ ತಾಲ್ಲೂಕುಗಳು ಮತ್ತು ಇತರೆ ತಾಲ್ಲೂಕುಗಳು ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರೆದಿದ್ದರಿಂದ ಇದು ತಾಂತ್ರಿಕವಾಗಿ ತಪ್ಪಾಗುತ್ತದೆಂದು ಹೇಳಿ, ಇದನ್ನು ಪುನರ್ ಪರಿಶೀಲನೆ ಮಾಡಿ ಎಂದು ಆ ಪ್ರಸ್ತಾವನೆಯನ್ನು ವಾಪಸ್ಸು ಕಳುಹಿಸಿರುವುದಾಗಿದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಚರ್ಚೆ ಮಾಡುವುದು ಬೇಡ. ಒಟ್ಟಾರೆ, ನಮ್ಮ ನಾಯಕರುಗಳಾದ ಶ್ರೀಮತಿ ಸೋನಿಯಾ ಗಾಂಧಿಯವರು ಮತ್ತು ಶ್ರೀಮಾನ್ ರಾಹುಲ್ ಗಾಂಧಿಯವರು 2009 ರಲ್ಲಿ ನಡೆದಂತಹ ಸಂದರ್ಭದಲ್ಲಿ ಯಾದಗಿರಿಗೆ ಬಂದಂತಹ ಸಂದರ್ಭದಲ್ಲಿ ನಮ್ಮ ನಾಯಕರುಗಳು ಸೇರಿದಂತೆ ನಾವೆಲ್ಲರೂ ಅವರ ಜೊತೆಯಲ್ಲಿದ್ದೆವು. ಆ ಸಮಯದಲ್ಲಿ ಈ ಬಗ್ಗೆ ಅವರಲ್ಲಿ ವಿನಂತಿ ಮಾಡಿದಂತಹ ಸಂದರ್ಭದಲ್ಲಿ ಅವರು ಈ ಬಗ್ಗೆ ಬೋಲ್ಡ್ ಆಗಿ ಆ ಒಂದು ಸಭೆಯಲ್ಲಿ ಒಂದು ಹೇಳಿಕೆಯನ್ನು ಮಾಡಿದರು. "ಈ ಭಾಗಕ್ಕೆ ಅನ್ಯಾಯವಾಗಿದೆ ಎಂದು ನಮಗೆ ಅರಿವಾಗಿದ್ದು, ಈ ಬಾರಿ ಯುಪಿಎ ಸರ್ಕಾರ ಬಂದರೆ 371(ಜೆ) ಅನುಚ್ಛೇದ ಗೆ ವಿಶೇಷ ಸ್ಥಾನಮಾನ ಕೊಡಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆಂದು ಅಶ್ವಾಸನೆಯನ್ನು ಕೊಟ್ಟಿದ್ದರು. ಆ ವಿಚಾರವನ್ನು ಅಂದಿನ ಬಹಿರಂಗ ಸಭೆಯಲ್ಲಿ ಅವರು ಹೇಳಿದ್ದಾರೆ. ತದನಂತರ ಯುಪಿಎ ಸರ್ಕಾರ ಬಂದ ತಕ್ಷಣವೇ ಆ ವಿಚಾರವಾಗಿ ನಮ್ಮ ನಾಯಕರುಗಳು ಒತ್ತಾಯ ಮಾಡುವ ಮೂಲಕ ಇವತ್ತು ಅನುಚ್ಛೇದ 371(ಜೆ) ಸಿಕ್ಕಿದೆ. ಇದೇ ಸಂದರ್ಭದಲ್ಲಿ ನಿಮ್ಮ ಸರ್ಕಾರ ಹೋಗಿ ನಮ್ಮ ಸರ್ಕಾರ ಬಂದಿದೆ. ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಈ ಸಂಬಂಧ rules frame ಮಾಡಿ, ಅದನ್ನು ಜಾರಿಗೆ ತರುವಂತಹ ಕೆಲಸವನ್ನು ಮಾಡಿ 1000 ಕೋಟಿ ರೂಪಾಯಿಗಳನ್ನು ಕೊಡುವುದರ ಜೊತೆಗೆ ಮತ್ತೆ ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರ ನೇತೃತ್ವದಲ್ಲಿ ನಾವು ಕೇಳಿದಂತಹ ಸಮಯದಲ್ಲಿ 1500 ಕೋಟಿ ರೂಪಾಯಿಗಳನ್ನು ಮಾಡಿರುವುದು ನಮ್ಮೆಲ್ಲರ ಗಮನದಲ್ಲಿದೆ. ಇವತ್ತು ಅಲ್ಲಿ ಏನು ಪರಿಸ್ಥಿತಿ ಇದೆ ಎಂದರೆ, ಸಮಯಕ್ಕೆ ತಕ್ಕಂತೆ ಯಾವ ರೀತಿಯಲ್ಲಿ ಬೇಡಿಕೆ ಇದೆಯೋ ಆ ಬೇಡಿಕೆಗೆ ತಕ್ಕಂತೆ ಇವತ್ತು ಕೆಲಸಗಳು ಆಗುತ್ತಿಲ್ಲವೆನ್ನುವ ಅಭಿಪ್ರಾಯ ನಮ್ಮೆಲ್ಲರಲ್ಲಿ ಇದೆ. ಇವತ್ತು ನಮ್ಮ ಉಪ ಮುಖ್ಯಮಂತ್ರಿಗಳು ಹಾಗೂ ಯೋಜನಾ ಸಚಿವರು ಇಲ್ಲಿ ಬಂದಿದ್ದಾರೆ. ಈ ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯೂ ಸಹ ಅವರ ಅಧೀನದಲ್ಲಿ ಬರುತ್ತದೆ. ಆ ಭಾಗದಲ್ಲಿ ಕೆಲಸ ಕಾರ್ಯಗಳು ಶೀಘ್ರಗತಿಯಲ್ಲಿ ನಡೆಯಬೇಕಾದರೆ, ಆ ಭಾಗಕ್ಕೆ ವಿಶೇಷ ಸ್ಥಾನಮಾನ ಸಿಕ್ಕಿರುವುದು ಉಪಯೋಗವಾಗಬೇಕಾದರೆ ಅದಕ್ಕೆ ಮುಖ್ಯವಾಗಿ ಒಬ್ಬ ಸೀನಿಯರ್ ಐ.ಎ.ಎಸ್ ಅಧಿಕಾರಿಯವರು ಪ್ರತ್ಯೇಕವಾಗಿ ಕಾರ್ಯದರ್ಶಿಯಾಗಬೇಕು. ಇಲ್ಲಿಯವರೆಗೂ ಸಹ ಅಲ್ಲಿ ಇರತಕ್ಕಂತಹ ವಿಭಾಗೀಯ ಆಯುಕ್ತರಿಗೆ ಆ ಬೋರ್ಡ್ ಪ್ರಾರಂಭವಾದಾಗಿನಿಂದ ಅವರನ್ನೇ ಕಾರ್ಯದರ್ಶಿಯನ್ನಾಗಿ ಮಾಡಿದರು. ಆದರೆ, ಅವರು ಇದಕ್ಕೆ ತಮ್ಮ ಹೆಚ್ಚಿನ ಸಮಯವನ್ನು ಕೊಡಲಿಕ್ಕೆ ಆಗುತ್ತಿಲ್ಲ. ಇವತ್ತು ಅಲ್ಲಿ ಯಾರು ಕಾರ್ಯದರ್ಶಿಗಳೇ ಇಲ್ಲ. ಅಲ್ಲಿಗೆ ಈ ಹಿಂದೆ ಶ್ರೀಯುತ ಪಂಕಜ್ ಕುಮಾರ್ ಎನ್ನುವವರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿದರು, ಆದರೆ, ಅವರು ಅಲ್ಲಿಂದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಬದಲಾವಣೆಯಾಗಿ ಪ್ರಸ್ತುತ ಅಲ್ಲಿ ಯಾರೂ ಸಹ ಇರುವುದಿಲ್ಲ. ಇದರ ಜವಾಬ್ದಾರಿಯನ್ನು ಯಾರು ವಹಿಸುತ್ತಾರೆ? ಹೀಗಾಗಿ, ಕಳೆದ 3–4 ತಿಂಗಳುಗಳಿಂದ ಅಲ್ಲಿ ಯಾವುದೇ ಕೆಲಸಗಳಾಗುತ್ತಿಲ್ಲ. ಅಲ್ಲಿ ಸಾಕಷ್ಟು ಹಣ ಇದೆ. ಜನರ ಬೇಡಿಕೆ ಇದೆ. ಜೊತೆಗೆ ಅಲ್ಲಿ procedure ಸಹ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ lengthy ಆಗಿದೆ. ಜೊತೆಗೆ ಅಲ್ಲಿ ಕೊಡುತ್ತಿರುವಂತಹ ಏಜೆನ್ಸಿಗಳು ಅಂದರೆ, PWD (Public Works Department) ಇರಬಹುದು, ಪಿಆರ್‌ಡಿಎಲ್ ಇರಬಹುದು, Land army ಇರಬಹುದು ಈ ರೀತಿಯಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಕೆಲಸಗಳನ್ನು ಕೊಡುವುದರ ಮೂಲಕ ಇವತ್ತು ನಾವು ಏನು ಪ್ರಾರಂಭ ಮಾಡಬೇಕೆಂದು ಇದ್ದೇವೆ, ಅವುಗಳನ್ನು ನಿಗದಿತ ಸಮಯದಲ್ಲಿ ಮುಗಿಸುವುದಕ್ಕೆ ಅವಕಾಶವಾಗುತ್ತಿಲ್ಲ. ಹೀಗಾಗಿ, ಇದನ್ನು ಸರ್ಕಾರ ತಕ್ಷಣ ಗಮನಹರಿಸಬೇಕು. ಅದಕ್ಕೋಸ್ಕರ ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಕಾರ್ಯದರ್ಶಿಯವರನ್ನು ನೇಮಕ ಮಾಡುವುದರ ಮೂಲಕ ಆ ಭಾಗದ ಜನರ ಅಪೇಕ್ಷೆಗಳನ್ನು ಈಡೇರಿಸುವಲ್ಲಿ, ಸ್ಪಂದಿಸುವಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಈಗಾಗಲೇ ಆ ಭಾಗದಲ್ಲಿ survey ಆಗಿದೆ. ಅಲ್ಲಿ ಶಿಕ್ಷಕರ ನೇಮಕಾತಿ ಇರಬಹುದು, 4750 ಶಿಕ್ಷಕರುಗಳನ್ನು ಅಲ್ಲಿ ಇವತ್ತು ನೇಮಕ ಮಾಡಬೇಕಾಗಿದೆ. ಅಲ್ಲಿಗೆ ನೇಮಕ ಮಾಡುವಲ್ಲಿ ಈಗಾಗಲೇ 2770 ಶಿಕ್ಷಕರುಗಳಿಗೆ ಸಂದರ್ಶನವಾಗಿದೆ ಎನ್ನುವ ಮಾತನ್ನು ಹಿಂದಿನ ಸಚಿವರು ಹೇಳಿದ್ದಾರೆ. ಅತಿ ಮುಖ್ಯವಾಗಿ ಆ ಭಾಗದ ಶೈಕ್ಷಣಿಕ ವಿಚಾರವಾಗಿ, ಆರೋಗ್ಯದ ವಿಚಾರವಾಗಿ ಆದ್ಯತೆ ಕೊಡಬೇಕಾಗಿದೆ. ನಿನ್ನೆ ಮಾನ್ಯ ಆರೋಗ್ಯ ಸಚಿವರು ನಿನ್ನೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಿದರು. ಮಂಡ್ಯ, ಮೈಸೂರು, ಹಾಸನ, ಉಡುಪಿ, ಮಂಗಳೂರು ಭಾಗಗಳಲ್ಲಿ ಎಷ್ಟು ಜನಸಂಖ್ಯೆಗೆ ಒಂದು Primary Health Centres (PHCs) ಇದೆ ಎಂದು ಹೇಳುತ್ತಾ, ಅವರು ತಮ್ಮ ಬಿಜಾಪುರ ಜಿಲ್ಲೆಯ ವಿಷಯವಾಗಿ ಹೇಳಿಕೊಂಡರು. ರಾಯಚೂರು ಜಿಲ್ಲೆಗೆ ಬಂದು ನೋಡಿದರೆ ನೀವು ಅಲ್ಲಿಗೆ ಮತ್ತು ಇಲ್ಲಿಗೆ ಹೋಲಿಕೆ ಮಾಡಲಿಕ್ಕೆ ಸಾಧ್ಯವಿಲ್ಲ. ಕಳೆದ ಬಾರಿ ನಾನು ಈ ವಿಷಯವಾಗಿ ಪ್ರಶ್ನೆ ಮಾಡಿದೆ. ಉಡುಪಿ, ಮಂಗಳೂರಿನಲ್ಲಿ 21 ಮಕ್ಕಳಿಗೆ ಒಂದು ಶಾಲೆ ಇದೆ. ನಮ್ಮಲ್ಲಿ 19 ಮಕ್ಕಳಿಗೆ ಒಂದು ಶಾಲೆ ಇದೆ. ಆ ಭಾಗದಲ್ಲಿ ಏನಿದೆ, 40 ಸಾವಿರ ಜನಸಂಖ್ಯೆಗೆ ಒಂದು PHC ಆಗಬೇಕೆಂದು ಇದೆ. ಇವತ್ತು ಅಲ್ಲಿ 70-80 ಸಾವಿರ ಜನಸಂಖ್ಯೆಗೆ ಒಂದು PHCs ಗಳಿಲ್ಲ. ಒಂದು ವೇಳೆ PHCs ಗಳಿದ್ದರೂ ಸಹ ಅಲ್ಲಿ ಡಾಕ್ಟರ್‌ಗಳಿಲ್ಲ. ಹೀಗಾಗಿ ಮೂಲಭೂತ ಸೌಲಭ್ಯಗಳನ್ನು ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅಲ್ಲಿಗೆ ವಿಶೇಷ ಸ್ಥಾನ ಮಾನ ಸಿಕ್ಕಿದ ನಂತರ ಸರ್ಕಾರದಲ್ಲಿರುವಂತಹ ಎಲ್ಲಾ ಇಲಾಖೆಗಳು ಸಹಿತ ನೇರವಾಗಿ, ಮೊದಲನೆಯ ಪ್ರಯತ್ನವಾಗಿ ಅಭಿವೃದ್ಧಿ ಮಾಡಬೇಕಾಗಿರುತ್ತದೆ. ಸಹಜವಾಗಿ ತಮ್ಮ ಜಿಲ್ಲೆಯ ಸಚಿವರುಗಳೇ ಜಿಲ್ಲೆಯ ಉಸ್ತುವಾರಿ ಸಚಿವರುಗಳಾಗುತ್ತಾರೆ. ಸಹಜವಾಗಿ ಅವರುಗಳು ತನ್ನ ಕ್ಷೇತ್ರವನ್ನೇ ನೋಡಿಕೊಳ್ಳುವಂತಹ ಕೆಲಸವನ್ನು ಮಾಡುತ್ತಾರೆ. ಆದರೆ, ವಿಶೇಷ ಸ್ಥಾನಮಾನ ಇರುವಂತಹ ಪ್ರದೇಶಕ್ಕೆ ಎಲ್ಲರೂ ಸೇರಿ ಆದ್ಯತೆ ಮೇರೆಗೆ ಆ ಭಾಗದ ಕೊರತೆಗಳನ್ನು ನಿವಾರಣೆ ಮಾಡುವಂತಹ ಪ್ರಯತ್ನ ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ನಮ್ಮ ಸರ್ಕಾರ ಹೆಚ್ಚಿನ ಗಮನಹರಿಸಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಆ ಭಾಗದಲ್ಲಿ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್ ತೆರೆಯಬೇಕೆಂದು ಹಿಂದೆ ಒಂದು ಬಾರಿ ಬೋರ್ಡ್‌ನಲ್ಲಿ ತೀರ್ಮಾನ ತೆಗೆದುಕೊಂಡೆವು. ಮುಖ್ಯ ಇಂಜಿನೀಯರ್,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯನಿರ್ವಾಹಕ ಇಂಜನೀಯರ್ ಈ ರೀತಿಯಲ್ಲಿ ತಕ್ಷಣವೇ ಕೆಲಸಗಳನ್ನು ನಿಗದಿತ ಸಮಯದಲ್ಲಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಕಳೆದ ಸರ್ಕಾರ ಈ ರಾಜ್ಯದಲ್ಲಿರುವಂತಹ ಲಂಬಾಣಿ ತಾಂಡಗಳಿಗೆ, ಹಟ್ಟಿಗಳ ಸಲುವಾಗಿ 1568 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಿದ್ದಾರೆ. ಆದರೆ, ಇಲ್ಲಿಯವರೆಗೂ ಅದರ ಬಗ್ಗೆ ಯಾವ ರೀತಿಯಾಗಿ ಅದನ್ನು ವಿಭಜನೆ ಮಾಡಲಿಕ್ಕೆ, ಒಂದು village ಎಂದು ಘೋಷಣೆ ಮಾಡಲಿಕ್ಕೆ ಏನೇನು ಪ್ರಕ್ರಿಯೆ ಮಾಡಬೇಕೋ ಅದನ್ನು ಇನ್ನೂ ಮಾಡಿರುವುದಿಲ್ಲ. ಆ ಕೆಲಸವನ್ನು ತೀವ್ರಗತಿಯಲ್ಲಿ ಮಾಡಬೇಕು. ಅದರ ಜೊತೆಯಲ್ಲಿ 50 ನೂತನ ತಾಲ್ಲೂಕುಗಳನ್ನು ಪ್ರಾರಂಭ ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿಯೂ ಸಹ ಎರಡು ತಾಲ್ಲೂಕುಗಳಾಗಿವೆ. ಆದರೆ, ಇಲ್ಲಿಯವರೆಗೂ ಕೂಡ ಅ ತಾಲ್ಲೂಕುಗಳಿಗೆ ಮೂಲಭೂತ ಸೌಲಭ್ಯಗಳಿಲ್ಲ. ಅಲ್ಲಿಗೆ ಅಧಿಕಾರಿಗಳನ್ನು ನೇಮಕ ಮಾಡುವುದಾಗಲಿ, ಅದಕ್ಕೆ ಬೇಕಾಗಿರುವಂತಹ ಕಟ್ಟಡಗಳು ಆಗಲಿ, ಈ ರೀತಿಯಲ್ಲಿ ಜನರಿಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ. ರೆಕಾರ್ಡ್‌ಗಳನ್ನು ವರ್ಗಾವಣೆ ಮಾಡುವಂತಹ ಕೆಲಸ ಮಾಡುವುದರ ಮೂಲಕ ನೂತನ ತಾಲ್ಲೂಕುಗಳು ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

ಮತ್ತೆ, ನಮ್ಮಲ್ಲಿ KIADB (Karnataka Industrial Area Development Board) ನವರು ನಮ್ಮ ರಾಜ್ಯದಲ್ಲಿ Growth centres ಗಳನ್ನು ಮಾಡಿರತಕ್ಕಂತಹ ಕೇಂದ್ರ ಸರ್ಕಾರ, ರಾಯಚೂರು, ಹಾಸನ ಮತ್ತು ಧಾರವಾಡದಲ್ಲಿ ಮಾಡಿದೆ. Growth centres ಇನ್ನು ಹೆಚ್ಚಿನ ರೀತಿಯಲ್ಲಿ flats ಕೊಡಬೇಕೆಂದು ಹೇಳಿ ಹೆಚ್ಚಿನ ರೀತಿಯಲ್ಲಿ ಜನರ ಬೇಡಿಕೆ ಇದೆ. ಅದಕ್ಕೆ ಒಂದು land bank ಮಾಡಬೇಕೆನ್ನುವ ಬೇಡಿಕೆ ಇತ್ತು. ಹಿಂದಿನ ಸಚಿವರು ಸಹ ಈ ವಿಚಾರದಲ್ಲಿ ಮಾತನ್ನು ಕೊಟ್ಟಿದ್ದಾರೆ. land bank ಮಾಡಬೇಕೆಂದು ಹೇಳಿ, ಅಲ್ಲಿ survey ಮಾಡಿ ಆ ಸಂಬಂಧ 3200 ಎಕರೆಯ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಅದನ್ನು ಸಹಿತ ಗಮನಹರಿಸಬೇಕಾಗಿದೆ. ಪ್ರತಿಯೊಂದು ಕಡೆ ನಾವು ಏನಾದರೂ ಮಾಡಬೇಕೆಂದರೆ ನಮಗೆ ಲ್ಯಾಂಡ್ ಸಿಕ್ಕುತ್ತಿಲ್ಲ. ಕೃಷ್ಣ ನದಿಯಲ್ಲಿ ನೀರು ಇದೆ. 3200 ಮ್ಯಾಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಅಲ್ಲಿಂದ ನೀವು ಯಾವುದೇ ಭಾಗಕ್ಕೂ ಹೋದರೂ ಸಹಿತ ರೈಲ್ವೇ ಸಂಪರ್ಕ ಇದೆ. ದೆಹಲಿಗೆ ಹೋಗಬೇಕಾದರೆ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಇದೆ, ಬೆಂಗಳೂರಿಗೆ ಬರಬೇಕಾದರೆ, ಬಾಂಬೆಗೆ ಹೋಗಬೇಕಾದರೆ ಈ ರೀತಿಯಲ್ಲಿ ಎಲ್ಲಾ ಕಡೆಯೂ ರೈಲ್ವೇ ಸಂಪರ್ಕವಿದೆ. ಜೊತೆಗೆ ಹತ್ತಿರದಲ್ಲಿಯೇ ಎರಡೂವರೆ ತಾಸಿನಲ್ಲಿ ಹೈದ್ರಾಬಾದ್ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಇದೆ. ಹೀಗಾಗಿ, agricultural based industries ಮಾಡುವುದರ ಮೂಲಕ ಇವತ್ತು ರಾಯಚೂರು ಜಿಲ್ಲೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಅವಕಾಶವಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಅನೇಕ ವಿಷಯಗಳಿವೆ. ಆದರೂ ಸಹ ಸಮಯಾವಕಾಶ ಕಡಿಮೆ ಇರುವುದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಲಿಕ್ಕೆ ಮುನ್ನ ಒಂದು ವಿಚಾರವನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ಮಹಿಳಾ ಸದಸ್ಯರುಗಳಾದ ನಾವು ಇಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದೇವೆ. 75 ಜನ ಸದಸ್ಯರ ಪೈಕಿ 5 ಜನ ಮಹಿಳೆಯರಿದ್ದೇವೆ. ಅದರಲ್ಲಿ ಒಬ್ಬರು ಸಚಿವರಾಗಿದ್ದಾರೆ. ತಾವು ಬೆಳಿಗ್ಗೆ 10 ಗಂಟೆಗೆ ಸದನವನ್ನು ಕರೆದಿದ್ದೀರಿ. ತಾವು 10 ಗಂಟೆಗೆ ಸದನವನ್ನು ಕರೆದಿದ್ದರಿಂದ ನಾವು 8–00 ಗಂಟೆ 8–30 ಗಂಟೆಗೆ ಮನೆಯನ್ನು ಬಿಡಬೇಕು. ಬೆಳಿಗ್ಗೆ ಎಲ್ಲಾ ಜವಾಬ್ದಾರಿಗಳನ್ನು ಮುಗಿಸಿಕೊಂಡು ನಾವು ಹೆಣ್ಣು ಮಕ್ಕಳು ಇಲ್ಲಿಗೆ ಬರಬೇಕು. ಮತ್ತೆ ನಾವು ಮನೆಗೆ ಹೋದ ಮೇಲೆ ಅದೇ ಜವಾಬ್ದಾರಿಗಳನ್ನು ಮಾಡಬೇಕು. ಗಂಡಸರ ಬಗ್ಗೆ ನಮಗೆ ಬೇಜಾರಿಲ್ಲ. ನೀವುಗಳೆಲ್ಲರೂ ಉಟ್ಟ ಬಟ್ಟೆ ಬಿಟ್ಟು ಬಂದು ಬಿಡುತ್ತೀರಿ.

**ಸಭಾಪತಿಯವರು:–** ನಿಮಗೆ ಏನಾಗಬೇಕೆಂದು ಹೇಳಿ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡಲು ಮೊದಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

**ಸಭಾಪತಿಯವರು:–** ನಿಮ್ಮ ಪಕ್ಷದವರು ನೀವು ಮಾತನಾಡುತ್ತೀರಿ ಎಂದೇಳಿ ನಿಮ್ಮ ಹೆಸರನ್ನೇ ಕೊಟ್ಟಿಲ್ಲ. ಆದರೂ ಸಹ ತಮಗೆ ಮಾತನಾಡಲು ನಾನು ಅವಕಾಶವನ್ನು ಕೊಡುತ್ತೇನೆ.

**ಶ್ರೀಮತಿ ತಾರಾಅನೂರಾಧ:–**ಮಾನ್ಯ ಸಭಾಪತಿಯವರೇ, ತಾವುಗಳು ಮಾತೃ ಹೃದಯ ಪಕ್ಷದಿಂದ ಬಂದವರು. ಮಾತೆಯರಿಗೆ ನೀವು ಅವಕಾಶವನ್ನು ಕೊಡಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ಆಯಿತು, ನಿಮ್ಮವರು 4 ಮಂದಿ ಇದ್ದೀರಿ. ನಾನು ನಿಮಗೆ ಮಾತನಾಡಲು ಮೊದಲಿಗೆ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

**ಮುಂದು. . .**

**(189) 10.07.2018 05.10 ಎಸ್‌ವಿ–ಕೆಎಸ್**

**ಶ್ರೀ ಎನ್.ಎಸ್.ಬೋಸರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ 149 ಜಿಲ್ಲೆಗಳನ್ನು 'Transformation of Aspirational District' programme ಅಡಿಯಲ್ಲಿ ಘೋಷಿಸಲಾಗಿದೆ. ಅವುಗಳಲ್ಲಿ ನಮ್ಮ ಕರ್ನಾಟಕದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳೂ ಸಹ ಸೇರಿವೆ. ಇವತ್ತಿನವರೆವಿಗೂ ಒಂದು ಪೈಸೆ ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿರುವುದಿಲ್ಲ. ಕೇಂದ್ರವು ಜಿಲ್ಲಾಧಿಕಾರಿಗಳನ್ನು ಇದುವರೆವಿಗೂ ಮೂರು ಬಾರಿ ಸಭೆ ಕರೆದಿರುತ್ತಾರೆ. ಒಂದು ರೂಪಾಯಿಯನ್ನು ಕೊಡದೆ ರಾಜ್ಯ ಸರ್ಕಾರದಿಂದ ಕ್ರೋಢೀಕರಣ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. 'Transformation of Aspirational District' ಎಂದು ಘೋಷಿಸಿದ ಕೂಡಲೇ ನಮಗೆಲ್ಲಾ ಬಹಳಷ್ಟು ಅನುಕೂಲವಾಗುತ್ತದೆ ಎಂಬ ಆಶಾಭಾವನೆ ಜನರಲ್ಲಿ ಇತ್ತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಎಂ.ಪಿ.ಗಳಿಗೆ ಆದರ್ಶ ಗ್ರಾಮಗಳನ್ನು ಘೋಷಣೆ ಮಾಡಿದರು. ಅದಕ್ಕೂ ಸಹ ಕೇಂದ್ರ ಸರ್ಕಾರ ಒಂದು ರೂಪಾಯಿಯನ್ನು ಕೊಟ್ಟಿರುವುದಿಲ್ಲ. ಈ ರೀತಿಯಾಗಿ ಘೋಷಣೆ ಮಾಡಿ, ಹಣ ಮಂಜೂರು ಮಾಡದಂತಹ ಯೋಜನೆಗಳನ್ನು ಮಾಡಬಾರದೆಂದು ರಾಜ್ಯಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು.

ಅದೇ ರೀತಿಯಾಗಿ airstrips ಆಗಬೇಕೆಂದು ನಾವು ಬಹಳ ದಿನಗಳಿಂದ ಕೇಳುತ್ತಿದ್ದೇವೆ. ಈ ವ್ಯವಸ್ಥೆ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಆಗಿದೆ, ಬಳ್ಳಾರಿಯಲ್ಲಿ ಆಗುತ್ತಿದೆ. ನಮ್ಮ ಜಿಲ್ಲೆಯಲ್ಲಿ 407 ಎಕರೆ ಜಾಗವಿದ್ದು, ಅಲ್ಲಿ ಒಂದು airstrip ಅನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ., ಕಾಂಗ್ರೆಸ್...

**ಸಭಾಪತಿಯವರು:–** ಮಾನ್ಯ ಮಲ್ಕಾಪೂರೆಯವರೆ, ಒಂದು ನಿಮಿಷ ನನ್ನ ಮಾತನ್ನು ಕೇಳಿ. ನಿಮ್ಮ ಪಕ್ಷದಿಂದ ಮಾನ್ಯ ಲಹರ್‌ಸಿಂಗ್ ಸಿರೋಯಾ, ಮಾನ್ಯ ಎಂ.ಕೆ.ಪ್ರಾಣೇಶ್ ಹಾಗೂ ಮಾನ್ಯ ಸುನಿಲ್ ಸುಬ್ರಮಣಿ ಇವರೆಲ್ಲಾ ಮಾತನಾಡಿದ್ದಾರೆ. ಜೆಡಿ(ಎಸ್)ನಲ್ಲಿ ಮಾನ್ಯ ಧರ್ಮೇಗೌಡ ಅವರು ಮಾತನಾಡಿದ್ದಾರೆ. ಕಾಂಗ್ರೆಸ್‌ನಲ್ಲಿ ಮಾನ್ಯ ಬಸವರಾಜ ಪಾಟೀಲ್ ಇಟಗಿ ಅವರು ಮಾತನಾಡಿದ್ದಾರೆ. ಈಗ ಎರಡನೆಯವರಾಗಿ ಮಾನ್ಯ ಬೋಸರಾಜು ಅವರು ಮಾತನಾಡಿದ್ದಾರೆ. ಮಾನ್ಯ ಭೋಜೇಗೌಡ ಅವರು ಮಾತನಾಡಿದ ನಂತರ ಮಾನ್ಯ ತಾರಾ ಅನೂರಾಧ ಅವರು ಮಾತನಾಡಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ತಾವು ಬಹಳ ಹಿರಿಯರು. ತಮ್ಮನ್ನು ಪ್ರಶ್ನೆ ಮಾಡುವಷ್ಟು ನಾನು ದೊಡ್ಡವನಲ್ಲ. ಆದರೆ ನನಗೆ ಇರುವ ಜ್ಞಾಪಕದ ಪ್ರಕಾರ ನಿನ್ನೆ ಆ ಬುದ್ಧಿಜೀವಿಗಳೆಲ್ಲಾ **‘ಮಾತನಾಡುವುದಿಲ್ಲ’** ಎಂದು ಹೇಳಿದ್ದಾರೆ. ಹಾಗಾಗಿ ಉಳಿದಿದ್ದಾರೆ. ಹಾಗೆಯೇ ನಾವು ಮಾತನಾಡುವುದಿಲ್ಲ ಎಂದರೆ ನಮಗೆ ಇಷ್ಟ ಬಂದಾಗ ಮಾತನಾಡಲು ತಾವು ಅವಕಾಶ ಕೊಡುವಿರಾ?

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಲ್ಕಾಪೂರೆಯವರು ಹಿರಿಯ ಸದಸ್ಯರಾಗಿದ್ದು, ನಮ್ಮಂತಹ ಕಿರಿಯ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ತಾರಾ ಅವರು ಆಗಲೇ ಹೇಳಿದರು. ಆದರೆ ನಮ್ಮ ಸದನದಲ್ಲಿ ಇರುವವರು ನಾಲ್ಕೈದು ಜನ ಮಹಿಳೆಯರು. ಅವರೂ ಸಹ ಆಚೆ ಹೋದರೆ ನಮಗೆ ಸ್ಫೂರ್ತಿ ಬರುವುದು ಹೇಗೆ? ಅವರೆಲ್ಲಾ ಇದ್ದರೆ ಒಂದು ಶೋಭೆ. ಹಾಗಾಗಿ ಅವರೆಲ್ಲಾ ಸದನದಲ್ಲಿ ಇರಬೇಕು.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಸ್ಫೂರ್ತಿ ಬರುವಂತಹದ್ದು ಬಹಳಷ್ಟಿವೆ. ಮಾನ್ಯ ಭೋಜೇಗೌಡರು ಯಾವುದನ್ನು ಬೇಕಾದರೂ ತೆಗೆದುಕೊಂಡು ಬರಬಹುದು.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಬಜೆಟ್‌ನ ಕುರಿತು ತಮ್ಮ ಮಾತನ್ನು ಪ್ರಾರಂಭಿಸಿ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನೇನಾದರೂ ಮಾತನಾಡಲು ಹೋದರೆ ವಿರೋಧ ಪಕ್ಷದವರು ಸುಮ್ಮಸುಮ್ಮನೆ ನನ್ನ ಮೇಲೆ ಬೀಳುತ್ತಾರೆ. ವಸ್ತುಸ್ಥಿತಿ ಏನೆಂದರೆ ಮಾನ್ಯ ವಿರೋಧ ಪಕ್ಷದ ಎಲ್ಲಾ ಆತ್ಮೀಯ ಸ್ನೇಹಿತರು ಸಂಪೂರ್ಣವಾಗಿ ಓದಿ ಅರೆದು ಕುಡಿದುಬಿಟ್ಟಿದ್ದಾರೆ. ಅವರು note ಮಾಡುತ್ತಿರುವುದನ್ನು ನೋಡಿದರೆ ನಮಗೆ ಭಯವಾಗುತ್ತದೆ. ಅವರಿಗೆ ನನ್ನ ಧನ್ಯವಾದಗಳು. ಮನಸ್ಪೂರ್ವಕವಾಗಿ ಅವರೆಲ್ಲರೂ ಒಪ್ಪಿದ್ದಾರೆ. ಆದರೆ ವಿರೋಧ ಮಾಡಬೇಕೆಂದು ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್‌ಮನ್ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರು ಪೀಠವನ್ನು ಅಲಂಕರಿಸಿದರು.)**

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹೆಣ್ಣುಮಕ್ಕಳ ಬಗ್ಗೆ ಮಾನ್ಯ ಸದಸ್ಯರಿಗೆ ಗೌರವ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಹೆಣ್ಣುಮಕ್ಕಳಿದ್ದರೆ ಅವರಿಗೆ ಸ್ಫೂರ್ತಿ ಎಂದು ಹೇಳಿದ ಮಾತು ಎಲ್ಲೋ ಒಂದು ಕಡೆಯಲ್ಲಿ ತಪ್ಪಾಗುತ್ತದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಹೆಣ್ಣುಮಕ್ಕಳು ಭೂಷಣ ಎಂದು ಹಿರಿಯರು ಹೇಳಿದ್ದಾರೆ.

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಭೂಷಣ ಎಂಬುದು ಸರಿಯಾದ ಪದ. ನಾನು supportive ಆಗಿ ತೆಗೆದುಕೊಳ್ಳುತ್ತೇನೆ. ಆದರೆ ಇದು ಮಾನ್ಯ ಸದಸ್ಯರ ಗಮನಕ್ಕೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, Co-education ಕಾಲೇಜಿನಲ್ಲಿ ಆಗುವಷ್ಟು admission, ಬಾಯ್ಸ್ ಕಾಲೇಜಿನಲ್ಲಿ ಆಗುವುದಿಲ್ಲ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಏಕೆ ಹೇಳಿದೆನೆಂದರೆ ಇದುವರೆವಿಗೂ ಸದನ ಸಪ್ಪೆಯಾಗಿತ್ತು. ಎಲ್ಲರೂ ಅವರಷ್ಟಕ್ಕೆ ಅವರು ಮಾತನಾಡಿಕೊಳ್ಳುತ್ತಿದ್ದರು. ಎಲ್ಲರೂ ಸ್ವಲ್ಪ ಗೆಲುವಾಗಲಿ ಎಂದು ನಾನು ಈ ಮಾತನ್ನು ಹೇಳಿದ್ದೇನೆ. ಅಕಸ್ಮಾತ್ ತಪ್ಪಾಗಿ ಏನಾದರೂ ಅರ್ಥೈಸಿದ್ದಲ್ಲಿ ದಯಮಾಡಿ ಕ್ಷಮಿಸಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರಲ್ಲಿ ಮಾತ್ರ ಮಾತೃ ಹೃದಯ ಎಂದು ಹೇಳುತ್ತಿದ್ದರು. ಆದರೆ ಈಗ ಎಲ್ಲರಲ್ಲೂ ತಾಯ್ತನವನ್ನು ಕಾಣುತ್ತಿದ್ದಾರಷ್ಟೆ, ಬೇರೇನಿಲ್ಲ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾಯ್ತನಕ್ಕೂ, ಹೆಣ್ತನಕ್ಕೂ ವ್ಯತ್ಯಾಸವಿದೆ.

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಒಂದು ಶಬ್ದ ಪ್ರಯೋಗವಾಯಿತು. ಕನ್ನಡ ಮತ್ತು ಸಂಸ್ಕೃತಿ ಸಚಿವರು ಇಲ್ಲಿಯೇ ಕುಳಿತಿದ್ದಾರೆ. ಆಗ ನಾನು react ಮಾಡಲಿಲ್ಲ. ಬೆಳಿಗ್ಗೆ 'ಪುಟಗೋಸಿ' ಎನ್ನುವ ಶಬ್ದದ ಬಳಕೆಯಾಯಿತು. ನಾನು ಆಗ ಪಕ್ಕದಲ್ಲಿ ಕೇಳಿದುದಕ್ಕೆ ಅದು ಅಸಂಸದೀಯ ಪದವಲ್ಲ ಎಂದು ಹೇಳಲಾಯಿತು. ಶಬ್ದಾರ್ಥದಲ್ಲಿ ತೆಗೆದುಕೊಂಡರೆ ಇರಬಹುದು. ಆದರೆ ರೂಢಾರ್ಥದಲ್ಲಿ ಸಹಜವಾಗಿ ಒಂದು ರೀತಿಯೆನಿಸುತ್ತದೆ. ಇತ್ತೀಚೆಗೆ ಮುಖ್ಯಮಂತ್ರಿಗಳೂ ಸಹ ಅವರ ಪಕ್ಷದ ಬಗ್ಗೆ ನಮ್ಮ ಕಡೆಯವರು ಯಾರೋ ಆ ಪದವನ್ನೇ ಬಳಸಿ ಟೀಕೆ ಮಾಡಿದಾಗ ಮಾರ್ಮಿಕ ಉತ್ತರವನ್ನು ಕೊಟ್ಟಿರುತ್ತಾರೆ. ನಮ್ಮ ಜನಜೀವನದಲ್ಲಿ ಆ ಪದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಮಾನ ಸಂರಕ್ಷಣೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸತಕ್ಕಂತಹ ವಸ್ತ್ರ' ಎಂಬ ಅರ್ಥವಿದೆ. ಆಡುಭಾಷೆಯಲ್ಲಿ ಮಹಿಳೆಯರು ಮುಜುಗರ ಪಟ್ಟುಕೊಳ್ಳುವಂತಹ ಶಬ್ದವಾದುದರಿಂದ ಅಂತಹ ಶಬ್ದಗಳನ್ನು ಈ ಸದನದಲ್ಲಿ ನಾವು avoid ಮಾಡಬಹುದೇನೋ ಎಂದು ಪೀಠವನ್ನು ಕೇಳಬಯಸುತ್ತೇನೆ. ಕಡಿಮೆ ಮಹಿಳೆಯರಿರುವುದರಿಂದ ಅಂತಹ ಶಬ್ದಗಳ ಬದಲಿಗೆ ಪರ್ಯಾಯ ಪದಗಳು ಬೇಕಾದಷ್ಟು ಇರುವುದರಿಂದ ಅವುಗಳನ್ನು ಬಳಸಿಕೊಳ್ಳಬೇಕು. ಮಾನ್ಯ ಭೋಜೇಗೌಡರು 'ಹೆಣ್ಣು ಮಕ್ಕಳು ಸ್ಫೂರ್ತಿ' ಎಂದು ಹೇಳಿದುದನ್ನು ನಾವು positive ಆಗಿ ತೆಗೆದುಕೊಳ್ಳುತ್ತೇವೆ. Women are not entertainers ಎಂದು ನಾನು ಮೊನ್ನೆಯೇ ಹೇಳಿದ್ದೇನೆ. ನಾವು ಮನರಂಜನೆಯ ಪ್ರೇರಕ ಜೀವಿಗಳಲ್ಲ. ಇವತ್ತು ಕಡಿಮೆ ಸಂಖ್ಯೆಯಲ್ಲಿದ್ದರೆ ಸ್ಫೂರ್ತಿ, ಸಂಖ್ಯೆ ಹೆಚ್ಚಾದರೆ ಅಪಾಯ ಎಂದು ಕೂಡ ಭಾವಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯೆ ದೊಡ್ಡ ಪಾತ್ರ ವಹಿಸುತ್ತದೆ. ಯಾವುದೇ ಒಂದು ವಿಷಯವನ್ನು ಮಂಡನೆ ಮಾಡಬೇಕಾದರೆ ಸಂಖ್ಯಾಬಲ ಮಹತ್ವದ ಪಾತ್ರ ವಹಿಸುತ್ತದೆ. ನಾನು ಮಾನ್ಯ ಭೋಜೇಗೌಡರನ್ನು ಟೀಕೆ ಮಾಡುತ್ತಿಲ್ಲ. ಸದಭಿರುಚಿಯಿಂದಲೇ ಸ್ವೀಕಾರ ಮಾಡುತ್ತೇವೆ. ಆದಷ್ಟು ಇಂತಹ ಸನ್ನಿವೇಶಗಳನ್ನು avoid ಮಾಡಬೇಕೆಂದು ವಿನಂತಿ ಮಾಡುತ್ತೇವೆ.

**ಶ್ರೀ ವೆಂಕಟರಾವ್ ನಾಡಗೌಡ:–** ಮಾನ್ಯ ಸಭಾಪತಿಯವರೇ, ಅದು ಹಾಗಲ್ಲ. ಹೆಚ್ಚು ಜನ ಅವರೇ ಆಗಿಬಿಟ್ಟರೆ ಎಲ್ಲಿ ಗಲಾಟೆ ಮಾಡಿಕೊಂಡು ಬಿಡುತ್ತಾರೆಯೋ ಎನ್ನುವ ಭಯ ಅಷ್ಟೆ.

**ಶ್ರೀ ಕೃಷ್ಣ ಭೈರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿ ಗೌಡರ ಮಾತಿಗೆ ನನ್ನ ಸಂಪೂರ್ಣ ಬೆಂಬಲವಿದೆ. ಆದರೆ ಅವರಲ್ಲಿ ನನ್ನ ಮನವಿಯೇನೆಂದರೆ, ಇಂತಹ ವಿಚಾರಗಳನ್ನು ಮಾತನಾಡುವಾಗ ಯಾವತ್ತೂ ಕೂಡ ಕಾರಣ ನೀಡುವ ಅವಶ್ಯಕತೆ ಇಲ್ಲ. 'ಮಹಿಳೆ ಮನರಂಜನೆಯ ವಸ್ತು ಅಲ್ಲ' ಎಂದು ಅವರು ಹೇಳಿದರು. ಆದರೆ ಅದಕ್ಕೆ ಕಾರಣವನ್ನು ಏಕೆ ಕೊಡಬೇಕು? Whom should you explain? Why should you be defensive? Why should you justify yourself? ಇಂತಹ ವಿಚಾರಗಳು ಬಂದಾಗ we should never be defensive on such issues. ಯಾರಿಗೆ ಯಾರು ಯಾವ ಕಾರಣಕ್ಕಾಗಿ ಸಮರ್ಥನೆಯನ್ನು ಕೊಡಬೇಕು? ಕಾರಣವನ್ನು ಕೊಡಲೇ ಬಾರದು? ಕಾರಣವನ್ನು ಕೊಟ್ಟರೆ ನಮ್ಮ ಮನಸ್ಸಿನಲ್ಲಿಯೇ 0.01% ಅನುಮಾನವಿದೆಯೇನೋ ಎಂಬಂತೆ ಭಾಸವಾಗುತ್ತದೆ. ಅವರ ಮನಸ್ಸಿನಲ್ಲಿ ಅನುಮಾನವಿಲ್ಲದ ಮೇಲೆ ಇಂತಹ ವಿಚಾರದಲ್ಲಿ defensive ಆದಾಗ when we try to explain ourselves, we should never be defensive on such issues ಎಂದು ಅವರಲ್ಲಿ ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಮಾನ್ಯ ಕೃಷ್ಣ ಬೈರೇಗೌಡರು ಯೋಚನೆಯನ್ನು ಮಾಡುವ ರೀತಿಯಲ್ಲಿ ಬೇರೆ ಅನೇಕ ಮನಸ್ಸುಗಳು ಯೋಚನೆಯನ್ನು ಮಾಡುತ್ತಿಲ್ಲ ಎನ್ನುವುದು ವಾಸ್ತವ.

**ಶ್ರೀ ಬಿ.ಝೆಡ್.ಜಮೀರ್ ಅಹ್ಮದ್ ಖಾನ್:–** ಮಾನ್ಯ ಸಭಾಪತಿಯವರೇ, ಇಲ್ಲಿ ನಮ್ಮ ಯಾರ ಮನಸ್ಸಿನಲ್ಲಿಯೂ ಆ ರೀತಿಯಾದ ಭಾವನೆ ಇಲ್ಲ. ಆದರೆ ಅವರು ಅಂತಹ ಭಾವನೆ ಮೂಡುವಂತೆ ಮಾತನಾಡುತ್ತಿದ್ದಾರೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, with due respect, to the House, ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಎಲ್ಲರಿಗೂ ತಾಯಿಯ ಬಗ್ಗೆ, ಸಹೋದರಿಯರ ಬಗ್ಗೆ ಗೌರವ, ಪ್ರೀತಿ ಮತ್ತು ಕಾಳಜಿ ಇದೆ. ಆದರೆ ರಾಜಕೀಯ ವ್ಯವಸ್ಥೆಯಲ್ಲಿ ಅವರನ್ನು ತರುವುದಕ್ಕಾಗುತ್ತಿಲ್ಲ. ಏಕೆಂದರೆ ಆ ವ್ಯವಸ್ಥೆಯನ್ನು ಸುಧಾರಣೆ ಮಾಡುವಲ್ಲಿ ನಾವೆಲ್ಲಾ ಸೋತಿದ್ದೇವೆ ಎನ್ನುವುದು ಕಟುಸತ್ಯ. ಅದಕ್ಕಾಗಿ ನಾನು electoral reforms ಬಗ್ಗೆ ಕೂಡ ಮಾತನಾಡಿದ್ದೇನೆ. ನಾನು ಒಳ್ಳೆಯ ಸದಭಿರುಚಿಯಿಂದಲೇ ಇದನ್ನು ತೆಗೆದುಕೊಳ್ಳುತ್ತೇನೆ. ಇಂದಿನ ಪರಿಸ್ಥಿತಿಯಲ್ಲಿ ಮನಸ್ಸಿಗೆ ದುಃಖವಾದರೆ ಅದನ್ನು ವ್ಯಕ್ತಪಡಿಸುವಂತಹ ಸ್ಥಿತಿ ಕೂಡ ಇರುವುದಿಲ್ಲ. ಆ ರೀತಿ ಏನಾದರೂ ಮಾಡಿದರೆ ಇವರು ಸ್ವಲ್ಪ 'ಜೋರಿನವರು' ಎಂಬ ಟೀಕೆಯನ್ನು ಕೂಡ ಎದುರಿಸಬೇಕಾಗುತ್ತದೆ. Exact ಪದ ಬಳಸುವುದಿಲ್ಲ. ಆದ್ದರಿಂದ ನಮ್ಮ ಸದನ ಇದಕ್ಕೆ ಸಾಕ್ಷಿಯಾಗಬಾರದು ಎಂಬುದು ನನ್ನ ಕಳಕಳಿಯಾಗಿದೆ.

**(...ಮುಂದು)**

(190) 10.07.2018,5.20,ಕೆಜಿ–ಜಿಆರ್

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮಗೆ ದೇವರು ಕಷ್ಟ – ಸುಖ ಎರಡನ್ನೂ ಕೊಡುತ್ತಾನೆ. ಆದರೆ, ತಾಯಿ ಯಾವಾಗಲೂ ಮಕ್ಕಳಿಗೆ ಸುಖವನ್ನಷ್ಟೇ ಕೊಡುತ್ತಾಳೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ ನಾನು ಈ ಮಾತನ್ನು ಹೇಳಬಯಸಿದ್ದೇನೆ ಅಷ್ಟೇ.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ಬಜೆಟ್‌ನ ಬಗ್ಗೆ ಬಹಳಷ್ಟು ಜನ ಹಿರಿಯ ಸದಸ್ಯರು ಮತ್ತು ಪ್ರತಿಭಾನ್ವಿತರು ಅವರದೇ ಅದಂತಹ ವಾಕ್ಯಗಳಲ್ಲಿ ಎಳೆ–ಎಳೆಯಾಗಿ ವಿಶ್ಲೇಷಣೆ ಮಾಡಿದ್ದಾರೆ. ಇಲ್ಲಿ ವಿಶೇಷವಾಗಿ ವಿರೋಧ ಪಕ್ಷದ ನನ್ನ ಗೆಳೆಯರು ಎಲ್ಲವನ್ನು ಓದಿ ಅರ್ಥ ಮಾಡಿಕೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಮಾನ್ಯ ಸಿದ್ದರಾಮಯ್ಯನವರು ದಿನಾಂಕ:16.02.2018 ರಂದು ಮಂಡನೆ ಮಾಡಿರುವಂತಹ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಜೆಟ್ ಮತ್ತು ದಿನಾಂಕ:05.07.2018 ರಂದು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರಾದಂತಹ ಮಾನ್ಯ ಕುಮಾರಸ್ವಾಮಿಯವರು ಮಂಡನೆ ಮಾಡಿರುವಂತಹ ಬಜೆಟ್‌ನ ಬಗ್ಗೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಇದು ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಒಂದೇ ಆಯವ್ಯಯವೇ ಅಥವಾ ಹಿಂದಿನ ಸರ್ಕಾರದ ಆಯವ್ಯಯ ಮತ್ತು ಈ ಸರ್ಕಾರದ ಆಯವ್ಯಯ ಎರಡೂ ಆಯವ್ಯಯಗಳನ್ನು ಒಳಗೊಂಡಿದೆಯೇ ಎಂದು ಕೇಳಿದ್ದಾರೆ. ನಾನು ಅತ್ಯಂತ ಆತ್ಮವಿಶ್ವಾಸದಿಂದ ಹೇಳುತ್ತೇನೆ. ದಿನಾಂಕ: 16.02.2018 ರಂದು ಮಂಡನೆ ಮಾಡಿರುವಂತಹ ಯಾವುದೇ ಅಂಶಗಳನ್ನು ಈ ಸಮ್ಮಿಶ್ರ ಸರ್ಕಾರ ಕೈಬಿಟ್ಟಿಲ್ಲ. ದಿನಾಂಕ:05.07.2018 ರಂದು ಸಮ್ಮಿಶ್ರ ಸರ್ಕಾರ ಮಂಡನೆ ಮಾಡಿರುವಂತಹ ಬಜೆಟ್ ಈ ಎರಡು ಬಜೆಟ್‌ಗಳು ಒಂದೇ ಎಂಬುದಾಗಿ ನಾನು ವಿರೋಧ ಪಕ್ಷದ ನಾಯಕರಿಗೆ ಮನವರಿಕೆ ಮಾಡಿಕೊಡುತ್ತೇನೆ. ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಕೇಳಿದ್ದರು. ವಿರೋಧ ಪಕ್ಷದವರು ಮಾತೆತ್ತಿದರೆ 'ವಚನಭ್ರಷ್ಟರು' ಎಂದು ಹೇಳುತ್ತಾರೆ. ಆ ಮಾತಿನಿಂದ ನಮಗೆ ಬಹಳ ನೋವಾಗುತ್ತದೆ. ನಾನು ಆ ವೇಳೆಯಲ್ಲಿ ಏನು ಮಾತನಾಡಲಿಲ್ಲ. ಆಮೇಲೆ 'ಸಾಂದರ್ಭಿಕ ಶಿಶು' ಎನ್ನುವ ವಿಚಾರದಲ್ಲಿ ನಮ್ಮ ನಾಯಕರು ಮಾತನಾಡಿದಂತಹ ಸಂದರ್ಭದಲ್ಲಿ ಅದಕ್ಕೆ ವಿಶೇಷವಾದಂತಹ ಹಾಗೂ ಬೇರೆ ಬೇರೆ ನುರಿತ ಪರಿಣಿತರಿಂದ ಅದರ ವಿಷಯಗಳನ್ನು ಸಂಗ್ರಹಿಸಿ ಮಾತನಾಡಿದ್ದಾರೆ. ಅದು ದಿನ ಪತ್ರಿಕೆಗಳಲ್ಲಿಯೂ ಬಂದಿದೆ, ಅದನ್ನು ನಾನು ನೋಡಿದ್ದೇನೆ. 'ಸಾಂದರ್ಭಿಕ ಶಿಶು' ಎನ್ನುವ ವಿಚಾರದಲ್ಲಿ ಬೇರೆ ಬೇರೆ ವಿಶ್ಲೇಷಣೆಯನ್ನು ಮಾಡಿದ್ದಾರೆ. ಸಾಂದರ್ಭಿಕ ಶಿಶುವಿಗೂ ಸಹ ಈ ಸಮಾಜಕ್ಕೆ ಒಳಿತನ್ನು ಮಾಡುವಂತಹ ಶಕ್ತಿ ಇದೆ ಎನ್ನುವುದನ್ನು ನಮ್ಮ ಮುಖ್ಯ ಮಂತ್ರಿಗಳಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಈಗಾಗಲೇ ನಮ್ಮ ರಾಜ್ಯಕ್ಕೆ ಈ ಬಜೆಟ್‌ನ್ನು ಮಂಡನೆ ಮಾಡುವ ಮೂಲಕ ತೋರಿಸಿಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ಮಹಾಭಾರತದಲ್ಲಿ ಕುಂತಿದೇವಿಗೆ ಸೂರ್ಯದೇವರು ಒಂದು ವರವನ್ನು ಕೊಟ್ಟಿರುತಾರೆ. ಆಗ ಕುಂತಿದೇವಿ ಸೂರ್ಯದೇವರು ವರವನ್ನು ಕೊಟ್ಟಿದ್ದಾನೋ ಅಥವಾ ಇಲ್ಲವೋ ಎಂದು ಪರೀಕ್ಷೆ ಮಾಡುವುದಕ್ಕೆ ಅವತ್ತಿನ ಸಂದರ್ಭದಲ್ಲಿ ಸೂರ್ಯೋದಯದ ವೇಳೆ ಸೂರ್ಯದೇವರನ್ನು ಪ್ರಾರ್ಥನೆ ಮಾಡಿ ವರವನ್ನು ಕೇಳಿದಂತಹ ಸಂದರ್ಭದಲ್ಲಿ, ಸೂರ್ಯದೇವರು ಒಂದು ಮಗುವನ್ನು ಕೊಡುತ್ತಾರೆ. ಸೂರ್ಯ ದೇವರ ವರದಿಂದ ಒಂದು ಮಗು ಬಂದಂತಹ ಸಂದರ್ಭದಲ್ಲಿ, ಕನ್ಯೆಯಾದ ಕುಂತಿದೇವಿ ಸಮಾಜ ಈ ಮಗು ಯಾರೆಂದು ಕೇಳಿದರೆ ಅದಕ್ಕೆ ನಾನು ಏನೆಂದು ಉತ್ತರ ಕೊಡಬೇಕು ಎಂದು ಅಂದಿನ ಕಾಲದಲ್ಲಿಯೇ ಸಮಾಜಕ್ಕೆ ಹೆದರಿ ಆ ಮಗುವನ್ನು ಒಂದು ಸಣ್ಣ ದೋಣಿಯಲ್ಲಿ ಹಾಕಿ ಹೊಳೆಯಲ್ಲಿ ತೇಲಿ ಬಿಡುತ್ತಾಳೆ. ಅದು ನಂತರ ಇತಿಹಾಸವಾಗಿದೆ. ಇವತ್ತು ನಾವು ಏನು ಮಾತನಾಡುತ್ತಿದ್ದೇವೆ? ಆ ಮಗು, ಆ ಸೂತಪುತ್ರ ಮುಂದೆ 'ದಾನಶೂರವೀರಕರ್ಣ' ಎನಿಸಿಕೊಳ್ಳುತ್ತಾನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಗಾಗಿ, ಈ 'ಸಾಂದರ್ಭಿಕ ಶಿಶು' ನಮ್ಮ ಮುಖ್ಯಮಂತ್ರಿ 'ದಾನಶೂರಕರ್ಣ' ನಮ್ಮ ರಾಜ್ಯಕ್ಕೆ ಬಜೆಟ್‌ನ್ನು ಕೊಟ್ಟಿದ್ದಾರೆ. ನಮ್ಮನ್ನು ವಿರೋಧ ಪಕ್ಷದವರು 'ವಚನಭ್ರಷ್ಟರು' ಎಂದು ಹೇಳುತ್ತಾರೆ. ನಾವು ಹೇಗೆ ವಚನಭ್ರಷ್ಟರು? ಅದಕ್ಕೆ ಒಂದು ವಿಶ್ಲೇಷಣೆಯನ್ನು ಕೊಟ್ಟರೆ ಬಹುಶಃ ಅದು ತಪ್ಪಾಗಲಾರದೆಂದು ನಾನು ಭಾವಿಸಿದ್ದೇನೆ. ಶ್ರೀರಾಮಚಂದ್ರನ ಆಡಳಿತ ಕಾಲವನ್ನು 'ರಾಮರಾಜ್ಯ' ಎಂದು ಕರೆಯುತ್ತೇವೆ. ನಾವೆಲ್ಲರೂ ಇವತ್ತು ರಾಮರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ಇಲ್ಲಿ ಕುಳಿತಿದ್ದೇವೆ, ಅದರ ಬಗ್ಗೆಯೇ ನಾವೆಲ್ಲರೂ ಯೋಚನೆ ಮಾಡುತ್ತಿದ್ದೇವೆ. ನಾವೆಲ್ಲರೂ ಸಹ ಶ್ರೀರಾಮನನ್ನು ಪೂಜೆ ಮಾಡುತ್ತೇವೆ. ಇನ್ನು ಮುಂದುವರೆದು ಹೇಳಬೇಕೆಂದರೆ, ರಾಜಕೀಯವಾಗಿಯೂ ಸಹ ಅದನ್ನು ಬಳಕೆ ಮಾಡಿಕೊಂಡಿದ್ದಾರೆ. ಶ್ರೀರಾಮಚಂದ್ರನ ಆಳ್ವಿಕೆಯ ಕಾಲ ಬಹಳ ಸುಭಿಕ್ಷವಾಗಿದ್ದಂತಹ ಕಾಲ. ಈಗಿನ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸಿ.ಐ.ಡಿ., ಸಿ.ಓ.ಡಿ., ಮತ್ತು ಸಿ.ಬಿ.ಐ., ಎನ್ನುವಂತಹ ಸಂಸ್ಥೆಗಳೇನಿವೆ, ಅದಕ್ಕೆ ಸರಿಸಮನಾದಂತಹ ಕರ್ತವ್ಯಗಳನ್ನು ಗೂಢಚಾರರು ನಿರ್ವಹಿಸುತ್ತಿದ್ದರು. ಆ ಗೂಢಚಾರರ ಮೂಖಾಂತರ ನನ್ನ ಆಳ್ವಿಕೆಯ ಸಂದರ್ಭದಲ್ಲಿ ರಾಜ್ಯದಲ್ಲಿ ಏನೇನು ನಡೆಯುತ್ತಿದೆ? ಪ್ರಜೆಗಳು ಸುಖವಾಗಿದ್ದಾರೆಯೋ ಅಥವಾ ಇಲ್ಲವೋ ಎನ್ನುವಂತಹ ವಿಚಾರವನ್ನು ಗೂಢಚಾರರ ಮೂಲಕ ತಿಳಿದುಕೊಂಡಂತಹ ಸಂದರ್ಭದಲ್ಲಿ ಆ ಗೂಢಚಾರರಿಂದ ತಿಳಿದುಬಂದ ವಿಚಾರವನ್ನು ಕೇಳಿ ಶ್ರೀರಾಮನ ಮನಸ್ಸಿಗೆ ನೋವಾಗುತ್ತದೆ.

ರಾವಣನಿಂದ ಅಪಹರಣಕ್ಕೊಳಗಾಗಿದ್ದ ಸೀತಾದೇವಿ ಆಗಷ್ಟೇ ರಾವಣನ ಬಂಧನದಿಂದ ಬಿಡುಗಡೆ ಹೊಂದಿ ಅರಮನೆಗೆ ಬಂದಿರುವಂತಹ ಸಂದರ್ಭದಲ್ಲಿ, ಶ್ರೀರಾಮಚಂದ್ರನ ಸಾಮ್ರಾಜ್ಯದಲ್ಲಿದ್ದಂತಹ ಒಬ್ಬ ಅಗಸ ಆತನ ಹೆಂಡತಿಯನ್ನು ಮನೆಯಿಂದ ಆಚೆಗೆ ನೂಕುತ್ತಿರುತ್ತಾನೆ; ಇನ್ನೊಂದು ಕಾಕತಾಳೀಯವೆಂದರೆ, ಅದೇ ವೇಳೆಯಲ್ಲಿ ತುಂಬು ಗರ್ಭಿಣಿಯಾಗಿದ್ದ ಸೀತಾಮಾತೆ ಶ್ರೀರಾಮನ ಮುಂದೆ 'ನಾನು ಋಷಿಯ ಆಶ್ರಮವನ್ನು ನೋಡಬೇಕು, ಅವರ ಆಶೀರ್ವಾದವನ್ನು ಪಡೆಯಬೇಕು' ಎನ್ನುವಂತಹ ಒಂದು ಬೇಡಿಕೆಯನ್ನು ಇಡುತ್ತಾಳೆ; ಅದು ಗರ್ಭಿಣಿಯ ಬಯಕೆ. ಅದೇ ಸಮಯದಲ್ಲಿ ಈ ವಿಷಯ ಪ್ರಸ್ತಾಪವಾಗುತ್ತದೆ. ಆಗ ಶ್ರೀರಾಮಚಂದ್ರ ಯೋಚನೆ ಮಾಡುತ್ತಾನೆ; ಒಬ್ಬ ಪ್ರಜೆ ನನ್ನ ಬಗ್ಗೆ ಸಾಮಾನ್ಯವಾಗಿ, ಕೇವಲವಾಗಿ ಮಾತನಾಡಿದಂತಹ ಸಂದರ್ಭದಲ್ಲಿ, ಎಲ್ಲೋ ಒಂದು ಕಡೆ ನಾನು ಪ್ರಜೆಗಳಿಗೆ ನ್ಯಾಯ ಕೊಡುವುದಕ್ಕೆ ಆಗುತ್ತಿಲ್ಲ; ಆ ನ್ಯಾಯ ಕೂಡುವುದರಲ್ಲಿ ನಾನು ಅನುತ್ತೀರ್ಣನಾಗಿದ್ದೇನೆ. ನನ್ನ ಕುಟುಂಬದಲ್ಲಿ ನನ್ನ ಸತಿಯ ಬಗ್ಗೆ ಈ ತರದ ಅನುಮಾನದ ಮಾತುಗಳು ಬಂದಂತಹ ಸಂದರ್ಭದಲ್ಲಿ, ಸೀತಾಮಾತೆ ಋಷಿಗಳ ಆಶ್ರಮಕ್ಕೆ ಹೋಗಿ ಆಶೀರ್ವಾದವನ್ನು ಪಡೆಯಬೇಕೆಂದು ಕೇಳಿರುತ್ತಾಳೆ. ಆಗ ಶ್ರೀರಾಮಚಂದ್ರನು ತನ್ನ ತಮ್ಮನಾದ ಲಕ್ಷ್ಮಣನನ್ನು ಕರೆದು, 'ಸೀತಾಮಾತೆ ಋಷಿಗಳ ಆಶ್ರಮಕ್ಕೆ ಹೋಗಿ ಅವರ ಆಶೀರ್ವಾದವನ್ನುಪಡೆಯಬೇಕೆಂದು ಹೇಳುತ್ತಿದ್ದಾಳೆ. ಹಾಗಾಗಿ, ಸೀತಾಮಾತೆಯನ್ನು ಕಾಡಿಗೆ ಬಿಟ್ಟು ಬಾ' ಎಂದು ಹೇಳುತ್ತಾನೆ. ಆಗ ಲಕ್ಷ್ಮಣನು ಒಲ್ಲದ ಮನಸ್ಸಿನಿಂದ ಈ ರೀತಿ ಹೇಳುತ್ತಾನೆ:

ಎಲ್ಲಿ ಮುನಿಪೋತ್ತಮರ ಪಾವನದಡೆಗಳ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಲ್ಲಿ ಸುವಿಗಳ ಕಂಪ್‌ಹೊಗೆದ ಆಗ್ನಿಹೋತ್ರದ ಕುಟೀರಂಗಳ್
ಅಲ್ಲಿಗೆ ಹೋಯ್ಯದೆ ದಾರು ಧಾರುಣದ ಕಟ್ಟಡವಿಗೆ
ಇಲ್ಲಿಗೆ ಏಕೈ ತಂದೆ, ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯಿದಳು.

ದೇವೀ ನಿನಗೆಲ್ಲ ಪೆಳ್ದೆಳೆದುದಿಲ್ಲ, ಅಪವಾದಮಾವರಿಸಿ ನಿನ್ನನೊಲ್ಲೊದ
ಆ ರಘುಕುಲದವಂ ಸೀವರಿಸಿಬಿಟ್ಟು ಕಾನನಕ್ಕೆ ಕಳುಹಿಸಿ ಬಾ ಎಂದು ಎನಗೆ ನೇಮಿಸಿದೊಡೆ, ಆ ವಿಭೂವಿನ ಆಜ್ಞೆಯನ್ನು ಮೀರಲರಿಯದೆ ನಿನ್ನನ್ನು ಇಲ್ಲಿಗೊಡಕೊಂಡು ಬಂದೆ, ಇನ್ನು ಆವಲ್ಲಿಗಾದೊಡಂ ಪೋಗೂ ಎಂದು ಲಕ್ಷ್ಮಣನು ಭಾಷ್ಪಾವಲೋಚನನಾದನು.

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದು ಇಳೆಗೆ
ಒರಗುವಂತೆ ಲಕ್ಷ್ಮಣನ ಮಾತು ಕಿವಿಧರೆಗೆ ಬೀಳುವ ಮುನ್ನ ಅಪ್ಪೈಸಿ
ಬಿದ್ದಳಂಗನೆ ಧರೆಗೆ ನಡುನಡುಗುತೆ ಬಳಿಕ ಸೌಮಿತ್ರಿ ತಣ್ಣೀರು ಎರೆದು
ಸೆರಗಿನಿಂದ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋಧಿಸಿದನು.

ಮಾನ್ಯ ಸಭಾಪತಿಯವರೇ, ಆಗ ಲಕ್ಷ್ಮಣನಿಗೆ ಎಂತಹ ಒಂದು ಸಂದಿಗ್ಧ ಪರಿಸ್ಥಿತಿ ಇತ್ತು ಎಂದರೆ, ಇಂತಹ ಪರಿಸ್ಥಿಯಲ್ಲಿ ನಾನು ಶ್ರೀರಾಮನ ಆಜ್ಞೆಯನ್ನು ಮೀರಲಾರದೆ ಇಲ್ಲಿಗೆ ಕರೆದುಕೊಂಡು ಬಂದೆನೆಂದು ಆತ ಸೀತಾಮಾತೆಗೆ ಹೇಳುತ್ತಾನೆ. ಆಗ ಸೀತಾಮಾತೆ ಕೇಳುತ್ತಾಳೆ; ಋಷಿಗಳ ಆಶ್ರಮವನ್ನು ತೋರಿಸುತ್ತೇನೆಂದು ಕರೆದುಕೊಂಡು ಬಂದೆ. ಆದರೆ ಇಲ್ಲಿ ಆಗ್ನಿಹೋತ್ರದ ಕುಟೀರಂಗಳ್ ಇಲ್ಲ, ಇಲ್ಲಿ ಋಷಿಗಳ ಆಶ್ರಮ ಇಲ್ಲ; ನನ್ನನ್ನೇಕೆ ಈ ದಟ್ಟಾರದ ಕಟ್ಟಡವಿಗೆ ಕರೆದುಕೊಂಡು ಬಂದೆ ಎಂದು ಕೇಳಿದಾಗ, ಲಕ್ಷ್ಮಣನು ನಿನ್ನೊಲ್ಲದ ರಘುಕುಲದವಂ, ಪ್ರಜೆಗಳಿಗೋಸ್ಕರ ತನ್ನ ಸತಿಯನ್ನೇ ತ್ಯಾಗ ಮಾಡಿ ನಿನ್ನೊಲ್ಲದ ಆ ರಘುಕುಲದವಂ ಸೀವರಿಸಿಬಿಟ್ಟು ಕಾನನಕ್ಕೆ ಕಳುಹಿಸಿ ಬಾ ಎಂದು ಹೇಳಿದಾಗ ಆ ರಾಜಾಜ್ಞೆಯನ್ನು ಮೀರಲಾರದೆ ನಾನು ಬಂದಿದ್ದೇನೆಂದು ಹೇಳುತ್ತಾನೆ. ಆಗ ತುಂಬು ಗರ್ಭಿಣಿ ಸೀತಾಮಾತೆ ಯಾವ ರೀತಿ ವಿಶ್ಲೇಷಣೆಯನ್ನು ಮಾಡಿದಳೆಂಬುದು 'ಶ್ರೀ ರಾಮಾಯಣ ದಶನಂ'ನಲ್ಲಿ ಈ ರೀತಿ ವ್ಯಕ್ತವಾಗಿದೆ:

ಗೊನೆ ಬಿಟ್ಟ ಬಾಳೆ ಮರ ಬಿರುಗಾಳಿ ಬಂದಾಗ ನೆಲಕ್ಕೆ ಯಾವ ರೀತಿ ಅಪ್ಪಳಿಸುತ್ತದೆಯೋ, ಆ ರೀತಿ ಲಕ್ಷ್ಮಣನ ಮಾತು ನನ್ನ ಕಿವಿಗೆ ಬಿಳುವ ಮುನ್ನ; ಕಿವಿಯ ತಮಟೆಗೆ ತಲುಪುವ ಮುನ್ನವೇ ಅಂಗನೆ ಕೆಳಗೆ ಬೀಳುತ್ತಾಳೆ, ಆ ರೀತಿ ಕೆಳಗೆ ಬಿದ್ದಾಗ, ತಣ್ಣೀರು ಹಾಕಿ ಸೆರಗಿನಿಂದ ಗಾಳಿ ಬೀಸಿ ಈ ರೀತಿ ನಾನು ರಾಮನನ್ನು ಸೇವೆ ಮಾಡುವಂತಹ ಪ್ರಸಂಗ

ಬಂತಲ್ಲಾ ಎಂದು ಲಕ್ಷ್ಮಣ ಯೋಚನೆ ಮಾಡುತ್ತಾನೆ. ನಾವುಗಳು ಅಂತಹ ರಾಮರಾಜ್ಯದ ಕನಸು ಕಂಡಿರುವಂತಹ ಶ್ರೀರಾಮನನ್ನು ನಮ್ಮ ವಿರೋಧ ಪಕ್ಷದ ನಾಯಕರು 'ವಚನಭ್ರಷ್ಟರು' ಎಂದು ಹೇಳಿದ್ದಾರೆ. ಆ ಶ್ರೀರಾಮ ಮಂದಿರವನ್ನು 25 ವರ್ಷಗಳಾದರೂ ಇನ್ನೂ ನಮ್ಮ ಗೆಳೆಯರಿಗೆ ಕಟ್ಟಲು ಆಗಲಿಲ್ಲ.

(191) 10–07–2018 ಎಂವಿ:ಜಿಆರ್ 5–30

**ಶ್ರೀ ಭೋಜೇಗೌಡ (ಮುಂದು):–**

ಸ್ವಾಮಿ, ನಾವು ನಿಮಗೆ ಹೇಳುತ್ತಿರುವುದು ಶ್ರೀರಾಮ ಮಂದಿರವನ್ನು ಕಟ್ಟಿ ಎಂದು. ನಾವು ವಚನ ಭ್ರಷ್ಟರಲ್ಲ. ನಾವೆಲ್ಲರೂ ಸಹ ಶ್ರೀರಾಮನನ್ನು ಪೂಜಿಸುತ್ತೇವೆ. ಹಾಗಾಗಿ ವಚನ ಭ್ರಷ್ಟತೆಯ ಬಗ್ಗೆ ಮಾತನಾಡುವಾಗ, ನಾವು ವಚನ ಭ್ರಷ್ಟರಾಗಿಲ್ಲ. ತಾವು ವಚನ ಭ್ರಷ್ಟರೆಂದು ಹೇಳಿದ್ದೀರಿ ಅದು ಇಲ್ಲಿದೆ ನೋಡಿ ಅದನ್ನು ಹೇಳುತ್ತೇನೆ; ಅಂತಹ ತ್ಯಾಗ ಮಾಡಿ, ರಾಮರಾಜ್ಯ ಸ್ಥಾಪನೆ ಮಾಡಿದಂತಹವನು ಶ್ರೀರಾಮ. ಇವತ್ತು ನಾವು ಕೂಡ ರೈತರ ಹಿತ ಕಾಪಾಡುವಂತಹ ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಸರ್ಕಾರ ಮಾಡಿದ್ದೇವೆ. ಒಂದು ವಿಶ್ಲೇಷಣೆ ಮಾಡುತ್ತೇನೆ. ಮೊನ್ನೆ ನಮ್ಮ ಸ್ನೇಹಿತರು ಓದಿದರು, ಅದು ಇದೇ ವಿಧಾನ ಪರಿಷತ್‌ನಲ್ಲಿ ನಡೆದಿರುವಂಥದ್ದು. ನಿಮ್ಮ ಸಾಲಮನ್ನಾಕ್ಕೆ ನಮ್ಮ ಪಾಲು ಇಲ್ಲವೆಂದು ಅಂದು ನಿಮ್ಮ ನಾಯಕರು ಮಾತನಾಡಿದರು. ಈಗ ನಾವೆಲ್ಲರೂ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮಾತನಾಡುತ್ತೇವೆ. "ರೈತರ ಸಾಲವನ್ನು ಮನ್ನಾ ಮಾಡಲು ನಾನು ತಯಾರಿದ್ದೇನೆ." ಮಾನ್ಯ ವಿರೋಧಪಕ್ಷದ ನಾಯಕರೇ, ಇದನ್ನು ನಿಮ್ಮ ನಾಯಕರು ಹೇಳಿರುವಂಥದ್ದು. ನಾನು ಓದುತ್ತಿರುವುದು ಬೇರೆ ಯಾವುದು ಅಲ್ಲ, ವಿಧಾನ ಪರಿಷತ್‌ನಲ್ಲಿ ನಡೆದಿರುವಂಥದ್ದು, ಅದರ ದಿನಾಂಕ ಕೂಡ ಇದೆ. ಆದರೆ, ಅದಕ್ಕೆ ಹಣವನ್ನು ಎಲ್ಲಿಂದ ತರುವುದು. ನನಗೆ ಕೇಂದ್ರ ಸರ್ಕಾರ ಹಣವನ್ನು ಮುದ್ರಿಸುವ ಅಧಿಕಾರವನ್ನು ನೀಡಿಲ್ಲ. ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರ ಹಣವನ್ನು ನೀಡದೆ, ನಾವು ಹಣವನ್ನು ಎಲ್ಲಿಂದ ತರಬೇಕೆಂದು ಹೇಳಿ. ನಾನು ಕೂಡ ವಿರೋಧಪಕ್ಷದ ನಾಯಕನಾಗಿದ್ದಂತಹ ಸಂದರ್ಭದಲ್ಲಿ ಈ ರೀತಿಯೇ ಮಾತನಾಡಿದ್ದೇನೆ. ನಾನು ರೈತರ ಸಾಲ ಮನ್ನಾ ಮಾಡಲು ತಯಾರಿದ್ದೇನೆ. ಮುಂದಿನ ವರ್ಷ ಯಾವುದೇ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ರೈತರ ಸಾಲ ಮನ್ನಾ ಮಾಡೋಣವೆಂದು ನಾವೆಲ್ಲರೂ ತೀರ್ಮಾನ ಮಾಡೋಣ. ಮುಂದಿನ ವರ್ಷ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ರಸ್ತೆ ಮತ್ತು ದೀಪ ಯಾವುದೂ ಬೇಡ. ರೈತರ ಸಾಲ ಮನ್ನಾ ಮಾಡೋಣವೆಂದಲ್ಲಿ ನಾನು ಸಿದ್ದನಿದ್ದೇನೆ. ಎಲ್ಲರೂ ಮತವನ್ನು ಗಳಿಸಲು ರೈತರ ಸಾಲ ಮನ್ನಾ ಮಾಡುತ್ತೇವೆಂದು ಭಾಷಣ ಮಾಡಿದ ಹಾಗೆಯೇ ನಾನು ಕೂಡ ಭಾಷಣವನ್ನು ಮಾಡಿದ್ದೇನೆ. ಇದು ಆಗದೇ ಇರುವಂತಹ ವಿಚಾರವೆಂದು ಸಾರ್ವಜನಿಕ ಸಭೆಯಲ್ಲಿ ಹೇಳಿದ್ದೇನೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ನೆರವಿಗೆ ಬರಲಿ. ನಾವೆಲ್ಲರೂ ನಿಯೋಗ ಹೋಗೋಣ. ಅವರು ಇನ್ನು ಹೆಚ್ಚು ಹಣ ನೀಡಿದ್ದಲ್ಲಿ, ರಾಜ್ಯಕ್ಕೆ ಏನು ಬೇಕಾದರೂ ಮಾಡಲು ನಾನು ಸಿದ್ದನಿದ್ದೇನೆ. ಇದನ್ನು ಇಲ್ಲಿರುವಂತಹ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾವ ಮಹಾನ್ ನಾಯಕರು ಸಹ ಹೇಳಿಲ್ಲ. ತಮ್ಮ ನಾಯಕರು ಈ ಮಾತನ್ನು ಹೇಳಿದ್ದಾರೆ. ಹಾಗಿದ್ದರೆ ಕೇಂದ್ರ ಸರ್ಕಾರದ ಬಳಿ ಹೋಗೋಣ ನಾವೆಲ್ಲರೂ ಸಹ ನಿಮ್ಮ ಜೊತೆಗೆ ಬರುತ್ತೇವೆ. ನಾವು ಇನ್ನು ಪೂರ್ತಿ 54 ಸಾವಿರ ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡಿಲ್ಲ, ಅವರು ವಚನ ಭ್ರಷ್ಟರಾಗಿದ್ದಾರೆ, ಸುಮಾರು 34 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಲ್ಲ, ಬನ್ನಿ ಇನ್ನು 20 ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ತರೋಣ. ತಾವು ಇದಕ್ಕೆ ಏತಕ್ಕೆ ಸಿದ್ಧವಿಲ್ಲ? ಇದು ಸದನದಲ್ಲಿ ಹೇಳಿರುವಂತಹ ಮಾತು. ಸ್ವಾಮಿ, ಈಗ ತಾವು ಅದೇ ತರಹ ಇರಬೇಕಲ್ಲ. ತಾವು ವಿರೋಧ ಪಕ್ಷದಲ್ಲಿ ಇದ್ದಾಗ ಒಂದು ಮಾತನಾಡುವುದು, ಆಡಳಿತ ಪಕ್ಷದಲ್ಲಿ ಇದ್ದಾಗ ಒಂದು ಮಾತನಾಡುವುದು ಎಷ್ಟರಮಟ್ಟಿಗೆ ಸರಿ ಇದೆ. ವಚನಭ್ರಷ್ಟರು ಯಾರು ಎಂದು ನೀವೇ ಹೇಳಿ. ಹಾಗಾಗಿ ಮಾತನಾಡುವುದು ಸುಲಭ ಸ್ವಾಮಿ. ಆದರೆ, ಮಾತನಾಡುವುದಕ್ಕೆ ಮುಂಚೆ ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬೇಕಾಗುತ್ತದೆ. ಮಾತನಾಡುವುದಕ್ಕೆ ಮುಂಚೆ ನಾನು ಈ ಜಾಗದಲ್ಲಿ ನಿಂತುಕೊಂಡು ಏನನ್ನು ಮಾತನಾಡಿದ್ದೆ ಎಂದು ಒಮ್ಮೆ ಅವಲೋಕನ ಮಾಡಿದರೆ, ಇಂತಹ ಮಾತುಗಳಿಗೆಲ್ಲಾ ಕಡಿವಾಣ ಬೀಳುತ್ತದೆ. ಹಾಗಾಗಿ ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಬೇರೆ ಬೇರೆ ವಿಚಾರಗಳು ತುಂಬಾ ಇದೆ. ಇದರ ಬಗ್ಗೆ ಎಲ್ಲರೂ ಸಹ ಮಾತನಾಡಿದ್ದಾರೆ. ನಾವು ನೂರಕ್ಕೆ–ನೂರು ಹೇಳುತ್ತೇವೆ, ಕಾಂಗ್ರೆಸ್ ಪಕ್ಷ, ಜೆಡಿಎಸ್ ಮತ್ತು ಬಿ.ಎಸ್.ಪಿ., ಪಕ್ಷ ಸೇರಿಕೊಂಡು ಈ ಬಜೆಟ್ ಅನ್ನು ಕೊಟ್ಟಿದೆ. ನಿಮ್ಮ ಅಶ್ವಮೇಧದ ಕುದುರೆಯನ್ನು ಇಡೀ ರಾಷ್ಟ್ರದಲ್ಲಿ ಯಾರು ಕಟ್ಟಿ ಹಾಕಿರಲಿಲ್ಲ. ಆದರೆ, ಅದನ್ನು ನಾವು ಕಟ್ಟಿ ಹಾಕಿದ್ದೇವೆ. 2019ಕ್ಕೆ ಬನ್ನಿ, ಬಂದು ಅದನ್ನು ಬಿಡಿಸಿಕೊಂಡು ಹೋಗಿ. ಅದನ್ನು ಕಟ್ಟಿಹಾಕುವಂತಹ ತಾಕತ್ತು ಇದೆ, ಅದಕ್ಕೆ ನಾವು ಅದನ್ನು ಕಟ್ಟಿ ಹಾಕಿದ್ದೇವೆ, ಬಿಡಿಸಿಕೊಳ್ಳುವುದಕ್ಕೆ ಮುಂದಕ್ಕೆ ಬನ್ನಿ ನೋಡೋಣ. ಇನ್ನು ಮುಂದುವರೆದು ಹೇಳುತ್ತೇನೆ. ನಾನು ಮೊನ್ನೆಯ ದಿವಸ ಹೇಳಿದ್ದೇನೆ, ನಾನು ಅದನ್ನು ಮತ್ತೊಮ್ಮೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆ ದಿನ ನಾನು "ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ" ಬಗ್ಗೆ ಮಾತನಾಡಿದ್ದೇನೆ, ಆದರಿಂದ ತಮಗೆ ಬಹಳ ಬೇಸರವಾಯಿತು. ಬೇಸರವಾಗಿ ತಾವೆಲ್ಲರೂ ಸದನದ ಬಾವಿಗೆ ಇಳಿದಿದ್ದಿರಿ. ಆದರೆ, ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ನಮ್ಮ ರೈತರಿಗೆ ಅತ್ಯಂತ ಮಾರಕವಾಗಿರುವಂತಹ ಯೋಜನೆ, ಹೌದೋ, ಅಲ್ಲವೋ ಎಂದು ಎಲ್ಲಿ ಬೇಕಾದರೂ ಚರ್ಚೆ ಮಾಡೋಣ. ನಮ್ಮ ಆಯವ್ಯಯದಲ್ಲಿ ಇದೆ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಗೆ ಸುಮಾರು 857 ಕೋಟಿ ರೂಪಾಯಿಗಳನ್ನು *Universal Sompo* General Insurance Company Ltd., ಗೆ ಜಮಾ ಮಾಡಿದ್ದಾರೆ, ಕೇಂದ್ರ ಸರ್ಕಾರಕ್ಕೆ ಅಲ್ಲ. ನೀವು ಯಾವ ಕಂಪನಿಯನ್ನು ಹುಟ್ಟು ಹಾಕಿದ್ದೀರಿ..... ದಯಮಾಡಿ ವಿರೋಧ ಪಕ್ಷ ನಾಯಕರೆ, ಅದನ್ನು ಹೇಳಿದರೆ ನಿಮಗೆ ಉರಿಯಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಯವರೇ, ತಾವು ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ. ಮಧ್ಯ ವಿರೋಧ ಪಕ್ಷದ ನಾಯಕರು ಎದ್ದಾಗ, ಅವರಿಗೆ ಅವಕಾಶ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುವುದು ರೂಢಿ. ಹಾಗಾಗಿ ತಾವು ನನಗೆ ಅನುಮತಿ ಕೊಟ್ಟರೆ ಒಂದು ನಿಮಿಷ ಮಾತನಾಡುತ್ತೇನೆ. ಸಾಮಾನ್ಯವಾಗಿ yield ಆಗಬೇಕೆಂದು ಉಂಟು. ವಿರೋಧ ಪಕ್ಷದ ಜವಾಬ್ದಾರಿ ಇರುವವರು ನಿಂತಾಗ yield ಆಗುವುದು ರೂಢಿ.

(ಗೊಂದಲ)

ಈಗ ಪೀಠಕ್ಕಿಂತ ದೊಡ್ಡವರು ಯಾರೂ ಇಲ್ಲ. ಈ ಸದನದಲ್ಲಿ ಸಭಾಪತಿಯವರ ಸ್ಥಾನಕ್ಕಿಂತ ಯಾರೂ ದೊಡ್ಡವರಲ್ಲ. ನಾನು ಎದ್ದು ನಿಂತು ಒಂದು ನಿಮಿಷ ಅನುಮತಿಯನ್ನು ಕೇಳಿದ್ದೇನೆ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಅವರು ಕುಳಿತುಕೊಳ್ಳಲಿ. ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ yield ಆಗುವುದಿಲ್ಲವೇ?

**ಡಾ.ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಹೇಳಿ ಪೀಠದಿಂದ ಹೇಳುತ್ತಿದೆ ಎಂದು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಭಾವನೆಯನ್ನು ಹೇಳುತ್ತಿದ್ದಾರೆ, ಅದನ್ನು ಅವರು ಕೇಳಿಸಿಕೊಳ್ಳಲಿ ಅವರಿಗೆ ಅದನ್ನು ಕೇಳಿಸಿಕೊಳ್ಳುವಂತಹ ಸೌಜನ್ಯತೆ ಇಲ್ಲವೇ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅದನ್ನು ಕೇಳಿಸಿಕೊಂಡ ಮೇಲೆ, ವಿರೋಧಪಕ್ಷ ಮಧ್ಯ ಪ್ರವೇಶ ಮಾಡಬೇಕಾಗುತ್ತದೆ.

**ವೈಸ್‌ಛೇರ್ಮನ್:–** ತಾವು yield ಆಗದಿದ್ದರೆ....

(ಗೊಂದಲ)

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದವರು ಯಾವುದೇ ಮಾತುಗಳನ್ನು ಆಡಿದರೂ ಸಹ ಅದನ್ನು ನಾನು ಜೀರ್ಣಿಸಿಕೊಂಡಿದ್ದೇನೆ. ನಿಮಗೆ ಜೀರ್ಣಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವುದಕ್ಕೆ ನಾನು ಏನು ಮಾಡುವುದಕ್ಕೆ ಆಗುತ್ತದೆ. ನಮ್ಮ ಮಾತುಗಳನ್ನು ತಾವು ಸ್ವಲ್ಪ ಜೀರ್ಣ ಮಾಡಿಕೊಳ್ಳಿ ಸ್ವಾಮಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರ ಜೀರ್ಣಶಕ್ತಿಯ ಬಗ್ಗೆ ಆಕ್ಷೇಪಣೆ ಇಲ್ಲ. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಬಗ್ಗೆ ಮೊನ್ನೆ ಏನನ್ನು ಮಾತನಾಡಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಇಂತಹ ಆರೋಪಗಳನ್ನು ಮಾಡುವಾಗ, ವಿರೋಧಪಕ್ಷದ ಸ್ಥಾನದಿಂದ ನಾನು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಇದೆ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ನೀಡಿದಾಗ, ಅವರು ಒಂದು ನಿಮಿಷ ಇಲ್ಲದಿದ್ದರೆ, ಒಂದು ಗಂಟೆ ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಸದನ ಏನನ್ನಾದರೂ ಮಾತನಾಡುವುದಕ್ಕೆ ಇರುವಂಥದ್ದಲ್ಲ. ಏನೇನೋ ಮಾತನಾಡಬಾರದು. ಆ ರೀತಿ ಮಾತನಾಡಿದರೆ ನಾವು ಮಧ್ಯಪ್ರವೇಶ ಮಾಡಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೆ ಇರುವಂತಹ ಮಾಹಿತಿ ಪ್ರಕಾರ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಕರ್ನಾಟಕದ ರೈತರು ರಾಜ್ಯ ಸರ್ಕಾರದ ನೆರವನ್ನು ಸೇರಿದಂತೆ, 11 ಸಾವಿರ ಕೋಟಿ ರೂಪಾಯಿಗಳ ಪರಿಹಾರವನ್ನು ಪಡೆದಿರುತ್ತಾರೆ ಎನ್ನುವಂತಹ ಅಧಿಕೃತ ಮಾಹಿತಿ ನನ್ನ ಕೈಯಲ್ಲಿದೆ. ಹಾಗಾಗಿ ಅವರ ಮತ್ತು ನಮ್ಮ ಮಧ್ಯೆ ವಿವಾದದ ಚರ್ಚೆಗಳು ಬೇಡ. ತಾವು ಇದರ ಬಗ್ಗೆ ಏನಾದರೂ ಮಾಹಿತಿಯನ್ನು ಸದನಕ್ಕೆ ಒದಗಿಸಬಹುದಾ? ಇದರ ಬಗ್ಗೆ ಸಭಾನಾಯಕರಿಗೆ ಮಾಹಿತಿ ಕೊಡುವುದು. ಈಗ ಅವರು ಹೇಳುತ್ತಿರುವುದು ನಮ್ಮ ರೈತರೆಲ್ಲರೂ ಹಾಳಾದರೂ ಎಂದು. ಆದರೆ, ನನ್ನ ಬಳಿ ಇರುವ ಮಾಹಿತಿ ಪ್ರಕಾರ ಸುಮಾರು 835 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಕಟ್ಟಿದೆ. ಅದು ಸರಿ ಇರಬಹುದು, ನನ್ನ ಬಳಿ ಅದರ ಲೆಕ್ಕವಿಲ್ಲ. ನನಗೂ ಸಹ ಕೇಂದ್ರ ಸರ್ಕಾರದಿಂದ ಅಧಿಕೃತವಾಗಿ ಮಾಹಿತಿ ಬಂದಿದೆ. ಸುಮಾರು 11 ಸಾವಿರ ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದ ರೈತರು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಫಲಾನುಭವಿಗಳಾಗಿದ್ದಾರೆಂದು ನನ್ನ ಹತ್ತಿರ ಮಾಹಿತಿ ಇದೆ. ಅವರು ಹೇಳುತ್ತಿರುವ ಮತ್ತು ನಾನು ಹೇಳುತ್ತಿರುವ ಮಾತುಗಳಲ್ಲಿ ತಪ್ಪಾಗಿರಬಹುದು, ಅದು ನನಗೆ ಗೊತ್ತಿಲ್ಲ. ತಾವು ಏನಾದರೂ ಇಂತಹ ವಾದಗಳನ್ನು ಚರ್ಚೆ ಮಾಡುವ ಮುಂಚೆ, ಮಾನ್ಯ ಸಭಾನಾಯಕರಿಗೆ ಒಂದು ಸ್ಪಷ್ಟನೆಯನ್ನು ಕೊಡಬೇಕೆಂದು ಆಗ್ರಹಿಸುತ್ತೇನೆ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಅದನ್ನು dispute ಮಾಡುತ್ತಿಲ್ಲ. I am not going to dispute that. ಅವರು 11 ಸಾವಿರ ಕೋಟಿ ರೂಪಾಯಿಗಳು ಎಂದು ದಾಖಲೆ ಇಟ್ಟಿರಬಹುದು. ನೋಡೋಣ ನಾನು ನಾಳೆ ಇನ್ನು ಕೆಲವು ದಾಖಲೆಗಳನ್ನು ತರುತ್ತೇನೆ. ಆದರೆ, ಒಂದು ವಿಚಾರ ಸ್ಪಷ್ಟವಾಗಬೇಕು. ನಮ್ಮ ಒಟ್ಟು 2.5 ಸಾವಿರ ಕೋಟಿ ರೂಪಾಯಿಗಳು ಈ *Universal Sompo* General Insurance Company Ltd.,ಗೆ ನಮ್ಮ ರಾಜ್ಯದಿಂದ ಹೋಗಿದೆ. ಈ 2.5 ಸಾವಿರ ಕೋಟಿ ರೂಪಾಯಿಗಳಿಗೆ, ಎಷ್ಟು ವಿಮೆ ಬರಬೇಕಾಗಿದೆ, ಆ total loss ಅಷ್ಟು ವಿಮೆ ಬಂದಿಲ್ಲವೆಂದು ನಾನು ಹೇಳುತ್ತಿರುವುದು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ಮಳೆಗಾಲ ಅಲ್ಲ. ಕಳೆದ ನಾಲ್ಕು ವರ್ಷಗಳಿಂದ ಸತತ ಬರಗಾಲ ಇದೆ. There is a total failure of all crops. ಅದು ಇದು ಎಂದಲ್ಲ, There is a total failure of all crops in the State. 'Total failure of all crops in the State' ಎಂದಾಗ, ಸಂಪೂರ್ಣ ವಿಮೆ ಹಣ ಇಲ್ಲಿಗೆ ಬರಬೇಕು, ಅದು ಬಂದಿದೆಯಾ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ, ಏನು ಷರತ್ತು ಇತ್ತು, ರಾಜ್ಯ ಸರ್ಕಾರ ಎಷ್ಟು ಮಾಡಿದೆ, ಎನ್ನುವುದರ ಬಗ್ಗೆ ಮಾನ್ಯ ಕೃಷಿ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ನೀಡಲಿ.

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಮಾತನಾಡುವುದಕ್ಕೆ ಅವಕಾಶ ನೀಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, let the Hon'ble Minister for Agriculture make a statement in this regard on the floor of the House.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಅವರು yield ಆಗಿಲ್ಲ.

**ಶ್ರೀ ಬಂಡೆಪ್ಪ ಕಾಶಂಪೂರ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದಿಂದ ಎಷ್ಟರಮಟ್ಟಿಗೆ ಹೋಗಿದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರ ಬಳಿ ದಾಖಲೆ ಇದೆ. ಈಗ ಕೇಂದ್ರ ಸರ್ಕಾರದಿಂದ ಎಷ್ಟು ಬಂದಿದೆ ಎಂದು ಇದೆ ಅದನ್ನು ಇಟ್ಟುಬಿಡಿ, ಆಗ ಅವರಿಗೆ ಗೊತ್ತಾಗುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಸದನದಲ್ಲಿ ಸರ್ಕಾರ ಎಷ್ಟು ಕಟ್ಟಿತ್ತು ಎಂದು ಒಂದು ಹೇಳಿಕೆಯನ್ನು ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವತ್ತು ಮಾತ್ರವಲ್ಲ, ಮೊನ್ನೆಯ ದಿವಸ ಕೂಡ ಅವರು ಹೇಳಿದ್ದಾರೆ, ನಮಗೂ ಮತ್ತು ಅವರಿಗೂ ಸಹ ಚರ್ಚೆಯಾಗಿದೆ. ಹಾಗಾಗಿ ಈ ಸದನ ನಮ್ಮಿಬ್ಬರ ಜಗಳದ ವೇದಿಕೆಯಾಗುವುದು ಬೇಡ. ಮಾನ್ಯ ಭೋಜೇಗೌಡರೇ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

**(ಮುಂದು...)**

(192) 10.07.2018 5.40 ವೈಎಲ್-ಎಂಡಿ

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಜಗಳವೆಂದು ಏಕೆ ಯೋಚನೆ ಮಾಡುತ್ತಿದ್ದಾರೆ. ಚರ್ಚೆ ಮಾಡಲಿ. ಅವರು ಹಿರಿಯರು ನಾವು ಅವರ ಹತ್ತಿರ ಜಗಳ ಮಾಡುತ್ತಿದ್ದೇವೆಯೋ? ಅವರು ಸ್ನೇಹಿತರ ಹತ್ತಿರವೇ ಜಗಳ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರಲ್ಲಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಸ್ವಲ್ಪ ಕೇಳಲಿ. ವಿಪರೀತ ವಾದ ಆದಾಗ ಅಥವಾ ತಾರಂತ್ಯಕ್ಕೆ ಏರಿದಾಗ ಏನೆಂದು ಹೇಳುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾನ್ಯ ಸದಸ್ಯರಾದ ಭೋಜೇಗೌಡರೇ ಹೇಳಲಿ. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ನಮ್ಮ ನಮ್ಮಗಳ ಮಧ್ಯೆಯೇ ಚರ್ಚೆ ನಡೆಯುತ್ತಿದೆ. ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂಬುದರ ಬಗ್ಗೆ ನಾಳೆ ಕೃಷಿ ಸಚಿವರಿಂದ ಒಂದು statement ಮಾಡಿಸಿ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, statement ಮಾಡಿಸಲಿ. ನಮಗೂ ಗೊತ್ತಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ವೇಳೆ ಇದು ರಾಜ್ಯದ ಹಿತಕ್ಕೆ ಸಂಬಂಧಪಟ್ಟಂತಹ ವಿಚಾರ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ ಇದರಲ್ಲಿ ರಾಜಕಾರಣ ಇಲ್ಲ. ರಾಜ್ಯದ ಹಿತಕ್ಕೆ ಸಂಬಂಧಪಟ್ಟಂತಹ ವಿಚಾರವಾಗಿದೆ. ಒಂದು ಪಕ್ಷ ನಮ್ಮ ಕಡೆಯಿಂದ ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುತ್ತೇವೆ. ಒಂದು ವೇಳೆ ಮಾನ್ಯ ಸದಸ್ಯರಾದ ಭೋಜೇಗೌಡರ ಕಡೆಯಿಂದ ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ತಾವು ಅವರಿಗೆ ಹೇಳಬೇಕು. ಏಕೆಂದರೆ, ಅವರ ತಪ್ಪನ್ನು ಸರಿಪಡಿಸಿಕೊಳ್ಳುವುದಿಲ್ಲ. ಆದರೂ ಅಡ್ಡಿ ಇಲ್ಲ. ದಯವಿಟ್ಟು ಆ ರೀತಿ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು. ಒಂದು ನಿಮಿಷ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದರ ಮೊದಲು ಏನಿತ್ತು ಎಂಬುದರ ಬಗ್ಗೆಯೂ ಬೆಳಕು ಚೆಲ್ಲಬೇಕು.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು. ಸರಿ ಇದ್ದರೆ ತೊಂದರೆ ಇಲ್ಲ. ಅವರಿಗೆ ಮಾಹಿತಿ ಬಂದಾಗ ಮಾಡಲಿ. ನಾನೇನು ಸರ್ವಜ್ಞ ಅಲ್ಲಾ. ನಾನು ಸಹ ಕಣ್ಣಿನಿಂದ ನೋಡಿಲ್ಲ. ನಾನು ಇರುವ ವಿಚಾರವನ್ನು ಮಾತನಾಡಿದ್ದೇನೆ. ದಯವಿಟ್ಟು ನಮ್ಮ ಸ್ನೇಹಿತರು ನನ್ನ ಮೇಲೆ ಏಕೆ ಅಷ್ಟೊಂದು ಕೋಪ ಮಾಡಿಕೊಳ್ಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಪ್ರೀತಿಯಿಂದಲೇ ಹೇಳುತ್ತಿದ್ದೇವೆ. ಯಾರು ಮಾನ್ಯ ಸದಸ್ಯರ ಮೇಲೆ ಪ್ರೀತಿ ಇಲ್ಲವೆಂದು ಹೇಳಿದ್ದಾರೆ.

(ಗೊಂದಲ)

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇರಲಿ. ಅವರೆಲ್ಲರೂ ಒಳ್ಳೆಯ ಸ್ನೇಹಿತರು ಎಂದು ಭಾವಿಸಿದ್ದೇನೆ. ನಾನು ಮಾತನಾಡುವುದಕ್ಕೆ ನಿಂತರೆ ಆ ಭಾಗದ ಎಲ್ಲರೂ ಎದ್ದು ನಿಲ್ಲುತ್ತಾರೆ. ಏಕೆ ಎದ್ದು ನಿಲ್ಲುತ್ತಾರೆ.

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಅವರಿಂದ ರಾಮಾಯಣ ದರ್ಶನ ಮಾಡಿದ ಹಾಗೆ ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವವರಿಗೆಲ್ಲಾ ಮಾನ್ಯ ಸದಸ್ಯರ ಮೇಲೆ ಪ್ರೀತಿ ಇದೆ. ಅವರು ಮಾತನ್ನು ಮುಂದುವರೆಸಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇವತ್ತು ಈ ಸದನದಲ್ಲಿ ರಾಮಾಯಣ ದರ್ಶನ ಮಾಡಿದ ಹಾಗೆ ಆಯಿತು. ಮಾನ್ಯ ಸದಸ್ಯರಿಗೆ ಧನ್ಯವಾದಗಳು.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರಿಗೂ ಧನ್ಯವಾದಗಳು.

**ವೈಸ್ ಛೇರ್ಮನ್:–** ಮಾನ್ಯ ಭೋಜೇಗೌಡರೇ ಈಗಾಗಲೇ 30 ನಿಮಿಷವಾಗುತ್ತಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ರಾಮನ ಭಕ್ತರಾಗಿರುವುದು ಗೊತ್ತಾಗಿದೆ. ಆದಷ್ಟು ಬೇಗ ರಾಮನ ಭಕ್ತರಾಗಿ ಈ ಪಾರ್ಟಿಗೆ ಬರಲಿ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ವಿಚಾರ ಏನೆಂದರೆ, ನನ್ನ ಮನೆ ದೇವರು ಶ್ರೀರಾಮ. ಹಾಗಾಗಿ ಅವರು ಇನ್ನೂ ಮುಂದೆ ಯಾವುದೇ ಕಾರಣಕ್ಕೂ ಶ್ರೀರಾಮನನ್ನು ಗುತ್ತಿಗೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೇನೆ. ಅವರು ಗುತ್ತಿಗೆಗೆ ತೆಗೆದುಕೊಳ್ಳುವುದು ಬೇಡ.

**ಶ್ರೀ ವೆಂಕಟರಾವ್ ನಾಡಗೌಡ(ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಇರುವುದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಅಲ್ಲ. ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಆಗಿದೆ. ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಆಗಿದೆ. ಆ ಹಣ ರೈತರಿಗೆ ಮುಟ್ಟಿದೆಯೇ ಎನ್ನುವಂತದು ಇಲ್ಲಿನ ಪ್ರಶ್ನೆ. ಆದರೆ, ಅವರುಗಳು ರೈತರಿಗೆ ಬರಬೇಕಾದ ಹಣ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಅದು ಸತ್ಯ. ಏಕೆಂದರೆ, ನನ್ನ ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿಯೂ ರೈತರಿಗೆ ಹಣ ತಲುಪಿಲ್ಲ. ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಕೇಂದ್ರ ಸರ್ಕಾರವು ಕಟ್ಟಬೇಕಾದ share ನ್ನು ಕೇಂದ್ರ ಸರ್ಕಾರ ಕಟ್ಟಿರುತ್ತದೆ. ಅದಕ್ಕೆ ರಾಜ್ಯ ಸರ್ಕಾರ ಏನು share ಕಟ್ಟಬೇಕೋ ಅದನ್ನು ಕಟ್ಟಿರುತ್ತದೆ. ಅವರ ಪ್ರಶ್ನೆ ರೈತರಿಗೆ ಹಣ ಮುಟ್ಟಿಲ್ಲ ಎಂಬುದಾಗಿದೆ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆ ರೀತಿ ಅಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಒಟ್ಟು ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಯ ನ್ಯೂನತೆ ಬಗ್ಗೆಯೂ ಚರ್ಚೆ ಆಗಲಿ. ಅದಕ್ಕಿಂತ ಮೊದಲು ರಾಜ್ಯದಲ್ಲಿ ಏನು ಪಾಲಿಸಿ ಇತ್ತು. ಈಗ ಯಾವ ಪಾಲಿಸಿ ಬಂದಿದೆ.

**ಶ್ರೀ ವೆಂಕಟರಾವ್ ನಾಡಗೌಡ:-** ಮಾನ್ಯ ಸಭಾಪತಿಯವರೇ, ನಾನು ಸಹ ಅದನ್ನೇ ಹೇಳುತ್ತಿರುವುದು ರೈತರಿಗೆ ಹಣ ಮುಟ್ಟಿರುವುದಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದನ್ನು ನಾವು ಮತ್ತು ಅವರು ಕುಳಿತುಕೊಂಡು ಹೇಗೆ ಸರಿಪಡಿಸಬೇಕೆಂಬುದರ ಬಗ್ಗೆ ಚರ್ಚೆ ಆಗಲಿ.

**ಶ್ರೀ ವೆಂಕಟರಾವ್ ನಾಡಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೂಡಾ ಅದನ್ನೇ ಹೇಳುತ್ತಿರುವುದು. ಇಲ್ಲಿ ಬಂದಿರುವುದು ಸರ್ಕಾರದ ಪ್ರಶ್ನೆ ಅಲ್ಲ. ನಾವು ರೈತರ ಹತ್ತಿರ ಏನು ಹಣವನ್ನು ಕಟ್ಟಿಸಿಕೊಂಡಿದ್ದೇವೆ, ಅದರ ಷೇರು ಆ ರೈತರಿಗೆ ಮುಟ್ಟಿಲ್ಲ ಎಂಬುದಾಗಿದೆ. ಅದನ್ನೇ ಅವರು ಸಹ ರೈತರಿಗೆ ಸಿಗಬೇಕಾಗಿದ್ದು ಸಿಕ್ಕಿಲ್ಲ ಎಂದು ಹೇಳುತ್ತಿರುವುದು. ಕೆಲವು ಕಡೆ ಏನಾಗಿದೆಯೆಂದರೆ, ನಾನು ಯಾವ ಕಂಪನಿಗೆ ಹಣ ಕಟ್ಟಲಾಗಿದೆ ಎಂದು ಜಿಲ್ಲಾಧಿಕಾರಿಗಳಿಗೆ ಕೇಳಿದರೆ, ಜಿಲ್ಲಾಧಿಕಾರಿಗಳು ನಮ್ಮ ಹತ್ತಿರ ಮಾಹಿತಿ ಇಲ್ಲವೆಂದು ಹೇಳುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಮ್ಮ ಮಾಹಿತಿಯೇನೆಂದರೆ, ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಜಾಸ್ತಿ ಸಿಕ್ಕಿದೆ ಎಂಬುದಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಕೊಡಬೇಕಾದ ಸಮಯವನ್ನು ಅವರಿಗೆ ನೀಡಿದ್ದೀರಿ.

**ಶ್ರೀ ವೆಂಕಟರಾವ್ ನಾಡಗೌಡ:–** ಮಾನ್ಯ ಸಭಾಪತಿಯವರೇ, ಒಂದು ಜಿಲ್ಲೆಯಲ್ಲಿ ಸಿಕ್ಕಿರಬಹುದು. ಇನ್ನೊಂದು ಜಿಲ್ಲೆಯಲ್ಲಿ ಸಿಕ್ಕಿರುವುದಿಲ್ಲ. ನಮ್ಮ ಜಿಲ್ಲೆಗೂ ಸಿಕ್ಕಿಲ್ಲ. ಅವರ ಜಿಲ್ಲೆಗೂ ಸಿಕ್ಕಿಲ್ಲ. ಅವರು ಮಾತನಾಡುತ್ತಾರೆ. ಅದನ್ನು ನೇರವಾಗಿ ಕೊಟ್ಟು ಬಿಡಿ ಎಂದರೆ, ಅವರ ಹತ್ತಿರ ಬಂದ ತಕ್ಷಣ, ನಮ್ಮ ಜಿಲ್ಲೆಗೆ ಬಂದ ಹಾಗೆ ಆಗುತ್ತದೆಯೇ? ಕೆಲವು ಜಿಲ್ಲೆಗೆ ಸಿಕ್ಕಿರಬಹುದು.

**ಶ್ರೀ ಎಸ್.ಎಲ್.ಧರ್ಮೇಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯಮಾಡಿ.

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯ ಹಸ್ತಾಂತರವಾಗುತ್ತಿದೆ. ದಯವಿಟ್ಟು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದೇ ಚರ್ಚೆ ಮಾಡಲಿ.

**ಶ್ರೀ ಎಸ್.ಎಲ್.ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ವಿರೋಧ ಪಕ್ಷ ಇರಬಹುದು. ಆಡಳಿತ ಪಕ್ಷ ಇರಬಹುದು. ರೈತರ ಹಿತ ಕಾಪಾಡಬೇಕೆನ್ನುವುದು ನಮ್ಮ–ನಿಮ್ಮಗಳ ಉದ್ದೇಶ. ಈ ವಿಷಯದಲ್ಲಿ ಯಾವುದೇ ರೀತಿಯ ರಾಜಕೀಯ ಮಾಡುವುದು ಬೇಡ. ಫಸಲು ಬೀಮಾ ಯೋಜನೆಯನ್ನು ದೂರುವುದಕ್ಕೆ ತಯಾರಿಲ್ಲ. ಅದರಲ್ಲಿ ಹೊಸದಾಗಿ introduce ಆಗಿದೆ. ಹೊಸದಾಗಿ introduce ಆದಾಗ ಕೆಲವು ಲೋಪದೋಷಗಳು ಬರುವುದು ಸಹಜ. ನಾವು ಯಾರು ಅದರ ಬಗ್ಗೆ ಬೇಜಾರು ಮಾಡಿಕೊಳ್ಳುವುದು ಬೇಡ. ಒಟ್ಟಾರೆಯಾಗಿ ಇದರಿಂದ ರೈತರಿಗೆ ಅನುಕೂಲವಾಗಬೇಕು. ನಮಗೆ ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಗೌರವ ಇದೆ, ಅವರು ಯಾವಾಗಲೂ ಒಳ್ಳೆಯ ಮಾತನ್ನೇ ಆಡುತ್ತಾರೆ. ಕೆಲವೊಂದು ವಿಷಯಗಳಲ್ಲಿ ಒಳ್ಳೆಯ ಮಾಹಿತಿ ಕೊಡುತ್ತಾರೆ. ಹೊಸದಾಗಿ introduce ಆದಾಗ ಲೋಪದೋಷಗಳು ಬರುವುದು ಸಹಜ. ನಾನು ಡಿಸಿಪಿ ಅಧ್ಯಕ್ಷನಾಗಿ ನೋಡಿದ್ದೇನೆ. ಇದರಲ್ಲಿ ಲೋಪಗಳಿವೆ. ಇದು ಕೆಟ್ಟದು ಎಂದು ಹೇಳುವುದಕ್ಕೆ ತಯಾರಿಲ್ಲ. ಈ ನ್ಯೂನತೆಯನ್ನು ಸರಿಪಡಿಸೋಣ. ಮಾತಿನ ಮುಖಾಂತರ ತೀರ್ಮಾನ ಮಾಡಿಕೊಳ್ಳೋಣ. ಯಾರಿಗೂ ಇದರ ಬಗ್ಗೆ ಬೇಸರ ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಮಾತನ್ನು ಅವರ ತಮ್ಮನಾದ ಮಾನ್ಯ ಭೋಜೇಗೌಡರಿಗೆ ಹೇಳಲಿ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನೋಡಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮನಿಗೆ ಹೇಳಿ ಎಂದು ಹೇಳುತ್ತಾರೆ. ನಮಗೆ ಇಂತಹ ಮಾತಿನಿಂದ ಉರಿಯುವುದಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಈ ಮಾತನ್ನು ಪ್ರೀತಿಯಿಂದ ಹೇಳುತ್ತಿದ್ದೇನೆ. ನಾನು ನಿಜವನ್ನೇ ಹೇಳುತ್ತಿದ್ದೇನೆ. ಮನುಷ್ಯನ ಕಿವಿ ಎಷ್ಟು ಸೂಕ್ಷ್ಮ ಎಂಬುದನ್ನು ನೀವೇ ನೋಡಿ. ಮಾನ್ಯ ಸದಸ್ಯರಿಗೆ ಈ ಮಾತನ್ನು ಬಹಳ ಪ್ರೀತಿಯಿಂದಲೇ ಹೇಳಿದೆ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ, ಸಂಜೆ ಸಮಯದಲ್ಲಿ ಸದನದಲ್ಲಿ ನಿದ್ದೆ ಹೋಗುವುದು ಬೇಡವೆಂದು ನಾನು ಈ ರೀತಿ ಮಾಡಿದ್ದೆ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಅದ್ಭುತವಾಗಿ ಕಾವ್ಯ ವಾಚನ ಮಾಡಿದ್ದಾರೆ. ಆದರೆ, ನನಗೆ ಅದು ರೆಕಾರ್ಡ್ ಆಗಿದೆಯೋ, ಇಲ್ಲವೋ ಎಂದು ಅನುಮಾನವಾಗಿದೆ. ಏಕೆಂದರೆ, ರೆಕಾರ್ಡ್ ಮಾಡುವವರಿಗೆ ಕಾವ್ಯದ ಜ್ಞಾನ ಬೇಕಲ್ಲವೇ?

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ನಿಜವಾಗಿಯೂ ಹೇಳುತ್ತೇನೆ. ಇದರಲ್ಲಿ, ವಿಶೇಷವಾಗಿ ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆ ಬಗ್ಗೆ ಸುದೀರ್ಘವಾದ ಚರ್ಚೆ ಆಗಬೇಕಾಗಿದೆ. ಏಕೆಂದರೆ, ಈ ರಾಷ್ಟ್ರದ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಮಹತ್ತರವಾಗಿರುವಂತಹ ದೊಡ್ಡ ಯೋಜನೆಯನ್ನು ಇಡೀ ರಾಷ್ಟ್ರದ ರೈತರಿಗಾಗಿ ತಂದಿದ್ದಾರೆ. ನಾವು ಕೂಡಾ ಇದರ ಬಗ್ಗೆ ಬಹಳ ಆಶಾದಾಯಕವಾಗಿದ್ದೆವು. ಈಗಲೂ ಸಹ ಇದ್ದೇವೆ, ಇಲ್ಲವೆಂದು ಹೇಳುವುದಿಲ್ಲ. ನನಗೆ ಒಂದು ವಿಚಾರ ಏನೆಂದರೆ ನಾವೆಲ್ಲರೂ ಯೋಚನೆ ಮಾಡಬೇಕಾಗಿರುವುದು, we have got so many Insurance Companies in the country. ನಮ್ಮ ರಾಜ್ಯದಲ್ಲಿಯೂ ಸಹ ಹತ್ತು ಹಲವಾರು Insurance Company ಗಳು ಇವೆ. ಅವೆಲ್ಲವೂ ಸಹ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಂತಹ Insurance Company ಗಳು. ಒಂದಲ್ಲಾ ಒಂದು ರೀತಿಯಲ್ಲಿ affiliated to the Government. ಈ ಒಂದು *Universal Sompo's* General Insurance *Company Ltd* ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಗೆ ಇಡೀ ರಾಷ್ಟ್ರದಲ್ಲಿ premium ಏನು collect ಮಾಡುತ್ತಿದ್ದೆ, ಅದು ಯಾವುದೇ ರೀತಿಯಲ್ಲಿಯೂ ಸರ್ಕಾರಕ್ಕೂ ಮತ್ತು ಕಂಪನಿಗೂ ಸಂಬಂಧ ಇಲ್ಲ. ಈ ಮಾತನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಇಂತಹ ಒಂದು ಕಂಪನಿಯಿಂದ ಉಂಟಾಗುವಂತಹ ಪ್ರಮೇಯ ಈ ನಾಡಿನಲ್ಲಿರತಕ್ಕಂಥ ನಮ್ಮ ರೈತರಿಗೆ ಬೇಕಾಗಿತ್ತೇ ಎಂಬುದು ನನ್ನ ಮೂಲ ಪ್ರಶ್ನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ Insurance Company ಗಳು ಲಾಭದ ದೃಷ್ಟಿಯಿಂದಲೇ ಹುಟ್ಟಿಕೊಳ್ಳುವುದು.

**ವೈಸ್ ಛೇರ್ಮನ್:-** ಮಾನ್ಯ ಭೋಜೇಗೌಡರೇ ತಮ್ಮ ಮಾತು ಮುಗಿಯಿತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೆ ಮೊದಲು ಲಾಭವನ್ನು ಪಡೆಯದೇ ಬೇರೆ ಉದ್ದೇಶ ಇರುವುದಿಲ್ಲ. ನಾವು ಕಂಪನಿಯ ಲಾಭದ ವಿಚಾರ ಬಿಟ್ಟು, ನಾವೆಲ್ಲರೂ ಕುಳಿತುಕೊಂಡು ರೈತರಿಗೆ ಎಲ್ಲಿ ಲಾಭವಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ.

(ಗೊಂದಲ)

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಿ ಮುಗಿಯಿತು. ಶುರು ಮಾಡುವುದಕ್ಕೆ ಬಿಡಲಿಲ್ಲ. ಎಲ್ಲರೂ interfere ಆಗಿ ನನ್ನ ಮಾತನ್ನು ಶುರು ಮಾಡುವುದಕ್ಕೆ ಬಿಡಲಿಲ್ಲ. ನಾನು ಮಾತನಾಡುವುದೇ ಇಲ್ಲಾ ಬಿಡಿ. ನನ್ನ ಸಮಯವನ್ನು ಸಂಪೂರ್ಣವಾಗಿ ಎಲ್ಲರೂ ತಿಂದಿದ್ದಾರೆ. ನನ್ನ ಸಮಯವನ್ನು ನನಗೆ ಕೊಡಿ. ನಾನು ಜಾಸ್ತಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಲೇ ಇಲ್ಲ. ಆಯಿತು. ನಾನು ಮಾತನಾಡುವುದೇ ಇಲ್ಲಾ. ಪಾಪ ಬಹಳಷ್ಟು ಜನ ಶಾಸಕರಿದ್ದಾರೆ ಅವರೆಲ್ಲಾ ಮಾತನಾಡಲಿ, ನಮ್ಮ ಸ್ನೇಹಿತರು ಮಾತನಾಡಲಿ. ನಾನು ಬಜೆಟ್ ಬಗ್ಗೆ ಮಾತನಾಡುವುದೇ ಇಲ್ಲ. ನಾನು 100ಕ್ಕೆ 100% ಎಲ್ಲಿ ಬೇಕಾದರೂ ಹೇಳುತ್ತೇನೆ. ಇದು ಮೈತ್ರಿ ಸರ್ಕಾರದ ಒಳ್ಳೆಯ ಆಯವ್ಯಯವಾಗಿದೆ. ಈ ನಾಡಿನ ರೈತರ ಹಿತ ಕಾಪಾಡತಕ್ಕಂಥ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಮತ್ತು ಈ ಸರ್ಕಾರದ ಬಜೆಟ್ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎರಡನೇ ಮಾತಿಲ್ಲ. I will not go back. ಒಂದು ವಿಚಾರ ಇದೆ. ಈ ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಯಲ್ಲಿ *Universal Sompo's* General Insurance *Company Ltd* ಗೆ ಕೊಟ್ಟ ಮೇಲೆ ಒಂದು ಸಲ ಯಾವುದಾದರೂ ಕೆಲಸವನ್ನು ಸರ್ಕಾರದಿಂದ entrust ಮಾಡಿದ ಮೇಲೆ they will look after it. ಪ್ರಚಾರ ಮಾಡತಕ್ಕಂಥದ್ದು, ಅದನ್ನು ಜನರಿಗೆ ತಲುಪಿಸುವಂತಹದು ಬಾಕಿ ವಿಚಾರ ಅವರಿಗೆ ಬಿಟ್ಟಿದ್ದು. ಏಕೆಂದರೆ, ಅವರು ದುಡಿಮೆ ಮಾಡುವುದಿಲ್ಲವೇ? ಆ *Universal Sompo's* General Insurance *Company Ltd* ಗೆ ಕೊಟ್ಟಿರತಕ್ಕಂಥ ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಗೆ ಸುಮಾರು ಸಾವಿರಾರು ಕೋಟಿ ರೂಪಾಯಿಗಳಷ್ಟು ಜಾಹೀರಾತಿಗಾಗಿ ಕೇಂದ್ರ ಸರ್ಕಾರ ವ್ಯಯ ಮಾಡಿದೆ. What is the vested interest in it? ಇದು ರೈತರ ದುಡ್ಡು. ಪ್ರಧಾನ ಮಂತ್ರಿ ಫಸಲು ಬೀಮಾ ಯೋಜನೆಗೆ ಸಾವಿರಾರು ಕೋಟಿ ರೂಪಾಯಿಗಳಷ್ಟು ಜಾಹೀರಾತಿಗಾಗಿ ವ್ಯಯ ಮಾಡಿದ್ದಾರಲ್ಲಾ ಅದು ಯಾರ ಹಣ? ಹೇಗೆ ಜಾಹೀರಾತಿಗಾಗಿ ಆ ಹಣವನ್ನು ಕೊಟ್ಟಿದ್ದಾರೆ? ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿನ್ನೆ ಮೊನ್ನೆಯಿಂದ ಸಾಲ ಮನ್ನಾ ಯೋಜನೆ ಬಗ್ಗೆ ಜಾಹೀರಾತು ಪ್ರಚಾರವಾಗುತ್ತಿದೆ ಅಲ್ಲ ಅದಕ್ಕೆ ಯಾರು ನೀಡಿದ್ದಾರೆ? ರಾಜ್ಯ ಸರ್ಕಾರ ತಾನೇ?

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ರೈತರಿಗೆ ಸಂಬಂಧಪಟ್ಟ ವಿಚಾರ. ಮಾತನಾಡಬಾರದು ಎಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುವುದಾದರೆ ಕೇಂದ್ರ ಸರ್ಕಾರದ ಬಗ್ಗೆ ಜಾಹೀರಾತು ಪ್ರಚಾರವಾಗುತ್ತದೆ. ಹಾಗೆಯೇ ರಾಜ್ಯ ಸರ್ಕಾರ ಮಾಡಿದ್ದರೆ ರಾಜ್ಯ ಸರ್ಕಾರದ ಬಗ್ಗೆ ಜಾಹೀರಾತು ಪ್ರಚಾರವಾಗುತ್ತದೆ. ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಜಾಹೀರಾತು ಪ್ರಕಟಿಸಿದೆ ಎಂದು ಸದನದಲ್ಲಿ ಗಲಾಟೆ ಮಾಡಿದರೆ ಹೇಗೆ?

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಆ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತು ಎತ್ತಿದ್ದರೆ ಬನ್ನಿ ಕೇಂದ್ರ ಸರ್ಕಾರದ ಹತ್ತಿರ ನಿಯೋಗ ಹೋಗೋಣ. ನಾವೆಲ್ಲರೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯೋಗ ಹೋಗೋಣ ಎಂದು ಅವರು ಹೇಗೆ ಹೇಳುತ್ತಾರೆ. ಆವತ್ತು ಅವರು ಹೇಳಿದ್ದಾರಲ್ಲಾ, ಇವತ್ತು ಕೇಂದ್ರ ಸರ್ಕಾರ ಇಲ್ಲವೇ? ಅವರು ಬರಲಿ, ನಾವು ಎಲ್ಲರೂ ಬರುತ್ತೇವೆ ಕೇಂದ್ರ ಸರ್ಕಾರದ ಮೊರೆ ಹೋಗೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಬೇರೆ ಬೇರೆ ಕಾರಣಗಳನ್ನು ಮುಂದೂಡಿ, ನಾವೆಲ್ಲರೂ ಕೇಂದ್ರ ಸರ್ಕಾರದ ಮೊರೆ ಹೋಗೋಣ ಎಂದು ಹೇಳಿದ್ದರು. ಆಗ ಬೇರೆ ಬೇರೆ ರೀತಿಯಲ್ಲಿ ಚರ್ಚೆ ಆಗಿತ್ತು. ಆ ನಂತರ ಮಾನ್ಯ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರ್‌ಸ್ವಾಮಿಯವರು ಕೇಂದ್ರ ಸರ್ಕಾರದ ಮೊರೆ ಹೋಗೋಣ ಎಂದು ಹೇಳಿದ್ದರು.

(ಗೊಂದಲ)

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ನನ್ನನ್ನು ಸುಮ್ಮನೆ ಕೂರಿಸುತ್ತೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರಿಬ್ಬರೂ ನಮಗಿಂತ ದೊಡ್ಡವರು. ಅವರುಗಳ ಮಧ್ಯೆ ಚರ್ಚೆಯಾದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ನೋಡಿಕೊಳ್ಳುತ್ತಾರೆ. ಆದರೆ, ಮಾನ್ಯ ಸದಸ್ಯರು ಸದನದಲ್ಲಿ ಈ ರೀತಿಯಲ್ಲಿ ಚರ್ಚೆ ಮಾಡುತ್ತಾ ಹೋದರೆ, ನಾವು ಮಧ್ಯದಲ್ಲಿ ನಿಂತುಕೊಳ್ಳಬೇಕಾಗುತ್ತದೆ. ದಯವಿಟ್ಟು ಹಾಗೆ ಮಾಡಬೇಡಿ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಸತ್ಯವನ್ನು ಹೇಳುತ್ತಿದ್ದಾರೆ, ಸತ್ಯವನ್ನು ಜೀರ್ಣಿಸಿಕೊಳ್ಳುವ ಶಕ್ತಿ ಅವರಿಗೆ ಇರಲಿ.

**Sri BOJEGOWDA:-** Sir, I am going to conclude in two minutes. ಅವರೆಲ್ಲಾ ಸುಮ್ಮನೆ ಇದ್ದರೆ ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಇಲ್ಲದಿದ್ದರೆ ಇಲ್ಲಿ 20 ನಿಮಿಷಗಳ ಕಾಲ ತೆಗೆದುಕೊಳ್ಳುತ್ತೇನೆ. ನಾನು ಇನ್ನೂ ಮಾತನಾಡುವುದಕ್ಕೆ ಶುರುವೇ ಮಾಡಲಿಲ್ಲ. ಅಬ್ರಾಹಂ ಲಿಂಕನ್ ಹೇಳಿದ್ದಾರೆ.

(ಮುಂದು) . . .

(193)/10.07.2018/05.50/ಎಸ್‌ಕೆ–ಎಂಡಿ

**ಶ್ರೀ ಭೋಜೇಗೌಡ (ಮುಂದು):–** ಎಲ್ಲರನ್ನೂ ಕೆಲವು ಕಾಲದಲ್ಲಿ ಮರಳು ಮಾಡಬಹುದು. ಕೆಲವರನ್ನು ಎಲ್ಲಾ ಕಾಲದಲ್ಲಿ ಮರಳು ಮಾಡಬಹುದು. ಆದರೆ ಎಲ್ಲಾ ಕಾಲದಲ್ಲಿಯೂ ಎಲ್ಲರನ್ನು ಮರಳು ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು ತಮಗೆ ಗೊತ್ತಿರಲಿ. ಹಾಗಾಗಿ, ಏನು ಮರಳು ಮಾಡಿ ಇಲ್ಲಿ ಬಂದಿದ್ದೀರಿ? ಈಗ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದೆ ಹಿಂದೆ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದಾಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದರು. ಸಾಲ ಮನ್ನಾ ಘೋಷಣೆ ಮಾಡಿದ ನಂತರ ಅಧಿಕಾರ ಹೋಯಿತು. ಸಾಲ ಮನ್ನಾಕ್ಕೆ ಆರ ನೂರುಕೋಟಿ ರೂಪಾಯಿಗಳನ್ನು ಮೀಸಲು ಇಟ್ಟು ಸುಮಾರು 1800 ಕೋಟಿ ರೂಪಾಯಿಗಳ ರೈತರ ಸಾಲ ಮನ್ನಾ ಘೋಷಣೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದರು. ಆದರೆ ಸಾಲವನ್ನು ತೀರಿಸಿದ್ದು ಯಾರು? ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಬಂದಮೇಲೆ ಆ ಸಾಲವನ್ನು ಬ್ಯಾಂಕ್‌ಗಳಿಗೆ ತೀರಿಸಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಯಾರು ಸಾಲ ತೀರಿಸಿದರು?

(ಗೊಂದಲ)

**ಶ್ರೀ ಭೋಜೇಗೌಡ:–** ನೋಡಿ ವಿರೋಧ ಪಕ್ಷದ ನಾಯಕರೇ,

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ಸರ್ಕಾರದಿಂದ ಒಂದು ಸರ್ಕಾರಕ್ಕೆ ಅಧಿಕಾರ ಹಸ್ತಾಂತರವಾದಾಗ ಪ್ರಜಾಪ್ರಭುತ್ವದಲ್ಲಿ ಇಂತಹ ವ್ಯವಸ್ಥೆಗಳಾಗುತ್ತದೆ

(ಗೊಂದಲ)

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ನಾನು ಇದೇ ತರಹ ಎದ್ದು ನಿಂತುಕೊಂಡು ಮಾತನಾಡುತ್ತೇನೆ. ಆಗ ತಾವು ನನ್ನನ್ನು ತಡೆಯಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಏನು ಬೇಕಾದರೂ ಮಾಡಲಿ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ, ನನಗೆ ಮಾತನಾಡುವ ಆಸಕ್ತಿ ಇಲ್ಲ. ಏಕೆ ಆಸಕ್ತಿ ಇಲ್ಲವೆಂದರೆ, ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ನಮ್ಮಲ್ಲಿ 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎಂಬ ಗಾದೆಯಂತೆ ಇಲ್ಲ ಅವ್ವ ಬಹಳ ಚೆಂದವಾಗಿ ಎಲ್ಲಾ ಮಾಡಿ ಇಟ್ಟಿದ್ದೇನೆ ಆದರೆ ಅವರು ಮೊಸರಿನಲ್ಲಿ ಕಲ್ಲು ಎಂದು ಹೇಳಿದರೆ, ಅವರಿಗೆ ಏನು ಮಾಡುವುದಕ್ಕಾಗುತ್ತದೆ? ನಾವು ಎಂತಹ ಬಜೆಟ್ ಕೊಟ್ಟಿದ್ದರೂ ಅದರೊಳಗೆ ವಿರೋಧ ಪಕ್ಷದವರು ಮೊಸರಿನಲ್ಲಿ ಕಲ್ಲು ಎಂಬಂತೆ ತಿಳಿದುಕೊಂಡು ಬಿಟ್ಟಿದ್ದಾರೆ. ಹಾಗಾಗಿ ವಿರೋಧ ಮಾಡುವುದಕ್ಕೋಸ್ಕರನೇ ಅವರು ವಿರೋಧ ಮಾಡುತ್ತಿದ್ದಾರೆ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ನಾನು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಮಹಾ ಮಂಡಳಿಯ ನಿರ್ದೇಶಕನಾಗಿ ಇದ್ದೇನೆ. ಕೇಂದ್ರ ಸರ್ಕಾರದವರು ರೈತರ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ tax impose ಮಾಡಿರುವಂಥಹದ್ದು. ತೆರಿಗೆಯ ಅಡಿಯಲ್ಲಿ ನಾವು ಏನು ಬರುತ್ತೇವೆಂಬುದು ಬಹಳ ಮುಖ್ಯವಾದಂತಹ ವಿಚಾರ. Co-operative Societies, ಬ್ಯಾಂಕ್‌ಗಳನ್ನೆಲ್ಲಾ ಹಿಡಿದು ನಾವು ಎಲ್ಲಾ ರೈತರಿಗೆ ಸಾಲ ಕೊಡುತ್ತಿರುವುದು. Agriculture income ಗೆ Income Tax ಉಂಟೇ? Agriculture ನಿಂದ ಆದಾಯ ಬಂದಿದ್ದಕ್ಕೆ ನಾನು tax ಕಟ್ಟುತ್ತೇನೆಯೇ. ನಾವು ಬ್ಯಾಂಕ್‌ನಿಂದ ಕೃಷಿಕರಿಗೆ ಸಾಲ ಕೊಡುತ್ತೇವೆ. ನಮಗೆ ಅವರಿಂದ ಶೇಕಡ 3 ಅಥವಾ 4 ರಷ್ಟು ಬಡ್ಡಿ ಬರುತ್ತದೆ. ಬ್ಯಾಂಕ್‌ನವರು ಅದರಲ್ಲಿ ಆದಾಯ ಮಾಡುತ್ತೇವೆ. ನಮ್ಮ ಬ್ಯಾಂಕ್‌ಗೆ ಬಂದಂತಹ ಆದಾಯಕ್ಕೆ, ನಮ್ಮಿಂದ ಆದಾಯ ತೆರಿಗೆ ಪಡೆಯುತ್ತಾರಲ್ಲಾ ಇದು ಸರಿಯೇ? ನಮ್ಮ ಚಿಕ್ಕಮಗಳೂರು ಡಿಸಿಸಿ ಬ್ಯಾಂಕ್‌ನಲ್ಲಿಯೊಂದರಲ್ಲಿ ಹತ್ತೋಂಬತ್ತು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೋಟಿ ರೂಪಾಯಿಗಳ Income Tax ಕಟ್ಟಿದ್ದೇವೆ. ಈ ರೀತಿ ಇಪ್ಪತ್ತೊಂದು ಬ್ಯಾಂಕ್‌ಗಳು ನಮ್ಮ ರಾಜ್ಯದಲ್ಲಿದೆ. ಹಾಗಾದರೆ ಇಡೀ ಭಾರತದಲ್ಲಿ ಎಷ್ಟಿದೆ? ಇವೆಲ್ಲಾ ರೈತರ ಸಂಸ್ಥೆ. ಇದನ್ನು ವಾಪಸ್ಸು ರೈತರಿಗೆ ನಾವು strengthen ಮಾಡಿದರೆ, ನಮ್ಮ ಸೊಸೈಟಿಗಳನ್ನು strengthen ಮಾಡಿದರೆ, ಈ ಆದಾಯ ತೆರಿಗೆ ಹಣದಲ್ಲಿ ಅವೆಲ್ಲಾ strengthen ಆಗುವುದಿಲ್ಲವೇ? ನಮ್ಮ ಕತ್ತು ಹಿಸುಕುವಂತಹ ಕೆಲಸ ಕೇಂದ್ರ ಸರ್ಕಾರದಿಂದ ಆಗುತ್ತಿದೆ. ಮುಂದಿನ ದಿನಗಳಲ್ಲಿ ನಾವೆಲ್ಲರೂ ಒಕ್ಕೊರಲಿನಿಂದ fight ಮಾಡಬೇಕಾಗುತ್ತದೆ. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಇದು ರೈತನ ಸಂಸ್ಥೆಯಾಗಿರುವುದರಿಂದ, ಈ ರೈತರ ಸಂಸ್ಥೆಗಳನ್ನು ಉಳಿಸದೇ ಇದ್ದರೆ, ರೈತರಿಗೆ ಹೆಚ್ಚಿನದಾಗಿ ಸಹಾಯ ಮಾಡುವುದಕ್ಕಾಗುವುದಿಲ್ಲ. ಕೊನೆಯದಾಗಿ, ಇಲ್ಲಿಯವರೆಗೆ ಸಹಕಾರಿ ಸಂಸ್ಥೆಗಳಿಂದ ರೈತರಿಗೆ ಶೇಕಡ 18 ರಷ್ಟು ಮಾತ್ರ ಸಾಲ ಮುಟ್ಟಿರುವಂತಹದ್ದು. ಇದು ಬಹಳ ವಿಷಾದವಾಗುತ್ತದೆ. ನಾವು ಶೇಕಡ 40-45 ರಷ್ಟು ರೈತರನ್ನು ಮುಟ್ಟಿದರೆ, ರೈತರು ಭಾಗ್ಯದ ಬಾಗಿಲನ್ನು ತೆರೆಸುವಂತಹ ಕೆಲಸವನ್ನು ನಾವೇನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಆ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಯೋಚನೆ ಮಾಡಿ ಬಜೆಟ್ ಕೊಡುವಂತಹ ವಿಚಾರ ಮಾಡಬೇಕು. ಈಗಾಗಲೇ, ಬಜೆಟ್‌ನ ಸಣ್ಣಪುಟ್ಟ ನ್ಯೂನತೆಗಳ ಬಗ್ಗೆ ಮತ್ತು ರೈತರ ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ನಾವು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇವೆ. ಅವರು ಸಕರಾತ್ಮಕವಾದ ನಿರ್ಧಾರಕ್ಕೆ ಬಂದಿದ್ದಾರೆ. ಮುಂದಿನ ಸಾಲ ಮನ್ನಾ ವಿಚಾರದಲ್ಲಿ, ಸಾಲ ಮರುಪಾವತಿ ಮಾಡಿದ ರೈತರಿಗೆ ತೊಂದರೆಯಾಗಿದೆ ಎನ್ನುವ ಸಂಶಯವಿದೆಯಲ್ಲಾ. ಅದಕ್ಕೆ ಸಂಪೂರ್ಣ ಮದ್ದಳ ಹೊಡೆದಾಗ, ಮದ್ದಳದೊಳಗೆ ಏನಿತ್ತು ಅನುಮಾನ ಎಂಬುದು ಗೊತ್ತಾಗುತ್ತದೆ. ಆಗ ಅನುಮಾನವೆಲ್ಲಾ ಪರಿಹಾರವಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರುಗಳ ಅನುಮಾನ ಪರಿಹಾರ ಮಾಡುವಂತಹ ಎಲ್ಲಾ ಕೆಲಸವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ತಮಗೆ ಧನ್ಯವಾದಗಳು ಮತ್ತು ನನ್ನ ಮಾತನ್ನು ಕೇಳಿದಂತಹ ತಮ್ಮೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀಮತಿ ತಾರಾಅನೂರಾಧ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು ಮಾನ್ಯ ಸದಸ್ಯರೆಲ್ಲರಿಗೂ ಕೇಳಿಕೊಳ್ಳುವುದೇನೆಂದರೆ, ನಾನು ಮಾತನಾಡುವಾಗ, ಯಾರ ಎದ್ದು ಮಾತನಾಡದೇ, ನನ್ನ ಸಮಯವನ್ನು ತೆಗೆದುಕೊಳ್ಳದೇ, ಈ ಸಮಯವನ್ನು ನನಗೆ ಪೂರ್ಣವಾಗಿ ಮಾತನಾಡುವುದಕ್ಕೆ ಬಿಟ್ಟು ಕೊಡಿ ಎಂದು ಹೇಳುತ್ತೇನೆ.

**(ಗೊಂದಲ)**

ನನಗೆ ತಿಳಿದಿರುವ ನಿಜವನ್ನು ಮಾತ್ರ ಹೇಳುತ್ತೇನೆ. ಚುನಾವಣೆ ಸಮಯದಲ್ಲಿ ಯಾರ್ಯಾರು ನೀಡಿದ ಹೇಳಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದೆಂಬುದು ನಮ್ಮ ಪ್ರಜೆಗಳಿಗೆ ಗೊತ್ತಿದ್ದರೂ, ಆ ತಪ್ಪುಗಳು ಮತ್ತೆ ಮತ್ತೆ ಪುನರಾವರ್ತನೆಯಾಗುತ್ತಲೇ ಇರುತ್ತದೆ. ಉದಾಹರಣೆಗೆ ಹೇಳಬೇಕಾದರೆ, ಜೆಡಿ(ಎಸ್) ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದ ಮೇಲೆ, ತಾವು ಹೇಳಿದ ಮಾತುಗಳು, 'ಯಾರು ನನ್ನ ಪ್ರಣಾಳಿಕೆಯನ್ನು ಒಪ್ಪುತ್ತಾರೋ, ಅವರಿಗೆ ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಬಲ.' ಹಾಗಾದರೆ ಮೊದಲೇ ಬಹುಮತ ಬರುವುದಿಲ್ಲವೆಂದು ಗೊತ್ತಿತ್ತು ಎಂದು ಅನಿಸುತ್ತದೆ. ನಿಮಗೆ ಹೊಂದಾಣಿಕೆ ಅನಿವಾರ್ಯ. ತಾವು ಕೊಟ್ಟಿರುವಂತಹ ಹೇಳಿಕೆಗಳಲ್ಲಿಯೇ ದ್ವಂದ್ವ ಇದೆ. NEWS-18 ಸುದ್ದಿ ವಾಹಿನಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದಾರೆ. ಬಿಜೆಪಿ ಪಕ್ಷಕ್ಕೂ ಹೋಗಲ್ಲ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಹೋಗಲ್ಲ. In case ಆ ಪಕ್ಷಗಳು ನಮ್ಮ ಹತ್ತಿರ ಬಂದರೂ ಹೋಗುವ ಪ್ರಶ್ನೆಯೇ ಇಲ್ಲ. ವಿರೋಧ ಪಕ್ಷದಲ್ಲಿಯೇ ಇರುತ್ತೇವೆಯೇ ಹೊರೆತು, ಇಲ್ಲವಾದರೆ ಮತ್ತೆ ಚುನಾವಣೆಗೆ ಹೋಗಲು ನಾವು ಸಿದ್ಧ ಎಂದು ಹೇಳಿದ್ದರು. ಇರಲಿ ಬಿಡಿ, ಅದನ್ನು ನಾವು ಒಪ್ಪಿಕೊಳ್ಳೋಣ. ಆದರೆ ಚುನಾವಣೆ ಬಳಿಕ ಕಾಂಗ್ರೆಸ್ ಬೇಷರತ್ ಬೆಂಬಲದಿಂದ ಮುಖ್ಯಮಂತ್ರಿಗಳಾಗಿದ್ದಾರೆ. ಇದೊಂದು ಇತಿಹಾಸ. ಮುಖ್ಯಮಂತ್ರಿಗಳಾದ ಮೇಲೆ ನಾನು ಜನರ ಋಣದಲ್ಲಿ ಇಲ್ಲ. ಕಾಂಗ್ರೆಸ್‌ನ ಹಂಗಿನಲ್ಲಿದ್ದೇನೆ ಎಂದು ಹೇಳಿದ್ದಾರೆ, ಅದನ್ನು ನಾವು ಒಪ್ಪಿಕೊಳ್ಳೋಣ. ಈ ಹಿಂದೆ ಒಂದು ಸಾರಿ ವೇದಿಕೆಯ ಮೇಲೆ ಕಾಂಗ್ರೆಸ್ ಅಧ್ಯಕ್ಷರನ್ನು ಏಕವಚನದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಮುಂದೆ ಅವರನ್ನು ಪುಣ್ಯಾತ್ಮ ಎಂದು ಕರೆದಿದ್ದಾರೆ, ಅದನ್ನು ನಾವು ಒಪ್ಪಿಕೊಳ್ಳೋಣ. ಈಗ ತಾವು ಹೇಳಿದಂತೆ, ಏಕೆ ನಡೆದುಕೊಳ್ಳುತ್ತಿಲ್ಲ? ನಮ್ಮ ಪ್ರಣಾಳಿಕೆಯನ್ನು ಯಾರು ಒಪ್ಪುತ್ತಾರೋ, ಅವರಿಗೆ ನನ್ನ ಸಹಕಾರ ಎಂದರೆ, ಕಾಂಗ್ರೆಸ್‌ನವರು ತಮಗೆ ಸಹಕಾರ ಕೊಟ್ಟಿದ್ದಾರೆ. ಆದರೆ ಪೂರ್ಣ ಸಾಲ ಮನ್ನಾ ಏಕೆ ಮಾಡುತ್ತಿಲ್ಲ? ಹಾಗಾದರೆ, ಕಾಂಗ್ರೆಸ್ ಪಕ್ಷದವರು, ತಮ್ಮ ಪ್ರಣಾಳಿಕೆಯನ್ನು ಒಪ್ಪಲಿಲ್ಲ. ತಮಗೆ ಬೇಷರತ್ ಬೆಂಬಲ ನೀಡಿಲ್ಲ ಎನ್ನುವ ಅರ್ಥ ಎಂಬುದು ನನಗೆ ಸಂದೇಹವಾಗುತ್ತದೆ. ಈ ಸಾಲ ಮನ್ನಾ ನಿಯತ್ತಾಗಿ ಸಾಲ ತೀರಿಸುವ ರೈತರಿಗಲ್ಲ. ರೈತರು ನಿಯತ್ತಾಗಿ ಕಂತುಗಳನ್ನು ಕಟ್ಟುತ್ತಿರುವುದರಿಂದ, ಅವರಿಗೆ ಪ್ರೋತ್ಸಾಹ ಧನ 25,000 ರೂಪಾಯಿಗಳನ್ನು ತಾವು ಅವರ ಖಾತೆಗೆ ಹಾಕುತ್ತಿರಲ್ಲವೇ, ಅದನ್ನೇ ಬಜೆಟ್‌ನಲ್ಲಿ ಹೇಳಿರುವುದು. ಇಲ್ಲಿ ಸ್ಪಷ್ಟ ಸ್ಪಷ್ಟವಾಗಿಲ್ಲ. ಇದು ಯಾವಾಗ ಹಾಕುತ್ತಾರೆ. ಇದಕ್ಕಾಗಿ ಬಜೆಟ್‌ನಲ್ಲಿ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಎಷ್ಟು ಜನ ರೈತರು ಫಲಾನುಭವಿಗಳು ಎಂದು ಎಲ್ಲಿಯೂ ಹೇಳಿಲ್ಲ. ಇನ್ನು ನೇರವಾಗಿ ಏನು ಹೇಳಿದ್ದಾರೆಂದರೆ, ಯಾರೂ ಸರಿಯಾಗಿ ಸಾಲ ಪಾವತಿ, ಬಡ್ಡಿ, ಅಸಲು ಕಟ್ಟುವುದಿಲ್ಲವೋ, ಅವರಿಗೆ ಈ ಸಾಲ ಮನ್ನಾ. ಯಾರು ನಿಯತ್ತಾಗಿ ಸಾಲವನ್ನು ತೀರಿಸುತ್ತಾರೋ, ಅಂದರೆ ಪ್ರಾಮಾಣಿಕವಾಗಿ ರೈತರಿಗೆ ಏನು ಉಪದೇಶ ಮಾಡುವುದಕ್ಕೆ ಹೊರಟಿದ್ದೀರಿ ಎಂದರೆ, ಸಾಲ ಕಟ್ಟ ಬೇಡಿ, ಬಾಕಿ ಉಳಿಸಿಕೊಳ್ಳಿ. ಮುಂದಿನ ದಿನಗಳಲ್ಲಿ ಬರುವಂತಹ ಸರ್ಕಾರ ರೈತರ ಸಾಲವನ್ನು ತೀರಿಸುತ್ತದೆಂದು ಬಜೆಟ್ ಪುಸ್ತಕದ ಪುಟ 15 ರಲ್ಲಿ ಇಸ್ರೇಲಿನ ಕೃಷಿ ಪದ್ಧತಿಯ ಬಗ್ಗೆ ಹೇಳಿದ್ದಾರೆ. ಇದು ಬಹಳ ಸಂತೋಷ. ಇಸ್ರೇಲ್ ಮಾದರಿ ಎಂದರೆ, ಎಲ್ಲಿ ಮಳೆ ಮತ್ತು ನೀರು ಹೆಚ್ಚು ಇರುವುದಿಲ್ಲವೋ ಮತ್ತು ಮರಭೂಮಿ ಎಲ್ಲಿ ಇರುತ್ತದೋ, ಅಲ್ಲಿ ರೈತನು ಬಂಗಾರವನ್ನು ಹೇಗೆ ತೆಗೆಯಬಲ್ಲ ಎನ್ನುವುದಕ್ಕೆ ಇಸ್ರೇಲ್‌ನ ಕೃಷಿ ಪದ್ಧತಿ. ಇಡೀ ಪ್ರಪಂಚದಲ್ಲಿ ಇದೊಂದು ಮಾದರಿಯಾಗಿದೆ. ಇದನ್ನು ಪತ್ರಿಕೆಗಳು, ಮಾಧ್ಯಮಗಳು ಮತ್ತು ಬಜೆಟ್‌ನಲ್ಲಿಯೂ ಸಹ ಹೇಳಿದ್ದಾರೆ. ಆದರೆ ಈ ಸರ್ಕಾರ ಬಂದಮೇಲೆ, ಅಂದರೆ ಈ ರಾಜ್ಯದಲ್ಲಿ ರೈತರು ವ್ಯವಸಾಯವನ್ನು ಇಸ್ರೇಲ್ ಮಾದರಿಯನ್ನು ಅಳವಡಿಸಿಕೊಂಡು, ಬೆಳೆಯನ್ನು ಬೆಳೆಯುತ್ತಾರೆಯೇ? ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ರಾಜ್ಯದಲ್ಲಿ ಕೃಷಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಚಟುವಟಿಕೆಗಳು ಪ್ರಾರಂಭವಾಗಿವೆ. ಇಸ್ರೇಲ್ ಮಾದರಿಯನ್ನು ಅಳವಡಿಸಿಕೊಂಡು ಕೃಷಿಯನ್ನು ಮಾಡುವುದಕ್ಕೆ ಎಷ್ಟು ಜನ ರೈತರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಕೋಲಾರ, ಚಿತ್ರದುರ್ಗ, ಕೊಪ್ಪಳ ಮತ್ತು ಗದಗ ಈ ತರಹ ಬಯಲುಸೀಮೆ ಪ್ರದೇಶವನ್ನು ಹಾಗೂ ಕೆಲವು ಉತ್ತರ ಕರ್ನಾಟಕ ಭಾಗಳನ್ನು ಆರಿಸಿಕೊಂಡಿದ್ದಾರೆ. ನನ್ನ ಸಲಹೆ ಏನೆಂದರೆ, ಉತ್ತರ ಕರ್ನಾಟಕದ ಇನ್ನೂ ಹೆಚ್ಚು ಜಿಲ್ಲೆಗಳನ್ನು ತೆಗೆದುಕೊಳ್ಳುವುದರಿಂದ ಮತ್ತು ಎಲ್ಲಿ ನೀರಾವರಿ ಇರುವುದಿಲ್ಲವೋ ಮತ್ತು ಎಲ್ಲಿ ಮಳೆ ಕಡಿಮೆ ಇರುತ್ತದೆಯೇ? ಅಂತಹ ಕಡೆಗಳಲ್ಲಿ ಹೆಚ್ಚು ಪಸರಿಸಿರುವುದರಿಂದ ಇಸ್ರೇಲ್ ಕೃಷಿ ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದಿತ್ತು. ಅದರ ಬಗ್ಗೆ ಆಲೋಚನೆ ಮಾಡಬಹುದಿತ್ತು. ಇನ್ನೂ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿಯವರು ಸೇರಿದಂತೆ, ಎಲ್ಲರೂ ಇಸ್ರೇಲ್‌ಗೆ ಹೋಗಿಲ್ಲ. ನಾನಂತೂ ಇನ್ನೂ ಹೋಗಿ ಬರಲಿಲ್ಲ. ನಾನು ಕೇಳುವುದೇನೆಂದರೆ, ಸರ್ಕಾರದಿಂದ ಇದನ್ನು implement ಯಾವಾಗ ಮಾಡುತ್ತಾರೆ? ಬಜೆಟ್ ಪುಸ್ತಕದ ಪುಟ 71 ರಲ್ಲಿ ಕಳೆದ ವರ್ಷ ದಿನಾಂಕ: 31.12.2017 ರವರೆಗೆ ರೈತರು ಮಾಡಿದ ಎಲ್ಲಾ ಸುಸ್ತಿ ಬೆಳೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

(ಮುಂದು...)

**(194) 10–07–2018 ಟಿಸಿಹೆಚ್:ಎಕೆ 6–00**

**ಶ್ರೀಮತಿ ತಾರಾಅನೂರಾಧ(ಮುಂದು):–**

ಈ ಸುಸ್ತಿ ಸಾಲಗಾರರು ಎಂದರೆ ಯಾರು? ಅಂದರೆ ನಮಗೆ ಗೊತ್ತಿದೆ, ಅದನ್ನು ನೀವು ಒಂದು ಬಾರಿ ನನಗೆ ಕ್ಲಿಯರ್ ಮಾಡಬೇಕು. ಮೊದಲು ನೀವು ರೈತರ ಎಲ್ಲಾ ಬೆಳೆ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದೀರಿ. ಆದರೆ, ಇದ್ದಕ್ಕಿದ್ದಂತೆ ಕೇವಲ ಸುಸ್ತಿದಾರರ ಸಾಲವಷ್ಟೇ ಏಕೆ ಮನ್ನಾ ಆಗಿದೆ. ನನಗೆ ಇದೊಂದು ಸಂದೇಹ ಇದೆ. ಇನ್ನೂ ಬಜೆಟ್ ಪುಸ್ತಕದ ಪುಟ ಸಂಖ್ಯೆ 72ರ 168ನೇ ಅಂಶದಲ್ಲಿ 34,000 ಕೋಟಿ ರೂಪಾಯಿಗಳ ಮೊತ್ತದ ಪ್ರಯೋಜನ ರೈತರಿಗೆ ದೊರೆಯಲಿದೆ ಎಂದು ಹೇಳಿದ್ದೀರಿ. ಅಂದರೆ ಇದೇ ವರ್ಷ 2018–19ನೇ ಸಾಲಿನ ಆಯವ್ಯಯದಲ್ಲಿ 34000 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆಯೇ ಅಥವಾ 5 ವರ್ಷಗಳಿಗೆ ಈ 34000 ಕೋಟಿ ರೂಪಾಯಿಗಳು ಎಂದು ನಿಗದಿಪಡಿಸಲಾಗಿದೆಯೇ ಎಂಬುದನ್ನು ಹೇಳಬೇಕು. ಏಕೆಂದರೆ, ಏಕೆ ನನಗೆ ಈ ವಿಚಾರದಲ್ಲಿ ಸಂದೇಹ ಬರುತ್ತಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ನನ್ನ ಸರ್ಕಾರ ಒಂದು ವರ್ಷ ಗ್ಯಾರಂಟಿ ಎಂದು ಹೇಳುತ್ತಿದ್ದರು. ಅಂದರೆ, ಇದನ್ನು 5 ವರ್ಷಕ್ಕೆ ಈ ಮೊತ್ತವನ್ನು ಮೀಸಲಿಟ್ಟಿದ್ದಾರೆ ಎಂದರೆ, ಅವರಿಗೇ ಗ್ಯಾರಂಟಿ ಇಲ್ಲದಿರುವಾಗ 5 ವರ್ಷಕ್ಕೆ ಹೇಗೆ ಮೀಸಲಿಟ್ಟಿದ್ದಾರೆ. ನನಗೆ ಇದೊಂದು ಸಣ್ಣ ಸಂದೇಹ. ಹೊರಗಡೆ ಮುಷ್ಕರ ಮಾಡುತ್ತಿರುವಂತಹ ರೈತರು ಹೇಳುತ್ತಿರುವುದೇನೆಂದರೆ, ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ರೈತರ ಸಾಲ ಇದೆ ಎಂದು ಹೇಳುತ್ತಿದ್ದಾರೆ. ಜೆಡಿಎಸ್ ಅಧ್ಯಕ್ಷರು, ಜೆಡಿಎಸ್ ಚುನಾವಣಾ ಪ್ರಣಾಳಿಕೆಯಲ್ಲಿ ಸುಮಾರು 53 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಆಯವ್ಯಯದಲ್ಲಿ 34,000 ಕೋಟಿ ರೂಪಾಯಿಗಳು ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೀವು ಹೇಳಿಕೆ ಕೊಟ್ಟಿದ್ದೀರಿ. ಈ ಸಂಖ್ಯೆಗಳನ್ನು ಕೊಟ್ಟಿದ್ದು ಯಾರು? " ನಾವೆಲ್ಲರೂ ಸೇರಿ ಪಾಪ, ಆ ರೈತರನ್ನು ಮೂರ್ಖರನ್ನಾಗಿ ಮಾಡುತ್ತಿದ್ದೇವೇನೋ" ಎನ್ನುವಂಥ ಸಂದೇಹವಿದೆ.

**ಡಾ॥ಜಯಮಾಲಾ ರಾಮಚಂದ್ರ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ತಾರಾ ಅನೂರಾಧರವರು ಬಜೆಟ್ ಕಾಪಿಯನ್ನು ಮಾತ್ರ ಇಟ್ಟುಕೊಂಡು ನೋಡಿ ಹೇಳಿದರೆ, ತುಂಬಾ ಚೆನ್ನಾಗಿರುತ್ತದೆ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ತುಂಬಾ ಚೆನ್ನಾಗಿದೆ ಅಮ್ಮ.

**ಡಾ॥ಜಯಮಾಲಾ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಚುನಾವಣಾ ಪ್ರಣಾಳಿಕೆಯಲ್ಲಿ ಬಂದಿರತಕ್ಕಂಥದ್ದು ಮತ್ತು ಭಾಷಣದ ಸಂದರ್ಭದಲ್ಲಿ ಹೇಳಿರತಕ್ಕಂಥದ್ದೆಲ್ಲವನ್ನೂ ಕೂಡ ಒಟ್ಟಾಗಿ ಇಟ್ಟುಕೊಂಡರೆ ನಿಮಗೂ ಕೂಡ confusion ಆಗುತ್ತದೆ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಅಮ್ಮಾ, ಬಜೆಟ್‌ನಲ್ಲಿ 34 ಸಾವಿರ ಕೋಟಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ನಾನು ಬಜೆಟ್ ಪುಸ್ತಕವನ್ನು ಇಟ್ಟುಕೊಂಡೇ ಅದನ್ನು ಹೇಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ತಾರಾ ಅನೂರಾಧರವರು, ರೈತರನ್ನು 'ಮೂರ್ಖರು' ಎಂದು ಹೇಳಬಾರದು. ರೈತರು ಈ ದೇಶದ ಬೆನ್ನೆಲುಬು. ದಯವಿಟ್ಟು ಆ ಪದವನ್ನು ಅವರು ಬಳಕೆ ಮಾಡಬಾರದು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಸಮಯ ಮುಗಿದು ಹೋಗುತ್ತದೆ. ಆದ್ದರಿಂದ ತಾವುಗಳೆಲ್ಲರೂ ಒಟ್ಟಿಗೆ ಮಾತನಾಡಬೇಡಿ, ಪಾಯಿಂಟ್ ಹಾಕಿಕೊಂಡುಬಿಡಿ. ನಿನ್ನೆ ದಿವಸ ಟಿ.ವಿಯಲ್ಲಿ ಚರ್ಚೆ ಮಾಡುತ್ತಿರುವುದನ್ನು ನೋಡಿದೆನು, ಅದೆಷ್ಟು ನಿಜವೋ ಅಥವಾ ಸುಳ್ಳೋ ಗೊತ್ತಿಲ್ಲ. ಅದರಲ್ಲಿ ಪಾಪ, ಒಬ್ಬರು ಮಾತನಾಡುತ್ತಿದ್ದರು. 'ಒಬ್ಬರಿಗೆ ಫುಲ್ ಮೀಲ್ಸ್, ಇನ್ನೊಬ್ಬರಿಗೆ ಪ್ಲೇಟ್ ಮೀಲ್ಸ್, ಮತ್ತೊಬ್ಬರಿಗೆ ಖಾಲಿ ಮೀಲ್ಸ್' ಎಂದು ಹೇಳುತ್ತಿದ್ದರು, ಅದರ ಬಗ್ಗೆ ಅವರು ಹೇಳಿಕೊಳ್ಳಲಿ. 34,000 ಕೋಟಿ ಮೊತ್ತದ ಪ್ರಯೋಜನ ರೈತರಿಗೆ ಎಂದು ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ. ಇದು ಬರೀ ಘೋಷಣೆಯೇ ಅಥವಾ ಮಾಹಿತಿ ಕೊಡುತ್ತಿದ್ದೀರಾ ಎನ್ನುವ ಸಂದೇಹ ನನಗಿದೆ. ಬಜೆಟ್ ಪುಸ್ತಕದ ಪೇಜ್ ನಂಬರ್ 69ರಲ್ಲಿನ ಒಂದು ಅಂಶದ ಬಗ್ಗೆ ನಾನು ಹೇಳುತ್ತೇನೆ. ನಿಮ್ಮ ಆಯವ್ಯಯದಲ್ಲಿ ಈ ಬಾರಿ ಮೀಸಲಿಟ್ಟಿರುವುದು ಕೇವಲ 6,500 ಕೋಟಿ ರೂಪಾಯಿಗಳಷ್ಟು ಮಾತ್ರ. ಈ ದುಡ್ಡು ಸುಸ್ತಿದಾರ ರೈತರಿಗೆ ಹೋಗುತ್ತದೆ, ಸಂತೋಷ. ಆದರೆ ಸುಸ್ತಿದಾರ ರೈತರು ಕೂಡ ರೈತರು ಅಲ್ಲವೇ? ಇದನ್ನು ಖಂಡಿತವಾಗಿ ನಾವು ಸ್ವಾಗತ ಮಾಡುತ್ತೇವೆ, ಖುಷಿ ಪಡುತ್ತೇವೆ. ಆದರೆ, ಪ್ರತಿ ವರ್ಷ ಕಷ್ಟವೋ, ಸುಖವೋ; ಕಷ್ಟವೋ, ನಷ್ಟವೋ ಮನೆ ಮಾರಾಟ ಮಾಡಿ, ಒಡವೆ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಪ್ರಾಮಾಣಿಕವಾಗಿ ಪ್ರತಿ ವರ್ಷ ಕಂತುಗಳಲ್ಲಿ ಕಟ್ಟುತ್ತಿದ್ದಾನಲ್ಲಾ ಅಂತಹ ರೈತರು ತಮಗೆ ಏಕೆ ಮರೆತು ಹೋದ.

ಮಾನ್ಯ ಸಭಾಪತಿಯವರೇ, ನನಗೆ ಒಂದು ವಿಷಯ ಕ್ಲಿಯರ್ ಆಗಬೇಕು ಏನೆಂದರೆ, ಉದಾಹರಣೆಗೆ ನಾನು 2 ಲಕ್ಷ ಬೆಳೆ ಸಾಲವನ್ನು ತೆಗೆದುಕೊಂಡಿದ್ದೇನೆ. ಈ ಆರ್ಥಿಕ ವರ್ಷದಲ್ಲಿ ನನ್ನ ಬೆಳೆ ಸಾಲ ಮನ್ನಾ ಆಗುತ್ತದೋ ಅಥವಾ ಇಲ್ಲವೋ? ನೀವು 34,000 ಕೋಟಿ ರೂಪಾಯಿಗಳು ಮೀಸಲು ಇಟ್ಟಿದ್ದೀರಲ್ಲಾ, ಅದರಲ್ಲಿ ಈ ಬಾರಿ ಈ ಸಾಲ ಮನ್ನಾ

ಆಗುತ್ತದೆಯೋ ಇಲ್ಲವೋ ಎನ್ನುವುದೇ ನನಗೆ ಸಂದೇಹ. ಇದಕ್ಕೂ ಕೂಡ ನೀವು ಉತ್ತರ ಕೊಡುವುದಕ್ಕೆ ಕಷ್ಟವೆಂದರೆ ಹೇಗೆ? ನನಗೆ ಸ್ವಲ್ಪ confusion ಕೂಡ ಆಗಿಬಿಟ್ಟಿದೆ. ಈ 6500 ಕೋಟಿ ರೂಪಾಯಿಗಳಷ್ಟು ಹಣವನ್ನು ಮೀಸಲಿಟ್ಟಿದ್ದೀರೆಲ್ಲಾ, ಅದರಿಂದ ಎಷ್ಟು ಜನ ರೈತರಿಗೆ ಉಪಯೋಗವಾಗುತ್ತದೆ. ನಿಮ್ಮ 6500 ಕೋಟಿ ರೂಪಾಯಿಗಳ ಹಣವವನ್ನು ನಂಬಿ ಎಷ್ಟು ಜನ ರೈತರು ಸಾಲ ಮನ್ನಾ ನಿರೀಕ್ಷೆ ಮಾಡಬಹುದು. ಸಂಪೂರ್ಣವಾಗಿ ಸಾಲ ಮನ್ನಾ ಆಗುತ್ತದೆ, ನನಗೆ ಇನ್ನುಮುಂದೆ ಸಾಲವೇ ಇರುವುದಿಲ್ಲವೆಂದು ನಿರೀಕ್ಷೆ ಇಟ್ಟುಕೊಂಡಿರುವ ನಾಲ್ಕು ಜನ ರೈತರು ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವರದಿ ಪತ್ರಿಕೆಗಳ ಮುಖಪುಟದಲ್ಲಿ ವರದಿಯಾಗಿದೆ. ಬಜೆಟ್ ಬಂದ ನಂತರ ನೀವೆಲ್ಲಾ ಇದಕ್ಕೇನು ಉತ್ತರ ಕೊಡುತ್ತೀರಿ? ಇದು ರೈತರ ಪರಿಸ್ಥಿತಿ.

ನಾನು ಬೆಂಗಳೂರಿನ ನಿವಾಸಿ. ಅದು ನನ್ನ ಸ್ವಾರ್ಥ, ಬೆಂಗಳೂರಿನಲ್ಲಿ ಸಮಸ್ಯೆಗಳ ಸಾಗರವೇ ಇದೆ. ಅದರಲ್ಲಿ ಮುಖ್ಯವಾದುದೆಂದರೆ ಸಂಚಾರ ದಟ್ಟಣೆ ಸಮಸ್ಯೆ. ಇದಕ್ಕೆ ನಾವು ಅನಿವಾರ್ಯವಾಗಿ ಪರಿಹಾರ ಕಂಡುಕೊಂಡಿದ್ದು ಎಂದರೆ ನಮ್ಮ ಮೆಟ್ರೋ. ಬಜೆಟ್‌ನಲ್ಲಿ ಮೆಟ್ರೋ 3ನೇ ಹಂತದ ಯೋಜನೆಯನ್ನು ವಿಸ್ತಾರ ಮಾಡಿದ್ದೀರಿ. ನಿಜವಾಗಿಯೂ ನಾನು ಈ ವಿಚಾರದಲ್ಲಿ ತಮ್ಮನ್ನು ಅಭಿನಂದಿಸುತ್ತೇನೆ. ಈಗಾಗಲೇ ನಮ್ಮ ಮೆಟ್ರೋ ನಿಲ್ದಾಣದಲ್ಲಿ ಅಥವಾ ಮೆಟ್ರೋ ರೈಲಿನ ಒಳಗಡೆ ಸ್ವಚ್ಛತೆ ಇಲ್ಲ. ಈ ಸ್ವಚ್ಛತೆ ನಿರ್ವಹಣೆ ನಿಜವಾಗಿಯೂ ಬಹಳ ಅಧೋಗತಿಗೆ ಇಳಿದಿದೆ. ಆ ಮೆಟ್ರೋ ನಿಲ್ದಾಣಕ್ಕೆ ದಯಮಾಡಿ ತಾವು ಒಮ್ಮೆ ಹೋಗಿ ನೋಡಬಹುದು. ನಾನು ಪ್ರಯಾಣ ಮಾಡಿ ಬಂದಿರುವ ಬಗ್ಗೆ ಫೋಟೋ ತೋರಿಸುತ್ತೇನೆ. ಹಾಗೆಯೇ ಶೇ.80ರಷ್ಟು ಹೆಣ್ಣುಮಕ್ಕಳು ಅಂತಹ ಮೆಟ್ರೋ ರೈಲುಗಳಲ್ಲಿ ಓಡಾಡುತ್ತಾರೆ. ಮಹಿಳೆಯರಿಗೆ ಮೀಸಲಾಗಿಟ್ಟಿರುವ ಬೋಗಿಗಳು ಬಹಳ ಕಡಿಮೆ ಸಂಖ್ಯೆ ಇದೆ. ಇನ್ನು ಶೌಚಾಲಯದ ವ್ಯವಸ್ಥೆ ಬಗ್ಗೆ ಹೇಳುವುದಾರೆ, ಶೌಚಾಲಯಗಳು ನಾರುತ್ತಿವೆ. ಕೆಲವು ಕಡೆಗಳಲ್ಲಿ, ನಾನು ಎಲ್ಲಾ ಕಡೆಗಳಲ್ಲಿ ಎಂದು ಹೇಳುತ್ತಿಲ್ಲ, ಹಿರಿಯ ನಾಗರೀಕರು ಮೆಟ್ರೋ ನಿಲ್ದಾಣಕ್ಕೆ ಹೋಗಬೇಕಾದರೆ, ಎಷ್ಟೋ ಕಡೆಗಳಲ್ಲಿ ಸ್ವಯಂಚಾಲಿತ escalator ಮೆಟ್ಟಿಲುಗಳು ಇಲ್ಲ. ಅವರು ನಡೆದುಕೊಂಡೇ ಹತ್ತಬೇಕಾಗುತ್ತದೆ. ಬನಶಂಕರಿ ಇನ್ನಿತರೆ ಕಡೆಗಳಲ್ಲಿ ಈ ರೀತಿ ಎಷ್ಟೋ ಮೆಟ್ರೋ ನಿಲ್ದಾಣಗಳಲ್ಲಿ ಸ್ವಯಂಚಾಲಿತ escalator ಗಳು ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ ಎನ್ನುವ ಕಾರಣಕ್ಕಾಗಿ ನಾನು ಮಧ್ಯ ಪ್ರವೇಶ ಮಾಡಿ ಮಾತನಾಡುತ್ತಿದ್ದೇನೆ. ತಾವು ಮೆಟ್ರೋದಲ್ಲಿ ಪ್ರಯಾಣ ಮಾಡಿಲ್ಲವೆಂದು ಕಾಣಿಸುತ್ತದೆ. No, what the Hon'ble Member is telling is not good. ನಾನು ಕೂಡ ಮೆಟ್ರೋದಲ್ಲಿ ಓಡಾಡಿಕೊಂಡು ಬಂದಿದ್ದೇನೆ, ಚೆನ್ನಾಗಿ ಇದೆ. ಆ ರೀತಿ ಯಾವ ಮೆಟ್ರೋ ನಿಲ್ದಾಣದಲ್ಲಿದೆ ಎಂಬುದನ್ನು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಬಹುದು.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಕೆಲವು ಕಡೆಗಳಲ್ಲಿ ಸ್ವಯಂ ಚಾಲಿತ escalator ಗಳು ಇಲ್ಲ.

(ಗೊಂದಲ)

**ಶ್ರೀ ಬಿ.ಝಡ್. ಜಮೀರ್ ಅಹಮ್ಮದ್ ಖಾನ್ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಂತಹ ಅವ್ಯವಸ್ಥೆ ಮೆಟ್ರೋ ನಿಲ್ದಾಣದಲ್ಲಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ, ನಾವು ಆ ವಿಚಾರವನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಸರಿಪಡಿಸಬಹುದಾಗಿದೆ. ಆದರೆ ಎಲ್ಲಾ ಕಡೆಗಳಲ್ಲಿ ಸ್ವಯಂಚಾಲಿತ escalator ಗಳು ಇಲ್ಲವೆಂದರೆ ಏನು ಅರ್ಥ?

(ಗೊಂದಲ)

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಕಾಳಜಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನಾನು ಎಲ್ಲಾ ಕಡೆ ಸ್ವಯಂ ಚಾಲಿತ escalator ಗಳು ಇಲ್ಲ ಎಂದು ಹೇಳಲಿಲ್ಲ, ಕೆಲವು ಕಡೆ ಬೆಂಗಳೂರಿನಲ್ಲಿ ಈಗಲೂ ಸಹ ಇಲ್ಲ. ಇದಕ್ಕೆ ನಾನು ಉದಾಹರಣೆಯನ್ನು ಕೊಡುತ್ತೇನೆ.

**ಶ್ರೀ ಬಿ.ಝಡ್ ಜಮೀರ್ ಅಹಮ್ಮದ್ ಖಾನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಲ್ಲಿ ಆ ರೀತಿಯ ಪರಿಸ್ಥಿತಿ ಇದೆ ಎಂದು ದಯವಿಟ್ಟು ಹೇಳಿದರೆ ಬಹಳ ಒಳ್ಳೆಯದು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಬನಶಂಕರಿ 2ನೇ ಹಂತಕ್ಕೆ ಈಗಲೂ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ವಿದ್ಯಾರ್ಥಿಗಳ ಪಾಸ್‌ಗಳ ಬಗ್ಗೆ, ಇನ್ನು ಮೆಟ್ರೋ ಸಂಚಾರದಲ್ಲಿ ಹೇಳುವುದಾದರೆ, ಈ ಪಾಸ್‌ಗಳಲ್ಲಿ ದರ ಕಡಿಮೆ ಮಾಡುವ ಆಲೋಚನೆ ಏನಾದರೂ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತಿದ್ದೇನೆ, ಇದು ನನ್ನ ಒಂದು ಮನವಿ. ಏಕೆಂದರೆ, ಹಲವಾರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯವರು ಕೂಡ ಈ ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವುದರಿಂದ, ಇಲ್ಲಿ ಅವರಿಗೆ ದರ ಕಡಿಮೆ ಮಾಡುವ ಅಥವಾ ಪಾಸ್‌ಗಳನ್ನು ಕೊಡುವಂತಹ ಆಲೋಚನೆ ಇದೆಯೇ? ಏಕೆಂದರೆ, ಬಜೆಟ್ ಪುಸ್ತಕದ ಪುಟ ಸಂಖ್ಯೆ.3ರಲ್ಲಿ; ಅಣ್ಣಾವ್ರು ಆಗಲೇ 'ಮಾತೃ ಹೃದಯ' ಕಾರ್ಯಕ್ರಮದ ಬಗ್ಗೆ ಹೇಳಿದರು. ಅದು ನೇರವಾಗಿ ನಮಗೆ ತಟ್ಟುತ್ತದೆ. ಮುಂದುವರೆದು ಪುಟ ಸಂಖ್ಯೆ 14ರಲ್ಲಿ ಪೌರಕಾರ್ಮಿಕರಿಗೆ ಅಗತ್ಯವಾದ 'ವಸತಿ ಗೃಹ ಭಾಗ್ಯ'ದ ಬಗ್ಗೆ ಹೇಳಿದ್ದೀರಿ. ನಿಜವಾಗಿಯೂ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಪೌರ ಕಾರ್ಮಿಕರ ಬಗ್ಗೆ ಅವರಿಗಿರುವ soft corner ಬಗ್ಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ಅವರಿಗೆ ಮೊದಲು ಸರಿಯಾಗಿ ಸಂಬಳ ಕೊಡುವಂತಹ ವ್ಯವಸ್ಥೆ ಆಗಬೇಕು ಸ್ವಾಮಿ. ಪೌರಕಾರ್ಮಿಕರಿಗೆ ಸಂಬಳ ಸಿಗುತ್ತಿಲ್ಲವೆಂದು ಇವತ್ತಿನ ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಅವರಿಗೆ ಸರಿಯಾಗಿ ಸಂಬಳವೇ ಕೊಡುತ್ತಿಲ್ಲ, ಇನ್ನು ಅವರಿಗೆ ವಸತಿ ಭಾಗ್ಯವನ್ನು ಕೊಡುತ್ತೀರಿ ಎಂದರೆ ಅವರು ಏನು ಕನಸಿನ ಸೌಧವನ್ನು ಕಟ್ಟಿಕೊಳ್ಳುತ್ತಾರೋ ನನಗಂತೂ ಗೊತ್ತಿಲ್ಲ.

ಪುಟ ಸಂಖ್ಯೆ.66 ಮತ್ತು 67ರಲ್ಲಿ 'ಸುಂದರವಾಗಿದ್ದ ನಮ್ಮ ಬೆಂಗಳೂರು ಜನದಟ್ಟಣೆ ಮತ್ತು ವಾಹನ ದಟ್ಟಣೆಯಿಂದಾಗಿ ಮೆಟ್ರೋ ಅನಿವಾರ್ಯ. ನಾವು ಈಗಾಗಲೇ ಅದನ್ನು ಒಪ್ಪಿಕೊಂಡಿದ್ದೇವೆ.' ಎಂದು ಹೇಳಿ ಇನ್ನೂ 6

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲಿವೇಟೆಡ್ ಕಾರಿಡಾರ್ ಬಗ್ಗೆ ಸಹ ತಿಳಿಸಲಾಗಿದೆ. ಈಗಾಗಲೇ ಮೆಟ್ರೋ ಬಂದು ಇದು ಯಾವ ಊರು, ಇದು ಯಾವ ಜಾಗವೆಂದು ಗೊತ್ತಾಗುತ್ತಿಲ್ಲ. ಇದಕ್ಕೆ ಎಷ್ಟು ಮರಗಳು ಬಲಿಯಾಗಿವೆ, ಎಷ್ಟು ಮನೆಗಳನ್ನು ಹೊಡೆದು ಹಾಕಲಾಗಿದೆ, ಎಷ್ಟು ಮನಸ್ಸುಗಳನ್ನು ಬಲಿ ತೆಗೆದುಕೊಂಡಿದೆ; ಅದು ಅನಿವಾರ್ಯವಾಗಿರುವುದರಿಂದ ಅದನ್ನು ಸಹಿಸಿಕೊಂಡು ಆಯಿತು, ಅದನ್ನು ಸಹಿಸಿಕೊಳ್ಳುತ್ತೇವೆ. ಏಕೆಂದರೆ, ನಾವು ಬೆಂಗಳೂರಿನ ನಿವಾಸಿಗಳು. ಬೆಂಗಳೂರಿನಲ್ಲಿನ ಟ್ರಾಫಿಕ್ ಸಮಸ್ಯೆ ಬಗ್ಗೆ ನನಗೆ ಗೊತ್ತು. ಆದರೆ, ಈ ಎಲಿವೇಟೆಡ್ ರಸ್ತೆಗಳನ್ನು ನೀವೇನು ಮಾಡುವುದಕ್ಕೆ ಹೊರಟಿದ್ದೀರಿ; ಇದು ನನ್ನ ಅನಿಸಿಕೆ, ತಪ್ಪಿದ್ದರೆ ದಯವಿಟ್ಟು ಕ್ಷಮಿಸಿ.

ನಮ್ಮ ಬೆಂಗಳೂರು ಎಂದರೆ, ಒಂದು ಸುಂದರವಾದ landscape ಇತ್ತು. ಆ landscape ಗೆ ಪೂರ್ತಿ ದಿಕ್ಕು ತಪ್ಪಿಸುತ್ತಿದೆಯೇನೋ ಎಂದು ನನಗೆ ಅನಿಸುತ್ತದೆ. ಆಯಿತು, ಸರಿ ಇದನ್ನು ಮಾಡುತ್ತಿದ್ದೀರಿ, ಆಗಲಿ. ಇದನ್ನು ನೀವು ಸರ್ವೇ ಮಾಡಿದ್ದೀರಾ? ಇದಕ್ಕೆ ತಗಲುವ ಖರ್ಚು ಎಷ್ಟು ಎಂದು ಹೇಳಿದ್ದೀರಾ? ನೀವು ಬಜೆಟ್‌ನಲ್ಲಿ ಈ ರೀತಿ ಎಲ್ಲೂ ಹೇಳಿಲ್ಲ. ಮುಂದುವರೆದು ಹೇಳುತ್ತೀರಿ; ಇದಕ್ಕಾಗಿಯೇ ಈ ವರ್ಷವೇ 100 ಕೋಟಿ ರೂಪಾಯಿಗಳನ್ನಾದರೂ ಒದಗಿಸಿದ್ದೀರಿ, ಅದರಲ್ಲೂ K.R.D.C.L. ನ ಮೂಲಕ. ನನಗೆ ಗೊತ್ತಿರುವ ಹಾಗೆ ಅದು P.W.D. ನ sister concern ಅನಿಸುತ್ತದೆ. ಅದು ಇರಲಿ ಬಿಡಿ. K.R.D.C.L. ಎಂದರೆ, ಇದು ಒಂದು ಸಂಸ್ಥೆ. ಬಿಡಿಎ ಇದೆ, ಬಿಬಿಎಂಪಿ ಇದೆ, ಬೆಸ್ಕಾಂ ಇದೆ, ಬಿಎಂಟಿಸಿ ಇದೆ, ಬಿಡಬ್ಲ್ಯೂಎಸ್‌ಎಸ್‌ಬಿ ಇದೆ, ಬಿಎಂಆರ್‌ಸಿಎಲ್ ಇದೆ. ಅದೆಲ್ಲಾ ಇರಲಿ ಬಿಡಿ, ಆದರೆ ಬೆಂಗಳೂರಿನ ಬಿಡಿಎ ಮತ್ತು ಬಿಬಿಎಂಪಿ ಇರಬೇಕಾದರೆ, ಕೆಆರ್‌ಡಿಸಿಎಲ್‌ನಿಂದ ಮಾಡಿಸುವುದು ಏಕೆಂದು ನನಗೆ ಗೊತ್ತಿಲ್ಲ. ಲೋಕೋಪಯೋಗಿ ಸಚಿವರಾದ ಮಾನ್ಯ ಹೆಚ್.ಡಿ.ರೇವಣ್ಣನವರು ಇದ್ದಾರೆ, ಅವರು ನನ್ನ ಸ್ವಂತ ಅಣ್ಣ ಇದ್ದ ಹಾಗೆ ಇರಲಿ. ಮಾನ್ಯ ಸಭಾಪತಿಯವರೇ, ಈಗ ಬಿಡಿಎ, ಬಿಬಿಎಂಪಿ, ಬೆಸ್ಕಾಂ, ಬಿಎಂಟಿಸಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಸಿಎಲ್ ಇವುಗಳ ಮಧ್ಯೆ ಒಂದಕ್ಕೊಂದು coordination ಇದೆಯೋ ಅಥವಾ ಇಲ್ಲವೋ ಎನ್ನುವುದೇ ನಮಗೆ ಸಂದೇಹ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಆ ಎಲ್ಲಾ ಇಲಾಖೆಗಳನ್ನು ಅವರ ಅಡಿಯಲ್ಲಿ ತಂದು, ಈ ಸಮಿತಿಯಲ್ಲಿ ನಮ್ಮ ಬೆಂಗಳೂರಿನ ಶಾಸಕರುಗಳು ಅಥವಾ ಸಚಿವರನ್ನು ಇಟ್ಟು, ಆ ಎಲ್ಲಾ ಇಲಾಖೆಗಳನ್ನು ಒಂದೇ ಅಡಿಯಲ್ಲಿ ತರುವಂತಹ ಕೆಲಸವನ್ನು ಮಾಡಬಹುದೇನೋ ಎನ್ನುವುದು ನನ್ನ ಸಲಹೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಮುಂದು...)

(195)10.7.2018/6.10/ಎಂ.ಎಂ–ಎ.ಕೆ

**ಶ್ರೀಮತಿ ತಾರಾಅನೂರಾಧ (ಮುಂದು):–**

ನೀವು ತೆಗೆದುಕೊಂಡರೆ ತೆಗೆದುಕೊಳ್ಳಬಹುದು, ಬಿಟ್ಟರೆ ಬಿಡಬಹುದು. Elevated Corridor ಗೋಸ್ಕರ ಬೆಂಗಳೂರಿನಲ್ಲಿ ಅಳಿದು ಉಳಿದಿರುವ ಮರಗಳು ಎಷ್ಟು ಬಲಿಯಾಗುತ್ತವೋ, ಮನೆಗಳನ್ನು ಬುಡಸಮೇತ ಕಿತ್ತು ಹಾಕುವುದನ್ನು ನೋಡುತ್ತೇವೆ. ಮನಸ್ಸುಗಳನ್ನು ಒಡೆದು ಹಾಕುವುದನ್ನು ನೋಡುತ್ತೇವೆ, ಇವರ ಮನಸ್ಸು, ಮನೆಗಳನ್ನು, ಇವರ ಜೀವನವನ್ನು ಹೇಗೆ ಕಟ್ಟಿ ಕೊಡುತ್ತೀರಿ? ಇದರ ಉಲ್ಲೇಖವೂ ಬಜೆಟ್‌ನಲ್ಲಿ ಇಲ್ಲ. ಬೇರೆ ಬೇರೆ ಕಮಿಟಿಗಳು ಎಂದರೆ ಫೈವ್ ಸ್ಟಾರ್ ಕಮಿಟಿಗಳನ್ನು ಬಿಟ್ಟರೆ, ಶ್ರೀಮಂತರು, ಐಟಿ–ಬಿಟಿಯವರು, ಹೂಡಿಕೆದಾರರು, ವ್ಯಾಪಾರಸ್ಥರು ಇವರೆಲ್ಲಾ ಸೇರಿಕೊಂಡು ಯಾವುದೋ ಸಮಿತಿಗಳನ್ನು ಮಾಡಿಕೊಂಡಿರುತ್ತಾರೆ. ಅವರೆಲ್ಲಾ ಒಂದು ವರದಿಗಳನ್ನು ಕೊಡುತ್ತಾರೆ. ಆದರೆ ದಯವಿಟ್ಟು ಜನಸಾಮಾನ್ಯರ ವರದಿಗಳನ್ನು ಕೇಳಿ. ಯಾರು ಫುಟ್‌ಪಾತ್, ಬಸ್ ಸ್ಟ್ಯಾಂಡ್ ಬಳಸುತ್ತಾರೆ, ಯಾರು ಬೆಂಗಳೂರಿನಲ್ಲಿ ರಸ್ತೆಯನ್ನು ಬಳಸುತ್ತಾರೆ, ಅವರ ಸಮಸ್ಯೆಗಳನ್ನು ಕೇಳಿದರೆ ಪರಿಹಾರ ಸಿಗಬಹುದು ಆ ನಿಟ್ಟಿನಲ್ಲಿ ಆಲೋಚನೆ ಮಾಡಬಹುದಾಗಿತ್ತು.

ಇನ್ನು ಮುಖ್ಯವಾಗಿ ಬೆಂಗಳೂರಿನಲ್ಲಿ ಕಸದ ಸಮಸ್ಯೆ ಇದೆ. ಬಿ.ಜೆ.ಪಿ ಸರ್ಕಾರ ಇದ್ದಾಗ ಉಲ್ಬಣಗೊಂಡಿದೆ, ಹಾಗೆ ಹೀಗೆ ಎಂದು ನೀವು ಮತ್ತು ಕಾಂಗ್ರೆಸ್‌ನವರು ಸೇರಿಕೊಂಡು ಟೀಕೆ ಮಾಡಿದಿರಿ. ಕಳೆದ ಸಲ ಇದ್ದ ಸರ್ಕಾರ ಬಗ್ಗೆ ಕೂಡ 'ಗಾರ್ಡನ್ ಸಿಟಿ ಇದ್ದದ್ದು ಗಾರ್ಬೇಜ್ ಸಿಟಿ ಆಯಿತು' ಎಂದು ನಾವು ನೀವು ಸೇರಿ ಟೀಕೆಗಳನ್ನು ಮಾಡಿದೆವು. ಈಗ ನೀವಿಬ್ಬರು ಒಂದಾಗಿದ್ದೀರಿ ಈಗಲಾದರೂ ಈ ಕಸದ ಸಮಸ್ಯೆಗೆ ಮುಕ್ತಿ ಸಿಗುವುದೇ? ಇಲ್ಲವೇ? ಆ ಬಗ್ಗೆ ಕೆಲಸ ಮಾಡುತ್ತಿದ್ದಾರಂತೆ ಅದರ ಬಗ್ಗೆ ಕೂಡ ಸರಿಯಾದ ಉಲ್ಲೇಖ ಇಲ್ಲ. ಅದು ಬಿಟ್ಟು, ಬೆಂಗಳೂರು ನಗರವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದೀರಿ. ಬೆಂಗಳೂರು ನಗರ ಕೆಂಪೇಗೌಡರು ಕಟ್ಟಿದ ನಗರವಾಗಿದೆ. ಅವರು ಸಮಗ್ರ ಬೆಂಗಳೂರಿನ ಕನಸು ಕಂಡಿದ್ದರು. ಇಚ್ಛಾಶಕ್ತಿ ಎಂದರೆ ನಾಲ್ಕು ಭಾಗಗಳನ್ನಾಗಿ ಮಾಡುವುದಲ್ಲ. ನಮಗಿರುವುದು ಒಂದೇ ಬೆಂಗಳೂರು. ಬೆಂಗಳೂರು 1, ಬೆಂಗಳೂರು 2, ಬೆಂಗಳೂರು 3, ಬೆಂಗಳೂರು 4 ಎಂದು ಇಲ್ಲ. ಕೆಂಪೇಗೌಡರ ಶಾಪಕ್ಕೆ ನೀವು ಬಲಿಯಾಗಿ ಬಿಡುತ್ತೀರಿ. ಆ ಶಾಪ ತಟ್ಟುತ್ತದೆ.

**ಶ್ರೀ ಬಂಡೆಪ್ಪ ಖಾಶೆಂಪೂರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರೇ ಹಿಂದೆ ಅವರು ಮುಖ್ಯಮಂತ್ರಿಯಾಗಿದ್ದಾಗ ಒಂದೇ ಬೆಂಗಳೂರು ಮಾಡಿದರು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು ವೈಯಕ್ತಿಕವಾಗಿ ನನಗೆ ಏಕೆ ಹತ್ತಿರದವರಾಗಿದ್ದಾರೆ ಎಂದರೆ, ಅವರು ಸಿನಿಮಾದಿಂದ ಬಂದವರು. 'ಚೆನ್ನಾಂಬಿಕಾ ಫಿಲಂಸ್' ಸಂಸ್ಥೆಯಿಂದ ಅವರು Exhibitor ಆಗಿ, Distributor ಆಗಿ, ನಿರ್ಮಾಪಕರಾಗಿ, ಮೊನ್ನೆ ಕೂಡ ಅವರು ಮುಖ್ಯಮಂತ್ರಿಯಾದ ನಂತರ ಅವರ ಮಗನ ಸಿನಿಮಾ ಶೂಟಿಂಗ್ ನಡೆಯುತ್ತಿದ್ದ ಸ್ಥಳಕ್ಕೆ ಹೋಗಿ ಬಂದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಬಜೆಟ್‌ನಲ್ಲಿ ಸಿನಿಮಾಗೋಸ್ಕರ ಬಹಳ ನಿರೀಕ್ಷೆ ಮಾಡಿದ್ದೆ. ಎಷ್ಟು ನಿರೀಕ್ಷೆ ಮಾಡಿದ್ದೆ ಎಂದರೆ, ಕುಮಾರಣ್ಣನವರು ನಿಜವಾಗಲೂ ಸಿನಿಮಾ ರಂಗಕ್ಕೆ ಏನಾದರೂ ಮಾಡುತ್ತಾರೆ, ಅವರಿಗೆ ಸಿನಿಮಾ ಬಗ್ಗೆ ಗೊತ್ತಿದೆ, ಸಿನಿಮಾ ಕಾರ್ಮಿಕರ, ಕಲಾವಿದರ ಬಗ್ಗೆ, ಚಿತ್ರಮಂದಿರಗಳ ಸಮಸ್ಯೆ, ನಿರ್ಮಾಪಕರ ಸಮಸ್ಯೆ ಬಗ್ಗೆ ಗೊತ್ತಿದೆ, ಎಲ್ಲವನ್ನೂ ಸಮಗ್ರವಾಗಿ ಈ ಬಜೆಟ್‌ನಲ್ಲಿ ಚಿತ್ರರಂಗಕ್ಕೆ ದೊಡ್ಡ ಕೊಡುಗೆಯನ್ನು ಕೊಡುತ್ತಾರೆ ಎಂದು ಭಾವಿಸಿದ್ದೆ. ಆದರೆ ಎರಡೇ ಎರಡು ವಿಶ್ವವಿದ್ಯಾನಿಲಯ ಮತ್ತು ಫಿಲಂ ಸಿಟಿ ಮಾಡುತ್ತೇವೆ ಎಂದು ಫಿಲಂ ತೋರಿಸಿದ್ದಾರೆ. ಕುಮಾರಣ್ಣನವರು ಕನಿಷ್ಟಪಕ್ಷ ಚಲನಚಿತ್ರ ಅಕಾಡೆಮಿಯ ಮೂಲಕ ಮಾಸಾಶನ ಕೊಡುವ ಬಗ್ಗೆಯಾದರೂ ಯೋಚನೆ ಮಾಡಬೇಕಾಗಿತ್ತು. ಚಲನಚಿತ್ರ ಅಕಾಡೆಮಿ ಈಗಾಗಲೇ ನಮ್ಮಲ್ಲಿ ಇದೆ. ಎಲ್ಲಾ ಅಕಾಡೆಮಿಗಳು ಆಯಾ ಸಂಬಂಧಪಟ್ಟವರಿಗೆ ಮಾಸಾಶನ ನೀಡುತ್ತದೆ. ಫಿಲಂ ಅಕಾಡೆಮಿ ಮೂಲಕ ಮಾಸಾಶನ ಕೊಡುವುದರ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಚಿತ್ರಮಂದಿರಗಳ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಇನ್ನೂ ಏನೇನೋ ಆಸೆಗಳಿವೆ, ತುಂಬಾ ಮಾತನಾಡಬೇಕಾಗಿದೆ, ಆದರೆ ನಾನು ಮಾತನಾಡಲು ಸರಿಯಾಗಿ 12 ನಿಮಿಷಗಳನ್ನು ತೆಗೆದುಕೊಂಡಿದ್ದೇನೆ. ಕೊನೆಯದಾಗಿ ನಿಮ್ಮ ಈ ಸಂಬಂಧ ನೋಡಿ ನನಗೆ ಬಹಳ ಸಂತೋಷವಾಗಿದೆ. ಆದರೆ ಒಂದೇ ಒಂದು ಗೊಂದಲವಿದೆ. ನಿಮ್ಮದೇನು ನಿಶ್ಚಿತಾರ್ಥವೋ, ಮದುವೆಯೋ, living together ಎಂದು ಬಹಳ ಸಂದೇಹವಾಗಿದೆ. ಆದರೂ ನಾನು ಹೇಳುವುದೇನೆಂದರೆ, ಈ ಬಜೆಟ್ ತುಂಬಾ ಗೊಂದಲಮಯವಾದ ಬಜೆಟ್ ಆಗಿದೆ, ನಿಮ್ಮ ಮಾತುಗಳು convincing ಆಗಿಲ್ಲ. ಇದು confusing budget ಆಗಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ತಾರಾರವರೇ, ಬಜೆಟ್ ಮೂಲಕ ಮಗು ಅಂತೂ ಆಗಿದೆ.

**ಡಾ: ಜಯಮಾಲಾ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಸಹೋದರಿ ಗೌರವಾನ್ವಿತ ಸದಸ್ಯೆ ಸಮ್ಮಿಶ್ರ ಸರ್ಕಾರದ 2018–19ರ ಆಯವ್ಯಯದ ಬಗ್ಗೆ ಮಾತನಾಡಿದರು. ಅವರು ಕೆಲವು ಗಂಭೀರವಾದ ವಿಷಯಗಳನ್ನು ತೆಗೆದರು. ಆದರೆ ಕೆಲವು ವಿಷಯಗಳನ್ನು ಮಾತನಾಡುವಾಗ ಇದರಲ್ಲಿ ಏನೂ ಇಲ್ಲ, ಸಿನಿಮಾಗೆ ಏನನ್ನೂ ಕೊಟ್ಟಿಲ್ಲ, ಮಹಿಳೆಯರಿಗೆ ಏನೂ ಕೊಟ್ಟಿಲ್ಲ ಎಂದು ಹೇಳಿದರು. ಕೆಲವು ವಿಷಯಗಳ ಬಗ್ಗೆ ತಮಗೆ ಹೇಳಬೇಕಾಗುತ್ತದೆ. ಈ ಬಜೆಟ್ ಅನ್ನು ನೋಡಬೇಕಾದರೆ, ಇದನ್ನು ನೀವು ನೋಡಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಫೆಬ್ರವರಿ ತಿಂಗಳಿನಲ್ಲಿ ಮಂಡಿಸಿದ ಬಜೆಟ್ ಮತ್ತು ಈಗಿನ ಬಜೆಟ್ ಪುಸ್ತಕಗಳನ್ನು ಸದನದಲ್ಲಿ ಪ್ರದರ್ಶಿಸಿದರು)**

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, . . .

**ಡಾ: ಜಯಮಾಲಾ ರಾಮಚಂದ್ರ:–** ಮಾನ್ಯ ತಾರಾರವರೇ, ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ, ತಾವು ಮಾತನಾಡುವಾಗ ನಾನು ಕೇಳಿಸಿಕೊಂಡಿದ್ದೇನೆ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಈ ಬಜೆಟ್ ಬಿಟ್ಟು ಆ ಬಜೆಟ್ ನೋಡಬೇಕೆಂದು ಈಗ ಹೇಳುತ್ತಾರೆ, ನಮಗೆ ಎರಡೂ ಬಜೆಟ್ ಪುಸ್ತಕಗಳನ್ನು ಅಂಟಿಸಿಕೊಡಬೇಕಾಗಿತ್ತು.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ: ಜಯಮಾಲಾ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, . . .

(ಗೊಂದಲ)

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಕಳೆದ ಸಲ ಮಂಡಿಸಿದ ಬಜೆಟ್‌ನ ಚರ್ಚೆ ಮುಗಿದುಹೋಗಿದೆ. ಈ ಬಜೆಟ್ ಪುಸ್ತಕದ ಜೊತೆ ಆ ಬಜೆಟ್ ಪುಸ್ತಕವನ್ನು ಅಂಟಿಸಿಕೊಡಬೇಕಾಗಿತ್ತು.

**ಶ್ರೀ ಟಿ.ಎ. ಶರವಣ:–** ಸಹೋದರಿ ತಾರಾರವರೇ, ಸಭಾನಾಯಕರು ಮಾತನಾಡುವಾಗ ಕೇಳಿಸಿಕೊಳ್ಳಿ, ನೀವು ಮಾತನಾಡುವಾಗ ಅವರು ಕೇಳಿಸಿಕೊಂಡರಲ್ಲವೇ?

**ಡಾ: ಜಯಮಾಲಾ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಇದನ್ನು ನೋಡಬೇಕಾದರೆ, ಒಳಗಣ್ಣು ಬೇಕಾಗುತ್ತದೆ, ಅರಿವು ಬೇಕಾಗುತ್ತದೆ. ಅಂಟಿಸಿಕೊಂಡು ನೋಡಬೇಕಾಗಿಲ್ಲ, ಕನಿಷ್ಟ ಪಕ್ಷ ಓದುವಂತಹ ಸಹನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇದನ್ನು ನೋಡಿ ಇದರಲ್ಲಿಯೂ ಹೇಳಿದೆ, ಇದು ಅದರ ಮುಂದುವರಿಕೆ ಭಾಗವಾಗಿದೆ ಎಂದು ನಾವು ಹೇಳುತ್ತಿದ್ದೇವೆ. 2018–19 ಎಂದರೆ, ಇದು ಫೆಬ್ರವರಿಯಲ್ಲಿ ಮಂಡಿಸಿರುವ ಬಜೆಟ್, ಇದು ಈಗ ಮಂಡಿಸಿರುವ ಬಜೆಟ್ ಆಗಿದೆ. ನಾನು ಅದರ ಬಗ್ಗೆ ಹೇಳುವುದಿಲ್ಲ. ಇದನ್ನು ಓದುವಾಗ ಅರಿತುಕೊಳ್ಳಬೇಕಾದರೆ, ಒಂದು ಒಳಗಣ್ಣು ಬೇಕಾಗುತ್ತದೆ. ಚಿತ್ರರಂಗಕ್ಕೆ ಏನೂ ಕೊಟ್ಟಿಲ್ಲ ಎಂದು ಗೌರವಾನ್ವಿತ ಸದಸ್ಯೆಯವರು ಹೇಳಿದರು. ತಾವು ಮೊನ್ನೆ ತಾನೇ ಉದ್ಯಮದ ಒಳ ಹೊರಗನ್ನು ತುಂಬಾ ಚೆನ್ನಾಗಿ ಹೇಳಿದಿರಿ. ನಾನು ಆಗಲೂ ಕೂಡ ಹೇಳಿದ್ದೆ. ಚಿತ್ರರಂಗಕ್ಕೆ ಇವತ್ತು 3000ಕ್ಕೂ ಹೆಚ್ಚಿನ ಅಧ್ಯಯನಗಳಿವೆ. ಭಾರತ ಬಿಟ್ಟು ಹೊರಗಡೆ ವಿಶ್ವವಿದ್ಯಾನಿಲಯಗಳಲ್ಲಿ ಸಿನಿಮಾವನ್ನು ಒಂದು ವಸ್ತುವನ್ನಾಗಿ ತೆಗೆದುಕೊಂಡು ಅದರಿಂದ ಅಧ್ಯಯನಗಳಾಗುತ್ತಿದೆ. ಆದರೆ ಅದರ ಒಂದು ವಿಶ್ವವಿದ್ಯಾನಿಲಯ ಭಾರತದಲ್ಲಿ ಇಲ್ಲ. ಪ್ರಪ್ರಥಮ ಬಾರಿಗೆ ಆ ರೀತಿಯ ಆಲೋಚನೆ ಬಂದಿದೆ ಎಂದರೆ, ಒಂದು ಕ್ಷಣ ಯೋಚನೆ ಮಾಡಿ. ಇದು ಪರಿಪೂರ್ಣವಾದಂತಹ ಆಲೋಚನೆ ಅಲ್ಲವೇ? ಇದುವರೆಗೂ ಚಿತ್ರರಂಗಕ್ಕೆ ಇದನ್ನು ಯಾರು ಕೊಟ್ಟಿದ್ದಾರೆ? ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಆದರೆ ನನಗೆ ಅನಿಸಿರುವ ಮಾತನ್ನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. Animation, ಗ್ರಾಫಿಕ್ ಬಗ್ಗೆ ಹೇಳುವುದಾದರೆ, ಇಲ್ಲಿಯವರೆಗೂ ಗ್ರಾಫಿಕ್ ಪಾರ್ಕನ್ನು ಯಾರು ಮಾಡಿದ್ದಾರೆ? ಕನ್ನಡ ಚಿತ್ರರಂಗಕ್ಕೆ ಇವತ್ತಿನವರೆಗೂ ಕೊಡಬೇಕಾಗಿರುವುದೆಲ್ಲವನ್ನೂ ಕೊಟ್ಟಿದ್ದೇವೆ. ಯಾವುದನ್ನು ಬಿಟ್ಟಿದ್ದೇವೆ ಅದನ್ನು ಈ ಬಜೆಟ್ ಪರಿಪೂರ್ಣ ಮಾಡಿದೆ.

'ಇಸ್ರೇಲ್' ಎನ್ನುವ ಮಾತುಗಳನ್ನು ಬಹಳಷ್ಟು ಜನ ಸದಸ್ಯರು ಹೇಳಿದರು. ಇಸ್ರೇಲ್ ಎಂದರೆ, ಒಂದು ಮರಳುಗಾಡಿನಲ್ಲಿ ಯುದ್ಧದಿಂದ ತತ್ತರಿಸಿಹೋದ ಒಂದು ನಾಡು, ರೈತರ ಬದುಕೇ ಹಾಳಾಗಿ ಹೋದಾಗ ಅವರು ಬದುಕನ್ನು ಹೇಗೆ ಕಟ್ಟಿಕೊಂಡರು ಎನ್ನುವುದನ್ನು ಇವತ್ತು ಪ್ರಪಂಚವೇ ಅವರತ್ತ ನೋಡುವ ಹಾಗೆ ಮಾಡಿದೆ. ಹತ್ತು ಎಕರೆಯಲ್ಲಿ ಬೆಳೆಯುವಂತಹ ಬೆಳೆಯನ್ನು ವರ್ಟಿಕಲ್‌ಆಗಿ ಒಂದು ಎಕರೆ ಜಾಗದಲ್ಲಿ ಕಡಿಮೆ ಪ್ರಮಾಣದ ನೀರಿನಲ್ಲಿ ಬೆಳೆಸುವುದು, ಒಂದು ವರ್ಷ ಬೆಳೆಯುವ ಬೆಳೆಯನ್ನು ಕನಿಷ್ಟ ಒಂದುವರೆ ತಿಂಗಳಿನೊಳಗೆ ಬೆಳೆಸುವುದು. ಅವರು ಹೆಚ್ಚು ಕೃಷಿ ಮಾಡುವಂತಹವರು, ಅದಕ್ಕೆ ಕೆಲಸಗಾರರು ಬೇಕಾಗಿಲ್ಲ, ಒಂದು ಕುಟುಂಬವೇ ಇದನ್ನು ಮಾಡಬಹುದು ಎನ್ನುವ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿಟ್ಟಿನಲ್ಲಿ ಈ ಇಸ್ರೇಲ್ ಪದ್ಧತಿ hydroponic ಆಗಿರಬಹುದು. ಹಲವಾರು ವಿಧಾನವಾದ, ಎಲ್ಲಾ ರೀತಿಯ ಬೆಳೆಗಳನ್ನು ಬೆಳೆಯುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಅದನ್ನು ಇಲ್ಲಿಗೆ ತರುತ್ತಾರೆ ಎಂದಾಗ ನಾವು ಸಂತೋಷ ಪಡುತ್ತೇವೆ. ಒಣ ಬೇಸಾಯ ಮಾಡುವ ಉತ್ತರ ಕರ್ನಾಟಕದ ಭಾಗಕ್ಕೆ ಹೋದಾಗ ಬಂಜರು ಭೂಮಿ ಕಾಣುತ್ತದೆ. ಅಂತಹ ಭಾಗಕ್ಕೆ ಇಸ್ರೇಲ್ ಮಾದರಿ ಬಂದರೆ; ನೀರಾವರಿ ಸೌಲಭ್ಯ ಇರುವ ರೈತರೆಲ್ಲರಿಗೂ ಎಲ್ಲಾ ಸಾಲದ ಅವಕಾಶಗಳಿವೆ. ಆದರೆ ಒಣಬೇಸಾಯ ಮಾಡುವ ರೈತರಿಗೆ ಯಾವುದೂ ಇಲ್ಲ. ನಾನು ಹೇಳುವುದೇನೆಂದರೆ, ಈ ರೀತಿಯ ಆಲೋಚನೆ ಬಂದಿರುವುದು ಮಾನ್ಯ ಮುಖ್ಯಮಂತ್ರಿಯವರಿಗೆ ಮಾತ್ರ. ಇದು ಸಮ್ಮಿಶ್ರ ಸರ್ಕಾರಕ್ಕೆ ಬಂದಿರುವ ಆಲೋಚನೆಯಾಗಿದೆ. ಇದನ್ನು ನೋಡಬೇಕಾದರೆ, ಒಳಗಣ್ಣು ಬೇಕಾಗುತ್ತದೆ ಮತ್ತು ಇದನ್ನು ಓದಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ.

(ಮುಂವ)

(196) 10–07–2018/6–20/ಕೆಹೆಚ್/ಆರ್‌ಎನ್

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಸ್ರೇಲ್ ಕೃಷಿಯ ಬಗ್ಗೆ ನಾನು ಎಲ್ಲೂ ಸಹ ಕೆಟ್ಟದಾಗಿ ಮಾತನಾಡಿಲ್ಲ. ಅದನ್ನು ಸ್ವಾಗತ ಮಾಡಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, . . .

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಆಯವ್ಯಯದ ಒಳ–ಹೊರಗುಗಳನ್ನು ನೋಡಿ, ಅದನ್ನು ಓದಬೇಕೆನ್ನುವ ಒಂದು ಮಾತು ಮಾಜಿ ಮುಖ್ಯಮಂತ್ರಿಯವರಾದಂತಹ ಸಿದ್ದರಾಮಯ್ಯನವರ ಬಗ್ಗೆ ಮತ್ತು ಸರ್ಕಾರದ ಬಗ್ಗೆ ಹೇಳಿ ಮುಂದುವರೆಯಬೇಕೆಂದು ಹೇಳುತ್ತೇನೆ.

(ಗೊಂದಲ)

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಇಸ್ರೇಲ್ ಕೃಷಿಯ ಬಗ್ಗೆ ನಾನು ತಪ್ಪಾಗಿ ಮಾತನಾಡಿರುವುದಿಲ್ಲ. ಸಿನಿಮಾ ರಂಗದ ಬಗ್ಗೆ ಖಂಡಿತವಾಗಿಯೂ ಸ್ವಾಗತ ಮಾಡಿದ್ದೇನೆ. ಇದರ ಬಗ್ಗೆ ಇನ್ನೂ ನಿರೀಕ್ಷೆ ಮಾಡಿದ್ದೆ ಎಂದು ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಸಿನಿಮಾ ರಂಗಕ್ಕೆ ಅನ್ಯಾಯ ಮಾಡಿದ್ದಾರೆ ಎಂಬ ಯಾವುದೇ ಪದವನ್ನು ಬಳಕೆ ಮಾಡಿರುವುದಿಲ್ಲ. ಇಸ್ರೇಲ್ ಕೃಷಿಯ ಬಗ್ಗೆ ನಮಗೆ ನಿಜವಾಗಿಯೂ ಖುಷಿ ಇದೆ. ಇನ್ನೂ ಕೃಷಿಯನ್ನು ಜಾಸ್ತಿ ಮಾಡಿ ಎಂದು ಹೇಳಿದ್ದೇನೆಯೇ ಹೊರತು ಇಸ್ರೇಲ್ ಕೃಷಿಯ ಬಗ್ಗೆ ನಾನು ಕೆಟ್ಟದಾಗಿ ಮಾತನಾಡಿರುವುದಿಲ್ಲ. ಇದರ ಬಗ್ಗೆ ಮಾನ್ಯ ಸಭಾನಾಯಕರು ಅರ್ಥೈಸಿಕೊಳ್ಳಬೇಕು. ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸಭಾನಾಯಕರು ಒಳಗಣ್ಣು–ಹೊರಗಣ್ಣು ಎಂದು ಪ್ರಸ್ತಾಪ ಮಾಡಿದರು. ಯಾವುದು ಒಳಗಣ್ಣು ಎಂಬುದನ್ನು ಈಗ ಹೊರಗೆ ತೆಗೆದು ತೋರಿಸಬೇಕು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಾರಾಅನೂರಾಧರವರು ಕೊನೆಯಲ್ಲಿ ಎರಡು ವಿಚಾರವನ್ನು ಪ್ರಸ್ತಾಪ ಮಾಡಿದರು. ನಿಶ್ಚಿತಾರ್ಥವೋ, ಲಿವಿಂಗ್ ಟುಗೆದರೋ, ಮ್ಯಾರೇಜೋ ಈ ಮೂರರ ಬಗ್ಗೆ ನನಗೆ ಅರ್ಥವಾಗಲಿಲ್ಲ. ದಯಮಾಡಿ ಇದರ ಬಗ್ಗೆ ಮಾನ್ಯ ಸದಸ್ಯರು ವಿವರಣೆಯನ್ನು ಕೊಟ್ಟರೆ ಒಳ್ಳೆಯದು. ಎರಡನೆಯದು, 2006–08ನೇ ಸಾಲಿನವರೆಗೂ ಒಂದು ಸರ್ಕಾರ ಅಧಿಕಾರದಲ್ಲಿತ್ತು. ಅದು ಯಾವ ಸರ್ಕಾರ? ಅದು ನಿಶ್ಚಿತಾರ್ಥವೋ, ಲಿವಿಂಗ್ ಟುಗೆದರೋ, ಮ್ಯಾರೇಜೋ ಅದರ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ನನಗೆ ಅನುಭವವಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಹಳ್ಳಿಯ ಕಡೆಯಲ್ಲಿ “ಕೂಡಿಕೆ” ಎಂಬುದೊಂದು ಇದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸದಸ್ಯರೇ, ದಯಮಾಡಿ ಒಂದು ನಿಮಿಷ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, 2008ನೇ ಸಾಲಿನಲ್ಲಿ ವಿಚ್ಛೇದನವಾಯಿತು. ಆದ್ದರಿಂದ ಈಗ ಅದರ ಬಗ್ಗೆ ಬೇಡ. ಅದಕ್ಕೆ ತಮಗೆ ಇದರ ಬಗ್ಗೆ ಅನುಮಾನಗಳು ಕಾಡುತ್ತಿರುವುದು.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, 2008ನೇ ಸಾಲಿನಲ್ಲಿ ವಿಚ್ಛೇದನವಾಗಿದೆ. ಮಾನ್ಯ ಸದಸ್ಯರು ಮೂರು ಪದಗಳ ಬಗ್ಗೆ ಹೇಳಿದರು. ಅದೇ ರೀತಿ ಕೂಡಿಕೆ ಎಂಬುದೊಂದು ಇದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ದಯಮಾಡಿ ಒಂದು ನಿಮಿಷ. ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡಿದ್ದಾರೆ. ಅವರು ಯಾವುದು taunt ಕೊಡಬಹುದು ಕೊಟ್ಟಿದ್ದಾರೆ. ಯಾವುದರ ಬಗ್ಗೆ ಹೊಗಳಬೇಕು ಅದನ್ನು ಮಾಡಿದ್ದಾರೆ. ಯಾವುದನ್ನು criticize ಮಾಡಬೇಕೋ ಮಾಡಿದ್ದಾರೆ. ಆದರೆ ಕೊನೆಯಲ್ಲಿ ಹೇಳಿದ ಪದಗಳ ಬಗ್ಗೆ ಅರ್ಥವಾಗುತ್ತಿಲ್ಲ. ಏಕೆಂದರೆ ನಾನು ಒಬ್ಬ ಹಳ್ಳಿಯಿಂದ ಬಂದವನಾಗಿದ್ದು, ನನಗೆ ಕೂಡಿಕೆ, ಲಿವಿಂಗ್ ಟುಗೆದರ್, ನಿಶ್ಚಿತಾರ್ಥ, ಮ್ಯಾರೇಜ್ ಯಾವುದು ಎಂಬುದು ನನಗೆ ಗೊತ್ತಿಲ್ಲ. ಲಿವಿಂಗ್ ಟುಗೆದರ್ ಎಂಬುದು ಹೊಸ ಪದ. ಇದರ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ಲಿವಿಂಗ್ ಟುಗೆದರ್ ಎಂದರೆ ಏನು ಎಂಬುದನ್ನು ತಿಳಿಸಬೇಕು. 2006–08ನೇ ಸಾಲಿನವರೆಗೂ ಇದ್ದಂತಹದ್ದು ಯಾವುದು? ಕೇಂದ್ರ ಸರ್ಕಾರದಲ್ಲಿ ಶ್ರೀ ಆಟಲ್ ಬಿಹಾರ್ ವಾಜಪೇಯಿರವರು 24 ಮತ್ತು 26 ಪಕ್ಷಗಳನ್ನು ಸೇರಿಸಿ ಒಂದು coalition ಮಾಡಿದ್ದರು. ಇವತ್ತಿನ ದಿವಸವೂ ಸಹ coalition ಇದೆ. ಲಿವಿಂಗ್ ಟುಗೆದರ್ ಎಂದರೆ ಯಾವುದು, ಮಾನ್ಯ ಸದಸ್ಯರಿಗೆ ಅವರ ಅನುಭವ, ಅಧ್ಯಯನದಿಂದ ಗೊತ್ತಾಗಿರಬಹುದು. ದಯಮಾಡಿ ಇದರ ಬಗ್ಗೆ ವಿವರಣೆಯನ್ನು ನೀಡಿದರೆ ನಮಗೂ ಮತ್ತು ರಾಜ್ಯದ ಜನತೆಗೂ ಸಹ ಬೆಳಕನ್ನು ಚೆಲ್ಲಿದ ಹಾಗಾಗುತ್ತದೆ. ದಯಮಾಡಿ ಇದರ ಬಗ್ಗೆ ಮಾನ್ಯ ಸದಸ್ಯರು ಬೆಳಕನ್ನು ಚೆಲ್ಲಬೇಕು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ನಾನು ಒಳ್ಳೆಯದಾಗಲಿ ಎಂದು ಈ ಮಾತನ್ನು ಹೇಳಿದೆ. ಇದು reverse ಆಗುತ್ತದೆಂದು ನನಗೆ ಗೊತ್ತಿರಲಿಲ್ಲ. ಮಾನ್ಯ ಸದಸ್ಯರಿಗೆ ಇದು ಆಗಬೇಕೆಂದು ಎಲ್ಲೋ ಆಸೆ ಇದ್ದ ಹಾಗೆ ಕಾಣುತ್ತದೆ. ಅದಕ್ಕೆ ಇದರ ಬಗ್ಗೆ ವಿವರಣೆಯನ್ನು ಕೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, reverse ಆಗುತ್ತದೋ ಅಥವಾ ಏನಾಗುತ್ತದೋ, ಮಾನ್ಯ ಸದಸ್ಯರು ವಿವರಣೆಯನ್ನು ನೀಡಿದರೆ ಯಾವುದು ಸರಿ, ಯಾವುದು ತಪ್ಪು ಎಂಬುದು ನಾವು ತೀರ್ಮಾನ ಮಾಡಬಹುದು. ಏಕೆಂದರೆ ಇದರ ಬಗ್ಗೆ ನಮಗೇನು ಗೊತ್ತಿಲ್ಲ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸ್ವಲ್ಪ ಹೊತ್ತಿನ ಮುಂಚೆ ತಾವು ಈ ಸದನದಲ್ಲಿ ಉಪಸ್ಥಿತರಿದ್ದಿರಿ. ಹೆಣ್ಣು ಮಕ್ಕಳ ಬಗ್ಗೆ ಗೌರವದಿಂದ ಮಾತನಾಡಬೇಕೆಂಬುದನ್ನು ಸದನವು ಒಪ್ಪಿಕೊಂಡಿತು. ಮಾನ್ಯ ಉಗ್ರಪ್ಪನವರು ಇದರ ಬಗ್ಗೆ ವಿವರಣೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಯಾವುದೇ ರೀತಿಯ ತಕರಾರಿಲ್ಲ. ಮಾನ್ಯ ಸದಸ್ಯರು ಎರಡ್ಮೂರು ಪದ ಪ್ರಯೋಗವನ್ನು ಮಾಡಿದರು. ಕೊನೆಯಲ್ಲಿ ಮಾತನಾಡುತ್ತಾ ತಮ್ಮ 'ಅನುಭವ' ಎಂದು ಹೇಳಿದ್ದಾರೆ. ಇದರ ಅರ್ಥವೇನು? ಇದರ ಬಗ್ಗೆ ದಾಖಲೆಯನ್ನು ನೋಡಬೇಕು. ಮಾನ್ಯ ಸದಸ್ಯರು ತಮ್ಮ ಅನುಭವ ಏನು ಎಂದು ಹೇಳಿ ಎಂದು ಹೇಳಿದರು.

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಈ ರೀತಿ ಪದಗಳನ್ನು ಬಳಸಬಾರದು ಅದು ಸರಿಯಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಳಸಿರುವ ಪದ ಸರಿಯಿಲ್ಲ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಸದನದಲ್ಲಿ ಅಸಂಸದೀಯ ಪದ ಬಳಸುವುದು ಸರಿಯಲ್ಲ. ಅದನ್ನು ನಾನು ಒಪ್ಪುತ್ತೇನೆ. ಆ ರೀತಿಯ ಪದ ದಾಖಲೆಯಲ್ಲಿ ಇದ್ದರೆ ದಯವಿಟ್ಟು ತೆಗೆದುಹಾಕಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅದು ಉದ್ದೇಶಪೂರ್ವಕವಾಗಿ ಕೇಳಿಲ್ಲ. ಆದರೆ ಅದರ ಬಗ್ಗೆ ವಿವರಣೆಯನ್ನು ಕೇಳುತ್ತಾ, ಅದೇನು ಎಂದು ವಿವರಿಸಿ, ಅದು ತಮ್ಮ ಅನುಭವವೇ ಎಂದು ಹೇಳಿದ್ದು . . .

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, unparliamentary ಎಂದು ಹೇಳಬೇಕಾದರೆ, ಪದವು ಆ ಅರ್ಥದಲ್ಲಿ ಬಂದಿದೆಯೇ ಎಂದು ಹೇಳುವುದಕ್ಕೆ ಮಾನ್ಯ ಸದಸ್ಯರು ಮಾತನಾಡುವಾಗ ರೂಢಿ ಮಾತನ್ನು ಮಾತನಾಡಿದ್ದಾರೆಯೇ ಹೊರತು ಕೆಟ್ಟ ಪದವನ್ನು ಅವರು ಉಪಯೋಗಿಸಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದನ್ನು ಚರ್ಚೆ ಮಾಡಬೇಕೆಂದರೆ ಮಾಡೋಣ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದು unparliamentary ಅಲ್ಲ. ಹಾಗಾದರೆ ಯಾವ ಪದವನ್ನು ತೆಗೆಸುವುದು, ಯಾವುದು unparliamentary? ಆದರೆ ಅದು unparliamentary ಪದವಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸದಸ್ಯರೇ ಅವರು ಮಾತನಾಡಿದಾಗ ತಾವು ಸದನದಲ್ಲಿರಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸದಸ್ಯರೇ ನಾನು ಸದನದಲ್ಲಿಯೇ ಇದ್ದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ರೇವಣ್ಣನವರೇ ಈಗ ಅಲ್ಲ. ಮಧ್ಯಾಹ್ನದ ಸಮಯದಲ್ಲಿ ಇದರ ಬಗ್ಗೆ ಚರ್ಚೆಯಾಯಿತು. ಆಗ ಯಾವುದೋ ಒಂದು ಪದ unparliamentary ಪದ ಆಗಿರಲಿಲ್ಲ. ಆದರೆ ಆ ರೀತಿಯ impression ಬರುವಂತಹದ್ದನ್ನು ಮಾತನಾಡಬಾರದು. ಮಾನ್ಯ ಸದಸ್ಯರು ಉದ್ದೇಶಪೂರ್ವಕವಾಗಿ ಹೇಳಿದ್ದಾರೆ ಎಂದು ನಾನು ಹೇಳುತ್ತಿಲ್ಲ. ನಾನೇನು ಅವರ ಮೇಲೆ ದಾಳಿಯನ್ನು ಮಾಡುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಯಾವತ್ತೂ ಸಹ ಸೆಕ್ಷನ್ ಅನ್ನು ಬಿಟ್ಟು ಮಾತನಾಡುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಯಾವಾಗಲು ಮಹಿಳೆಯರ ಬಗ್ಗೆ ಗೌರವವನ್ನಿಟ್ಟುಕೊಂಡು ಮಾತನಾಡುತ್ತಾರೆ. ಮಾನ್ಯ ಸದಸ್ಯರು ನಾನು ಹಳ್ಳಿಯಿಂದ ಬಂದವನಾಗಿದ್ದು, ಇದರ ಬಗ್ಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಬೆಳಕನ್ನು ಚೆಲ್ಲಿ ಎಂದು ಹೇಳಿದರು.

**ಶ್ರೀ ಹೆಚ್.ಎಂ.ರೇವಣ್ಣ:–** ಶ್ರೀ ಆಯನೂರು ಮಂಜುನಾಥ್‌ರವರೇ, ತಾವು ಶಿವಮೊಗ್ಗ ಜಿಲ್ಲೆಯಿಂದ ಬಂದವರು, ಅವರಿಗೆ ಲಿವಿಂಗ್ ಟುಗೆದರ್ ಎಂಬುದರ ಬಗ್ಗೆ ಗೊತ್ತಿರಲಿಲ್ಲ. ನಮಗೆ ಕೂಡಿಕೆ ಎಂಬುದು ಅಷ್ಟೇ ಗೊತ್ತಿರುವುದು. ಆ ಪದ ಆಗಲೇ ಬರಲಿಲ್ಲ. ಅದೇನಾದರೂ ಇದೆಯೇ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಯಾರ್‍ಯಾರಿಗೆ ಕುತೂಹಲ ಇದೆಯೋ ಮತ್ತು ಆಯಸ್ಸು ಕಡಿಮೆ ಇರುವವರು ಹಿರಿಯರಾಗುತ್ತಿದ್ದೀರಿ. ಅದೆಲ್ಲವುದರ ಬಗ್ಗೆ ತಾವು ಹುಡುಕಿಕೊಂಡು ಹೋಗಿ, ಅದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕುತೂಹಲವನ್ನು ಹುಟ್ಟಿಸಿದವರು ಯಾರು?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಆ ಪದ ಆಕಸ್ಮಿಕವಾಗಿ ಬಂದಿರಬಹುದು. ಅದನ್ನು ಕಡತದಿಂದ ತೆಗೆಸಬೇಕು. ಮಾನ್ಯ ಸದಸ್ಯರು ಉದ್ದೇಶಪೂರ್ವಕವಾಗಿ ಹೇಳಿದ್ದಾರೆ ಎಂಬ ಅಭಿಪ್ರಾಯದಲ್ಲಿ ನಾನಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಒಂದು ನಿಮಿಷ . . .

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಆಯನೂರು ಮಂಜುನಾಥ್‌ರವರೇ ತಾವು ಅನುಭವಿಸಿದ್ದೀರಿ ಎಂದು ಹೇಳಿರುವುದಲ್ಲ. ತಮ್ಮ ಅನುಭವದಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಹೇಳಿರುವುದು.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಎರಡೇ ಶಬ್ದ . . .

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ verify ಮಾಡಿ, ಇದನ್ನು ತೆಗೆದು ಹಾಕಿ ಎಂಬುದಷ್ಟೆ ನಾನು ಹೇಳುತ್ತಿರುವುದು. ಆ ಪದ ಸರಿಯಲ್ಲ. ಅದನ್ನು ಕೂಡ defend ಮಾಡಿಕೊಳ್ಳುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಈಗ ಒಂದೊಂದು ರೀತಿಯಲ್ಲಿ ವಿಶ್ವಾಮಿತ್ರ–ಮೇನಕೆ, ದುಷ್ಯಂತ–ಶಾಕುಂತಲೆ ಈ ರೀತಿ ದೇಶದ ಪರಂಪರೆಯಲ್ಲಿ ಅನೇಕ ವಿಧವಾದಂತಹ ಸಂಬಂಧಗಳು ಬೆಳೆದಿವೆ. ಮಾನ್ಯ ತಾರಾಅನೂರಾಧರವರು ಒಂದರ ಬಗ್ಗೆ ಹೇಳಿರುವುದಿಲ್ಲ. ನಿಶ್ಚಿತಾರ್ಥವೋ, ಲಿವಿಂಗ್ ಟುಗೆದರೋ, ಮ್ಯಾರೇಜೋ ಎಂದು ಹೇಳಿದರು. ಇದರಲ್ಲಿ ಕೆಲವಾದರೂ ಸಹ ಮ್ಯಾರೇಜ್ ಅಂದರೆ ನನಗೆ ಅನುಭವವಿದೆ. ನಾನು ಅನುಭವದಿಂದ ಪ್ರೀತಿಸಿ ಮದುವೆಯಾಗಿದ್ದೇನೆ ಎನ್ನುವುದನ್ನು ನಾನು ಎದೆತಟ್ಟಿ ಹೇಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸದಸ್ಯರೇ, ತಮ್ಮದು ಅರೇಂಜ್ಡ್ ಮ್ಯಾರೇಜೋ ಅಥವಾ ಲವ್ ಮ್ಯಾರೇಜೋ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸದಸ್ಯರೇ, ನಾನು ಆಗಲೇ ಪ್ರೀತಿಸಿ ಮದುವೆಯಾಗಿದ್ದೇನೆಂದು ಹೇಳಿದ್ದೇನೆಯಲ್ಲವೇ. ಮೊನ್ನೆಯ ದಿವಸ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವಂತಹ ದೌರ್ಜನ್ಯಗಳ ಬಗ್ಗೆ ಆರು ಸಾವಿರ ಪುಟಗಳ ಸುಮಾರು 11 ವಾಲ್ಯೂಂಗಳ ಒಂದು ವರದಿಯನ್ನು ಕೊಟ್ಟಿದ್ದೇನೆ. ನಾನು ಮಾತನಾಡಬೇಕಾದರೆ ನಾಲ್ಕು ಸಾರಿ ಯೋಚನೆ ಮಾಡಿ ಮಾತನಾಡುತ್ತೇನೆ. ಕೆಲವು ವಿಚಾರಗಳ ಬಗ್ಗೆ ಅಂದರೆ ಮ್ಯಾರೇಜ್ ಬಗ್ಗೆ ಬಂದರೆ ಮಾನ್ಯ ತಾರಾಅನೂರಾಧರವರು ಮದುವೆಯಾಗಿರುವ ಹೆಣ್ಣು ಮಗಳಾಗಿ ಆಕೆಗೆ ಅನುಭವವಿರಲೇಬೇಕು. ಇನ್ನು ಕೆಲವು ವಿಚಾರಗಳು ಅಧ್ಯಯನ ಮೂಲಕ ತಿಳಿದುಕೊಂಡಿದ್ದೇನೆ. ನಾನು ಅಧ್ಯಯನ ಎನ್ನುವ ಒಂದು ಪದವನ್ನು ಬಳಸಿದ್ದೇನೆ. ಹಾಗಾಗಿ ಕೆಲವು ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಇದರ ಬಗ್ಗೆ ಅನುಭವ ಇಲ್ಲ. ಆ ಪದ ಬಳಕೆ ಮಾಡಿರುವ ಬಗ್ಗೆ what is wrong? ಯಾವುದೂ ತಮ್ಮ ಅನುಭವದಿಂದ ತಮಗೆ ಗೊತ್ತಿದೆಯೋ, ಆ ಅನುಭವದ ಮೇಲೆ ಈ ಪದವನ್ನು ಬಳಸಿದ್ದೇನೆ. ಯಾವುದು ಅಧ್ಯಯನದ ಮೂಲಕ ಮತ್ತು ಯಾವುದು ಕೇಳಿ ತಿಳಿದುಕೊಂಡಿದ್ದೇನೆ, ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅನುಭವ ಎಂಬ ಪದ ಬಳಸಿರುವ ಬಗ್ಗೆ ನನ್ನ objection ಇಲ್ಲ.

**ವೈಸ್‌ಛೇರ್ಮನ್:–** ಮಾನ್ಯ ಸದಸ್ಯರೇ, ಈ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡಿ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನ್ನು ಬೆಳೆಸುವುದು ಬೇಡ. ಅನಾರೋಗ್ಯಕರ ವಾತಾವರಣವನ್ನು ನಿರ್ಮಾಣ ಮಾಡುವುದು ಬೇಡ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮುಂದುವರೆಸಬಾರದು ಎಂದು ಹೇಗೆ ಹೇಳುತ್ತೀರಿ. ತಮಗೆ ನಾವು ಮಾತ್ರ ಕಾಣುತ್ತೇವೆಯೇ, ತಮ್ಮ ಬೆನ್ನಿನ ಹಿಂದೆ ಇದ್ದಾರಲ್ಲವೇ, ಅವರಿಗೂ ಸಹ ತಾವು ಹೇಳಬಹುದಲ್ಲವೇ. ಇದರ ಬಗ್ಗೆ ಚರ್ಚೆ ಬೇಡ. ಇದರ ಬಗ್ಗೆ ಹೇಳುತ್ತಾ ಹೋದರೆ ಹಿಂದಿನ ರಾಮಾಯಣ, ಮಹಾಭಾರತ ಅಲ್ಲದೇ ಈಗಿರುವ ರಾಜಕೀಯದೊಳಗೂ ಯಾರ್ಯಾರು ಯಾರ್ಯಾರ ಜೊತೆಯಲ್ಲಿ ಮದುವೆಯಾಗಿದ್ದಾರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂಬುದು ಇವೆಲ್ಲಾ ಬೇಡವಾದ ವಿಷಯವಲ್ಲವೇ, ಈಗಿರುವ ರಾಜಕಾರಣಿಗಳಲ್ಲೂ ಸಹ ಬಹಳ ಜನ ಯಾರ್ಯಾರನ್ನು ಮದುವೆಯಾದರು, ಯಾರ್‍ಯಾರು ವಿಚ್ಛೇದನ ಕೊಟ್ಟರು. ಇವೆಲ್ಲಾ ವಿಷಯಗಳು ಬೇಕಾಗಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಇಲ್ಲಿಗೆ ಈ ವಿಷಯವನ್ನು ಮುಗಿಸಿಬಿಡಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಪುರಾಣಗಳಿಗೆ ಹೋಗುತ್ತಾ ಹೋಗುತ್ತಾ ಆಧುನಿಕ ಪುರಾಣಗಳು ಹೊರಗೆ ಬರುತ್ತದೆ.

(ಗೊಂದಲ)

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸದಸ್ಯರೇ ತಾವೇಕೆ ಎಲ್ಲೆಲ್ಲಿಗೋ ಹೋಗುತ್ತೀರಿ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ಕೊಟ್ಟರೆ ಒಂದು ಮಾತನ್ನು ಹೇಳುತ್ತೇನೆ. ಹಿರಿಯ ಸದಸ್ಯರು ಹಾಗೂ ಮಾಜಿ ಸಚಿವರಾದಂತಹ ರೇವಣ್ಣನವರು ಒಂದು ಗಂಭೀರವಾದಂತಹ ಪದವನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರು **"ಕೂಡಿಕೆ"** ಎಂಬ ವಿಚಾರ ಹೇಳೀದ್ದಾರೆ. ಲೋಕಸಭೆಯಲ್ಲಿ Prevention of Domestic Violence Act ಬರುವ ಸಂದರ್ಭದಲ್ಲಿ 'ಪತಿ, ಪತ್ನಿ ಔರ್ ವೋ' ಈ ಬಗ್ಗೆ ಚರ್ಚೆಗೆ ಬಂದಿತ್ತು.

(ಮುಂದು)

**(197)10/07/2018/ಎಸ್‌ಪಿಆರ್/ಆರ್.ಎನ್./6:30**

**ಡಾ॥ ತೇಜಸ್ವಿನಿ ಗೌಡ (ಮುಂದು):–**

ಅಮಾಯಕ ಹೆಣ್ಣುಮಕ್ಕಳನ್ನು ಮದುವೆಯಾಗದೇ ಇವತ್ತಿನ ದಿವಸ ಸಹಜೀವನ ನಡೆಸುವಂತಹ ಸಂದರ್ಭದಲ್ಲಿ ಆ ಹೆಣ್ಣುಮಗಳ ಹಕ್ಕನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ living together ಸಂಬಂಧವನ್ನೂ ಸಹ ನ್ಯಾಯಾಲಯವೂ ಕೂಡ ಪರಿಗಣಿಸಿ ಹೆಣ್ಣುಮಕ್ಕಳ ಮೇಲಿನ ಶೋಷಣೆಯನ್ನು ತಡೆಯುವ ನಿಟ್ಟಿನಲ್ಲಿ ಕಾನೂನು ರಚನೆಯಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣನವರು ಪ್ರಸ್ತಾಪಿಸಿರುವ ಅಂಶದಂತೆ ಈ ಸಮಸ್ಯೆ ಇದೆ. ನಾವೆಲ್ಲರೂ ಈ ಸಮಸ್ಯೆಯನ್ನು ಮುಕ್ತವಾಗಿ ಒಪ್ಪಿಕೊಳ್ಳೋಣ. ಇದರಿಂದಾಗಿ ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನೂರಾಧರವರು ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಯಾವುದೇ ರೀತಿಯಾದ ತಪ್ಪನ್ನು ಹೇಳಿಲ್ಲ. ವಿವಾಹ ಮತ್ತು living together ಈ ಸಮಸ್ಯೆಗಳು ಸಮಾಜದ ಒಂದು ಭಾಗವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕಾಯ್ದೆಗಳು ಬಂದಿರುವುದರಿಂದಾಗಿ ಇದು ಅಸಂಸದೀಯ ಚರ್ಚೆಯಲ್ಲ ಎಂದು ಹೇಳುತ್ತೇನೆ.

" ...ಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯೆ ಡಾ॥ತೇಜಸ್ವಿನಿ ಗೌಡ ರವರು Domestic Violence Act 2005 ರಲ್ಲಿನ ಅಂಶಗಳನ್ನು ಹೇಳಿದ್ದಾರೆ. ಆದರೆ, ಆಗಿನ ಸಂದರ್ಭ ಹೇಗಿತ್ತು ಎಂದರೆ, ಅಂದಿನ ದಿನದಲ್ಲಿ ಕೇಂದ್ರದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು 26 ತಿಂಗಳು ಸರ್ಕಾರವನ್ನು ನಡೆಸಿದ್ದರು. ಅದೇ ರೀತಿಯಾಗಿ ರಾಜ್ಯದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಕೆಲವೇ ತಿಂಗಳುಗಳ ಕಾಲ ಸರ್ಕಾರವನ್ನು ನಡೆಸಿದ್ದು, ಸಂದರ್ಭಗಳಿಗೆ ಹೋಲಿಕೆ ಮಾಡಿ ಮಾನ್ಯ ಸದಸ್ಯರಾದ ಉಗ್ರಪ್ಪನವರು ಉದಾಹರಣೆಗಳನ್ನು ನೀಡಿದ್ದಾರೆ ವಿನಾ not with an intention to touch her conscious ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪದ ಪ್ರಯೋಗ ಮಾಡಿರುವ ಬಗ್ಗೆ ಮಾತ್ರವೇ ಹೇಳಿದ್ದೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು 2018–2019 ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಈವರೆಗೆ ಹತ್ತು ಬಾರಿ ಎದ್ದು ಕುಳಿತಿದ್ದೇನೆ. ಆದರೆ ಈಗ ನನಗೆ ಅವಕಾಶವನ್ನು ನೀಡಲಾಗಿದೆ. ಈಗ ಸಮಯ 6:30 ಆಗಿದೆ. ನಿನ್ನೆಯ ದಿವಸ ಈ ಹೊತ್ತಿಗೆ ಯಾವ ಸದಸ್ಯರು ಮಾತನಾಡಲಿಲ್ಲ. ನಾನು ಮಾತನಾಡಲು ಇಚ್ಛಿಸಿದ್ದರೂ ಸಹ ನನಗೆ ಅವಕಾಶವನ್ನು ನೀಡಿರಲಿಲ್ಲ. ಆದರೆ last batsman ರೀತಿಯಲ್ಲಿ ಈಗ ನನಗೆ ಅವಕಾಶವನ್ನು ನೀಡಲಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಿರಲಿಕ್ಕಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ, ರಾತ್ರಿ 12 ಗಂಟೆಗೆ ಭಾಷಣವನ್ನು ಮಾಡಿದ್ದೇನೆ. ದಿವಂಗತ ದೇವರಾಜ ಅರಸುರವರ ಅಧಿಕಾರಾವಧಿಯಲ್ಲಿ ಈ ಸದನವನ್ನು ವರ್ಷಕ್ಕೆ 102 ದಿನಗಳವರೆಗೆ ನಡೆಸಲಾಗಿದೆ ಹಾಗೂ ಅದು ಇತಿಹಾಸದಲ್ಲಿದೆ. 2006 ನೇ ಸಾಲಿನಲ್ಲಿ ನಾವು ಕಾಯ್ದೆಯೊಂದನ್ನು ಮಾಡಿಕೊಂಡಿದ್ದೇವೆ. ಅದರನ್ವಯ ವರ್ಷದ ಜನವರಿ, ಮಾರ್ಚ್, ಜೂನ್–ಜುಲೈ ಹಾಗೂ ನವೆಂಬರ್ ತಿಂಗಳುಗಳಲ್ಲಿ ಒಟ್ಟು ನಾಲ್ಕು ಬಾರಿ ಅಧಿವೇಶನವನ್ನು ಕನಿಷ್ಠ 60 ದಿನಗಳ ಕಾಲ ನಡೆಸಬೇಕು ಎಂದು ಇದೆ. ಆದರೆ 2006 ನೇ ಸಾಲಿನಿಂದ ಇಲ್ಲಿಯವರೆಗೆ ಯಾವ ವರ್ಷದಲ್ಲಿಯೂ ಸಹ 60 ದಿನಗಳ ಕಾಲ ಅಧಿವೇಶನವನ್ನು ನಡೆಸಿಲ್ಲ. ಇದರ ಜೊತೆಗೆ ಸದನವನ್ನು ಪ್ರಾರಂಭ ಮಾಡಲು ಸಮನ್ಸ್‌ನ್ನು 11 ಗಂಟೆಗೆ ಕಳುಹಿಸಿ, 11.30 ಗಂಟೆಗೆ ಸದನವನ್ನು ಪ್ರಾರಂಭ ಮಾಡಲಾಗುವುದು. ಒಮ್ಮೊಮ್ಮೆ 5:30 ಅಥವಾ 6 ಗಂಟೆಗೆ ಮುಗಿಸಿರುವ ಸಂದರ್ಭಗಳಿವೆ. ಆದರೆ ಯಾವುದೇ ವಿಷಯದ ಮೇಲೆ ಬೆಳಕನ್ನು ಚೆಲ್ಲಬೇಕೆಂದರೆ, ನನಗನ್ನಿಸಿದ ಹಾಗೆ ಸದನವನ್ನು ರಾತ್ರಿ 10–12 ಗಂಟೆಗಳವರೆಗೆ ಅವತ್ತಿನ ಅಜೆಂಡಾ ಪೂರ್ಣಗೊಳ್ಳುವವರೆಗೆ ಸದನ ನಡೆದರೆ ಮಾತ್ರವೇ ರಾಜ್ಯದ ಸಮಸ್ಯೆಗಳ ಮೇಲೆ ಒಂದಿಷ್ಟಾದರೂ ಬೆಳಕನ್ನು ಚೆಲ್ಲಲಿಕ್ಕೆ

ಸಾಧ್ಯವಿದೆ. ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಆಗಿದ್ದು, ಹಿರಿಯರಿದ್ದಾರೆ. ಅವರು ವಿಷಯದ ಮೇಲೆ ಬೆಳಕನ್ನು ಚೆಲ್ಲಲಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ರೈತರ ಸಾಲ ಮನ್ನಾ ಮಾಡುವ ಘೋಷಣೆಗಳನ್ನು ಮಾಡಿರುವುದೇ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಉತ್ತಮ ಪಡಿಸುವುದಕ್ಕೆ ನಿದರ್ಶನವಾಗಿದೆ. ಸರ್ಕಾರಕ್ಕಾಗಲೀ, ರಾಜಕೀಯ ಪಕ್ಷಕ್ಕಾಗಲೀ ಅಥವಾ ನಾಯಕರಿಗಾಗಲೀ ಈ ಕೆಲಸವನ್ನು ನಾನು ಮಾಡುತ್ತೇನೆ ಎಂಬ ವಿಶ್ವಾಸ ತಮ್ಮ ಮೇಲಿರಬೇಕು. ಈ ರೀತಿಯ ವಿಶ್ವಾಸ ಎಲ್ಲಾ ರಾಜಕೀಯ ಪಕ್ಷಗಳಿಗೆ ಇತ್ತು. ಏಕೆಂದರೆ, ಐದು ವರ್ಷಗಳ ಕಾಲ ಅಧಿಕಾರವನ್ನು ಹೊಂದಿದ ಸರ್ಕಾರ ಒಂದು ಉತ್ತಮವಾದ, ಶಿಸ್ತಿನ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಬಂದಲ್ಲಿ ಉತ್ತಮವಾದ ಆಯವ್ಯಯವನ್ನು ಮಾಡಲಿಕ್ಕೆ ಎಲ್ಲಾ ಸರ್ಕಾರಗಳಿಗೆ ಧೈರ್ಯವಿರುತ್ತದೆ. ಅಧಿಕಾರಕ್ಕೆ ಬಂದ ಎಲ್ಲಾ ರಾಜಕೀಯ ಪಕ್ಷಗಳು ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂಬುದಾಗಿ ಹೇಳುತ್ತಾರೆ. ಯಾವ ಸರ್ಕಾರವೂ ಹಣವನ್ನು ತಮ್ಮ ಮನೆಗಳಿಂದ ತಂದು ಕೊಡುವುದಿಲ್ಲ. ಹಣಕಾಸಿನ ಕ್ರೋಡೀಕರಣದಿಂದಲೇ ಎಲ್ಲವನ್ನೂ ಮಾಡುವುದಕ್ಕಾಗುತ್ತದೆ. ಅಂದರೆ ಸಾರ್ವಜನಿಕರ ಹಣದಿಂದಲೇ ಎಲ್ಲವನ್ನೂ ಮಾಡುವುದು. ಒಂದು ವ್ಯವಸ್ಥೆ, ಪಾಲಿಸಿ ಅಥವಾ ಅನುಮೋದನೆಯನ್ನು ನೀಡುವುದಕ್ಕಾಗಿಯೇ ನಾವು ಸದಸ್ಯರುಗಳು ಇಲ್ಲಿ ಕುಳಿತಿರುವುದು. ಅಧಿಕಾರಿಗಳು ಕಾನೂನು ಚೌಕಟ್ಟು ಹಾಗೂ ವ್ಯವಸ್ಥೆಗಳಡಿ ಕೆಲಸವನ್ನು ಮಾಡುತ್ತಾರೆ. ನಾವು ಶಾಸಕರುಗಳು ಯಾವ ಪಾಲಿಸಿಗಳನ್ನು ಮಾಡುತ್ತೇವೆಯೋ ಅಥವಾ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆಯೋ, ಅದರ ಆಧಾರದ ಮೇಲೆ ಸರ್ಕಾರಗಳು ಉತ್ತಮ ರೀತಿಯಲ್ಲಿ ನಡೆದುಕೊಂಡು ಹೋಗುತ್ತವೆ ಎಂಬುದಾಗಿ ನಾನು ಭಾವಿಸಿದ್ದೇನೆ. 2012-2013 ನೇ ಸಾಲಿನಲ್ಲಿ ಅಂದಿನ ರಾಜ್ಯದ ಆರ್ಥಿಕ ಪ್ರಗತಿ ಯಾವ ರೀತಿಯಾಗಿತ್ತು? Gross State Domestic Product ಪ್ರಕಾರ 2012-2013 ನೇ ಸಾಲಿನಲ್ಲಿ ರಾಜ್ಯದ ಆರ್ಥಿಕ ಪ್ರಗತಿಯು ಶೇಕಡಾ 6.4 ರಷ್ಟಿತ್ತು. ಇಷ್ಟು ಪ್ರಮಾಣದಲ್ಲಿದ್ದ ಆರ್ಥಿಕ ಪ್ರಗತಿಯ ಸಂದರ್ಭದಲ್ಲಿ ಅಂದಿನ ಸರ್ಕಾರವು ರೈತರ ಸಾಲವನ್ನು ಮನ್ನಾ ಮಾಡಿತ್ತು. ಆ ಕಾರಣದಿಂದಾಗಿ ಅಂದು ಸಾಲ ಮನ್ನಾ ಮಾಡುವುದಕ್ಕಾಗುತ್ತಿರಲಿಲ್ಲ. ಹಣಕಾಸಿನ ಶಿಸ್ತು ಇರಲಿಲ್ಲ. ಯಾವುದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿ ಅಂದಿನ ಸರ್ಕಾರಕ್ಕೆ ಇರಲಿಲ್ಲ. 2016-2017 ರಲ್ಲಿ ರಾಜ್ಯದ ಆರ್ಥಿಕ ಪ್ರಗತಿಯು ಶೇಕಡಾ 7.5 ರಷ್ಟಿತ್ತು. ಪ್ರಸಕ್ತ ಸಾಲಿನ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ಆರ್ಥಿಕ ಪ್ರಗತಿಯು ಶೇಕಡಾ 8.5 ರಷ್ಟಿದೆ. ಇದರಲ್ಲಿ ಕೃಷಿ ವಲಯವು ಶೇಕಡಾ 4.9 ರಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ. ಅದೇ ರೀತಿಯಾಗಿ ಕಳೆದ ಸಾಲಿನ ಶೇಕಡಾ 3.7 ಕ್ಕೆ ಹೋಲಿಸಿದ್ದಲ್ಲಿ, ಈ ಸಾಲಿನಲ್ಲಿ ಕೈಗಾರಿಕಾ ವಲಯವು ಶೇಕಡಾ 4.9 ರ ಬೆಳವಣಿಗೆಯನ್ನು ಕಂಡಿದೆ. ಅದೇ ರೀತಿಯಾಗಿ ಕಳೆದ ಸಾಲಿನ ಶೇಕಡಾ 8.9 ರ ಎದುರಾಗಿ ಸೇವಾ ವಲಯವು ಶೇಕಡಾ 10.4 ರಷ್ಟು ಬೆಳವಣಿಗೆ ದರ ದಾಖಲಿಸುವ ನಿರೀಕ್ಷೆ ಇದೆ. ಈ ಹಿಂದಿನ ಸರ್ಕಾರ ಹಾಕಿಕೊಟ್ಟ ತಳಪಾಯದ ಆಧಾರದ ಮೇಲೆ ಈ ರೀತಿಯಾಗಿ ಎಲ್ಲಾ ವಲಯಗಳಲ್ಲಿ ಹೆಚ್ಚಿನ ಬೆಳವಣಿಗೆ

ಆಗಿರುತ್ತದೆ. ಇಂತಹ ತಳಪಾಯದಲ್ಲಿ ಇವತ್ತಿನ ದಿವಸ ಆರ್ಥಿಕ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ನಮ್ಮ ಜನರಿಗೆ ಕೊಡುವ ಭಾಗ್ಯಗಳಿರಬಹುದು ಅಥವಾ ಅವರಿಗೆ ದೊರೆಯುವ ಸವಲತ್ತುಗಳು ಕೊಡವಂತಾಗಬೇಕು. ಹಾಗೆಯೇ ಇದರ ಜೊತೆಗೆ ರಾಜ್ಯದ ಜನರಿಗೆ ಉತ್ತಮವಾದ ಆಡಳಿತವನ್ನು ನೀಡುವ ಬದ್ಧತೆ ನಮ್ಮದಾಗಿರಬೇಕು ಹಾಗೂ ಇಂತಹ ವ್ಯವಸ್ಥೆಗಳನ್ನು ನಾವು ನಿರ್ಮಾಣ ಮಾಡಬೇಕು. ಇದು ಆರ್ಥಿಕ ಪ್ರಗತಿಶೀಲ ಬೆಳವಣಿಗೆಯಾಗಬೇಕು. ತಮಗೆ ಗೊತ್ತಿರುವಂತೆ, ನಮ್ಮ ರಾಜ್ಯವು ಗ್ರಾಮೀಣ ಪ್ರದೇಶಗಳಲ್ಲಿತ್ತು. 1949 ನೇ ಸಾಲಿನಲ್ಲಿ ಬೆಂಗಳೂರು ನಗರ ಪಾಲಿಕೆಯಾಯಿತು. ಇದು ರಾಜ್ಯದಲ್ಲಿಯೇ ಪ್ರಥಮವಾಗಿತ್ತು. ಇದಕ್ಕೆ ಮುಂಚಿತವಾಗಿ ಯಾವುದೇ ಪುರಸಭೆ ಅಥವಾ ಪಾಲಿಕೆಗಳು ಇರಲಿಲ್ಲ. ಇವತ್ತಿನ ದಿವಸ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಎಷ್ಟು ಸಂಖ್ಯೆಯಲ್ಲಿ ಇದೆ ಎಂಬುದರ ಬಗ್ಗೆ ನಾವು ಯೋಚನೆಯನ್ನು ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ನೀಡಬಯಸುತ್ತೇನೆ. 1981 ನೇ ಸಾಲಿನ ಜನಗಣತಿಯ ಪ್ರಕಾರ, ಶೇಕಡಾ 72 ರಷ್ಟು ಜನಸಂಖ್ಯೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿನ ಅಂದರೆ ಗ್ರಾಮೀಣ ಜೀವನಕ್ಕೆ ಅಂಟಿಕೊಂಡು ವಾಸ ಮಾಡುತ್ತಿದ್ದರು. ಹಾಗೆಯೇ ಶೇಕಡಾ 28 ರಷ್ಟು ಜನಸಂಖ್ಯೆ ನಗರ ಪ್ರದೇಶಗಳಲ್ಲಿ ವಾಸಿಸುತ್ತಿತ್ತು. ಹತ್ತು ವರ್ಷಗಳಲ್ಲಿ ಅಂದರೆ 1991 ನೇ ಸಾಲಿನ ಜನಗಣತಿಯ ಪ್ರಕಾರ ನಗರ ಪ್ರದೇಶಗಳಲ್ಲಿ ವಾಸಿಸುವ ಜನಸಂಖ್ಯೆಯು ಶೇಕಡಾ 2 ರಷ್ಟು ಜಾಸ್ತಿಯಾಯಿತು ಅಂದರೆ ಶೇಕಡಾ 30 ರಷ್ಟಾಯಿತು ಹಾಗೂ ಗ್ರಾಮೀಣ ಪ್ರದೇಶಗಳ ಜನಸಂಖ್ಯೆ ಶೇಕಡಾ 70 ರಷ್ಟಾಯಿತು. ಒಂದು ದಶಕದ ನಂತರ ಅಂದರೆ 2001 ನೇ ಸಾಲಿನ ಜನಗಣತಿಯ ಪ್ರಕಾರ ನಗರ ಪ್ರದೇಶಗಳ ಜನಸಂಖ್ಯೆ ಶೇಕಡಾ 4 ರಷ್ಟು ಹೆಚ್ಚಾಯಿತು ಹಾಗೂ ಗ್ರಾಮೀಣ ಪ್ರದೇಶದ ಜನಸಂಖ್ಯೆ ಶೇಕಡಾ 66 ರಷ್ಟಾಯಿತು. 2011 ನೇ ಸಾಲಿನ ಜನಗಣತಿಯ ಪ್ರಕಾರ ನಗರ ಪ್ರದೇಶಗಳಲ್ಲಿನ ಜನಸಂಖ್ಯೆಯು ಶೇಕಡಾ 40 ರಷ್ಟಾಯಿತು.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾ

(198) 10–07–2018 (06–40) ಬಿಎಸ್‌ಡಿ–ವಿಕೆ

**ಶ್ರೀ ಪಿ.ಆರ್. ರಮೇಶ್ (ಮುಂದು)**

ಕರ್ನಾಟಕದಲ್ಲಿ urbanites ಜನಸಂಖ್ಯೆ 40% ಇದ್ದಾರೆ. Rural 60% ಇದ್ದಾರೆ. ಇದು ಏನನ್ನು ತೋರಿಸುತ್ತದೆಂದರೆ, every 10 year (decade) 4 ರಿಂದ 5% shift ಆಗುತ್ತಿದ್ದಾರೆ. ಈ route ನಲ್ಲಿ ಹೋದಾಗ ಮುಂದಿನ 2–3 decades ನಲ್ಲಿ 50:50 ಆಗುತ್ತದೆ. ಇಲ್ಲಿ ನಾವು ಗ್ರಾಮಾಂತರ ಪ್ರದೇಶದ ಬಗ್ಗೆ ಹಾಗು ಅಲ್ಲಿನ ಜನಜೀವನದ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈ paradigm ಏಕೆ shift ಆಗುತ್ತಿದೆ ಎಂದರೆ ಅಲ್ಲಿನ

life, it is not better. ಆದ್ದರಿಂದ ಎಲ್ಲರೂ ಅಂದರೆ ವಿದ್ಯಾವಂತರಾಗಿರಬಹುದು ಅಥವಾ ಬೇರೆ ಬೇರೆ ವಿಚಾರವನ್ನು ಹೊಂದಿರುವವರು shift ಆಗುತ್ತಿದ್ದಾರೆ. Rural ನಿಂದ urban ಏರಿಯಾಗೆ shift ಆಗುತ್ತಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಈ ರೀತಿ rural ನಿಂದ urban ಆಗುತ್ತಿದೆ. ಆದರೆ urab ನಿಂದ rural ಆಗುತ್ತಿಲ್ಲ. ಇದರಿಂದ ಬಜೆಟ್ ಕೊಡಬೇಕಾದರೆ ಅಲ್ಲಿನ ಜೀವನ ಪದ್ಧತಿಗಳನ್ನು ಉತ್ತಮಪಡಿಸುವ ಕಾರ್ಯಕ್ರಮಗಳನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ, for another fifty years ಗಳಲ್ಲಿ rural ಅನ್ನು complete ಆಗಿ ಮರೆಯಬೇಕಾಗುತ್ತದೆ. 2015–16ನೇ ಇಸವಿಯಲ್ಲಿ ನಾನು Slum Development Board ನ Chairman ಆಗಿದ್ದಾಗ ಕರ್ನಾಟಕದ urban areas ಎಷ್ಟಿದೆ ಎಂಬ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಆಗ 213 urban area ಗಳಿತ್ತು. ಆದರೆ ಇವತ್ತು just four years ನಲ್ಲಿ it has become 275. ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳು 275 ಇದ್ದು ಹಳ್ಳಿಗಳೆಲ್ಲವೂ ನಗರಗಳಾಗುತ್ತಿವೆ. ಹೋಬಳಿ ಮತ್ತು Taluk Head Quarters ಗಳು ನಗರ ಆಗುತ್ತಿವೆ. ಬೆಂಗಳೂರಿನಂತಹ ನಗರಗಳು ಬೃಹತ್ ಬೆಂಗಳೂರು ಆಗುತ್ತಿದೆ. ಈ ರೀತಿ ನಗರ ಪ್ರದೇಶಗಳನ್ನು ಹೆಚ್ಚು ಮಾಡಲು ಹೋಗಿ ಗ್ರಾಮಾಂತರ ಪ್ರದೇಶಗಳು ನಗರ ಪ್ರದೇಶಗಳಾಗುತ್ತಿವೆ. ಅಂದರೆ rural ನಲ್ಲಿ better life ಇಲ್ಲದೇ ಎಲ್ಲವೂ shift ಆಗುತ್ತಿದೆ. ಇದರಿಂದ ಇವತ್ತು ಸರ್ಕಾರ ಉತ್ತಮವಾದ ಕೆಲಸವನ್ನು ಮಾಡಿದೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು) :–** ಮಾನ್ಯ ಸಭಾಪತಿಯವರೇ, 1947 ಮತ್ತು 2018ನೇ ಇಸವಿಗಳ ಗ್ರಾಮೀಣ ಭಾರತದ ಪರಿಸ್ಥಿತಿಗೂ ನಗರ ಭಾರತದ ಪರಿಸ್ಥಿತಿಗೂ ಹೇಗೆ ಅಜಗಜಾಂತರ ವ್ಯತ್ಯಾಸವಾಗಿದೆ? ನನಗೆ ಅನಿಸಿದಂತೆ, ನಗರೀಕರಣ ಮತ್ತು ಇದರ ಬಗ್ಗೆ redefine ಮಾಡುವ ಸಂದರ್ಭದಲ್ಲಿ ನಾವಿದ್ದೇವೆ. ಏಕೆಂದರೆ, ನಗರ ಪ್ರದೇಶದ ಬದುಕಿನ ಬಗ್ಗೆ ಮೂಲಭೂತ ಸೌಲಭ್ಯಗಳು ಲಭ್ಯವಾಗುತ್ತಿವೆ, ಉದ್ಯೋಗ ಮತ್ತು ಶಿಕ್ಷಣ ಸಿಗುತ್ತಿರುವುದರಿಂದ ನಗರ ಪ್ರದೇಶಗಳು ಬೆಳೆಯುತ್ತಿವೆ. ಮಾನ್ಯ ಸದಸ್ಯರು ಹೇಳಿದಂತೆ ಹೋಬಳಿ ಮಟ್ಟದಲ್ಲಿ, Gram Panchayat, Town Panchayat level ನಲ್ಲಿ ಎಲ್ಲಾ ಸೌಲಭ್ಯಗಳು ಸಿಗುತ್ತಿರುವ ಸಂದರ್ಭದಲ್ಲಿ .....

**ಶ್ರೀ ಪಿ.ಆರ್. ರಮೇಶ್ :–** ನಾನು ಹೇಳಿದ್ದು, Agriculture ನಿಂದ Non Agriculture ಗೆ ಬದಲಾವಣೆಯಾಗುತ್ತಿದೆ.

**ಶ್ರೀ ವಿ.ಎಸ್. ಉಗ್ರಪ್ಪ :–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಬದಲಾಯಿಸಿದರು. ನಾವು ಪ್ರಾರಂಭದ ದಿನಗಳಲ್ಲಿ ದೆಹಲಿಗೆ ತೆರಳಬೇಕಾದರೆ Indian Airlines ಎಂದು ಒಂದೇ ಒಂದು flight ಇತ್ತು. ಆಗ ನಾವು ಒಂದು ದಿವಸ ಹೋಗಿ ಒಂದು ದಿವಸ ವಾಪಸ್ಸು ಬರಬೇಕಾಗಿತ್ತು. ಆದರೆ ಈಗ ದೆಹಲಿಗೆ ತೆರಳಿ ಕೆಲಸ ಮುಗಿಸಿ ಪುನಃ ಇಲ್ಲಿಗೆ ಬರಬಹುದು. ಅದೇ ರೀತಿ ಪಾವಗಡ, ಗುಲ್ಬರ್ಗ ಅಥವಾ ಬೀದರ್‌ನಿಂದ ಬೆಂಗಳೂರಿಗೆ ಒಂದೇ ದಿನದಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಂದು ಹೋಗಬಹುದು. ಏಕೆಂದರೆ infrastructure ಅಷ್ಟರಮಟ್ಟಿಗೆ ಅಭಿವೃದ್ಧಿಯಾಗಿದೆ. ಈಗಿನ ಜನರು ನಗರ ಜೀವನಕ್ಕಿಂತ ಹಳ್ಳಿಯ ಜೀವನವೇ ಉತ್ತಮವಾಗಿದ್ದು, ಒಳ್ಳೆಯ ಗಾಳಿ, ಬೆಳಕು, ನೀರು ಸಿಗುತ್ತದೆ ಎನ್ನುವ ಸ್ಥಿತಿಯಲ್ಲಿ ಅನೇಕರಿದ್ದಾರೆ. ಒಂದು ಏನೆಂದರೆ, entire State has become a small village, World has become a small village. So, World small village ಆಗಿರಬೇಕಾದರೆ ನಾವಿನ್ನು ಗ್ರಾಮೀಣ ಮತ್ತು ನಗರ ಭಾರತದಲ್ಲಿರುವ ಬಗ್ಗೆ ನನಗೆ ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಈ ರಾಜ್ಯದ ಆರೂವರೆ ಕೋಟಿ ಕನ್ನಡಿಗರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡುವ ಬಗ್ಗೆ ಯೋಚನೆ ನಡೆಯಬೇಕು.

**ಶ್ರೀ ಪಿ.ಆರ್. ರಮೇಶ್ :-** ಮಾನ್ಯ ಸಭಾಪತಿಯವರೇ, ಪೂಜ್ಯ ಮಹಾತ್ಮಗಾಂಧಿಯವರು "The soul of India lies in the villages," ಎಂದು ಹೇಳಿದ್ದಾರೆ. ಭಾರತದ ಆತ್ಮ ಹಳ್ಳಿಗಳಲ್ಲಿ ಇರಬೇಕು. ಮಾನ್ಯ ಉಗ್ರಪ್ಪನವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಕೃಷಿ ಮತ್ತು ತೋಟಗಾರಿಕೆಯಿಂದ ನಾವು ದೂರವಾಗುತ್ತಿದ್ದೇವೇನೋ ಎಂಬ ಭಾವನೆ ಬಂದಿದೆ. ಅನ್ನದಾತರು ಇವತ್ತು ಆ ಮಟ್ಟಿಗೆ ಇಲ್ಲ. ನಗರ ಪ್ರದೇಶಗಳಲ್ಲಿ better job ಕೊಡುವುದು, better services ಕೊಡುವ ಬಗ್ಗೆ ಇರಬಹುದು ಅಥವಾ ಬೇರೆ ಬೇರೆ ಉದ್ದೇಶಗಳಿಂದ ಎಲ್ಲವನ್ನೂ ಬಿಟ್ಟು ಆಚೆ ಬರುತ್ತಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾಮೂಹಿಕವಾಗಿ ಈ ರೀತಿಯ ವಲಸೆಯನ್ನು ನಗರ ಪ್ರದೇಶದತ್ತ ಮಾಡುತ್ತಿದ್ದಾರೆಂದರೆ ಏಂದರೆ ಈಗ ಕೃಷಿ ಲಾಭದಾಯಕ ಉದ್ದಿಮೆಯಾಗಿ ಉಳಿದಿಲ್ಲ, ಕೃಷಿ ಆ ರೈತನನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಕೃಷಿ ನಂಬಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೃಷಿ ನಂಬಿ ಭವಿಷ್ಯವನ್ನೂ ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ.

**ಶ್ರೀ ಪಿ.ಆರ್. ರಮೇಶ್ :-** ಮಾನ್ಯ ಸಭಾಪತಿಯವರೇ, That is the reason. ಆ ಕಾರಣಗಳಿಂದ ಇವತ್ತು ಸರ್ಕಾರ ಉತ್ತಮವಾದ ಯೋಜನೆಗಳನ್ನು ಹಾಕಿಕೊಂಡಿದೆ. ಇವತ್ತು ಸಾಲ ಮನ್ನಾ ಮಾಡುವುದೊಂದೇ ಅಲ್ಲದೇ, ಇತರ ಚಟುವಟಿಕೆಗಳ ಬಗ್ಗೆ ರೈತಾಪಿ ಜನರಿಗೆ ಕೊಡಬೇಕು, ಅದು ಕೃಷಿ ಇರಬಹುದು, ತೋಟಗಾರಿಕೆ ಇರಬಹುದು, ಇವುಗಳಲ್ಲಿಯೂ ಒತ್ತು ಕೊಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದಿನ 5 ವರ್ಷಗಳಲ್ಲಿ ಮಾನ್ಯ ಸಿದ್ದರಾಮಯ್ಯನವರು ನೀಡಿರುವ ಬಜೆಟ್‌ನಲ್ಲಿರುವ ಅಂಶಗಳನ್ನೂ ಒಪ್ಪಿಕೊಳ್ಳುತ್ತಾ, ಹೊಸ ಅಂಶಗಳನ್ನು ಸೇರಿಸಿ ಈ ಬಜೆಟ್‌ನಲ್ಲಿ ತೆಗೆದುಕೊಂಡು ಹೋಗುವುದು ರಾಜ್ಯಕ್ಕೆ ಬೇಕಾದ ವಿಷಯವಾಗಿದೆ. ಇದರಲ್ಲಿ ಸಾಕಷ್ಟು ಕಾರ್ಯಕ್ರಮಗಳಿವೆ ಹಾಗೂ ಪ್ರಗತಿಪರವಾದ ಚಿಂತನೆಗಳಿವೆ. ಇವತ್ತು ಕೊಟ್ಟಿರುವುದನ್ನು Additional Budget ಎಂದುಕೊಳ್ಳಬಹುದು. Additional Budget ನಲ್ಲಿಯೂ urban areas ಇರಬಹುದು, rural areas ಇರಬಹುದು, 1973-74ನೇ ಸಾಲಿನಿಂದ ಸ್ಥಳೀಯ ಸಂಸ್ಥೆಗಳು ಇವೆ, ಈ ಸಂಸ್ಥೆಗಳಿಗೆ ಪ್ರಪ್ರಥಮವಾಗಿ State Finance Commission ನವರು ತೆಗೆದುಕೊಂಡಿರುವ ನಿರ್ಧಾರವು ಸ್ವಾಗತಾರ್ಹವಾಗಿದೆ. ಏಕೆಂದರೆ Excise Duty

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರಬಹುದು, Motor Vehicle Tax ಇರಬಹುದು, Stamp Duty ಇರಬಹುದು ಅಥವಾ SGST (State Goods and Services Tax) ಇರಬಹುದು, Entertainment Tax ಇರಬಹುದು, ಈ ರೀತಿಯ taxes and surcharges ಗಳೇನಿವೆ, ಇದರಲ್ಲಿ ಬರುವ ವರಮಾನದಲ್ಲಿ ನೀಡುತ್ತಿದ್ದ ಶೇಕಡ 42 ರ ಹಣ ಸ್ಥಳೀಯ ಸಂಸ್ಥೆಗಳಿಗೂ ಹಣ ವರ್ಗಾವಣೆಯಾಗುತ್ತಿತ್ತು. State Election Commission ಮಾಡಿದ ನಂತರ ಈ ಸಾರಿ ಶೇಕಡ 48ರಷ್ಟು ಮಾಡಿ ಶೇಕಡ 6ರಷ್ಟು increase ಮಾಡಿದ್ದಾರೆ. ಈ ರೀತಿ increase ಮಾಡಿರುವುದರಿಂದ ಗ್ರಾಮ ಪಂಚಾಯಿತಿಗಳು ಇರಬಹುದು, ತಾಲ್ಲೂಕು ಪಂಚಾಯಿತಿಗಳಿಬಹುದು, ಜಿಲ್ಲಾ ಪಂಚಾಯಿತಿಗಳಿಬಹುದು, ಪಟ್ಟಣ ಪಂಚಾಯಿತಿಗಳಿಬಹುದು, ನಗರ ಸಭೆಗಳು ಅಥವಾ ಮಹಾನಗರ ಪಾಲಿಕೆಗಳಿರಬಹುದು, ಇದಕ್ಕೆ ಸಾಕಷ್ಟು ಒತ್ತನ್ನು ಕೊಡಲು ಸಾಧ್ಯವಾಗುತ್ತದೆ. ಅಂದರೆ ಶೇಕಡ 3ರಷ್ಟನ್ನು ಹೆಚ್ಚಿಗೆ ಮಾಡಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ನೀಡಿದ್ದು, ಇನ್ನೂ ಶೇಕಡ 2ರಷ್ಟನ್ನು urban areas ಗಳಿಗೆ ನೀಡಿದ್ದು, ಶೇಕಡ 1 ರಷ್ಟನ್ನು exclusively for ಬೆಂಗಳೂರು ಅಭಿವೃದ್ಧಿಗೆ ಕೊಟ್ಟಿದ್ದಾರೆ. ಹಾಗಾಗಿ ಸರ್ಕಾರಕ್ಕೆ ಮತ್ತು State Finance Commission ಗೆ ಅಭಾರಿಯಾಗಿದ್ದು, ಅವರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಏಕೆಂದರೆ ಇದು 5 ವರ್ಷಗಳ ಕಾಲ ಇರುತ್ತದೆ ಹಾಗೂ ಇದೊಂದು ಉತ್ತಮವಾದ ಬೆಳವಣಿಗೆಯಾಗಿದೆ.

(ಮುಂದು)

199/10.07.2018/6.50/ಹೆಚ್‌ವಿಃವಿಕೆ

**ಶ್ರೀ ಪಿ.ಆರ್.ರಮೇಶ್(ಮುಂದು...)ಃ–**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ್ದ ಆಯವ್ಯಯದಲ್ಲಿ 'ಕೃಷಿ ಭಾಗ್ಯ' ಯೋಜನೆಯಡಿ ಸುಮಾರು ಎರಡು ಲಕ್ಷ ರೈತರಿಗೆ ಪಂಪ್‌ಸೆಟ್ ಖರೀದಿ ಮಾಡಲು ಮತ್ತು ಪಾಲಿಹೌಸ್ ನಿರ್ಮಾಣಕ್ಕಾಗಿ ಸುಮಾರು 1898 ಕೋಟಿ ರೂಪಾಯಿಗಳ ಆರ್ಥಿಕ ನೆರವನ್ನು ಕಲ್ಪಿಸಲಾಗಿತ್ತು. ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡಗಳ ನಿರ್ಮಾಣ ಮತ್ತಿತರ ಸೌಲಭ್ಯಗಳಿಗಾಗಿ ಕೃಷಿಕರಿಗೆ ನೆರವಾಗಲು ಈ ಅನುದಾನವನ್ನು ನೀಡಲಾಗಿತ್ತು. ಈ ರೀತಿ ಹಿಂದಿನ ಸರ್ಕಾರ ಕೃಷಿಕರ ಬಗ್ಗೆ ಸಾಕಷ್ಟು ಕಾಳಜಿಯನ್ನು ಏನು ವಹಿಸಿತ್ತು, ಅದೇ ನೀತಿಯನ್ನು ಈ ಸರ್ಕಾರವೂ ಮುಂದುವರೆಸುತ್ತಿರುವುದು ಬಹಳ ಉತ್ತಮವಾಗಿರುವ ಪರಿಸ್ಥಿತಿಯೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿರುವ ಕೊಳಗೇರಿ ಪ್ರದೇಶಗಳ ಅಭಿವೃದ್ಧಿಗೆ ಹಿಂದೆ BSUP (Basic Service to Urban Poor) ಇರಬಹುದು, JNNURM (Jawaharalal Nehru Nationl Urban Renewel Mission) ಅಥವಾ ರಾಜೀವ್ ಅವಾಸ್ ಯೋಜನೆಗಳಲ್ಲಿ ಕೇಂದ್ರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರದವರು ಒಂದು ಘಟಕದ ನಿರ್ಮಾಣಕ್ಕೆ 2 ಲಕ್ಷದ 50 ಸಾವಿರ ರೂಪಾಯಿಗಳನ್ನು ನೀಡುತ್ತಿದ್ದರು. ಇದರ ಜೊತೆಗೆ ರಾಜ್ಯ ಸರ್ಕಾರದವರು 2 ಲಕ್ಷ ರೂಪಾಯಿಗಳನ್ನು ಮತ್ತು ಫಲಾನುಭವಿಗಳು 50 ಸಾವಿರ ರೂಪಾಯಿಗಳನ್ನು ಭರಿಸಬೇಕಾಗುತ್ತಿತ್ತು. ಈ ರೀತಿ ಒಂದು ಘಟಕ ನಿರ್ಮಾಣಕ್ಕೆ 5 ಲಕ್ಷ ರೂಪಾಯಿಗಳು ಸಂದಾಯವಾಗುತ್ತಿತ್ತು. ಇವತ್ತು ನಮ್ಮ ರಾಜ್ಯದಲ್ಲಿ ಮಾತ್ರ ಇಡೀ ದೇಶದಲ್ಲಿ ಬಡವರಿಗೆ ಮನೆಗಳನ್ನು ಕಟ್ಟುವಂತಹ ಪ್ರಕ್ರಿಯೆ ನಿಂತು ಹೋಗಿದೆ. ಇದಕ್ಕೆ ಕಾರಣವೇನೆಂದರೆ, ಕೇಂದ್ರ ಸರ್ಕಾರದವರು ಪ್ರಪ್ರಥಮವಾಗಿ 2014ರಲ್ಲಿ ಒಂದು ಕ್ರಮ ತೆಗೆದುಕೊಂಡು, ಒಂದು ಘಟಕದ ನಿರ್ಮಾಣಕ್ಕೆ ನೀಡುತ್ತಿದ್ದ 2 ಲಕ್ಷದ 50 ಸಾವಿರ ರೂಪಾಯಿಗಳನ್ನು 1 ಲಕ್ಷದ 50 ಸಾವಿರ ರೂಪಾಯಿಗಳಿಗೆ ಇಳಿಕೆ ಮಾಡಿದರು. ಆಗ ರಾಜ್ಯ ಸರ್ಕಾರದವರು 2 ಲಕ್ಷ ರೂಪಾಯಿಗಳನ್ನು ಮತ್ತು ಫಲಾನುಭವಿಗಳು 1 ಲಕ್ಷದ 50 ಸಾವಿರ ರೂಪಾಯಿಗಳನ್ನು ನೀಡಬೇಕಾಗಿ ಬಂತು. ಆದರೆ, ಫಲಾನುಭವಿಗಳು 1 ಲಕ್ಷದ 50 ಸಾವಿರ ರೂಪಾಯಿಗಳನ್ನು ನೀಡುವಂತಹ ಸ್ಥಿತಿಯಲ್ಲಿ ಇಲ್ಲದ ಅವರು ಕೇವಲ 50 ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದರು. ಈ 50 ಸಾವಿರ ರೂಪಾಯಿಗಳನ್ನು ಅವರು ವರ್ಷಕ್ಕೆ 10 ಅಥವಾ 15 ಸಾವಿರ ರೂಪಾಯಿಗಳನ್ನು ಕಂತುಗಳ ರೂಪದಲ್ಲಿ ನೀಡುತ್ತಿದ್ದರು. ಇದರಿಂದಾಗಿ ಬೆಂಗಳೂರು, ಮೈಸೂರು ಹಾಗೂ ಇನ್ನಿತರ ನಗರಗಳಲ್ಲಿ ಕೊಳೆಗೇರಿಯಲ್ಲಿರುವ ಬಡಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ, ಇವತ್ತು ಆರ್ಥಿಕವಾಗಿ ಹಿಂದುಳಿದಿರುವವರ ಮೇಲೆ ಭಾರ ಹೊರಿಸಿದ್ದೇವೆ. ಕೊಳಗೇರಿ ಅಭಿವೃದ್ಧಿ ಯೋಜನೆಗಳನ್ನು ತೆಗೆದುಕೊಳ್ಳುವುದರಲ್ಲಿ ನಾವು ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಕಾರಣವೇನೆಂದರೆ, it is a policy of Central Government. ಇವತ್ತಿನ ಸ್ಥಿತಿಗೆ ಇದು ಸಹ ಒಂದು ಕಾರಣವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ, 'ಪೆಟ್ರೋಲ್ ಮೇಲೆ ಹಾಕಿರುವಂತಹ taxes ಮತ್ತು ಇನ್ನಿತರ Commercial Establishments ಮೇಲೆ ಹಾಕಿರುವಂತಹ ತೆರಿಗೆಗಳೇ ಹೆಚ್ಚಾಗಿದೆ' ಎನ್ನುವ ಮಾತನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರದವರು GST ಪದ್ಧತಿಯನ್ನು ತಂದರೆ, ಪೆಟ್ರೋಲ್ ಮೇಲೆ ವಿಧಿಸುತ್ತಿರುವ ಶೇಕಡಾ 28ರಷ್ಟು ತೆರಿಗೆಯಲ್ಲಿ ಅರ್ಧ ಭಾಗ ರಾಜ್ಯ ಸರ್ಕಾರದ ಪಾಲು ಬರುವುದಾದರೆ ಶೇಕಡಾ 14ರಷ್ಟು SGST ನಮಗೆ ಬರುತ್ತದೆ. ಕೇಂದ್ರ ಸರ್ಕಾರ ಪೆಟ್ರೋಲ್ ಮೇಲೆ ಶೇಕಡಾ 28ಕ್ಕಿಂತ ಹೆಚ್ಚಿನ ದರದಲ್ಲಿ Central Goods and Services Tax(CGST) ವಿಧಿಸುತ್ತಿದೆ. ಈ ಪ್ರಮಾಣದಲ್ಲಿ ಪೆಟ್ರೋಲ್ ಮೇಲೆ ಹಾಕುತ್ತಿರುವ ಸಿಜಿಎಸ್‌ಟಿ ಅನ್ನು ನಿಲ್ಲಿಸಿದರೆ, ಕೇಂದ್ರ ಸರ್ಕಾರ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾದ ಪರಿಸ್ಥಿತಿಗೆ ಬರುತ್ತದೆ. ದೇಶದಲ್ಲಿನ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಅಗ್ಗವಾಗಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಮಾನ್ಯ ಕುಮಾರಸ್ವಾಮಿಯವರು ತಮ್ಮ ಆಯವ್ಯಯದಲ್ಲಿ ಪೆಟ್ರೋಲ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಡೀಸೆಲ್ ಮೇಲೆ ಕ್ರಮವಾಗಿ 20 ಪೈಸೆ ಮತ್ತು 10 ಪೈಸೆಗಳಷ್ಟು tax ವಿಧಿಸಿದ್ದಾರೆ. ಇದು ಸಣ್ಣ ಪ್ರಮಾಣದ ತೆರಿಗೆಯಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಗದಿನ ಅಪಮೌಲ್ಯೀಕರಣದಿಂದ ಎಷ್ಟೊಂದು ತೊಂದರೆಯುಂಟಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ನಗದಿನ ಅಪಮೌಲ್ಯೀಕರಣದಿಂದ ಮತ್ತು ಜಿ.ಎಸ್.ಟಿ. ಪದ್ಧತಿಯನ್ನು ಜಾರಿಗೊಳಿಸಿದ ಪರಿಣಾಮವಾಗಿ ಇವತ್ತು ಬೆಂಗಳೂರು ನಗರದಲ್ಲಿ ಶೇಕಡಾ 20ರಷ್ಟು ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿವೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಾಲ್‌ಗಳು ತಲೆ ಎತ್ತಿವೆ. FDI (Foreign Direct Investment) ಬಂದಿರುವುದರಿಂದ ಬಹಳಷ್ಟು ಶೆಟ್ಟರ ಅಂಗಡಿಗಳು ಮುಚ್ಚಲ್ಪಟ್ಟಿವೆ. ಸಣ್ಣ ಪ್ರಮಾಣದ ವ್ಯಾಪಾರಸ್ಥರು ಬೀದಿಗೆ ಬಂದಿದ್ದಾರೆ. ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದಿಂದ ನಮ್ಮ ಜನ ತೊಂದರೆಗೊಳಗಾಗುತ್ತಿದ್ದಾರೆ. ನಾನು ಕರ್ನಾಟಕಕ್ಕೆ ಸೀಮಿತವಾಗಿ ಮಾತನಾಡುತ್ತಿಲ್ಲ. ಇಡೀ ರಾಷ್ಟ್ರದಲ್ಲಿ ಯಾವುದೇ ರಾಜ್ಯದಲ್ಲಿ ನೋಡಿದರೂ ಬಹಳಷ್ಟು ಸಣ್ಣಪುಟ್ಟ ವ್ಯಾಪಾರಿಗಳು ಬೀದಿಗೆ ಬಂದಿದ್ದಾರೆ. ಈ ಸದನದಲ್ಲಿ ಹಲವರು ವ್ಯಾಪಾರಸ್ಥರು ಇದ್ದಾರೆ; ಕಳೆದ 2-3 ವರ್ಷಗಳಲ್ಲಿ ನಡೆಯುತ್ತಿದ್ದ ಪ್ರಮಾಣದಲ್ಲಿ ಇವತ್ತು ವ್ಯಾಪಾರ ನಡೆಯುತ್ತಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಇವತ್ತು ಅಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರ ಸಂಪೂರ್ಣವಾಗಿ ನೆಲಕಚ್ಚಿದೆ. ದೊಡ್ಡದೊಡ್ಡ ಬಿಲ್ಡಿಂಗ್‌ಗಳು ಖಾಲಿ ಬಿದ್ದಿವೆ, ಯಾರೂ ಬಾಡಿಗೆಗೆ ಬರುತ್ತಿಲ್ಲ ಇದರ ಜೊತೆಗೆ ಬಂಡವಾಳ ಹೂಡಿಕೆಗೆ ಸಹ ಯಾರೂ ಮುಂದೆ ಬರುತ್ತಿಲ್ಲ. ಆದ್ದರಿಂದ ಇವತ್ತು ರಾಜ್ಯದಲ್ಲಿ ಆರ್ಥಿಕ ಮುಗ್ಗಟ್ಟು ಹೆಚ್ಚಾಗುತ್ತಿದೆ. ಈ ಅಂಶಗಳನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ.

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಗದಿನ ಅಪಮೌಲ್ಯೀಕರಣದಿಂದ ಮತ್ತು ಜಿ.ಎಸ್.ಟಿ. ಪದ್ಧತಿಯನ್ನು ಜಾರಿಗೊಳಿಸಿದ ಮೇಲೆ ಈ ದೇಶದ ಅತೀ ದೊಡ್ಡ ರಾಜ್ಯಗಳಲ್ಲಿ ಚುನಾವಣೆಗಳು ನಡೆದಿವೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ನೀತಿಯನ್ನು ಜನರು ಒಪ್ಪಿದ್ದಾರೆಯೇ ಅಥವಾ ವಿರೋಧಿಸಿದ್ದಾರೆಯೇ ಎನ್ನುವುದಕ್ಕೆ ಸಾಕ್ಷಿಯಾಗಿ ಸುಮಾರು 36 ಕೋಟಿ ಜನಸಂಖ್ಯೆಯಿರುವ ಉತ್ತರ ಪ್ರದೇಶದಲ್ಲಿ Ballot Box ನಲ್ಲಿ ಜನ ಮತವನ್ನು ಚಲಾಯಿಸುತ್ತಾರೆ. ಸದಸ್ಯರಾದ ಮಾನ್ಯ ರಮೇಶ್‌ರವರು ಮಾತನಾಡುತ್ತಿರುವಾಗ ಎರಡು contradiction ಅನ್ನು ನೋಡಿದ್ದೇನೆ. ಒಂದು ಕಡೆ ಕೆಲವೊಂದು ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುದಾನವನ್ನು ಕಡಿಮೆ ಮಾಡಿದೆ ಎನ್ನುವ ಮಾತನ್ನು, ಮತ್ತೊಂದು ಕಡೆ ರಿಯಲ್ ಎಸ್ಟೇಟ್ ವ್ಯವಹಾರ ನೆಲಕಚ್ಚಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದನ್ನೇ ನಾವು beauty ಎಂದು ಕರೆಯುತ್ತಿರುವುದು. ಕಾಳಸಂತೆಕೋರರು ರಿಯಲ್ ಎಸ್ಟೇಟ್‌ನಲ್ಲಿ ಇದ್ದರು. ಆದರೆ, ಈಗ ಭೂಮಿಯ ಬೆಲೆ ಸಾಕಷ್ಟು ಪ್ರಮಾಣದಲ್ಲಿ ಕುಸಿದಿದೆ. ಇದರಿಂದಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಧ್ಯಮ ಮತ್ತು ಕೆಳ ವರ್ಗದವರು ಹಾಗೂ ಗ್ರಾಮಾಂತರ ಪ್ರದೇಶದಿಂದ ನಗರಕ್ಕೆ ಬಂದಿರುವ ಒಬ್ಬ ಬಡವ ಸಹ ಒಂದು ಸಣ್ಣ ಫ್ಲಾಟ್ ಅಥವಾ ನಿವೇಶನವನ್ನು ಖರೀದಿ ಮಾಡುವ ಕನಸನ್ನು ಕಾಣಬಹುದಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಸದನವನ್ನು ತಪ್ಪು ದಾರಿಗೆಳೆಯಬಾರದು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, FDI ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಕೊಳ್ಳುವ ಸಂಸ್ಕೃತಿ ನಮ್ಮ ಕೈಯಲ್ಲಿದೆ. ಮಾನ್ಯ ಶೇಷಾದ್ರಿಯವರು 'ಭಾರತ್ ಸ್ಟೋರ್ಸ್' ಎನ್ನುವ ಒಂದು ಒಳ್ಳೆಯ ಸಿನಿಮಾ ಮಾಡಿದ್ದಾರೆ. ಪುಟ್ಟಪುಟ್ಟ ಕಿರಾಣಿ ಅಂಗಡಿಗಳಲ್ಲಿ ಮಾಡಿಕೊಳ್ಳಬಹುದಾದ ಸಣ್ಣಪುಟ್ಟ ಬದಲಾವಣೆಗಳು ಮತ್ತು ಬದ್ಧತೆಗಳಿಂದ FDI ಸಂಸ್ಕೃತಿಯನ್ನು ಸೋಲಿಸಬಹುದಾಗಿದೆ. ಇಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವುದಕ್ಕೆ ಬದಲಾಗಿ, ವ್ಯವಸ್ಥೆಯನ್ನು ದೂಷಿಸುವುದು ಎಷ್ಟು ಸರಿ? ಮಾನ್ಯ ಸದಸ್ಯರ ವಾದ ವೈರುಧ್ಯತೆಯಿಂದ ಕೂಡಿದೆ. ದಯಮಾಡಿ ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿಯನ್ನು ನೀಡಬಾರದೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರು ಹೇಳಿರುವಂತಹ ಮಾತುಗಳಲ್ಲಿ ಸತ್ಯಾಂಶವಿದೆ. ಏಕೆಂದರೆ, ಇವತ್ತು ನಗದಿನ ಅಪಮೌಲ್ಯೀಕರಣದ ಬಗ್ಗೆ ಮಾತನಾಡಬೇಕಾದರೆ ನಮ್ಮ ಬಳಿ ಸಾಕಷ್ಟು ವಿಚಾರಗಳಿವೆ. ಕೇಂದ್ರ ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ನನ್ನ ಸಹೋದರಿ ತೇಜಸ್ವಿನಿಗೌಡರವರು ಹೇಳಿದ ಮಾತುಗಳು ನಮ್ಮನ್ನು ತಪ್ಪು ದಾರಿಗೆಳೆಯುತ್ತಿವೆ ಎಂದು ಹೇಳಲು ನಮ್ಮ ಬಳಿ ಸಾಕಷ್ಟು ವಿಚಾರಗಳಿವೆ. ಇವತ್ತು ನಗದಿನ ಅಪಮೌಲ್ಯೀಕರಣದಲ್ಲಿ ವ್ಯಾಪಾರ–ವ್ಯವಹಾರಗಳು ಮತ್ತು ಹಣಕಾಸಿನ ಪರಿಸ್ಥಿತಿ ಬಹಳ ಮುಖ್ಯವಾಗಿದೆ. ಓಟಿನ ಮೂಲಕ ತೋರಿಸುವುದು ಬೇರೆ ವಿಚಾರ. ಮಾನ್ಯ ಸಿದ್ದರಾಮಯ್ಯನವರು ಎಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದರೂ ಸಹ ಜನರು ಓಟು ಹಾಕದೇ ಇರುವಾಗ ಮತ್ತು ಶ್ರೀಮತಿ ಇಂದಿರಾಗಾಂಧಿಯವರನ್ನು ಸೋಲಿಸಿದಂತಹವರು ಇರುವಾಗ, ಚುನಾವಣೆಗೂ ಮತ್ತು ಆರ್ಥಿಕ ಪರಿಸ್ಥಿತಿಗೂ ಸಾಕಷ್ಟು ವ್ಯತ್ಯಾಸಗಳಿವೆ ಎಂಬುದು ಸ್ಪಷ್ಟವಾಗುತ್ತದೆ.

(ಮುಂದುವರಿದಿದೆ)

(200) 10.7.2018 7.00 ಪಿಕೆ:ಬಿಎನ್‌ಎಸ್

**ಶ್ರೀ ಹೆಚ್.ಎಂ. ರೇವಣ್ಣ (ಮುಂದುವರೆದಿದೆ)**

ಚುನಾವಣೆಗೆ ಮತ್ತು ಆರ್ಥಿಕ ಪರಿಸ್ಥಿತಿಯ ಚಿಂತನೆಗೆ ವ್ಯತ್ಯಾಸ ಇದೆ. ಇವುಗಳ ಹೋಲಿಕೆ ಸರಿಯಲ್ಲ. ಹಾಗೆ ನೋಡಿದರೆ, ಮೊನ್ನೆ ಚುನಾವಣೆಯಲ್ಲಿ ನಮಗೆ ವೋಟ್‌ನ ಪರ್ಸೆಂಟೇಜ್ ಜಾಸ್ತಿ ಬಂತು, ಆದರೆ ಸೀಟ್‌ಗಳು ಬರಲಿಲ್ಲ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, demonetisation ನಿಂದ ಕಾಳಸಂತೆ ನಿಂತು ಹೋಗುತ್ತದೆ, ಕಪ್ಪು ಹಣ ತಡೆಯಬಹುದು ಎಂದು ಹೇಳಿದರು. ಇವೆಲ್ಲ ಹೆಚ್ಚಿಗೆ ನಡೆಯುವುದು ಗುಜರಾತ್‌ನಲ್ಲಿ ಎನ್ನುವ ಮಾಹಿತಿ ಇದೆ. ಸ್ವಿಸ್ ಬ್ಯಾಂಕ್‌ನಲ್ಲಿ ಇಲ್ಲಿಯ ತನಕ ಇಟ್ಟಿದ್ದ ಹಣಕ್ಕಿಂತ ಈಗಿನ ಅವಧಿಯಲ್ಲಿ ಕಪ್ಪು ಹಣ ಇಟ್ಟಿರುವ ಪ್ರಮಾಣ ಜಾಸ್ತಿಯಾಗಿದೆ ಎಂದು ಹೇಳಿದರು. ಹಾಗಾದರೆ ಕಪ್ಪು ಹಣ ಎಲ್ಲಿ ಕಡಿಮೆಯಾಗಿದೆ? ಹಾಗಾಗಿ ಮಾನ್ಯ ತೇಜಸ್ವಿನಿಯವರೇ ನಿಮ್ಮ ಮಾತುಗಳನ್ನು ಒಪ್ಪುವುದಕ್ಕಾಗುವುದಿಲ್ಲ.

**ಡಾ॥ ತೇಜಸ್ವಿನಿ ಗೌಡ :–** ಅದು ಕಪ್ಪು ಹಣ ಅಲ್ಲ ಎಂದು ಕೇಂದ್ರ ಸಚಿವರು ಹೇಳಿಕೆ ಕೊಟ್ಟಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಆ ವಿಷಯವೇ ಬೇರೆ. ರಿಯಲ್ ಎಸ್ಟೇಟ್ ಬಿದ್ದು ಹೋಗಿರುವುದರಿಂದ ನಿವೇಶನ ಅಥವಾ ಮನೆಗಳನ್ನು ಮಧ್ಯಮ ವರ್ಗದವರು ಕೊಂಡುಕೊಳ್ಳಬಹುದು ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಕೊಂಡುಕೊಳ್ಳುವುದಕ್ಕೆ ಹಣವೇ ಇಲ್ಲ. ಹಣದ ರೊಟೇಷನ್ ಇಲ್ಲ. ಎ.ಟಿ.ಎಂ. ಗಳಲ್ಲಿ ದುಡ್ಡಿಲ್ಲ. ಬ್ಯಾಂಕುಗಳಿಗೆ ಹೋದರೆ ನೋಟುಗಳು ಸಿಗುತ್ತಿಲ್ಲ, ಕಾಯಿನ್‌ಗಳು ಸಿಗುತ್ತಿಲ್ಲ. ಇಂತಹ ಪರಿಸ್ಥಿತಿ ಇದ್ದರೂ ಜನರು ಸಹಿಸಿಕೊಂಡಿದ್ದಾರೆ. ಜನ ಇನ್ನೂ ಕೂಡ ಮಾನ್ಯ ಮೋದಿಯವರ ಪ್ರಚಾರದ ಮೋಡಿಯಿಂದ ಹೊರಗೆ ಬಂದಿಲ್ಲ. ಕೆಲವೇ ದಿನಗಳಲ್ಲಿ ಜನ ಈ ಸ್ಥಿತಿಯಿಂದ ಹೊರಗೆ ಬರುತ್ತಾರೆ. ಮಾನ್ಯ ರಮೇಶ್‌ರವರು ಒಬ್ಬ ಮಾಜಿ ಮೇಯರ್ ಆಗಿ ಬೆಂಗಳೂರಿನ ವಿಷಯವನ್ನು ಹೇಳುತ್ತಿದ್ದಾರೆ. ನಾವು ತಾಳ್ಮೆಯಿಂದ ಕೇಳೋಣ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ G.S.T. (Goods and Services Tax) and demonetisation ಮಾರಕವೋ ಅಥವಾ ಪೂರಕವೋ ಎನ್ನುವುದರ ಬಗ್ಗೆ ಮಾತನಾಡಲು ಒಂದು ದಿನ ಅವಕಾಶ ಮಾಡಿಕೊಟ್ಟರೆ ಗಂಭೀರವಾಗಿ ಚರ್ಚೆ ಮಾಡಬಹುದು. ನಮಗೆ G.S.T. ಬಗ್ಗೆ ಪಾಠ ಮಾಡುವಾಗ, ಎಲ್ಲಾ ಶಾಸಕರನ್ನು ಕೂರಿಸಿಕೊಂಡು, 'one country, one tax' ಎಂದರು, ಒಂದೇ ಸಲ ತೆರಿಗೆ ಹಾಕಲಾಗುತ್ತದೆ, ಮತ್ತೆ ತೆರಿಗೆ ಹಾಕುವುದಿಲ್ಲ ಎಂದು ಹೇಳಿದರು. 'ಒಂದು ದೇಶ, ಒಂದು ತೆರಿಗೆ'. ಗೋದಿ ತೆಗೆದುಕೊಂಡರೂ ತೆರಿಗೆ, ಚಪಾತಿ ತಿಂದರೂ ತೆರಿಗೆ. ಉದ್ದಿನ ಬೇಳೆ ತೆಗೆದುಕೊಂಡರೂ ತೆರಿಗೆ, ದೋಸೆ ತಿಂದರೂ ತೆರಿಗೆ, ಅಕ್ಕಿ ತೆಗೆದುಕೊಂಡರೂ ತೆರಿಗೆ, ಅನ್ನ ಉಂಡರೂ ತೆರಿಗೆ. ಇದು ನನಗೆ ಅರ್ಥವಾಗುತ್ತಿಲ್ಲ. ಯಾವ ಹಂತಕ್ಕೆ ಹೋದರೂ G.S.T. ಇರುತ್ತದೆ. ಮತ್ತೆ, demonetisation ಬಗ್ಗೆ ಹೇಳುವುದಾದರೆ, ದುಡ್ಡನ್ನು ಸ್ವಿಸ್ ಬ್ಯಾಂಕಿನಿಂದ ತಂದು ಅದನ್ನು ರೆಗ್ಯುಲರೈಸ್ ಮಾಡಿಕೊಳ್ಳುತ್ತಾರೆ. ನಮ್ಮ ಹತ್ತಿರ ಇಷ್ಟು ಹಣ ಇದೆ ಎಂದು ಅವರು ಘೋಷಣೆ ಮಾಡುತ್ತಾರೆ. ಈ ವ್ಯವಸ್ಥೆಯಿಂದ ಸಿಕ್ಕ ಫಲವೇನು? ಆಗುತ್ತಿದ್ದ ವಹಿವಾಟುಗಳು ನಿಂತುಹೋದವು; ಅಭಿವೃದ್ಧಿ ನಿಂತು ಹೋಯಿತು. ಜನರಿಗೆ ಸಿಗುತ್ತಿದ್ದ ಕೆಲಸಗಳು ನಿಂತು ಹೋಯಿತು. ಈ ಹಂತದಲ್ಲಿ ಈ ಪಾಲಿಸಿಗಳು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇಕಿತ್ತೇ ಎನ್ನುವುದರ ಬಗ್ಗೆ ಪುನರ್ವಿಮರ್ಶೆ ಮಾಡುವ ನಿಟ್ಟಿನಲ್ಲಿ ಗಂಭೀರವಾಗಿ ಸದನದಲ್ಲಿ ಚಿಂತನೆ ಮಾಡಬೇಕಾಗುತ್ತದೆ.

**ಶ್ರೀ ಪಿ.ಆರ್. ರಮೇಶ್ :–** ಮಾನ್ಯ ಸಭಾಪತಿಯವರೇ, ನಮ್ಮ unorganised sector ಮತ್ತು building construction ನಿಂದ ಬಡವರಿಗೆ ಕೆಲಸ ಸಿಗುತ್ತಿತ್ತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲದೇ ಇರುವುದರಿಂದ ಭಯಾನಕವಾದ ಒಂದು impact ಆಗಿದೆ. ರೈತ ಅಥವಾ ಕೂಲಿ ಕಾರ್ಮಿಕನ ಜೇಬಿನಲ್ಲಿ ಮೊದಲು ಒಂದು ಸಾವಿರ ರೂಪಾಯಿ ಇರುತ್ತಿತ್ತು. ಆದರೆ ಇವತ್ತು ಅವನ ಜೇಬಿನಲ್ಲಿ ಐದು ರೂಪಾಯಿ ಸಿಗುವುದಿಲ್ಲ. ಅದಕ್ಕೆ ಕಾರಣ ಅವನಿಗೆ ಕೆಲಸ ಸಿಗುತ್ತಿಲ್ಲ. ಕೆಲಸ ಏತಕ್ಕೆ ಸಿಗುವುದಿಲ್ಲ ಎಂದರೆ ಜನರ ಹತ್ತಿರ ದುಡ್ಡಿಲ್ಲ. ಉದಾಹರಣೆಗೆ, ನನ್ನ ಹತ್ತಿರ 50 ಸಾವಿರ ರೂಪಾಯಿಗಳಿದ್ದರೆ ಯಾವುದಾದರೂ ಒಂದು ಕೆಲಸ ಮಾಡುತ್ತೇನೆ. ಆ 50 ಸಾವಿರ ರೂಪಾಯಿಗಳ ಒಂದು ಟೇಬಲ್ ಮಾಡಿಸುತ್ತೇನೆ. ಟೇಬಲ್ ಮಾಡಿದಾಗ ಒಬ್ಬ ಕಾರ್ಪೆಂಟರ್‌ಗೆ ಕೆಲಸ ಸಿಗುತ್ತದೆ, ಹಾರ್ಡ್‌ವೇರ್ ಅವನಿಗೆ ಕೆಲಸ ಸಿಗುತ್ತದೆ, ಅದನ್ನು ಫಿಟ್ಟಿಂಗ್ ಮಾಡುವವನಿಗೆ ಕೆಲಸ ಸಿಗುತ್ತದೆ, ಹೀಗೆ ಇತರ 10 ಜನರಿಗೆ ಕೆಲಸ ಸಿಗುತ್ತದೆ. ಆದರೆ ಇವತ್ತು ನನ್ನ ಹತ್ತಿರ ಹಣ ಇಲ್ಲ; ಯಾವ ರೀತಿಯಿಂದಲೂ ಹಣ ಸಂಪಾದನೆ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ವ್ಯವಹಾರಗಳು ಸಂಪೂರ್ಣವಾಗಿ ಕುಸಿದಿವೆ. ನಮ್ಮ ಮಾನ್ಯ ಸಹೋದರಿಯವರು, ರಿಯಲ್ ಎಸ್ಟೇಟ್‌ನಲ್ಲಿ ಕುಸಿತ ಇರುವುದರಿಂದ ಕೆಳ ವರ್ಗದವರಿಗೆ ಮನೆ ಸಿಗುತ್ತದೆ ಎಂದು ಹೇಳಿದರು. ಆದರೆ ಮನೆ ಅಥವಾ ನಿವೇಶನ ಖರೀದಿ ಮಾಡುವುದಕ್ಕೆ ಅವರ ಹತ್ತಿರ ದುಡ್ಡೇ ಇರುವುದಿಲ್ಲ. ಬ್ಯಾಂಕಿನವರ ಹತ್ತಿರ ಯಾರು ಸಾಲ ತೆಗೆದುಕೊಳ್ಳುವುದಕ್ಕೆ ಹೋಗದೇ ಇರುವುದರಿಂದ ಅವು ಪಾಪರ್ ಆಗುವ ಹಂತಕ್ಕೆ ಹೋಗುತ್ತಿವೆ. ನಾವು ಸಾಲ ಕೊಡುತ್ತೇವೆ ಎಂದು ನಮ್ಮ ಮೊಬೈಲ್ ಫೋನ್‌ಗಳಿಗೆ ಸುಮಾರು 10 ಕರೆಗಳಾದರೂ ಬರುತ್ತವೆ. ಇವತ್ತು ಜನ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಮತ್ತು ಹಣವನ್ನು ಇಡುವುದಕ್ಕೆ ಭಯ ಪಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇಡೀ ದೇಶದಲ್ಲಿ ಸೃಷ್ಟಿಯಾಗಿದೆ. ಆರ್ಥಿಕ ಪರಿಸ್ಥಿತಿ ಇವತ್ತು slow down ಆಗಿದೆ. Economy has slowed down. ಇದನ್ನು ಮಾನ್ಯ ಅಮರ್ತ್ಯಸೇನ್ ಅವರಂಥವರು, ಮಾನ್ಯ ಮನಮೋಹನ್‌ಸಿಂಗ್ ಅವರಂಥವರು ಹೇಳುತ್ತಲೇ ಇದ್ದಾರೆ. ಎಕನಾಮಿಕ್ ಟೈಮ್ಸ್‌ನಂತಹ ಪತ್ರಿಕೆಯಲ್ಲೂ ಪ್ರಸ್ತಾಪವಾಗಿದೆ. ಆದರೆ ಸಾರ್ವಜನಿಕವಾಗಿ ಈ ಕುರಿತ ಚರ್ಚೆಗಳು ಆಗದೇ ಇರುವ ರೀತಿಯಲ್ಲಿ set up ಮಾಡುವಂಥದ್ದಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ ನೀವು ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ? 6.30 ಗಂಟೆಯಿಂದ ನಿಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇನ್ನೂ 10 ಜನ ಸದಸ್ಯರು ಮಾತನಾಡುವವರಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಇನ್ನೂ ಕೇಳಬೇಕು ಎನಿಸುತ್ತಿದೆ. ಆದರೆ ಸಮಯದ ಅಭಾವ ಕೂಡ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ.

**ಶ್ರೀ ಪಿ.ಆರ್. ರಮೇಶ್ :–** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ Solid Waste Management ಎನ್ನುವುದನ್ನು ನಾವು ನೋಡಿದ್ದೇವೆ. 2013ನೇ ಇಸವಿಯ ಹಿಂದೆ ಈ ವ್ಯವಸ್ಥೆ ಯಾವರೀತಿ ಇತ್ತು ಎಂಬುದನ್ನೂ ನಾವು ನೋಡಿದ್ದೇವೆ. ಇವತ್ತು state of the art ಎನ್ನುವ ರೀತಿಯಲ್ಲಿ ಬೆಂಗಳೂರಿನಲ್ಲಿ 7 ಕಡೆ Solid Waste Management Processing Units ಆಗಿವೆ. ಈ ರೀತಿ ಹಿಂದೆ ಯಾವತ್ತೂ ಆಗಿರಲಿಲ್ಲ. ಸಹೋದರಿ ತಾರಾ ಅವರು ಮಾತನಾಡುತ್ತಾ, ಕಸ ನಿರ್ವಹಣೆಯ ಬಗ್ಗೆ ಹೇಳಿದರು. ಆದರೆ ಆ ರೀತಿ ಇಲ್ಲ. ಹಿಂದಿನ ಸರ್ಕಾರ ಬೆಂಗಳೂರಿನ ತ್ಯಾಜ್ಯದಿಂದ ಗೊಬ್ಬರವನ್ನು ತಯಾರು ಮಾಡುವಂತಹ Solid Waste Management Processing Units ಗೆ ಒತ್ತನ್ನು ಕೊಟ್ಟು ರೂ.350 ಕೋಟಿಯನ್ನು ಇಟ್ಟಿತ್ತು. ಈ ಸರ್ಕಾರ ಕೂಡ ಇಂತಹ ಹೆಚ್ಚು ಯೂನಿಟ್‌ಗಳನ್ನು ಹಾಕಬೇಕು ಎಂದು ಸೂಚಿಸಿರುವುದು ಸ್ವಾಗತಾರ್ಹವಾದುದು.

**ಸಭಾಪತಿಯವರು:–** ಮಾನ್ಯ ವೆಂಕಟರಾವ್ ನಾಡಗೌಡರೇ, ತಾವು ಹಿಂದಿನ ಸಾಲಿನಲ್ಲಿ ಏಕೆ ಕುಳಿತ್ತಿದ್ದೀರಿ? ಮುಂದಿನ ಸಾಲಿಗೆ ಬಂದು ಕುಳಿತುಕೊಳ್ಳಿ. ಮುಂದಿನ ಸಾಲಿನಲ್ಲಿ ಯಾರೂ ಮಂತ್ರಿಗಳಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ಮುಂದಿನ ಸಾಲಿನಲ್ಲಿ ಕೂರಿಸಿ ಒಳ್ಳೆಯ ಕೆಲಸ ಮಾಡಿದಿರಿ. ಅಧಿಕಾರಿಗಳ ಗ್ಯಾಲರಿಯಲ್ಲಿ ಎಷ್ಟು ಜನ ಅಧಿಕಾರಿಗಳು ಇರಬೇಕೋ ಅಷ್ಟು ಜನ ಅಧಿಕಾರಿಗಳು ಇದ್ದಾರೆಯೇ ದಯವಿಟ್ಟು ಗಮನಿಸಬೇಕು; ಯಾವ ಯಾವ ಅಧಿಕಾರಿಗಳು ಇರಬೇಕಾಗಿತ್ತೋ ಅವರ ಹೆಸರುಗಳನ್ನು ಹೇಳಿಬಿಡಿ.

**ಶ್ರೀ ಪಿ.ಆರ್. ರಮೇಶ್ :–** ಮಾನ್ಯ ಸಭಾಪತಿಯವರೇ, ಇಂತಹ ಯೂನಿಟ್‌ಗಳನ್ನು ಹೆಚ್ಚಿಸುವ ನಿರ್ಧಾರ ತೆಗೆದುಕೊಂಡಿರುವುದು progressive step ಎಂದು ಹೇಳಬಹುದು. ಕಡಲೆಕಾಯಿ ಬೀಜ ಮತ್ತು ಸೂರ್ಯಕಾಂತಿ ಬೀಜಗಳಿಂದ ಎಣ್ಣೆ ತೆಗೆಯುವುದಕ್ಕೆ small automated oil mills ಪ್ರಾರಂಭ ಮಾಡುವುದಕ್ಕೆ ಒತ್ತನ್ನು ಕೊಟ್ಟಿದ್ದಾರೆ. ಒಂದು ಕೆ.ಜಿ. ಕಡಲೆಕಾಯಿಯನ್ನು ರೂ. 90ರಂತೆ ಕೊಟ್ಟು ಖರೀದಿ ಮಾಡಿ ಅದನ್ನು ಒಂದು ಅಂಗಡಿಯಲ್ಲಿದ್ದ ಸಣ್ಣ machine ನಲ್ಲಿ ಹಾಕಿದಾಗ ಸುಮಾರು 400 ಎಂ.ಎಲ್. ಎಣ್ಣೆ ಬಂತು. ಒಂದು ಕೆ.ಜಿ. ಎಣ್ಣೆ ಬೇಕಾದರೆ ಎರಡೂವರೆ ಕೆ.ಜಿ.ಕಡಲೆಕಾಯಿ ಬೇಕಾಗುತ್ತದೆ. ಎರಡೂವರೆ ಕೆ.ಜಿ. ಕಡಲೆಕಾಯಿಗೆ ಸುಮಾರು ರೂ 250

ಆಗುತ್ತದೆ. ಹೀಗಿರುವಾಗ ಅಂಗಡಿಯವನು ಜನರಿಗೆ ಒಂದು ಕೆ.ಜಿ. ಎಣ್ಣೆಯನ್ನು ರೂ. 100ಕ್ಕೆ ಹೇಗೆ ಕೊಡುತ್ತಾನೆ? ಅಂದರೆ ಇಲ್ಲಿ contaminate ಆಯಿತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

**ಶ್ರೀ ವೆಂಕಟರಾವ್ ನಾಡಗೌಡ(ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ಪದಾರ್ಥದಿಂದ ಕೇವಲ ಒಂದೇ ರೀತಿಯ ಉತ್ಪನ್ನ ಬರುವುದಿಲ್ಲ, ಅದರಿಂದ ಇಂಡಿಯ ಜೊತೆ by-product ಕೂಡ ಬರುತ್ತದೆ. ಹಾಗಾಗಿ cost match ಆಗುತ್ತದೆ.

**ಶ್ರೀ ಪಿ.ಆರ್. ರಮೇಶ್ :–** ಮಾನ್ಯ ಸಭಾಪತಿಯವರೇ, ನನಗೆ ಒಬ್ಬ ವಿಜ್ಞಾನಿಗಳು, ಇಂತಹ ಎಣ್ಣೆಯಲ್ಲಿ ಇನ್ನೂ ಕೆಲವು ಆಯಿಲ್‌ಗಳನ್ನು ಮಿಕ್ಸ್ ಮಾಡುತ್ತಾರೆ, ಅದು edible oil ಆಗಿದ್ದು ಕಡಿಮೆ ಬೆಲೆಗೆ ಸಿಗುವಂಥದ್ದು ಎನ್ನುವ ಮಾತನ್ನು ಹೇಳಿದರು.

(ಮುಂದು . . .)

(201)10–7–2018 7.10 ಡಿಎಸ್–ಬಿಎನ್‌ಎಸ್

**ಶ್ರೀ ಪಿ.ಆರ್. ರಮೇಶ್** (ಮುಂದು):–

ಆದರೆ ಎಲ್ಲಾ ಎಣ್ಣೆಗಳು ಆ ರೀತಿ ಇರುತ್ತವೆ ಎಂದಲ್ಲ. ಏಕೆಂದರೆ, ನಾನು Oil Seed Federation ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಾಗಾಗಿ ಹೇಳುತ್ತಿದ್ದೇನೆ. ಎಲ್ಲವೂ adulterate ಆಗಿರುವುದಿಲ್ಲ. Exploitation ಮಾಡುತ್ತಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೇ, ಯಾರು ಲಿಸ್ಟ್‌ನಲ್ಲಿದ್ದಾರೆ ಆ ಎಲ್ಲಾ ಐದು ಅಧಿಕಾರಿಗಳು ಇದ್ದಾರೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತು ಸೂರ್ಯಕಾಂತಿ ಇರಬಹುದು, ಕಡಲೆಕಾಯಿ ಬೀಜ ಇರಬಹುದು, ಈ ಬೀಜದಿಂದ ಎಣ್ಣೆ ತೆಗೆಯಲು, small automated oil mills ಅನ್ನು ರೈತರಿಗೆ ಕೊಡುವಂತಹ ಕೆಲಸ ಮಾಡುತ್ತಿದ್ದಾರೆ ಅದು ನಿಜವಾಗಿಯೂ ಒಳ್ಳೆಯದು. ನಿಜವಾಗಿಯೂ ಜನಕ್ಕೆ ಆರೋಗ್ಯವಾದಂತಹ ಎಣ್ಣೆ ಸಿಗುವುದು ಮುಂದಿನ ದಿನಗಳಲ್ಲಿ ಹೆಚ್ಚಿಗೆ ಆಗಬಹುದು ಎಂದು ಮಾಡಿದೆ. ಅದಕ್ಕೆ ಮಾರ್ಕೆಟಿಂಗ್ ನಂದಿನಿಗೆ ಕೊಟ್ಟಿದ್ದಾರೆ. ಅದು ಬಹಳ ಆಕರ್ಷಣೀಯವಾಗಿರುವಂಥದ್ದು. ಇದನ್ನು ಉತ್ತೇಜನ ಮಾಡುವಂಥದ್ದಕ್ಕೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ರೂಪಿಸುವಂಥದ್ದು ಬಹಳ ಅವಶ್ಯಕತೆ ಇದೆ. ಹಿಂದೆ 2008

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಿಂದ 2013 ರವರೆಗೆ ಕೃಷಿಗೆ ಪ್ರತ್ಯೇಕವಾದ ಆಯವ್ಯಯವನ್ನು ಮಂಡಿಸಿದ್ದರು. ಆ ಆಯವ್ಯಯದಲ್ಲಿ ಐದು ವರ್ಷಕ್ಕೆ ಎಷ್ಟು ಖರ್ಚು ಮಾಡಿದ್ದಾರೆ? ಕೃಷಿ ಬಜೆಟ್ ಪ್ರತ್ಯೇಕವಾಗಿ ಮಾಡಿದರು. ಪ್ರತ್ಯೇಕವಾಗಿ ಕೃಷಿ ಇಲಾಖೆಗೆ ನೀಡತಕ್ಕಂಥ ರೀತಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದರು. ಎಷ್ಟು ವ್ಯಯ ಮಾಡಿದರು? ಎಷ್ಟರ ಮಟ್ಟಿಗೆ ಜನಗಳಿಗೆ ಸೇರಿತು ಎನ್ನುವ ಪ್ರಶ್ನೆ ಬರುತ್ತದೆ. ಒಟ್ಟು ಐದು ವರ್ಷಕ್ಕೆ 2008 ರಿಂದ 2013 ರವರೆಗೆ ನೀಡಿದಂತಹ ಹಣ 7,637 ಕೋಟಿ ರೂಪಾಯಿಗಳು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ 2013 ರಿಂದ 2018 ರವರೆಗೆ 19,561 ಕೋಟಿ ರೂಪಾಯಿಗಳನ್ನು ನೀಡಿದೆ. ಅಂದರೆ, ಇದರಿಂದ ಶೇಕಡ 256 ರಷ್ಟು ಹೆಚ್ಚಿಗೆ ಆಗಿದೆ. ಕೃಷಿಗೆ ಪ್ರತ್ಯೇಕವಾದಂತಹ ಬಜೆಟ್ ಮಾಡಿರುವುದು ಎಷ್ಟರಮಟ್ಟಿಗೆ ಒತ್ತನ್ನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮಾಡಿರುವ ಕೆಲಸ ಬಹಳ ಉತ್ತಮ ಕೆಲಸ ಆಗಿತ್ತು. ಆ ಕಾರ್ಯಕ್ರಮಗಳನ್ನು ಮುಂದುವರೆಸುತ್ತಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. Soil Health Card, ಅದನ್ನು ಮುಂದುವರೆಸುತ್ತಿದ್ದಾರೆ. ಅದು ಬಹಳ ಅವಶ್ಯಕತೆ ಇದೆ. ಅದರ ಒಂದು ಮಣ್ಣಿನ ಗುಣವನ್ನು ಅಥವಾ ಆರೋಗ್ಯವನ್ನು ಕಾಪಾಡತಕ್ಕಂಥದ್ದು. ಇಂತಹ ಕಾರ್ಯಕ್ರಮಗಳನ್ನು ಹೆಚ್ಚಿಗೆ ಮಾಡತಕ್ಕಂಥದ್ದು ಕೃಷಿಕರಿಗೆ ಅಥವಾ ತೋಟಗಾರಿಕೆಗೆ ಅವಶ್ಯಕತೆ ಇದೆ. ಕೇವಲ ಸಾಲ ಮನ್ನಾ ಮಾಡತಕ್ಕಂಥದ್ದಲ್ಲ. ಅವರ ಜೀವನ ಮತ್ತು ಅವರ ಪದ್ಧತಿಯ ಬದುಕನ್ನು ಉತ್ತಮಪಡಿಸುವ ರೀತಿಯಲ್ಲಿ, ಬದಲಾವಣೆ ತರುವ ರೀತಿಯಲ್ಲಿ ಅವರಿಗೆ ದಿಕ್ಕನ್ನು ತೋರಿಸುವಂಥದ್ದನ್ನು ಇವತ್ತು ಈ ಸರ್ಕಾರ ಮಾಡುತ್ತಿದೆ. ಅದರಲ್ಲಿ ಇಸ್ರೇಲ್ ಇರಬಹುದು ಅಥವಾ ಬೇರೆ ಬೇರೆ ಇರಬಹುದು, ಇದನ್ನೆಲ್ಲಾ ಮಾಡತಕ್ಕಂಥದ್ದರಲ್ಲಿ ನನಗನಿಸುವುದೇನೆಂದರೆ, sustainable, comprehensive, integrated agriculture and horticulture ಅನ್ನು ಮುಂದೆ ನಾವು ನಮ್ಮ ರಾಜ್ಯದಲ್ಲಿ ನೋಡುವ ಅವಕಾಶವಾಗುತ್ತದೆ. Energy sector ನಲ್ಲಿ ನಮ್ಮ ಸರ್ಕಾರ ಬಹಳ ಉತ್ತಮವಾದ ಕೆಲಸ ಮಾಡಿದೆ. ಹಿಂದೆ ಬಿ.ಜೆ.ಪಿ. ಸರ್ಕಾರ ಇತ್ತು. ಆಗ ಏನು ಮೆಗಾವ್ಯಾಟ್‌ನ್ನು ಕೊಟ್ಟಿತ್ತು, ಎಲ್ಲಾ sources ನಿಂದ 5361 ಮೆಗಾವ್ಯಾಟ್‌ನ್ನು add ಮಾಡಿದ್ದರು. ಇವತ್ತು non-conventional energy ಯನ್ನು ತರುವಂಥದ್ದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಒಟ್ಟು 9349 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ತರುವಂಥದ್ದರಲ್ಲಿ add ಆಗಿರುವಂಥದ್ದು. ಇದರಿಂದ ನಮ್ಮ ರಾಜ್ಯಕ್ಕೆ ಪ್ರಗತಿಪೂರ್ವಕವಾದಂತಹ ಕೈಗಾರಿಕೆಗಳು ಬರುವುದಕ್ಕೆ ಅವಕಾಶವಾಗಿದೆ. ನಮ್ಮ ರೈತಾಪಿಗಳಿಗೆ ಬೋರ್‌ವೆಲ್ ಇರಬಹುದು, ಇತರ ಚಟುವಟಿಕೆಗಳನ್ನು ನಡೆಸುವಂಥದ್ದಕ್ಕೆ ಶಕ್ತಿಯನ್ನು ನೀಡುವಂಥದ್ದಾಗಿದೆ. ಈ ರಾಜ್ಯದ ಒಟ್ಟಾರೆ ಆಗಿರುವಂತಹ ಪ್ರಗತಿಯ ಜೊತೆಗೆ ಬೇರೆ ದೇಶಗಳಿಂದ ನಮ್ಮ ರಾಜ್ಯಕ್ಕೆ ಬಂಡವಾಳ ಬರುವಂಥದ್ದಕ್ಕೆ ಈ ಯೋಜನೆಯನ್ನು ರೂಪಿಸಿರುವಂಥದ್ದು ನಮ್ಮ ರಾಜ್ಯ No.1 ಎಂದು ನನಗನಿಸುತ್ತಿದೆ. ಇವತ್ತು ಇಡೀ ದೇಶದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಬಹಳಷ್ಟು ಉತ್ತಮವಾದ ಮೂಲಭೂತ ಸೌಕರ್ಯಗಳನ್ನು ನೀಡತಕ್ಕಂಥದ್ದು ಮತ್ತು ಆಡಳಿತದಲ್ಲಿ ಪಾರದರ್ಶಕವಾಗಿ ಅವರು ಇಲ್ಲಿಗೆ ಬಂದು ಹಾಕತಕ್ಕಂಥ ಬಂಡವಾಳಕ್ಕೆ ಸರಿಯಾದಂತಹ ರೀತಿಯಲ್ಲಿ ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಡುವುದಕ್ಕೆ ರಾಜ್ಯ ಸರ್ಕಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಪ್ಪಿಕೊಳ್ಳುತ್ತಿರುವಂಥದ್ದು, ಇದನ್ನು ಹೆಚ್ಚಿಗೆ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಈ ಸರ್ಕಾರ ಇದಕ್ಕೂ ಒತ್ತನ್ನು ಕೊಟ್ಟಿರುವಂಥದ್ದು ನಾನು ಶ್ಲಾಘನೆ ಮಾಡುತ್ತಿದ್ದೇನೆ. ಒಟ್ಟಾರೆ ಈ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಕುಮಾರಸ್ವಾಮಿಯವರು ಏನು ಬಜೆಟ್‌ನ್ನು ಮಂಡಿಸಿದ್ದಾರೆ ಅದು ಉತ್ತಮ ಬಜೆಟ್ ಆಗಿದೆ. ಪ್ರಗತಿಪರವಾದ ಬಜೆಟ್ ಆಗಿದೆ, ಹಾಗೂ ಈ ರಾಜ್ಯದ ಪ್ರತಿಯೊಬ್ಬ ಜನತೆಗೂ ಸಲ್ಲುತ್ತಿದೆ.

ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳಲ್ಲಿ ಕೆಲವು ಜಾತಿಗಳನ್ನು ತೋರಿಸಿದ್ದಾರೆ. ಆಯವ್ಯಯ ಪುಸ್ತಕದ 39ನೇ ಪುಟದಲ್ಲಿ, ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್‌ನಲ್ಲಿ "ತಿಗಳರು" ಎನ್ನುವ ಜನಾಂಗಕ್ಕೆ 4 ಜನಾಂಗವನ್ನು ಸೇರಿಸಿ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, 'ತಿಗಳರು' ಎಂದರೆ ದ್ರೌಪದಿಯ ವಾರಸುದಾರರು. ಅವರ ಪುತ್ರರು. ಅವರಿಗೆ ದೊಡ್ಡ ಇತಿಹಾಸ ಇದೆ. ಹಾಗಾಗಿ ಅವರು ಹೆಮ್ಮೆಯಿಂದ ನಾನು ಆ ಸಮಾಜದಿಂದ ಬಂದಿದ್ದೇನೆಂದು ಹೇಳಲಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆ ಜನಾಂಗಕ್ಕೆ ಹಿಂದೆ ಏನು ಕೊಟ್ಟಿದ್ದಾರೆ ಅದನ್ನು ಮುಂದುವರೆಸುವುದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದರ ಜೊತೆಗೆ 'ತಿಗಳ' ಎನ್ನುವುದು ಮತ್ತೆ ಇಲ್ಲಿ repeat ಆಗಿದೆ. ಉತ್ತರ ಕರ್ನಾಟಕದಲ್ಲಿ 'ಮಾಳಿ ಸಮಾಜ' ಅಥವಾ 'ಮಾಳಗಾರ ಸಮಾಜ' ಎಂದು ಇದೆ. ಆ ಸಮಾಜವನ್ನು ಇಲ್ಲಿ ತೋರಿಸದಿರುವುದು ನೋವಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಆ ಜನಾಂಗ ಬಹಳ ಅವಶ್ಯಕತೆ ಇದೆ. ಮಾಳಿ ಮತ್ತು ಮಾಳಗಾರ ಸಮಾಜವನ್ನು ಎಲ್ಲಾ ಸರ್ಕಾರಗಳು ಕೈಬಿಟ್ಟಿವೆ. ಯಾವ ಸರ್ಕಾರವು ಅವರ ಬಗ್ಗೆ ಕಾಳಜಿ ವಹಿಸಿಲ್ಲ. ಇಲ್ಲಿ ಅವರ ಹೆಸರು ಬರಬೇಕಾಗಿತ್ತು. ಹಾಗಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಜಾಗದಲ್ಲಿ ಮಾಳಿ, ಮಾಳಗಾರ ಸಮಾಜ.....

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಬಹಳ ಮಹತ್ವವಾದ ಸಮಾಜ ಎಂದು ಮಾನ್ಯ ರಮೇಶ್‌ರವರು ಹೇಳಿದ್ದಾರೆ. ಅದನ್ನು ನಾನು ಬೆಂಬಲಿಸುತ್ತೇನೆ. ಉತ್ತರ ಕರ್ನಾಟಕದ ಬಹು ಮುಖ್ಯ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ಬಿಜಾಪುರ, ಈ ಜಿಲ್ಲೆಗಳಲ್ಲಿರತಕ್ಕಂಥ ಮಾಳಿ ಸಮಾಜ ಅತ್ಯಂತ ಕಾಯಕ ಸಮಾಜ. ಅವರು ಅದೇ ಒಂದು ಕಾಯಕದಿಂದ ಜೀವನ ನಡೆಸುವಂತಹ ಅತ್ಯಂತ ಹಿಂದುಳಿದ ವರ್ಗದ ಸಮಾಜ. ಆ ಸಮಾಜದ ಜನರಿಗೂ ಕೂಡ ಈ ಬಜೆಟ್‌ನಲ್ಲಿ ನ್ಯಾಯಯುತವಾಗಿ ಸಿಗಬೇಕಾದ ಹಕ್ಕು ಸಿಗಬೇಕೆನ್ನುವುದು ನನ್ನ ವೈಯಕ್ತಿಕ ಒತ್ತಾಯ ಮತ್ತು ಮಾನ್ಯ ರಮೇಶ್‌ರವರು ಹೇಳಿರುವುದನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅದು ಹಿಂದುಳಿದ ಜನಾಂಗ, ಅವರು ಬಹಳ ಶ್ರಮ ಜೀವಿಗಳು. ಬಹಳ ಕಷ್ಟ ಜೀವಿಗಳು, ಬಹಳ ನಿಷ್ಠೆಯಿಂದ ಇರತಕ್ಕಂಥ ಒಂದು ಜನಾಂಗ. ಆ ಜನಾಂಗವನ್ನು ಈ ಬಜೆಟ್‌ನಲ್ಲಿ ಸೇರಿಸಿ ಅವರಿಗೇನು ಹಣ ಕೊಡಬೇಕು ಅದನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಹಿಂದೆ ಮಾನ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಿದ್ದರಾಮಯ್ಯನವರು ಏನು ಬಜೆಟ್ ಮಂಡಿಸಿದ್ದರು ಅದರ ಜೊತೆಗೆ ಇದನ್ನು ಒಪ್ಪುತ್ತಾ, ಅದನ್ನು ಒಪ್ಪುತ್ತಾ ಈ ರಾಜ್ಯ ಈ ವರ್ಷದಲ್ಲಿ ಪ್ರಗತಿಪೂರಕವಾಗಿ ಉತ್ತಮ ಸ್ಥಿತಿಗೆ ಬರಲಿ ಎಂದು ನಾನು ಆಶಿಸುತ್ತೇನೆ, ನಮಸ್ಕಾರ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದ ನೂತನ ಸಮ್ಮಿಶ್ರ ಸರ್ಕಾರದ ಚೊಚ್ಚಲ ಬಜೆಟ್‌ನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾಗಿ ಇವತ್ತು ಮಂಡನೆ ಮಾಡಿದ್ದಾರೆ. ಈ ನಾಡಿನ ಸಮಸ್ತ ಜನರಿಗೆ ಹೊಸ ಭರವಸೆಯನ್ನು ತಂದು ಕೊಟ್ಟಿರುವಂತಹ ವಿಷಯವನ್ನು ನಾವೆಲ್ಲರೂ ಮೆಚ್ಚಲೇಬೇಕಾಗಿದೆ.

(ಮುಂದು)

**202/10–07–2018/ಬಿಕೆಪಿ–ಕೆಎಸ್/7–20**

**ಶ್ರೀ ಟಿ.ಎ.ಶರವಣ(ಮುಂದು. .)**

ಇವತ್ತು ಎಲ್ಲಾ ಜನಾಂಗದ, ಎಲ್ಲಾ ಸಮಾಜದ ಉತ್ತಮವಾದಂತಹ ಒಂದು ಬಜೆಟ್ ಕೊಟ್ಟಿದ್ದೇನೆ. ಬಹುಶಃ ಹಿಂದಿನ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕೊಟ್ಟಿರತಕ್ಕಂತಹ 2,09,181,000 ರೂಪಾಯಿಗಳ ಬಜೆಟ್ ಏನಿದೆ, ಅದರ ಮುಂದುವರಿದ ಭಾಗವಾಗಿ ಇವತ್ತು 2,18,488,00 ರೂಪಾಯಿಗಳು ಇರತಕ್ಕಂತಹ ಅಂದರೆ, 9,307 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಈ ಬಜೆಟ್‌ನಲ್ಲಿ ಮಂಡನೆ ಮಾಡಿದ್ದಾರೆ. ಬಹುಶಃ ಹಿಂದಿನ ಸರ್ಕಾರ ಈ ಒಂದು ಬಜೆಟ್‌ನಲ್ಲಿ ಎಲ್ಲಾ ಯೋಜನೆಗಳನ್ನೂ ಕೂಡ ಕರಾವಳಿ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಅಭಿವೃದ್ಧಿಗೆ ನೀಡಿದ ಅನುದಾನಗಳನ್ನು ಮುಂದುವರಿಸಿದ್ದು, ಯಾವುದೇ ಅನುದಾನಗಳನ್ನು ಕಡಿತಗೊಳಿಸಿರುವುದಿಲ್ಲ. ಹೀಗಾಗಿ, ಇದು ಸಮಗ್ರ ಕರ್ನಾಟಕದ ಮುಂಗಡ ಪತ್ರ ಎಂದು ಹೇಳಲೇ ಬೇಕಾಗುತ್ತದೆ.

ಈ ವಿಚಾರದಲ್ಲಿ ನಮ್ಮ ಬಿಜೆಪಿ ಸ್ನೇಹಿತರು ಮಾತನಾಡುತ್ತಾ, ಈ ಬಜೆಟ್ ಹಾಸನ, ಮಂಡ್ಯ, ಮೈಸೂರು ಬಜೆಟ್, ಅಣ್ಣ–ತಮ್ಮ ಬಜೆಟ್ ಎಂದು ಈ ರೀತಿಯಲ್ಲಿ ಏನೇನೋ ವಿಮರ್ಶೆ ಮಾಡುತ್ತಿದ್ದರು. ಈ ಬಗ್ಗೆ ನಾನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಕರಾವಳಿ ಜಿಲ್ಲೆಗಳಿಗೆ ಕಾರವಾರ ಬಂದರು ಅಭಿವೃದ್ಧಿಗೆ 75 ಕೋಟಿ ರೂಪಾಯಿಗಳನ್ನಿಟ್ಟಿರುವಂತಹದ್ದು, ಮಂಗಳೂರು ಅಭಿವೃದ್ಧಿಗೋಸ್ಕರ 50 ಕೋಟಿ ರೂಪಾಯಿಗಳನ್ನಿಟ್ಟಿರುವಂತಹದ್ದು, ಮೀನು ಅಭಿವೃದ್ಧಿಗೋಸ್ಕರ 150 ಕೋಟಿ ರೂಪಾಯಿಗಳನ್ನಿಟ್ಟಿರುವಂತಹದ್ದು ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ ಕೈಗಾರಿಕಾ clusters ತಂದು, ಅದಕ್ಕೋಸ್ಕರ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವಂತಹದನ್ನು ಕಾಣಬಹುದಾಗಿದೆ. ಆದರೆ, ಈ ಬಜೆಟ್ ಪುಸ್ತಕವನ್ನು ಮಾನ್ಯ ಸದಸ್ಯರುಗಳು ಪೂರ್ಣವಾಗಿ ಓದಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಾಗುತ್ತಿಲ್ಲ. ಜೊತೆಗೆ ನಮ್ಮ ಪಕ್ಷ 37 ಸ್ಥಾನಗಳನ್ನು ಗಳಿಸಿದ್ದರೂ ಸಹ ಹಾಸನ ಜಿಲ್ಲೆಗೆ 200 ಕೋಟಿ ರೂಪಾಯಿಗಳನ್ನು ಮಾತ್ರ ಮೀಸಲಿಟ್ಟಿದ್ದು, ಇನ್ನುಳಿದ ಹಣವನ್ನೆಲ್ಲಾ ಉತ್ತರ ಕರ್ನಾಟಕದ ಭಾಗಕ್ಕೆ ಮತ್ತು ಕರಾವಳಿ ಭಾಗಕ್ಕೆ, ವಿಶೇಷವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಳಜಿ ವಹಿಸಿ, ಎಲ್ಲಾ ಕಡೆಯಲ್ಲೂ ಸಹ ಸಮಗ್ರ ಕರ್ನಾಟಕದ ಅಭಿವೃದ್ಧಿಗೋಸ್ಕರ ಈ ಬಜೆಟ್ ಅನ್ನು ಕೊಟ್ಟಿರುವಂತಹದ್ದಾಗಿದೆ. 3–4 ಜಿಲ್ಲೆಗಳಿಗೆ ಮಾತ್ರ ಈ ಬಜೆಟ್ ಅನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟಿದ್ದೀರಿ ಎಂದು ತಾವು ಹೇಳುತ್ತಿದ್ದೀರಿ. ಯಾವುದೇ ಸರ್ಕಾರ, ಏನೇ ಮಾಡಿದರೂ ಕೂಡ ಅದನ್ನು ತಾಯಿ ಹೃದಯದಿಂದ ಕೆಲಸ ಮಾಡುತ್ತದೆ. ಎಲ್ಲಿಯೂ ಕೂಡ ಅಂದರೆ ಇಲ್ಲಿ ಹಳೆ ಮೈಸೂರು ಭಾಗ, ಮತ್ತೊಂದು, ಮಗದೊಂದು ಭಾಗ ಎನ್ನುವಂತಹ ಪ್ರಶ್ನೆ ಬರುವುದಿಲ್ಲ. ಏಕೆಂದರೆ, ಬಜೆಟ್ ಅನ್ನು ಕೊಡುವಾಗ ಅದು ಉತ್ತರ ಕರ್ನಾಟಕ ಇರಬಹುದು, ಮಧ್ಯೆ ಕರ್ನಾಟಕ ಇರಬಹುದು, ಕರಾವಳಿ ಕರ್ನಾಟಕ ಇರಬಹುದು ಈ ಎಲ್ಲಾ ಜಿಲ್ಲೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಈ ಬಜೆಟ್ ಅನ್ನು ಕೊಟ್ಟಿರುವಂತಹದ್ದಾಗಿದೆ. ಜೊತೆಗೆ ಬೆಳಗಾವಿಯೂ ಸಹ ಉತ್ತರ ಕರ್ನಾಟಕ ಪ್ರದೇಶದಲ್ಲಿ ಬರಲಿದ್ದು, ಅಲ್ಲಿನ Super Speciality Hospitals ಗೋಸ್ಕರ 100 ಕೋಟಿ ರೂಪಾಯಿಗಳನ್ನು ಇಟ್ಟಿರುವಂತಹದ್ದಾಗಿದೆ. ಉತ್ತರ ಕರ್ನಾಟಕದಲ್ಲಿ ಇಸ್ರೇಲ್ ಮಾದರಿಯ ನೀರಾವರಿಗೋಸ್ಕರ 500 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿರುವಂತಹದ್ದಾಗಿದೆ. ವಿಜಯಪುರ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೆ ತರಬೇಕೆಂದು ಉದ್ದೇಶವನ್ನಿಟ್ಟುಕೊಂಡಿರುವಂತಹದ್ದು, ಬೀದರ್ ಜಿಲ್ಲೆಗೆ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ತಯಾರಿಕೆ ಕಂಪನಿಗೋಸ್ಕರ 200 ಕೋಟಿ ರೂಪಾಯಿಗಳ ಬಂಡವಾಳವನ್ನಿಟ್ಟಿರುವುದು, ಕಲ್ಬುರ್ಗಿಯನ್ನು ಭಾರತದ ಸೋಲಾರ್ ಜಿಲ್ಲೆಯನ್ನಾಗಿ ಅಭಿವೃದ್ಧಿ ಮಾಡುವುದಕ್ಕೋಸ್ಕರ ಕನಸನು ಇಟ್ಟುಕೊಂಡಿರುವಂತಹದ್ದು, ಯಾದಗಿರಿಯಲ್ಲಿ ತೋಟಗಾರಿಕೆ ವಲಯದಿಂದ ನೀರಾವರಿಗೋಸ್ಕರ 150 ಕೋಟಿ ರೂಪಾಯಿಗಳನ್ನಿಟ್ಟಿರುವಂತಹದ್ದು, ಮತ್ತೆ ಗದಗನಲ್ಲಿ ಇಸ್ರೇಲ್ ಮಾದರಿಯ ಕೃಷಿಗಾಗಿ 150 ಕೋಟಿ ರೂಪಾಯಿಗಳನ್ನಿಟ್ಟಿರುವುದು, ಹಾವೇರಿಯಲ್ಲಿ ಇಸ್ರೇಲ್ ಮಾದರಿಯ ಕೃಷಿಗಾಗಿ 150 ಕೊಟಿ ರೂಪಾಯಿಗಳನ್ನಿಟ್ಟಿರುವುದು ಸೇರಿದಂತೆ ಅನೇಕ ಯೋಜನೆಗಳನ್ನು ಉತ್ತರ ಕರ್ನಾಟಕಕ್ಕೋಸ್ಕರ, ವಿಶೇಷವಾಗಿ ನಮ್ಮ ನೆಚ್ಚಿನ ಈ ರಾಜ್ಯದ ಮುಖ್ಯಮಂತ್ರಿಗಳು ಯಾವುದೇ ರೀತಿಯ ತಾರತಮ್ಯವಿಲ್ಲದೇ ಎಲ್ಲಾ ಜಿಲ್ಲೆಗಳಿಗೂ ಕೂಡ ಬಜೆಟ್ ಅನ್ನು ಕೊಟ್ಟಿರುವಂತಹದ್ದಾಗಿದೆ.

ಮತ್ತೆ, ಇವತ್ತು ಕರ್ನಾಟಕದಲ್ಲಿ 247 ಇಂದಿರಾ ಕ್ಯಾಂಟೀನ್‌ಗಳನ್ನು ನಡೆಸಲು 211 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಜೊತೆಗೆ ಕೆಲವು ಕಡೆ ಇಂದಿರಾ ಕ್ಯಾಂಟೀನ್‌ಗಳನ್ನು ಸರಿಯಾಗಿ ನಿಭಾಯಿಸುತ್ತಿಲ್ಲವೆಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಇನ್ನು, ಎಲ್ಲೆಲ್ಲಿ ಇಂದಿರಾ ಕ್ಯಾಂಟೀನ್‌ಗಳು ಇಲ್ಲವೋ ಅಂತಹ ಕಡೆಗಳಲ್ಲಿ ಅಪ್ಪಾಜಿ ಕ್ಯಾಂಟೀನ್‌ಗಳನ್ನು open ಮಾಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ನನ್ನ ಸ್ವಂತ ವೆಚ್ಚದಲ್ಲಿಯೇ ನಾನು ಎರಡು ಅಪ್ಪಾಜಿ ಕ್ಯಾಂಟೀನ್‌ಗಳನ್ನು ಮಾಡಿದ್ದೇನೆ. ಅವುಗಳನ್ನು ನಾನು ಯಶಸ್ವಿಯಾಗಿ ನಡೆಸುತ್ತಿದ್ದೇನೆ. 3,550 ಜನ ಪ್ರತಿದಿನ ತಿಂಡಿ-ಊಟಗಳನ್ನು ಮಾಡಿಕೊಂಡು ಹೋಗುತ್ತಾರೆ. ಊಟ ಮಾಡಿಕೊಂಡು ಎಲ್ಲರೂ ಖುಷಿಯಿಂದ ಹೋಗುತ್ತಾರೆ. ಏಕೆಂದರೆ, ಈ ಕರ್ನಾಟಕದ ಕೇಂದ್ರ ಸ್ಥಾನವಾದ ಬೆಂಗಳೂರಿಗೆ ಬೇರೆ ಬೇರೆ ಜಿಲ್ಲೆಗಳಿಂದ ಬರುತ್ತಾರೆ. ಅವರುಗಳು ವಿದ್ಯಾರ್ಥಿಗಳಿರಬಹುದು, ಕೂಲಿ ಕಾರ್ಮಿಕರಿರಬಹುದು, ಅವರುಗಳು ತಮ್ಮ ತಮ್ಮ ಕುಟುಂಬಗಳನ್ನು ತಮ್ಮ ಊರುಗಳಲ್ಲಿಯೇ ಬಿಟ್ಟು ಬೆಂಗಳೂರಿಗೆ ಬಂದು ವಿದ್ಯಾಬ್ಯಾಸ ಮಾಡುತ್ತಿರುತ್ತಾರೆ. ಅಂತಹವರು, ಸ್ಕೂಲ್ ಮತ್ತು ಕಾಲೇಜುಗಳಲ್ಲಿ fees ಕಟ್ಟಲಿಕ್ಕೆ ತೊಂದರೆಯಾಗುತ್ತದೆ. ಅಂತಹವರಿಗೆ ಊಟ ಮತ್ತು ತಿಂಡಿ ತಿನ್ನಲಿಕ್ಕೆ ಯಾವುದೇ ಅನುಕೂಲವಿಲ್ಲದನ್ನು ನೋಡಿ ಸಂಕಟವಾಗುತ್ತದೆ. ಅವರುಗಳಿಗೆ 5-10 ರೂಪಾಯಿಗಳಲ್ಲಿ ಒಳ್ಳೆಯ ತಿಂಡಿ-

ಊಟ ದೊರೆತರೆ ಅನುಕೂಲವಾಗುತ್ತದೆ. ನಿಜವಾಗಿಯೂ ಕೂಡ ಇದು ಮೆಚ್ಚುವಂತಹ ಕಾರ್ಯಕ್ರಮವಾಗಿದೆ. ಇಂದಿರಾ ಕ್ಯಾಂಟೀನ್ ಯಶಸ್ವಿಯಾಗಿ ನಡೆಯುತ್ತಿದೆ. ಜೊತೆಗೆ ಅಪ್ಪಾಜಿ ಕ್ಯಾಂಟೀನ್ ಎನ್ನುವಂತಹ ಒಂದು ಕ್ಯಾಂಟೀನ್ ತೆರೆಯಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇಂದಿರಾ ಕ್ಯಾಂಟೀನ್ ಎನ್ನುವುದು ಇಂದಿರಾಜೀಯವರ ಹೆಸರಿನಲ್ಲಿ ಇದೆ. ಅಪ್ಪಾಜಿ ಕ್ಯಾಂಟೀನ್ ಎನ್ನುವುದನ್ನೂ ಸಹ ಇಂದಿರಾ ಕ್ಯಾಂಟೀನ್ ಎನ್ನಬಹುದಲ್ಲವೇ? ಅಪ್ಪಾಜಿಗೂ ಇಂದಿರಾ ಕ್ಯಾಂಟೀನ್‌ಗೂ ಏನು ವ್ಯತ್ಯಾಸವೆನ್ನುವುದನ್ನು ದಯಮಾಡಿ ಹೇಳಿದರೆ ಉತ್ತಮವಾಗುತ್ತದೆ. ಅಪ್ಪಾಜಿ ಯಾರು? ಯಾವ ಹೆಸರಿನಲ್ಲಿ ಅಪ್ಪಾಜಿ ಕ್ಯಾಂಟೀನ್ ಪ್ರಾರಂಭ ಮಾಡಬೇಕೆನ್ನುವುದನ್ನಾದರೂ ಹೇಳಬೇಕಲ್ಲವೇ? ದಯಮಾಡಿ ಅದನ್ನಾದರೂ ಹೇಳಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, “ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್”

**ಶ್ರೀ ವಿ.ಎಸ್.ಉಗ್ರಪ್ಪ:–** ಹಾಗಾದರೂ ಹೇಳಿ.

**ಶ್ರೀ ಟಿ.ಎ.ಶರವಣ:–** “ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್” ಅವರ ಹೆಸರಿನಲ್ಲಿ ತೆರೆಯಬೇಕು. ಈ ರಾಜ್ಯದ ಕೆಂಪು ಕೋಟೆಯಲ್ಲಿ ಈ ಕನ್ನಡದ ಬಾವುಟವನ್ನು ಹಾರಿಸಿರತಕ್ಕಂತಹ ಮೊಟ್ಟ ಮೊದಲ ಪ್ರಧಾನ ಮಂತ್ರಿ ಯಾರಾದರೂ ಇದ್ದರೆ ಅವರು ಸನ್ಮಾನ್ಯ ಶ್ರೀ ದೇವೇಗೌಡರವರು, ಅವರ ಹೆಸರಿನಲ್ಲಿ ಅವರು ಹುಟ್ಟಿರುವಂತಹ ದಿನ, ಅವರ ಜನ್ಮದಿನದಂದು ಅದನ್ನು ಉದ್ಘಾಟನೆ ಮಾಡಿರುವಂತಹದ್ದಾಗಿದೆ. ಅವರು ರೈತರ ಪರವಾಗಿ ಹೋರಾಟ ಮಾಡುವಂತಹ ಧೀಮಂತ ನಾಯಕರಾಗಿದ್ದು, ಅವರ ಹೆಸರಿನಲ್ಲಿ ಹೆಚ್ಚಿನ ಕ್ಯಾಂಟೀನ್‌ಗಳನ್ನು ತೆರೆದರೆ ಯಾರು ಹಸಿವಿನಿಂದ ಬಳಲುತ್ತಿದ್ದಾರೆ, ಅವರಿಗೆ ಅನುಕೂಲವಾಗುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಹಸಿವಾದಾಗ ತಿನ್ನುವುದು ಪ್ರಕೃತಿ, ಹಸಿವಿಲ್ಲದಾಗ ತಿನ್ನುವುದು ವಿಕೃತಿ, ಹಸಿವಿದ್ದಾಗ ಇನ್ನೊಬ್ಬರಿಗೆ ಕೊಟ್ಟು ತಿನ್ನುತ್ತೇವಲ್ಲ, ಅದು ನಮ್ಮ ಕನ್ನಡಿಗರ ಸಂಸ್ಕೃತಿ ಎಂದು ಹೇಳಲಿಕ್ಕೆ ಬಯಸುತ್ತಿದ್ದೇನೆ. ಅಂತಹ ಒಂದು ಸಂಸ್ಕೃತಿಯನ್ನು, ಸಂಸ್ಕಾರವನ್ನು, ಪರಂಪರೆಯನ್ನು ಬೆಳೆಸುವಂತಹ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕೆಂದು ಈ ಸಂದರ್ಭದಲ್ಲಿ ಸಭಾಪತಿಯವರಾದ ತಮಗೆ ಹೇಳಲಿಕ್ಕೆ ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರುಗಳು ಇವತ್ತು ಏನೇ ಟೀಕೆ ಮಾಡಲಿ, ಅವರುಗಳು ಏನೇ ಲೇವಡಿ ಮಾಡಲಿ, ನಮಗೆ ಇವತ್ತು ಅದನ್ನು ಸ್ವೀಕಾರ ಮಾಡುವಂತಹ ಮನಸ್ಸು ಇದೆ. ನಾವು ಇವತ್ತು ಒಂದು ಕನಸನ್ನು ಕಟ್ಟಿಕೊಂಡು ಈ ಒಂದು ಮೈತ್ರಿ ಸರ್ಕಾರವನ್ನು ಮುಂದೆ ನಡೆಸಲಿಕ್ಕೆ ಏನು ಬಂದಿದ್ದೇವೆ, ಅದನ್ನು ಈ ರಾಜ್ಯದ ಜನರು ಒಪ್ಪಿಕೊಳ್ಳುವಂತಹ ಒಳ್ಳೆಯ ಮನಸ್ಸು ಇರುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಜೊತೆಗೆ ಇವತ್ತು ಬೆಂಗಳೂರು ನಗರಕ್ಕೆ, ಅದು ಹೆಣ್ಣು ಮಕ್ಕಳು ಇರಬಹುದು, ಹಿರಿಯ ನಾಗರಿಕರು ಇರಬಹುದು, ಸಂಧ್ಯಾ ಸುರಕ್ಷಾ ಯೋಜನೆಯಡಿ ಮಾಸಿಕ ವೇತನವಾಗಿ ಏನು 600 ರೂಪಾಯಿಗಳಿತ್ತು, ಅದನ್ನು 1000 ರೂಪಾಯಿಗಳನ್ನು ಮಾಡಲಾಗಿದೆ. ಹೆಣ್ಣು ಮಕ್ಕಳ ವಿಚಾರವಾಗಿ ಹೇಳುವುದಾದರೆ, ಅವರು ಬಾಣಂತಿಯರು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬಹುದು, ಗರ್ಭಿಣಿಯರು ಇರಬಹುದು, ಅವರುಗಳಿಗೆ 1000 ಸಾವಿರ ರೂಪಾಯಿಗಳನ್ನು 6 ತಿಂಗಳವರೆಗೆ ಕೊಡಬೇಕೆಂದು ಏನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ವಿಶೇಷವಾಗಿ ಬೆಂಗಳೂರಿಗೆ ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ 6 elevator corridor ಗಳನ್ನು ನಿರ್ಮಾಣ ಮಾಡಬೇಕು. 18,000 ಕೋಟಿ ರೂಪಾಯಿಗಳಲ್ಲಿ 95 ಕಿ.ಮೀ ದೂರದಲ್ಲಿ ಇದನ್ನು ಮಾಡಬೇಕೆಂದು ಹೇಳಿ, ಇವತ್ತು ಸರ್ಕಾರ ನಿರ್ಧಾರ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ B.M.T.C. (Bangalore Metropolitan Transport Corporation) ಗೆ ಸಹಾಯಧನವೆಂದು 100 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದೆ. ಮತ್ತೆ ಪೀಣ್ಯದಲ್ಲಿ ತ್ಯಾಜ್ಯ ಶುದ್ಧೀಕರಣ ಘಟಕವನ್ನು ನಿರ್ಮಾಣ ಮಾಡಬೇಕೆನ್ನುವ ಉದ್ದೇಶ ಇದೆ. ಜೊತೆಗೆ ಇವತ್ತು ರಾಜ್ಯಧಾನಿ ಪ್ರಾಧಿಕಾರವನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅದು B.M.T.C. ಇರಬಹುದು, B.M.R.C.L. (Bangalore Metro Rail Corporation Limited) ಇರಬಹುದು, B.D.A. (Bangalore Development Authority) ಇರಬಹುದು, ಇವುಗಳನ್ನು ಒಂದೇ ಸೂರಿನಡಿ High Power Committee ರಚನೆ ಮಾಡಿ, ಆ ಒಂದು ವ್ಯಾಪ್ತಿಯಲ್ಲಿ ಎಲ್ಲಾ ಇಲಾಖೆಗಳನ್ನು ತರಬೇಕೆಂದು ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದಾರೆ, ಅದು ಸಹ ಒಂದು ಒಳ್ಳೆಯ ಕಾರ್ಯಕ್ರಮವೆಂದು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು, ಬೆಂಗಳೂರಿನಲ್ಲಿ ಬಡವರಿಗೋಸ್ಕರ ಒಂದು ಲಕ್ಷ ಮನೆಗಳನ್ನು, ಬಹುಮಹಡಿ ಕಟ್ಟಡಗಳನ್ನು ನಿರ್ಮಾಣ ಮಾಡುವುದಾಗಿ ಏನು ತೀರ್ಮಾನ ಮಾಡಿದ್ದಾರೆ, ಅದು ಸಹ ಸ್ವಾಗತಕರವೆಂದು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಎಲ್ಲಿಯೋ ಒಂದು ಕಡೆ ವಿರೋಧ ಪಕ್ಷದ ನಾಯಕರುಗಳು ವಿಧಾನಸಭೆಯಲ್ಲಿ ಮಾತನಾಡಿರುವುದನ್ನು ಗಮನಿಸಿದ್ದೇನೆ. ರಾಜಕಾರಣಿಗಳು ಯಾವ ಒಂದು ಮಟ್ಟಕ್ಕೆ ಹೋಗಿದ್ದಾರೆ ಎನ್ನುವುದನ್ನು ಜನರು ನೋಡುತ್ತಿದ್ದಾರೆ. ಇವತ್ತು ನಾವು, ಏನು ಮಾಡುತ್ತಿದ್ದೇವೆ, ಏತಕ್ಕೋಸ್ಕರ ನಾವು ಇಲ್ಲಿಗೆ ಬರುತ್ತಿದ್ದೇವೆ, ಈ ರಾಜ್ಯದ ಆರೂವರೆ ಕೋಟಿ ಜನಸಂಖ್ಯೆಯ ಜ್ವಲಂತ ಸಮಸ್ಯೆಗಳನ್ನು ನಾವು ಚರ್ಚೆ ಮಾಡಿ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಮ್ಮನ್ನು ಇಲ್ಲಿಗೆ ಚುನಾಯಿಸಿ ಕಳುಹಿಸಿರುವುದಾಗಿದೆ. ಅದನ್ನು ಬಿಟ್ಟು ವೈಯಕ್ತಿಕ ವಿಚಾರಗಳನ್ನು ತೆಗೆದುಕೊಂಡು ನಮ್ಮ ಈ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡುತ್ತಿದ್ದೇವೆ. ಜನರು ನಮ್ಮನ್ನು ಥೂ.. ಚೀ.. ಎನ್ನುವಂತಹ ಪದವನ್ನು ಬಳಕೆ ಮಾಡುವಂತಹ ವ್ಯವಸ್ಥೆಗೆ ನಾವೆಲ್ಲರೂ ಒಳಗಾಗುತ್ತಿದ್ದೇವೆ. ಆದ್ದರಿಂದ, ಈ ವೈಯಕ್ತಿಕ ವಿಚಾರಗಳನ್ನು ಬಿಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಒಂದು ರೂಪಾಯಿ ಹೈದಿನೈದು ಪೈಸೆ, ಇಪ್ಪತ್ತು ಪೈಸೆ ಜಾಸ್ತಿ ಮಾಡಿದ್ದಾರೆ.

ಮುಂದು. . .

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(203) 10.07.2018 07.30 ಎಸ್‌ವಿ–ಕೆಎಸ್**

**ಶ್ರೀ ಟಿ.ಎ.ಶರವಣ (ಮುಂದು):–** ಇದಕ್ಕೆ ವಿರೋಧಪಕ್ಷದವರು ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಹೆಚ್ಚು ಮಾಡಿ ರೈತರ ಬೆಳೆ ಸಾಲ ಮನ್ನಾ ಮಾಡಿದ್ದಾರೆಂದು ಮಾಧ್ಯಮಗಳಲ್ಲಿ ವರದಿ ಮಾಡಿರುವುದನ್ನು ನಾನು ನೋಡಿದ್ದೇನೆ. ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಅತಿ ಕಡಿಮೆ ಪೆಟ್ರೋಲ್ ಮತ್ತು ಡೀಸೆಲ್ ದರವಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಿಜೆಪಿ ಸಮ್ಮಿಶ್ರ ಸರ್ಕಾರವೇ ಮಹಾರಾಷ್ಟ್ರದಲ್ಲಿದೆ. ಅಲ್ಲಿ ಒಂದು ಲೀಟರ್ ಪೆಟ್ರೋಲ್‌ಗೆ ರೂ.83.19, ಡೀಸೆಲ್ ದರ ಪ್ರತಿ ಲೀಟರ್‌ಗೆ ರೂ.71.83. ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರವಿದ್ದು, ಅಲ್ಲಿ ಒಂದು ಲೀಟರ್ ಪೆಟ್ರೋಲ್ ರೂ.76 ದರವಿದ್ದು, ಒಂದು ಲೀಟರ್ ಡೀಸೆಲ್ ದರ ರೂ.67.80 ಇದೆ. ಹೈದರಾಬಾದ್‌ನಲ್ಲಿ ಒಂದು ಲೀಟರ್ ಪೆಟ್ರೋಲ್ ದರ ರೂ.80.20 ಹಾಗೂ ಡೀಸೆಲ್ ದರ ರೂ.73.58 ಇದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಪೆಟ್ರೋಲ್ ಒಂದು ಲೀಟರ್‌ಗೆ ರೂ.74.70 ಇದೆ. ಡೀಸೆಲ್ ದರ ಒಂದು ಲೀಟರ್‌ಗೆ ರೂ.68 ಇದೆ ಎಂಬುದನ್ನು ಗಮನಿಸಬೇಕು. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಪೆಟ್ರೋಲ್ ಮತ್ತು ಡೀಸೆಲ್ ಅತ್ಯಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿರುವುದನ್ನು ವಿರೋಧಪಕ್ಷದವರು appreciate ಮಾಡಬೇಕು. ಅದನ್ನು ಬಿಟ್ಟು ವಿರೋಧ ಮಾಡುವುದು ಸರಿಯಲ್ಲ.

GST (Goods and Service Tax) ವಿಚಾರಕ್ಕೆ ಬಂದರೆ, GST ಜಾರಿ ಮಾಡುವುದಕ್ಕೆ ಮೊದಲು ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಚರ್ಚೆಯಾಯಿತು. ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ ಕೂಡ ಅವರು ಜಾರಿ ಮಾಡಲಿಕ್ಕೆ ಹೊರಟಿದ್ದರು. ಅವರಿಗೆ ಸಹಕಾರ ಸಿಗದ ಕಾರಣ ಅದನ್ನು pending ಇಡಲಾಗಿತ್ತು. ಈಗಿನ ಕೇಂದ್ರ ಸರ್ಕಾರ ಒಂದು ದೇಶ–ಒಂದು ತೆರಿಗೆ (One nation-One tax), ಏಕರೂಪ ತೆರಿಗೆಯೆಂದು GST ಯನ್ನು ಜಾರಿಗೊಳಿಸಿದರು. ಹಾಗೆಂದು GST ಯಲ್ಲಿ ಒಂದೇ ತೆರಿಗೆ ಇದೆಯೇ? ನಾನು ಬಿಸಿನೆಸ್‌ನ ವಹಿವಾಟಿನಲ್ಲಿಯೂ ಸಹ ನೋಡುತ್ತಿದ್ದೇನೆ. ಹಿಂದೆ ಇದ್ದಂತಹ ಇನ್ನೂ ಮೂರ್ನಾಲ್ಕು ತೆರಿಗೆಗಳು ಈಗಲೂ ಮುಂದುವರೆದಿವೆ. ಅದು Professional Tax (PT), Income Tax (IT) ಹಾಗೂ VAT (Value Added Tax) ಬದಲಿಗೆ GST ಇರಬಹುದು. ಅವುಗಳನ್ನು ಈಗಲೂ ಕಟ್ಟುತ್ತಿದ್ದೇವೆ. ಕೇಂದ್ರಕ್ಕೆ ಅತಿ ಹೆಚ್ಚು ತೆರಿಗೆ ಹೋಗುತ್ತಿರುವುದು ಕರ್ನಾಟಕ ರಾಜ್ಯದಿಂದ ಎಂದರೆ ತಪ್ಪಾಗಲಾರದು. ನಮ್ಮಲ್ಲಿ, Trading and Retail Sector ಗಳು ಜಾಸ್ತಿ ಇದೆ. ಆದರೆ ಕೇಂದ್ರದಿಂದ ನಮಗೆ ಏನೂ ವಾಪಸ್ ಬರುತ್ತಿಲ್ಲ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ರೈತರ ಸಾಲ ಮನ್ನಾ ಮಾಡುತ್ತಿದ್ದು, ಅದಕ್ಕೆ ಕೇಂದ್ರದಿಂದ ಏನಾದರೂ ಸಹಕಾರ ಕೊಡಿ ಎಂದು ಕೇಳಿಕೊಂಡರು. ಕೇಂದ್ರ ಸರ್ಕಾರವು ನಮ್ಮ ಮೇಲೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕು. ಕೇಂದ್ರ ಸರ್ಕಾರ ನಮ್ಮ ರಾಜ್ಯದಿಂದ ಹೆಚ್ಚು ತೆರಿಗೆಯನ್ನು ಪಡೆದುಕೊಳ್ಳುವುದು ಮಾತ್ರವಲ್ಲ; ಕೇಂದ್ರ ಸರ್ಕಾರದಿಂದಲೂ ನಮ್ಮ ರಾಜ್ಯಕ್ಕೆ ಹೆಚ್ಚು ಅನುದಾನವನ್ನು ಕೊಡುವಂತಹ ವ್ಯವಸ್ಥೆ ಆಗಬೇಕು.

ಮಹಾತ್ಮ ಗಾಂಧಿಯವರು ಈ ದೇಶಕ್ಕೆ 70 ವರ್ಷಗಳ ಹಿಂದೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು. ಈ ದೇಶದಲ್ಲಿ ಬ್ರಾಹ್ಮಣ ಸಮಾಜ, ಆರ್ಯವೈಶ್ಯ ಸಮಾಜ ಎಂದು ಇದೆ. ಎಷ್ಟೋ ಸರ್ಕಾರಗಳು ಬಂದು ಹೋಗಿವೆ. ಎಷ್ಟೋ ಪಕ್ಷಗಳು ಬಂದು ಅಧಿಕಾರವನ್ನು ಅನುಭವಿಸಿ ಹೋಗಿವೆ. ಯಾವ ಸರ್ಕಾರವೂ ಈ ಜಾತಿಯವರಿಗೆ ಅನುಕೂಲ ಮಾಡಿರುವುದಿಲ್ಲ. ಆದರೆ ಈ ಸರ್ಕಾರ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿ ಅದಕ್ಕಾಗಿ ರೂ.25 ಕೋಟಿಗಳನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಂತಹ ಮಹಾತ್ಮ ಗಾಂಧಿಯವರು ವೈಶ್ಯ ಸಮಾಜದವರು. ಆರ್ಯವೈಶ್ಯ ಸಮಾಜದ ಅಭಿವೃದ್ಧಿಗಾಗಿ ಮಾನ್ಯ ಮುಖ್ಯಮಂತ್ರಿಯವರು ರೂ.10 ಕೋಟಿಗಳನ್ನು ಆಯವ್ಯಯದಲ್ಲಿ ನಿಗದಿ ಪಡಿಸಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ರಾಜ್ಯದ ಸಮ್ಮಿಶ್ರ ಸರ್ಕಾರ ರೈತರ ಸಾಲ ಮನ್ನಾ ವಿಷಯದಲ್ಲಿ ತೆಗೆದುಕೊಂಡಿರುವ ನಿಲುವು ದೇಶದಲ್ಲಿಯೇ ಐತಿಹಾಸಿಕವಾದುದು ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನುಡಿದಂತೆ ನಡೆಯುತ್ತಿದ್ದಾರೆ. ಅವರಿಗೆ commitment ಇದೆ. ಚುನಾವಣೆ ಮುಂಚಿತವಾಗಿ "ನಮಗೆ ಪೂರ್ಣ ಬಹುಮತದ ಸರ್ಕಾರ ಕೊಡಿ, ರೈತರ ಸಂಪೂರ್ಣ ಸಾಲ ಮನ್ನಾ ಮಾಡುತ್ತೇವೆ" ಎಂದು ಅವರು ಹೇಳಿದ್ದರು. ಆದರೆ ಜನ ನಮ್ಮನ್ನು ತಿರಸ್ಕಾರ ಮಾಡಿದ್ದಾರೆ. ತಿರಸ್ಕಾರ ಮಾಡಿದ್ದರೂ ಕೂಡ ರೂ.34,000 ಕೋಟಿ ರೈತರ ಬೆಳೆ ಸಾಲವನ್ನು ಮನ್ನಾ ಮಾರುವುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ವಿರೋಧ ಮಾಡುವುದರಿಂದ ಜನ ಮೆಚ್ಚುತ್ತಾರೆಂದು ವಿರೋಧಪಕ್ಷದವರು ಭಾವಿಸಿದ್ದಾರೆ.

**ಸಭಾಪತಿಯವರು:–** ಮಾನ್ಯ ಶರವಣ ಅವರೆ, ವಿರೋಧಪಕ್ಷದವರು ಯಾರೂ ಇಲ್ಲ. ಈಗ ಇನ್ನಷ್ಟು ಜಾಸ್ತಿ ಮಾತನಾಡಿ.

**(ಸದನದಲ್ಲಿ ನಗುವಿನ ಅಲೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಬದುಕಿದ್ದಾಗ ನಮಸ್ಕಾರ ಮಾಡದ ಜನ ಸತ್ತಾಗ ಶವದ ಪಾದವನ್ನು ಮುಟ್ಟಿ ನಮಸ್ಕಾರ ಮಾಡುತ್ತಾರೆ. ಅಂತಹ ಪ್ರವೃತ್ತಿಯನ್ನು ನಾವು ಬಿಡಬೇಕು. ಏಕೆಂದರೆ ನಾವೇನು ಮಾಡುತ್ತೇವೆಂದು ಜನ ನಮ್ಮನ್ನು ನೋಡುತ್ತಿದ್ದಾರೆ. ನಾವೇನು ಮಾಡುತ್ತಿದ್ದೇವೆ? ಮಾನ್ಯ ಹೆಚ್.ಡಿ.ದೇವೇಗೌಡರು ಮತ್ತು ಅವರ ಮಕ್ಕಳಿಗೆ ಮೋಸ ಮಾಡುವುದು ಅವರ ರಕ್ತದಲ್ಲಿಯೇ ಬಂದಿದೆ ಎಂದು ವಿಧಾನಸಭೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅವರು ಕೆಜೆಪಿಗೆ ಹೋದಾಗ ಬಿಜೆಪಿ ಬಗ್ಗೆ "ಯಾವುದೇ ಕಾರಣಕ್ಕೂ ಬಿಜೆಪಿಯನ್ನು ಸೇರುವುದಿಲ್ಲ. ಹಾಗೇನಾದರೂ ಹೋದರೆ ರಾಜಕೀಯ ನಿವೃತ್ತಿಯನ್ನು ಹೊಂದುತ್ತೇನೆ" ಎಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಹೇಳಿದ್ದರು. ಇಂತಹ ಬಹಳಷ್ಟು ಉದಾಹರಣೆಗಳನ್ನು ನಾನು ಕೊಡಬಲ್ಲೆ. ನಾನು ಹಿರಿಯ, ಅನುಭವಿ ರಾಜಕಾರಣಿ ಅಲ್ಲದಿದ್ದರೂ ಯುವ ರಾಜಕಾರಣಿ. ಇಂತಹ ಪ್ರಬುದ್ಧ ಭಾಷಣಗಳನ್ನು ಕೇಳಿ ನನಗೆ ಬಹಳ ಸಂತೋಷವಾಗುತ್ತಿದೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅಮೃತ ಮಂಥನವಾದಾಗ ವಿಷವೂ ಬಂದಿತು. ಅಮೃತವೂ ಬಂದಿತು. ಕೆಜೆಪಿ ಆಗದಿದ್ದರೆ ಕಾಂಗ್ರೆಸ್ 122 ಸ್ಥಾನ ಗೆಲ್ಲುತ್ತಿರಲಿಲ್ಲ. ಅಂದು 122 ಬರದಿದ್ದರೆ ಇಂದು 79 ಬರುತ್ತಿರಲಿಲ್ಲ. 79 ಬರದಿದ್ದರೆ 37ಕ್ಕೆ jackpot ಹೊಡೆಯುತ್ತಿರಲಿಲ್ಲ. ಅದನ್ನೂ ಗಮನಿಸಬೇಕು. ಮತ್ತೆ ಆ ತಪ್ಪನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅವರು ಕನಸು ಕಾಣುವುದು ಬೇಡ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಮ್ಮನ್ನು ವಚನಭ್ರಷ್ಟರು ಎಂದು ಹೇಳುತ್ತಾ ಮಾನ್ಯ ಯಡಿಯೂರಪ್ಪನವರು ರಾಜ್ಯವೆಲ್ಲಾ ತಿರುಗಿದರು. ರಾಜ್ಯದ ಹೆಣ್ಣುಮಕ್ಕಳಿಗೆ ದೇವರಿಗೆ ಒಂದು ಹೂ ಇಟ್ಟು ಬಿಜೆಪಿ ಅಧಿಕಾರಕ್ಕೆ ಬರುವಂತೆ ಪ್ರಾರ್ಥಿಸಿ ಎಂದು ಹೇಳುತ್ತಿದ್ದರು. ಜನ ಅವರನ್ನು ಆಶೀರ್ವದಿಸಿ 2008 ರಿಂದ 2013ರವರೆವಿಗೂ ಅಧಿಕಾರವನ್ನು ನೀಡಿದ್ದರು. ಅವರು ಆಡಿರತಕ್ಕಂತಹ ಆಟಗಳನ್ನು ರಾಜ್ಯದ ಜನರು ನೋಡಿದ್ದಾರೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಅಧಿಕಾರದಲ್ಲಿದ್ದಂತಹ ಮುಖ್ಯಮಂತ್ರಿಯೊಬ್ಬರು ಜೈಲಿಗೆ ಹೋಗಿಬಂದುದನ್ನು ನನ್ನ ಬಾಯಿಯಿಂದ ಕೇಳಬೇಕೆ? ಮೂರು ಮುಖ್ಯಮಂತ್ರಿಗಳನ್ನು ಕೊಟ್ಟಿರುವಂತಹ ಕೀರ್ತಿ ಆ ಪಕ್ಷಕ್ಕಿದೆ. 37 ಸ್ಥಾನಗಳ ಬಗ್ಗೆ ಮಾತನಾಡಲು ಬರುತ್ತಾರೆ. ಕೇವಲ ಒಂದು vote ನಿಂದಾಗಿ ಕೇಂದ್ರದಲ್ಲಿ ಮಾನ್ಯ ವಾಜಪೇಯಿಯವರ ಸರ್ಕಾರ ಬಿದ್ದುಹೋಗಿದುದರ ಬಗ್ಗೆ ಅವರಿಗೆ ನೆನಪಿಲ್ಲವೆ? ನಮ್ಮನ್ನು ವಚನಭ್ರಷ್ಟರು ಎಂದು ಹೇಳಿ ಅವರು ಅಧಿಕಾರಕ್ಕೆ ಬಂದರು. ಐದು ವರ್ಷ ಅಧಿಕಾರ ಮಾಡಿದರು. ಜನ ಅವರಿಗೆ ಆಶೀರ್ವಾದ ಮಾಡಿ ಕಳಿಸಿದುದಕ್ಕೆ ಅವರ ಕೈಯಲ್ಲಿ ಸಾಲಮನ್ನಾ ಮಾಡುವುದಕ್ಕೆ ಸಾಧ್ಯವಾಯಿತೇ? ರಕ್ತದಲ್ಲಿ ಬರೆದುಕೊಡುತ್ತೇನೆಂದು ಹೇಳಿದ್ದರು. ಎಂತೆಂಥ ಮಾತುಗಳನ್ನಾಡಿದ್ದಾರೆ. ನಾನು ಸದನದ ನಡವಳಿಗಳನ್ನು ತೆಗೆದುಕೊಂಡು ಮಾನ್ಯ ಯಡಿಯೂರಪ್ಪನವರು ಏನೇನು ಭಾಷಣ ಮಾಡಿದ್ದಾರೆಂದು ಓದುತ್ತಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ಕಣ್ಣಮುಂದೆ ಇರತಕ್ಕಂತಹ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡೋಣ. ಚುನಾವಣೆ ಸಂದರ್ಭದಲ್ಲಿ ರಾಜಕಾರಣ ಮಾಡೋಣ. ಯಾವಾಗಲೂ ಬೇಕಿಲ್ಲ. ರಾಜಕೀಯ ಬೇಕು, ಇಲ್ಲವೆಂದು ಹೇಳುವುದಿಲ್ಲ. ಒಂದು ವಿರೋಧಪಕ್ಷವಾಗಿ ನಾವು ಮಾಡಿರುವ ಕಾರ್ಯಕ್ರಮಗಳಿಗೆ ಅಭಿನಂದನೆಯನ್ನು ಸಲ್ಲಿಸಬೇಕು.

**(...ಮುಂದು)**

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(204) 10–07–2018 ಕೆಜಿ:ಜಿಆರ್ 7–40**

**ಶ್ರೀ ಟಿ.ಎ.ಶರವಣ (ಮುಂದು.):–** ಇಂತಹ ಪರಿಸ್ಥಿತಿಯಲ್ಲಿಯೂ ಸಹ ಮಾನ್ಯ ಮುಖ್ಯಮಂತ್ರಿಯವರು ಸಾಲ ಮನ್ನಾ ಮಾಡಿದ್ದಾರೆಂದರೆ, ಅದಕ್ಕಾಗಿ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. **xxxx**

(ಗೊಂದಲ)

**ಡಾ॥ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶರವಣರವರು ಹೇಳಿದಂತಹ ಮಾತುಗಳಿಗೆ ನಾನು ಆಕ್ಷೇಪಣೆ ವ್ಯಕ್ತಪಡಿಸಲು ಇಚ್ಛಿಸುತ್ತಿದೇನೆ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು Whatsapp ನಲ್ಲಿ ಬಂದಿರುವುದನ್ನು ಈ ಸದನದಲ್ಲಿ ಏಕೆ ಹೇಳುತ್ತಿದ್ದೇನೆ ಎಂದರೆ,..,

(ಗೊಂದಲ)

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ರಾಜಕಾರಣಿಗಳು ಆಗುವಂತಹವರು ವಿದ್ಯಾರ್ಹತೆ ಇಲ್ಲದವರು ಎಂದು ಭಾವಿಸಿ ಮಾನ್ಯ ಶರವಣರವರು ಮಾತನಾಡುತ್ತಿದ್ದಾರೆ.,

(ಗೊಂದಲ)

**ಸಭಾಪತಿಯವರು:–** ಮಾನ್ಯ ಶರವಣರವರೇ, ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ, ಅದನ್ನು ಮೊದಲು ಕೇಳಿ. ಮಾನ್ಯ ಭೋಜೇಗೌಡರೇ ತಾವೂ ಕುಳಿತುಕೊಳ್ಳಿ.

**ಶ್ರೀ ಬಂಡೆಪ್ಪ ಕಾಶಂಪುರ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು Whatsapp ನಲ್ಲಿ ಬಂದಿದೆ ಎಂದು ಹೇಳಿ ಅದನ್ನು ಯಾವುದಕ್ಕೊ quote ಮಾಡಿ M.B.A., ಎಂದರು. It is a dignified course. ಎಂ.ಬಿ.ಎ., ಶಿಕ್ಷಣ ಪಡೆದು ಹುದ್ದೆಗೆ ಬಂದವರು ಇಡೀ ಒಂದು ಸಂಸ್ಥೆಯನ್ನು ಅಥವಾ Corporate bodies ಅನ್ನು ನಿಯಂತ್ರಣ ಮಾಡುತ್ತಾರೆ. ರಾಜಕಾರಣಿಗಳಲ್ಲಿ ಎಷ್ಟೋ ಜನ Engineers, ವೈದ್ಯರು, ವಕೀಲರು ಇದ್ದಾರೆ. ಮಾನ್ಯ ಸಭಾಪತಿಯವರು ಸಹ ಶಿಕ್ಷಕ ಹುದ್ದೆಯಿಂದ ಇಲ್ಲಿಗೆ ಬಂದಂತಹವರು. Whatsapp ನಲ್ಲಿ ಬಂದಿದೆ ಎಂದು ಹೇಳಿ ಅದನ್ನು ಯಾವುದಕ್ಕೊ quote ಮಾಡಿ ಇಂತಹ ದರ್ಜೆಯಲ್ಲಿ ಉತ್ತೀರ್ಣರಾಗಿರುವಂತಹವರು ಇಂತಹ ಹುದ್ದೆಗಳಿಗೆ ಹೋಗುತ್ತಾರೆ ಎಂದು ಹೇಳುವುದು ಸರಿಯಲ್ಲ.

**(xxxxx ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಸದರಿ ವಾಕ್ಯಗಳನ್ನು ಕಡತದಿಂದ ತೆಗೆಯಲಾಗಿದೆ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ಕಾಲದಲ್ಲಿ ರಾಜಕಾರಣಿಗಳ ಮಕ್ಕಳೇ ರಾಜಕಾರಣಕ್ಕೆ ಬರುವಂತಹ ಪರಿಸ್ಥಿತಿ ಇತ್ತು. ಇವತ್ತು ಪತ್ರಕರ್ತರಾದವರು, ತರಕಾರಿ ಮಾರಾಟ ಮಾಡುವವರು ಸಹ ಅರ್ಹತೆಯ ಆಧಾರದ ಮೇಲೆ, ಸೇವೆಯ ಆಧಾರದ ಮೇಲೆ ಮತ್ತು ಮೆರಿಟ್‌ನ ಆಧಾರದ ಮೇಲೆ ಬಂದಂತಹವರು ಸಹ ಸಂಸದೀಯ ವ್ಯವಸ್ಥೆಗೆ ಕೊಡುಗೆಯನ್ನು ಕೊಡುತ್ತಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ನನಗೆ ಬೇರೆಯವರ ಬಗ್ಗೆ ಗೊತ್ತಿಲ್ಲ. ನಾನು ಒಬ್ಬ Journalist,. ನಾನು ಒಬ್ಬ Advocate, ನಾನು ಒಬ್ಬ Politician. ನಾನು ಒಬ್ಬ ಸಮಾಜ ಚಿಂತಕಿ. ಮಾನ್ಯ ಶರವಣರವರು, ಮಾನ್ಯ ಸಚಿವರು ಹೇಳಿದಂತೆ, ಒಳ್ಳೆಯ ವಿಷಯವನ್ನು quote ಮಾಡಲಿ. Politics is the last resort of scoundrels ಎಂದು ಯಾರೋ ಹೇಳಿದ್ದನ್ನು ಉಲ್ಲೇಖ ಮಾಡುವುದನ್ನು ಅಲ್ಲಗಳೆಯುವಂತಹ ಈ ಸಂದರ್ಭದಲ್ಲಿ ಅತ್ಯುತ್ತಮ ವ್ಯಕ್ತಿಗಳು ಈ ರಾಜಕಾರಣಕ್ಕೆ ಬರಬೇಕು. ನಾವು ಕೆಟ್ಟಿರುವಂತಹ ಈ ವ್ಯವಸ್ಥೆಯನ್ನು ಸರಿಮಾಡುವಂತಹ ಆಶ್ರಯವನ್ನು ಹೊಂದಿರುವುದರಿಂದಾಗಿ, ಅದರಲ್ಲೂ ವಿಶೇಷವಾಗಿ ಮೇಲ್ಮನೆಯ ವಿಚಾರದಲ್ಲಿ ಬಹುಶಃ ಇದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಈ ಮೇಲ್ಮನೆಗೆ ಸಾಧಕರನ್ನು ಮತ್ತು ಸಮಾಜದಲ್ಲಿನ ಎಲ್ಲ ರಂಗಗಳ ಪ್ರತಿಧ್ವನಿಯಾಗುವಂತಹವರನ್ನು ಕಳುಹಿಸುವುದರ ಬಗ್ಗೆ ಮತ್ತೊಮ್ಮೆ ಎಲ್ಲಾ ರಾಜಕೀಯ ಪಕ್ಷಗಳ ಜೊತೆಗೆ.,

(ಗೊಂದಲ)

**ಶ್ರೀ ಬಂಡೆಪ್ಪ ಖಾಶೆಂಪೂರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಮೇಲ್ಮನೆಗೆ ಶಿಕ್ಷಕರ ಮತ್ತು ಪದವೀಧರರ quota ಇದೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, exactly. ಮಾನ್ಯ ಬಂಡೆಪ್ಪ ಕಾಶಂಪುರರವರಿಗೆ ವಂದನೆಗಳನ್ನು ಹೇಳುತ್ತೇನೆ. ಎಲ್ಲೋ ಒಂದು ಕಡೆ ಚರ್ಚೆ deviate ಆಗುತ್ತಿದೆ. ಬಹುಶಃ ಮಾನ್ಯ ಸದಸ್ಯರಾದ ಶರವಣರವರು ಮಾಡಿದ ಒಂದು ಸಣ್ಣ ತಪ್ಪಿನಿಂದ ತಾವು ಒಂದು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಶರವಣರವರೇ, ದಯವಿಟ್ಟು ತಾವು ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಒಪ್ಪುವುದಿಲ್ಲ. ಇವತ್ತು ಪೀಠದ ಬಗ್ಗೆ ಹಾಗೂ ತಮ್ಮ ಬಗ್ಗೆ ಚರ್ಚೆ ಬಂದಾಗಲೂ ಸಹ ನಿಯಮಾವಳಿಗಳಲ್ಲಿ ತಾವು ತಡೆಯಬಹುದಾದಂತಹ ಸಂದರ್ಭ ಇದ್ದರೂ ಇಷ್ಟೊಂದು ಪಾರದರ್ಶಕವಾಗಿ ಒಂದು ಸಂಸದೀಯ ಚರ್ಚೆ ನಡೆಯಲಿ ಎನ್ನುವ ಸದಾಶಯದಿಂದ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಸಹ ಅವರು ಹೇಳಿದ ಎಲ್ಲಾ ಮಾತುಗಳನ್ನು ಸದಭಿರುಚಿಯಿಂದ ಸ್ವೀಕರಿಸಿದ್ದೇವೆ. ಆದರೆ, ಅದು ಎಲ್ಲೋ ಒಂದು ಕಡೆ ತನ್ನ ಎಲ್ಲೆಯನ್ನು ಮೀರಬಾರದು ಮತ್ತು ಸದನದ ಘನತೆಗೆ ಚ್ಯುತಿ ತರಬಾರದೆಂಬ ನಿಟ್ಟಿನಲ್ಲಿ ಈ ವಿಚಾರವನ್ನು ಹೇಳುತ್ತಿದ್ದೇನೆ. ನಾವು ಇವತ್ತು ಮೇಲ್ಮನೆಯನ್ನು ಸ್ಥಾಪಿಸಿದಂತಹ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ನೆನಪಿಸಿಕೊಳ್ಳಬೇಕು. ಸದನದಲ್ಲಿ ಅವರ ಒಂದು ಭಾವಚಿತ್ರವು ಸಹ ಇಲ್ಲ. ನಾನು ಸದನಕ್ಕೆ ಆಯ್ಕೆಯಾಗಿ ಬಂದಾಗ ನನಗೆ ಆ ಬಗ್ಗೆ ನೋವಾಗಿದೆ. ಅಂತಹ ಸ್ಫೂರ್ತಿ ಕೊಡುವಂತಹ ಈ ಸದನದಲ್ಲಿ ಈ ಮೇಲ್ಮನೆಗೆ ಶೋಭೆ ತರುವಂತಹವರನ್ನೇ ಆಯ್ಕೆ ಮಾಡುವಂತಹ ಸಂಪ್ರದಾಯವನ್ನು ಎಲ್ಲಾ ರಾಜಕೀಯ ಪಕ್ಷಗಳು ಅನುಸರಿಸಬೇಕೆಂದು ವಿನಂತಿಯನ್ನು ಮಾಡುತ್ತಾ, ತಾವು ಕೊಟ್ಟ ಸಮಯವನ್ನು ಸದ್ಬಳಕೆ ಮಾಡಿಕೊಂಡು ತಮಗೆ ವಂದಿಸಿ, ಈ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

**ಸಭಾಪತಿಯವರು:- <u>ಈ ಹಂತದಲ್ಲಿ ಮಾನ್ಯ ಶರವಣರವರು ಮಾತನಾಡಿದಂತಹ ಅಸಂಸದೀಯ ಪದಗಳನ್ನು ಕಡತದಿಂದ ತೆಗೆದು ಹಾಕಿ.</u> ಅವರು ಮಾತನಾಡಿದಂತಹ ಮಾತುಗಳು ಸರಿಯಲ್ಲ. ಮಾನ್ಯ ಶರವಣರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರು ಈಗ ಮಾತನಾಡುತ್ತಾರೆ. ಶರವಣರವರು ಮಾತನಾಡಿದಂತಹ ಮಾತುಗಳು ಸರಿಯಲ್ಲ. ಮಾನ್ಯ ಉಗ್ರಪ್ಪನವರೇ, ತಾವೀಗ ಮಾತನಾಡಿ.**

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 1947 ರಲ್ಲಿ ಇಂಗ್ಲೇಂಡಿನಲ್ಲಿ, Indian Independence Bill ನ ಮೇಲೆ ಅವತ್ತಿನ ವಿರೋಧ ಪಕ್ಷದ ನಾಯಕರಾಗಿದ್ದಂತಹ Winston Churchill...

**ಸಭಾಪತಿಯವರು:-** ಉಗ್ರಪ್ಪನವರೇ, ಮಾನ್ಯ ಸದಸ್ಯರಾದ ಶರವಣ ಅವರಿಗೆ ನಿಮ್ಮಂತಹ ಕಾನೂನು ಪಂಡಿತರು ಇದ್ದಾರೆಂಬುದು ಇನ್ನೂ ಗೊತ್ತಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 1947 ರಲ್ಲಿ Indian Independence Bill ನ ಮೇಲೆ ಚರ್ಚೆ ನಡೆದಾಗ Attlee was the Prime Minister. Winston Churchill ರವರು ವಿರೋಧ ಪಕ್ಷದ ನಾಯಕರಾಗಿ ಇದ್ದರು. ನಾನು Emergency period

ನಲ್ಲಿ ಜೈಲಿನಲ್ಲಿದ್ದಂತಹ ಸಂದರ್ಭದಲ್ಲಿ ಅದರ ಮಾಹಿತಿಯನ್ನು ಪಡೆದು ಓದಿದಾಗ, ಒಂದು ವೇಳೆ ಆತ ನನ್ನ ಕೈಗೆ ಸಿಕ್ಕಿಬಿಟ್ಟರೆ ಆತನನ್ನು ಗುಂಡಿಟ್ಟು ಕೊಲ್ಲಬೇಕು ಎನ್ನುವಂತಹ ರೋಷ ನನಗೆ ಬಂದಿತ್ತು. ಏಕೆಂದರೆ, ಅದರಲ್ಲಿ 5 ರಿಂದ 6 ವಾಕ್ಯಗಳ ಭಾಷಣ ಮಾತ್ರ ಇದೆ. “India is a great country. By this Bill, you are going to hand over that great country into the hands of thugs, bootleggers, thieves etc., …” ಎಂದು ಹೇಳಿದಾಗ, ನನಗೆ ಮೈಯಲ್ಲಿ ಸಿಟ್ಟು ಬಂದು ಆತ ಸಿಕ್ಕರೆ ಆತನಿಗೆ ಗುಂಡು ಹೊಡೆದು ಸಾಯಿಸಬೇಕೆಂದು ಅನಿಸಿತು. ಇವತ್ತು ನಾವು ಪ್ರಜಾಪ್ರಭುತ್ವದಲ್ಲಿ ಸುಮಾರು 70 ವರ್ಷಗಳನ್ನು ಕಳೆದಿದ್ದೇವೆ. ಅದರಲ್ಲಿ ಏಳುಬೀಳುಗಳನ್ನು ಕಂಡಿದ್ದೇವೆ. ಈಗ ಕೇಂದ್ರ ಸರ್ಕಾರದಲ್ಲಿ ಇರುವಂತಹ ಕೇಂದ್ರ ಸಚಿವ ಸಂಪುಟದಲ್ಲಿ 20 ಜನರು ರಾಜ್ಯಸಭಾದ ಸದಸ್ಯರು ಸಚಿವರಾಗಿದ್ದಾರೆ. ಅವರೆಲ್ಲಾ Top ten Ministers like, Finance, External Affairs, Defence, Railways etc., ಅಷ್ಟೇ ಏಕೆ ಈ ದೇಶದ ಪ್ರಧಾನಿಯಾಗಿದಂತಹ ಮಾನ್ಯ ಮನಮೋಹನ್‌ಸಿಂಗ್‌ರವರು ರಾಜ್ಯಸಭಾ ಸದಸ್ಯರಾಗಿದ್ದಂತಹವರು. ಮಾನ್ಯ ಹೆಚ್.ಡಿ.ದೇವೇಗೌಡರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರು ಸಹ ರಾಜ್ಯಸಭಾ ಸದಸ್ಯರಾಗಿದ್ದರು. ಮಾನ್ಯ ಐ.ಕೆ.ಗುಜ್ರಾಲ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರು ರಾಜ್ಯಸಭಾ ಸದಸ್ಯರಾಗಿದ್ದರು. ಮಾನ್ಯ ಡಿ.ವಿ.ಸದಾನಂದಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರು ಎಂ.ಎಲ್.ಸಿ., ಆಗಿದ್ದರು. ಮಹಾರಾಷ್ಟ್ರದ 37 ಜನ ಸಚಿವರ ಪೈಕಿ 9 ಜನ ಮೇಲ್ಮನೆ ಸದಸ್ಯರು ಸಚಿವರಾಗಿದ್ದಾರೆ. ತೆಲಂಗಾಣ ರಾಜ್ಯದಲ್ಲಿ ಇಬ್ಬರು Deputy Chief Ministers ಮೇಲ್ಮನೆಯ ಸದಸ್ಯರಿದ್ದಾರೆ.

ಮಾನ್ಯ ಸಭಾಪತಿಯವರೇ, ಸಂವಿಧಾನವನ್ನು ರೂಪಿಸಬೇಕಾದರೆ ಡಾ॥ಅಂಬೇಡ್ಕರ್‌ರವರು ಈ ಮೇಲ್ಮನೆ ಏಕೆ ಬೇಕೆಂದು ಹೇಳುತ್ತಾರೆ, ಕೆಳಮನೆಗೆ ಬೇರೆ ಬೇರೆ ಪ್ರಭಾವಗಳಿಂದ ಅನೇಕರು ಆಯ್ಕೆ ಆಗುತ್ತಾರೆ. Talents ಅಥವಾ ಅನುಭವಸ್ಥರು ಕೆಲವು ಸಂದರ್ಭಗಳಲ್ಲಿ ಕೆಳಮನೆಗೆ ಆಯ್ಕೆಯಾಗಿ ಬರುವುದಕ್ಕೆ ಆಗುವುದಿಲ್ಲ. ಈ ದೇಶ ಕಟ್ಟಬೇಕಾದರೆ ಅಥವಾ ರಾಜ್ಯ ಕಟ್ಟಬೇಕಾದರೆ ಯಾರಿಗೆ ಅನುಭವ ಇದೆ, ಯಾರಿಗೆ talent ಇದೆ ಅಂತಹವರನ್ನು ಮೇಲ್ಮನೆಗೆ ಕರೆತಂದು, ಅಂತಹವರ ಅನುಭವ ಮತ್ತು talent ಅನ್ನು ಬಳಸಿಕೊಂಡು ರಾಜ್ಯ ಕಟ್ಟುವಂತಹ ವ್ಯವಸ್ಥೆಯನ್ನು ಸರಿಪಡಿಸುವಂತಹ ವ್ಯವಸ್ಥೆ ಮಾಡಬೇಕು ಎನ್ನುವಂತಹ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕೇ ಹೊರತು, ಅದನ್ನು ಬಿಟ್ಟು ಈ ರೀತಿ ನಮಗೆ ನಾವೇ ಕೆಸರನ್ನು ಎರಚಿಕೊಳ್ಳುವಂತಹ ಪ್ರಯತ್ನವನ್ನು ಮಾಡಿದರೆ, ಬಹುಶಃ 100 ವರ್ಷಗಳ ಇತಿಹಾಸ ಇರುವಂತಹ ಈ ಸದನದ ಘನತೆ ಮತ್ತು ಗೌರವವನ್ನು ನಾವೇ ತೆಗೆಯುವಂತಹ ಸಂದರ್ಭ ಬಂದೀತು. **ಹಾಗಾಗಿ, ನಾವು ಸದನದಲ್ಲಿ ಪದಬಳಕೆ ಮಾಡಬೇಕಾದರೆ, ಇಂತಹ ಒಂದು**

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಹಿರಿಯ ಸದನದ ಸದಸ್ಯರಾಗಿ ಬಳಕೆ ಮಾಡುವಂತಹ ಸಂದರ್ಭದಲ್ಲಿ ಎಚ್ಚರಿಕೆ ವಹಿಸುವಂಥದ್ದು ಸೂಕ್ತವೆಂದು ಮತ್ತು ಮಾನ್ಯ ಸದಸ್ಯರು ಮಾತನಾಡಿದಂತಹ ಪದಗಳನ್ನು ಕಡತದಿಂದ ತೆಗೆಯುವುದು ಸೂಕ್ತವೆಂದು ಹೇಳುವುದಕ್ಕೆ ಬಯಸುತ್ತೇನೆ.**

**ಸಭಾಪತಿಯವರು:-** ಸದನದಲ್ಲಿ ಮಾತನಾಡಬೇಕಾದರೆ, ನಾವು ಮೊದಲು ಯಾರೆಂದು ತಿಳಿದುಕೊಂಡು ಮಾತನಾಡಬೇಕು. ಇಲ್ಲಿ ಬೇರೆ ಏನಿಲ್ಲ. ಆ ರೀತಿ ಮಾತನಾಡಿದರೆ ನಮಗೂ ನೋವಾಗುತ್ತದೆ. ನಾನು Post Graduation ನಲ್ಲಿ Distinction ಬಂದಿದ್ದೇನೆ. ಆ ರೀತಿ ಯಾರೂ ಮಾತನಾಡಬಾರದು. ಮಾನ್ಯ ಶರವಣನವರು ಏನು ವ್ಯಾಸಂಗ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.

(ಮುಂದು .,)

(205):10.07.2018-07.50-ಎಂವಿ-ಜಿಆರ್

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ, ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಉಗ್ರಪ್ಪನವರು 1947ರ Winston Churchillರವರ ವಿಚಾರದ ಬಗ್ಗೆ ಮಾತನಾಡಿದರು. ಮಾನ್ಯ ಶರವಣರವರೇ ದಯಮಾಡಿ ಪುಸ್ತಕವನ್ನು ಓದಬೇಕು, 1942ರಲ್ಲಿ during his first visit to India, E.M.Foster ರವರು "In the democratic setup, India is well developed in politics" ಎನ್ನುವ ಒಂದು ಮಾತನ್ನು ಹೇಳುತ್ತಾರೆ, ಅದನ್ನು ಪುಸ್ತಕದಲ್ಲಿ ಬರೆದಿದ್ದಾರೆ. ಅಂದರೆ, ಆಗ ನಮಗೆ ಸ್ವಾತಂತ್ರ್ಯ ಬಂದಿರಲಿಲ್ಲ. ಸ್ವಾತಂತ್ರ್ಯ ಬರುವ ಪೂರ್ವದಲ್ಲೇ ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಇಂಗ್ಲೆಂಡ್‌ನವರು ಪೂರ್ವಭಾವಿಯಾಗಿ ಅವತ್ತಿನ ದಿವಸವೇ ಹೇಳಿದ್ದಾರೆ. ಹಾಗಾಗಿ ಮಾನ್ಯ ಶರವಣರವರು ಏನು ಮಾತನಾಡುವ ಭರದಲ್ಲಿ, ಹೇಳಿದರು. ಮೊಬೈಲ್‌ನ Whatsappನಲ್ಲಿ ಬಂದಿರುವ ಸುದ್ದಿಯನ್ನು ತಂದು ಸದನದಲ್ಲಿ ಮಾತನಾಡುವುದು ಬೇಡ. Whatsappನಲ್ಲಿ ಬಂದಿರುವ ಸುದ್ದಿಯನ್ನು ತಂದು, ಇಲ್ಲಿ ಮೂರನೇ ಕ್ಲಾಸ್‌ಗೆ ಟೀಚ್ ಮಾಡಿದಂತೆ ಹೇಳುವುದು ತಪ್ಪಾಗುತ್ತದೆ. ಈ ಸದನಕ್ಕೆ ಎಂತಹ ಜನರು ಬಂದು ಹೋಗಿದ್ದಾರೆ. ಅಂತಹವರ ವಿಚಾರಗಳನ್ನು ನೀವು ಪ್ರಸ್ತಾಪ ಮಾಡಿದರೆ, ನಮಗೂ ಸ್ವಲ್ಪ ಜ್ಞಾನ ಸಿಗುತ್ತದೆ. ಹಾಗಾಗಿ, ಅಂತಹ ವಿಚಾರಗಳನ್ನು ಕೇಳಲು ಮತ್ತು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೋಸ್ಕರ ನಮ್ಮನ್ನು ಇಲ್ಲಿಗೆ ಕಳುಹಿಸಿರುವುದು. ಈ ರೀತಿ ಸದನ ನಡೆಯುವುದನ್ನು ಹೊರಗಡೆ ನೋಡಿ. ಮೇಲ್ಮನೆ ಎಂದರೆ ಅದಕ್ಕೆ ಅದರದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದಂತಹ ಒಂದು ವೈಭವವಿದೆ ಎಂದು ಹೇಳುತ್ತಾರೆ. That is the beauty of the Democracy. ಆ beauty of the Democracyಯನ್ನು ನಾವು ಇಲ್ಲಿ ಎತ್ತಿ ಹಿಡಿಯಬೇಕು. Thank you.

**ಸಭಾಪತಿಯವರು:–** ಮಾನ್ಯ ಶರವಣರವರು ತಾವು ಮಾತನಾಡಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ ನೋವು ಮಾಡಬೇಕೆಂದು ಹೇಳಿಲ್ಲ. ಈ ತರಹ Whatsapp message ಬಂದಿದೆ ಎಂದು ಹೇಳಿದೆ ಅಷ್ಟೆ. ಈಗ ಅದನ್ನು ಬಿಡಿ, ಅದರ ಬಗ್ಗೆ ಚರ್ಚೆ ಬೇಡ.

**ಸಭಾಪತಿಯವರು:–** ಮಾನ್ಯ ಶರವಣರವರೇ, ನಾಳೆಯಿಂದ ಮೊಬೈಲ್‌ನಿಂದ Whatsapp ಅನ್ನು ತೆಗೆದುಬಿಡಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಆಯಿತು. ಇದು ಚಿಂತಕರ ಚಾವಡಿ, ಬುದ್ಧಿ ಜೀವಿಗಳ ತಾಣ ಮತ್ತು ಹಿರಿಯರ ವೇದಿಕೆ, ನಾನು ಅದರ ಬಗ್ಗೆ ತುಂಬಾ ತಿಳಿದುಕೊಂಡಿದ್ದೇನೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಇವತ್ತು ನಮ್ಮ ಹಿರಿಯ ರಾಜಕಾರಣಿಗಳು, 50 ಮತ್ತು 60 ವರ್ಷಗಳ ಅನುಭವದ ರಾಜಕಾರಣಿಗಳು ಸದನದಲ್ಲಿ ಕೆಲವು ಮಾತುಗಳನ್ನು ಮಾತನಾಡಿದಾಗ, ಎಂತಹ ವೈಯಕ್ತಿಕ ವಿಚಾರಗಳನ್ನು ಕೂಡ ಯಾವ ರೀತಿಯಲ್ಲಿ ಮಾತನಾಡುತ್ತಾರೆ, ಅವರು ಪ್ರಭುತ್ವ ರಾಜಕಾರಣಿಗಳು, ಇಂತಹ ಭಾಷೆಯನ್ನು ಬಳಕೆ ಮಾಡುತ್ತಿರುವ ಬಗ್ಗೆ ನನಗೆ ಬಹಳ ಸಂತೋಷವಾಗುತ್ತಿದೆ ಎಂದು ಹೇಳುವುದಕ್ಕೆ ಬಯಸಿದೆ ಅಷ್ಟೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಬಹುಶಃ ಇವತ್ತಿನ ದಿವಸ ಒಟ್ಟಾರೆ, ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಆರೂವರೆ ಕೋಟಿ ಜನರ ವಿಶ್ವಾಸವನ್ನು ಗೆದ್ದು ಉತ್ತಮವಾದಂತಹ ಬಜೆಟ್ ಅನ್ನು ಕೊಟ್ಟಿದ್ದಾರೆ. ಈ ಮೈತ್ರಿ ಸರ್ಕಾರಕ್ಕೆ ಮತ್ತು ರಾಜ್ಯದ ಮುಖ್ಯಮಂತ್ರಿಗಳಿಗೆ ಅತ್ಯಂತ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನದ ಕಲಾಪವು ಸಂಜೆ 7 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ)**
**ದಿನಾಂಕ: 11ನೇ ಫೆಬ್ರವರಿ ಮಾಹೆ 2018ರ ಬುಧವಾರದಂದು**
**ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~